
ಶಿವಶರಣೆ

# ಶ್ರೀ ಶಿವಲಿಂಗವ್ವಾ

(ಚರಿತ್ರೆ ಮತ್ತು ಸಾಧನಸೋಪಾನ)



ಲೇಖಕರು

**ಆರ್. ಪಿ. ಕುಲಕರ್ಣಿ**

ಪ್ರಕಾಶಕರು

ಅಕಾಡೆಮಿ ಆಫ್ ಕಂಪೇರಿಟಿವ್ ಫಿಲಾಸಾಫಿ & ರಿಲಿಜನ್ (ಎ.ಸಿ.ಪಿ.ಆರ್)
ಗುರುದೇವ ಮಂದಿರ, ಹಿಂದವಾಡಿ, ಬೆಳಗಾವಿ.

ಶಿವಶರಣೆ

# ಶ್ರೀ ಶಿವಲಿಂಗವ್ವಾ

(ಚರಿತ್ರೆ ಮತ್ತು ಸಾಧನಸೋಪಾನ)

ಲೇಖಕರು

ಆರ್. ಪಿ. ಕುಲಕರ್ಣಿ,

B.A., LL.B., B.T.

ಪ್ರಕಾಶಕರು

**ದಿ ಅಕೆಡೆಮಿ ಆಫ್ ಕಂಪೆರೆಟಿವ್ ಫಿಲಾಸಫಿ ಆ್ಯಂಡ್ ರಿಲಿಜನ್,**

ಗುರುದೇವ ರಾನಡೆ ಮಂದಿರ, ಹಿಂದವಾಡಿ, ಬೆಳಗಾವಿ.

ಜೂನ 6, 2020 ಇಸ್ವಿ ಬೆಲೆ : ರೂ. 250-00

# ಶ್ರೀ ಶಿವಲಿಂಗವ್ವಾ

ಪ್ರಥಮ ಆವೃತ್ತಿ : 1977

ದ್ವಿತಿಯ ಆವೃತ್ತಿ : ಜೂನ 6, 2020

: ಎಲ್ಲ ಹಕ್ಕುಗಳು ಕಾಯ್ದಿರಿಸಲಾಗಿದೆ.

ಲೇಖಕರು : ಆರ್. ಪಿ. ಕುಲಕರ್ಣಿ, B.A., LL.B., B.T.

ಪ್ರತಿಗಳು : 500

ಪ್ರಕಾಶಕರು : ದಿ ಆಕೆಡೆಮಿ ಆಪ್ ಕಂಪೆರೆಟಿವ್
ಫಿಲಾಸಫಿ ಆ್ಯಂಡ್ ರಿಲಿಜನ್,
ಬೆಳಗಾವಿ.

ಬೆಲೆ : ರೂ. 250-00

ಪೇಪರ : 70 ಜಿ.ಎಸ್.ಎಮ್. ಮ್ಯಾಪಲೀಥೋ.

ಆಕಾರ ಮತ್ತು ಪುಟ : ಡೆಮಿ 1/8,

ಮುದ್ರಕರು : ಇಮೇಜ ಪ್ರಿಂಟ್ಸ್
2393, ಕಚೇರಿ ಗಲ್ಲಿ,
ಶಹಾಪೂರ-ಬೆಳಗಾವಿ.
ದೂರವಾಣಿ : 9341103880

# ಪುಸ್ತಕ ದಾನಿಗಳಿಗೆ ಧನ್ಯವಾದಗಳು




**ದಿ॥ ಗುರುಪಾದಯ್ಯ ಈಶ್ವರಯ್ಯ ಮುಳವಾಡಮಠ**
**ದಿ॥ ಪಾರ್ವತಿ ಗುರುಪಾದಯ್ಯ ಮುಳವಾಡಮಠ**

ವಿದ್ಯೆ ಮತ್ತು ಪುಸ್ತಕದಾನ ಎಲ್ಲಾ ದಾನಗಳಗಿಂತ ಶ್ರೇಷ್ಠ ಏಕೆಂದರೆ ಅದು ಶಾಶ್ವತ. ಅಕಾಡೆಮಿ ಆಫ್ ಕಂಪೇರಿಟಿವ್ ಫಿಲಾಸಾಫಿ & ರಿಲಿಜನ್ (ಎ.ಸಿ.ಪಿ.ಆರ್) ಕೈಗೊಂಡ ಪುಸ್ತಕ ಸತ್ರದ ಒಂದು ಭಾಗವಾಗಿ ನಮ್ಮೊಂದಿಗೆ ಕೈಜೋಡಿಸಿ, ಸಹಕರಿಸಿದವರು ಖ್ಯಾತ ಹಿರಿಯ ನ್ಯಾಯವಾದಿಗಳೂ ರಾಜ್ಯ ವಕೀಲ ಸಂಘದ ಮಾಜಿ ಅಧ್ಯಕ್ಷರು, ಬೆಳಗಾವಿ ವಕೀಲರ ಸಂಘದ ಅಧ್ಯಕ್ಷರೂ ಆದ ಶ್ರೀ ಅನಿಲ ಗುರುಪಾದಯ್ಯ ಮುಳವಾಡಮಠರವರು. ತಮ್ಮ ಪೂಜ್ಯ ಮಾತಾಪಿತೃಗಳಾದ ದಿ॥ ಗುರುಪಾದಯ್ಯ ಹಾಗೂ ದಿ॥ ಪಾರ್ವತಿ ದಂಪತಿಗಳ ನೆನಪಿನಲ್ಲಿ ಈ ಗ್ರಂಥಕ್ಕೆ ಸಹಾಯವನ್ನು ಒದಗಿಸಿದ್ದಾರೆ. ಎ.ಸಿ.ಪಿ.ಆರ್ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಶ್ರೀಯುತರಿಗೆ ಶ್ರೀ ಗುರುವಿನ ಹಾಗೂ ಶ್ರೀ ದೇವರ ಕೃಪೆ ಸದಾ ಒದಗಿ ಬರಲಿ ಎಂದು ಪ್ರಾರ್ಥಿಸುತ್ತೇವೆ.

ಆಡಳಿತ ಮಂಡಳಿಯ ಪರವಾಗಿ
**ಶ್ರೀ ಮಾರುತಿ ಬಿ. ಝೀರಲಿ**
ಗೌರವ ಕಾರ್ಯದರ್ಶಿಗಳು
ಅಕಾಡೆಮಿ ಆಫ್ ಕಂಪೇರಿಟಿವ್ ಫಿಲಾಸಾಫಿ & ರಿಲಿಜನ್,
ಗುರುದೇವ ಮಂದಿರ, ಹಿಂದವಾಡಿ ಬೆಳಗಾವಿ.

# ಶ್ರೀ ಶ್ರೀ ಕುಮಾರ ಸ್ವಾಮಿಗಳವರ ಆಶೀರ್ವಚನ




ಸಂತರು, ಮಹಂತರು, ಶರಣರು, ಶರಣೆಯರು-ಇವರೆಲ್ಲರೂ ಭಗವದ್ಭಕ್ತರು. ಭಕ್ತಿಯು ಒಂದು ಬಗೆಯ ಆಕರ್ಷಣೆ. ಈ ಆಕರ್ಷಣೆಯು ಎರಡು ವಸ್ತುಗಳ ಮಧ್ಯದಲ್ಲಿರುವುದು. ಜೀವ-ದೇವರಲ್ಲಿಯ ಆಕರ್ಷಣೆಯೇ ಪರಮ ಪ್ರೇಮ ಸ್ವರೂಪವನ್ನು ತಳೆದಾಗ ಭಕ್ತಿಯೆನಿಸುವುದು. ಭಕ್ತನಿಗಾಗಿ ದೇವನಲ್ಲಿ ಅಪಾರವಾದ ಕರುಣೆ ಇದೆ. ದೇವನಿಗಾಗಿ ಭಕ್ತನಲ್ಲಿ ಆತುರದ ಕರುಳಿದೆ. ಈ ಕರುಣೆ ಕರುಳುಗಳ ದೆಸೆಯಿಂದಲೇ ಜೀವ-ದೇವರು, ಭಕ್ತ-ಭಗವಂತರು ಒಬ್ಬರನ್ನೊಬ್ಬರು ಸಾರುವರು, ಸೇರುವರು, ಅರಿಯುವರು, ಬೆರೆಯುವರು, ಭಕ್ತಿ ಭಾವನೆಯ ಉದ್ರೇಕದಿಂದ ಕಂಠವು ಗದ್ಗದಿತವಾಗಿ ಮೈಮೇಲೆ ರೋಮಾಂಚನೆಗಳು ಎದ್ದು ಕಂಗಳಲ್ಲಿ ಆನಂದಾಶ್ರುಗಳು ತುಂಬಿ ದೇವನೊಡನೆ ಲಭಿಸಿದ ಭಕುತಿ-ರತಿಯ ಸಂಭಾಷಣೆಯ ಸಂಭ್ರಮದಲ್ಲಿ ಮುಕುತಿಯನ್ನು ಮರೆಯುವರು ಅನುಭಾವಿಗಳು.

ಶಿವಲಿಂಗವ್ವನವರು ಭಗವದ್ಭಕ್ತರು. ದೇವನ ಸಾನ್ನಿಧ್ಯವನ್ನು ಬಯಸಿ ಗುರು ಕರುಣವನ್ನು ಪಡೆದುಕೊಂಡವರು. ಶಿವಲಿಂಗವ್ವನವರಿಗೆ ಚಿಕ್ಕಂದಿನಲ್ಲಿಯೆ ಗುರು-ಕರುಣವು ತಾನಾಗಿಯೇ ಬಂದೆರಗಿತು. ತಾನಾಗಿ ಬಂದ ಪದಾರ್ಥದ ಬೆಲೆಯು ಅಷ್ಟು ಬೇಗನೆ ಅವಗಾಹನೆಗೆ ಬರುವುದಿಲ್ಲ.

ಅವರಾದರೂ ದುಃಖ ದುಮ್ಮಾನಗಳನ್ನೂ, ಕಷ್ಟಕಾರ್ಪಣ್ಯಗಳನ್ನೂ, ವ್ಯಸನವಿಡ್ಡೂರಗಳನ್ನೂ ಅನುಭವಿಸಿದ ಮೇಲೆ ಗುರು ಕರುಣದ ಮಹಿಮೆಯನ್ನು ಅರಿತರು. ಅದರ ಪರಿಣಾಮವಾಗಿ ಗುರುವಿನಲ್ಲಿ ಅವರ ಶ್ರದ್ಧೆ ಬೆಳೆದು ಬಲಿತು ದೃಢವಾಯಿತು. ಈ ನಿಷ್ಠಾಗರಿಷ್ಠ ವೃತ್ತಿಯು ಅವರಿಗೆ ದೇವನ ಸಗುಣ ದರ್ಶನವನ್ನೂ, ನಾದಾನುಸಂಧಾನವನ್ನೂ, ಕವಿತಾಶಕ್ತಿಯನ್ನೂ ತಂದುಕೊಟ್ಟಿತು. 'ಮಗಾ ಹುಟ್ಯಾನವ್ವಾ' ಎಂಬ ಅವರ ಪದವು ಆಧ್ಯಾತ್ಮ ಮಾರ್ಗದಲ್ಲಿ ಸಾಧಕರು ಅನುಭವಿಸ ಬೇಕಾದ ನೋವು ನಲಿವುಗಳನ್ನು ನೇರವಾಗಿ ಬಣ್ಣಿಸುತ್ತದೆ. ನರಜನ್ಮವು ಶ್ರೇಷ್ಠವೆಂದು ಎಲ್ಲ ಸಂತರು ಸಾರುತ್ತಾರಷ್ಟೇ! ಆದರೆ ಆ ನರಜನ್ಮವನ್ನು ಸಾರ್ಥಕ ಮಾಡಿಕೊಂಡವರೆಷ್ಟು ಜನ? ಕಂಬಳಕ್ಕೆ ಹೋಗಿ ಕನಕದ ಕೊಡವ ಕಂಡಂತೆ ಶಿವಲಿಂಗವ್ವನವರು ಕರ್ಮಭೂಮಿಗೆ ಬಂದು ನರಜನ್ಮವ ತೊಟ್ಟು ಅದನ್ನು ಸಾರ್ಥಕ ಮಾಡಿಕೊಂಡ ಶಿವಶರಣೆಯು.

# ಆಶೀರ್ವಚನ



ಪರಮ ಪೂಜ್ಯ ಶ್ರೀಮನ್ನಿರಂಜನ ಜಗದ್ಗುರು
ಪಂಚಮ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು
ಶ್ರೀ ಜಗದ್ಗುರು ದುರದುಂಡೀಶ್ವರ ಸಿದ್ಧಸಂಸ್ಥಾನಮಠ, ನಿಡಸೋಸಿ.

ಕಂಡುದ ಹಿಡಿಯಲೊಲ್ಲದೆ ಕಾಣದುದ ಹಿಡಿದಿಹೆನೆಂದಡೆ
ಸಿಕ್ಕಿದೆಂಬ ಬಳಲಿಕೆಯ ನೋಡಾ
ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ
ಕಾಣದುದ ಕಾಣಬಹುದು ಗುಹೇಶ್ವರಾ।

ಶಿವನು ಅನುಭಾವ ವೇದ್ಯ. ಅನುಭಾವವೇದ್ಯವಾದುದನ್ನು ಅನುಭವಿಸಬೇಕು. ಇದಕ್ಕಾಗಿ ಗುರುವಿನ ಆಶ್ರಯಬೇಕು. ಗುರುವಿನ ಮಾರ್ಗದರ್ಶನದಲ್ಲಿ ತನ್ನ ಅಧ್ಯಾತ್ಮ ಸಾಧಿಸುವ ಸಾಧಕರು ಶಿವನಲ್ಲಿ ಸಮರಸಗೊಳ್ಳುತ್ತಾರೆ. ಜೀವ ಶಿವನಾಗುವ ಪರಿಯನ್ನು ತಿಳಿಸುವವನು ಗುರು. ಗುರು ದೃಶ್ಯ ಪರಮಾತ್ಮ. ಗುರು ಜ್ಞಾನಪಥದರ್ಶಕ. ಅನುಭಾವ ವೇದ್ಯವಾದ ಅನುಭೂತಿ ಗುರುವಿನಿಂದ ಸಾಧ್ಯ. ಅಧ್ಯಾತ್ಮ ಸಾಧಕನಿಗೆ ಗುರುಪಾದವೇ ಗತಿ. ಗುರುವಿನಿಂದ ಶಿವಜ್ಞಾನ, ಶಿವಭಾವ, ಶಿವಾನುಭೂತಿಗಳ ಪಾರಮಾರ್ಥ ದರ್ಶನ ಸಾಧ್ಯ. ಈ ನೆಲೆಯಲ್ಲಿಅಧ್ಯಾತ್ಮದ ಶಿಖರದಂತೆ ಪ್ರಜ್ವಲಿಸಿದವರು ಶ್ರೀ ಶಿವಲಿಂಗವ್ವ ಶಿವಶರಣೆಯವರು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಇಪ್ಪತ್ತನೆಯ ಶತಮಾನದ ಪೂರ್ವಾರ್ಧ ಕಾಲಘಟ್ಟದಲ್ಲಿ ಅಧ್ಯಾತ್ಮ ಸಾಧಕರ ಬಹುದೊಡ್ಡ ಪರಂಪರೆಯೇ ಇಲ್ಲಿ ಮನುಕುಲಕ್ಕೆ ಬೆಳಕು ನೀಡಿದ್ದು ಒಂದು ವಿಶೇಷ ಸಂದರ್ಭ. ಗುರುದೇವ ರಾನಡೆಯವರ ಬಳಿವಿಡಿದೂ ಅಧ್ಯಾತ್ಮಿಕತೆಯನ್ನು ದಟ್ಟಗೊಳಿಸಿಕೊಂಡ ಈ ಶಿವಶರಣೆ ಆತ್ಮಾನುಭವದ ಸಾಕ್ಷಾತ್ಕಾರವನ್ನು ಸಾಧಿಸಿದವರು. ಶ್ರೀ ಉಮದಿ ಮಹಾರಾಜರು, ಶ್ರೀ ಅಂಬುರಾವ ಮಹಾರಾಜರು, ಶ್ರೀ ಗುರುದೇವ ರಾನಡೆಯವರು 'ಶಿವಸೂತ್ರದ ಅನುಷ್ಠಾನ'

ಸಾಧಿಸಿದವರು. ''ಶಕ್ತಿಯುಕ್ತರಿಗೆ ಒಲಿದಾತಗೆ ಮಂಗಳ'' ಎಂದು ಶರಣೆ ಶ್ರೀ ಶಿವಲಿಂಗವ್ವ ತಾಯಿಯವರು ತಮ್ಮ ಒಂದು 'ಆರತಿ' ಯಲ್ಲಿ ಹೇಳಿರುವಂತೆ ದೇಹೇಂದ್ರಿಯಗಳನ್ನು ದಂಡಿಸಿ, ಅಂತರಂಗದ ಶುದ್ಧಿಯಾದ ಶ್ರೇಷ್ಠಚರಿತರು.

ಶರಣೆ ಶ್ರೀ ಶಿವಲಿಂಗವ್ವನವರು ಅನುಭಾವಿಯೂ ಹೌದು. ಅನುಪಮ ಚರಿತ 'ವಚನ' ಸೃಷ್ಟಿಕರ್ತರೂ ಹೌದು.

**''ಗುರುವಿನ ಸೂತ್ರ ದೊಡ್ಡದು, ಮಹಾದೊಡ್ಡದು**
**ಆ ಸೂತ್ರದಿಂದ ಸತ್‌ಪಾತ್ರವಾದಂಥಾ**
**ಆತ್ಮಲಿಂಗವು ಕರದಾಗೆ ಕಾಣಿಸುವುದು.**
**ಕಂಡು ಲಿಂಗಕ್ಕೆ ಕರಮುಗಿದು**
**ವರವ ಪಡೆಯುತ್ತಿರಬೇಕು**
**ಅಂದರೆ ಗತಿಕೊಂಬುವುದು ಮತ್ತು ಫಲ ಬರುವುದು**
**ಶಿವಶಿವಾ ಎಂಬುವ ಶಿವಮಂತ್ರ ಶಿವಸೂತ್ರದ ಬೆಳೆಯ**
**ಕಳೆತುಂಬಿ ಕಣ್ಣುಮುಂದೆ ಇರುವುದು.**

ಎಂಬ ವಚನ ''ಪರತತ್ವವನು ನೀನು ತಂದೆನ್ನ ಕರಕೆ ಕೊಟ್ಟುದರಿದೆ'' ಎಂಬ ''ಸರ್ಪಭೂಷಣ ಶಿವಯೋಗಿಗಳ'' ತತ್ವಪದಕ್ಕೆ ಸಾಮರಸ್ಯವಿರುವುದು ವೇದ್ಯ. ಬಿಂದುರೂಪದ ಶಿವನನ್ನು ಆತ್ಮದ ಅನುಭಾವದಲ್ಲಿ ಅನುಭವಿಸಿ ''ಎದ್ದ ಘಳಗಿ ಮೊದಲ ಗುರುವಿನ ನೆನಿಸಿ''; ''ಮುತ್ತಿನ ಮೂಗುತಿ ಮೂಗಿನ ಮೇಲಿಟ್ಟು'' ಎಂದು ನಾಸಾಗ್ರದಲ್ಲಿ ತೇಜಃಪುಂಜವಾದ ಬಿಂದುರೂಪ ಹೊಂದಿದ ದೃಶ್ಯಾನುಭವಗಳು ಅವರ ಕಾವ್ಯದುದ್ದಕ್ಕೂ ಚೆಲ್ಲುವರಿದಿವೆ. ಆದರೆ ಶರಣೆ ಶ್ರೀ ಶಿವಲಿಂಗವ್ವನವರ ದೃಶ್ಯಾನುಭವಗಳು ಶ್ರಾವ್ಯಾನುಭವಗಳಲ್ಲಿ ಗೋಚರಿಸದಿರುವುದು ಅವರ ಅಖಂಡ ಅಧ್ಯಾತ್ಮ ಸಾಧನೆಯ ಗಟ್ಟಿ ನೆಲೆಯಾಗಿದೆ.

ಅಧ್ಯಾತ್ಮ ಸಾಧಕಿಯರಾದ ಶಿವಶರಣೆ ಶ್ರೀ ಶಿವಲಿಂಗವ್ವ ತಾಯಿಯವರ ಕುರಿತು ೧೯೭೭ ರಲ್ಲಿ ಸಾಧನ ಸೋಪಾನವಾಗಿ ಶ್ರೀ ಆರ್. ಪಿ. ಕುಲಕರ್ಣಿ, ಲೇಖಕರು ಕೃತಿ ರಚನೆ ಮಾಡಿದ್ದಾರೆ. ಈಗ ಮತ್ತೆ ಈ ಮಹತ್ ಚರಿತ್ರಾರ್ಹ ಗ್ರಂಥವನ್ನು ಹಿಂದಿನಂತೆ ಈಗಲೂ ಕೆಲವು ಮಹತ್ವದ ಸೇರ್ಪಡೆಯ ದಾಖಲೆಗಳೊಂದಿಗೆ ನ್ಯಾಯವಾದಿಗಳಾದ ಶ್ರೀ ಮಾರುತಿ ಜಿರಲಿ, ಬೋರಗಲ್ಲ ಇವರು, ಅಕಾಡೆಮಿ ಆಫ್ ಕಂಪೇರಿಟಿವ್ ಫಿಲಾಸಾಫಿ ಆ್ಯಂಡ್ ರಿಲಿಜನ್ (ಎ.ಸಿ.ಪಿ.ಆರ್.) ಬೆಳಗಾವಿ ಇದರಡಿಯಲ್ಲಿ ದ್ವಿತೀಯ ಮುದ್ರಣಗೊಳಿಸಿ ಪ್ರಕಾಶಿಸುತ್ತಿರುವುದು; ಸಂತೋಷ ಮತ್ತು ಸಾರ್ಥಕವಾಗಿದೆ. ಅಧ್ಯಾತ್ಮ ಸಾಧಕರ ಪಂಕ್ತಿಯಲ್ಲಿ ಶ್ರೀ ಶಿವಲಿಂಗವ್ವ ಶಿವಶರಣೆ ಅವರು ಅಪರೂಪದ ವ್ಯಕ್ತಿತ್ವದವರು. ಪ್ರಸ್ತುತ ಈ ಕುರಿತ ಸಾಧನ ಸೋಪಾನ ಕೃತಿಯು ''ಪೂಜೆ ನೆಗಳ್ತಿ ಲಾಭ'' ತರುವುದೇ ಆಗಿದೆ. ಓದುಗ ಬಳಗ ಅಪ್ಪಿಕೊಳ್ಳಬೇಕಾದ ಚರಿತ್ರಾರ್ಹ ಕೃತಿಯಿದು.


# ಶ್ರೀ ಸದ್ಗುರುನಾಥ ಭಾವೂಸಾಹೇಬ ಮಹಾರಾಜ ಉಮದೀಕರ



ಜನ್ಮ : ಉಮದಿ
ಶಕೆ 1765 ರಾಮನವಮಿ

ಸಮಾಧಿ : ಇಂಚಗೇರಿ
ಶಕೆ : 1835 ಮಾಘ ಶು. 3

# ಸಂತ ಶಿವಲಿಂಗವ್ವ




ಜನನ
ಜತ್ತ : 1867

ಸಮಾಧಿ
ಜತ್ತ : 02-11-1930



ಶ್ರೀ ಶಿವಲಿಂಗವ್ವಾಅಕ್ಕಾ ಇವರ ಸಮಾಧಿ,
ಜತ್ತ

# ಪ್ರಕಾಶಕರ ಮಾತು

ಶ್ರೀ ಗುರುದೇವ ಡಾ|| ಆರ್. ಡಿ. ರಾನಡೆಯವರ ಮಹಾಸಂಕಲ್ಪ ಕ್ರಿಯಾರೂಪವನ್ನು ಪಡೆದದ್ದು ಅವರ ಬರಹ ಮತ್ತು ಅವರ ಸ್ಥಾಪಿಸಿದ ಸಂಸ್ಥೆ '' ಅಕಾಡೆಮಿ ಆಫ್ ಕಂಪೆರಿಟಿವ್ ಫಿಲಾಸಫಿ ಆ್ಯಂಡ್ ರಿಲಿಜನ್'' (ಎ.ಸಿ.ಪಿ.ಆರ್.) ಮೂಲತಃ ಎ.ಸಿ.ಪಿ.ಆರ್. ಸಂಸ್ಥೆಯನ್ನು ಅವರು ೧೯೨೪ ರಲ್ಲಿ ಪುಣೆಯಲ್ಲಿ ಸ್ಥಾಪಿಸಿ ಅದರ ಕಾರ್ಯಸೂಚಿಯನ್ನು ಸ್ವತಃ ಅವರೇ ರಚಿಸಿದರು. ಮಹಾನ್ ತತ್ವಜ್ಞಾನಿಗಳು, ಮಾಜಿ ರಾಷ್ಟ್ರಪತಿಗಳು ಆಗಿದ್ದ ಡಾ|| ಸರ್ವಪಲ್ಲಿ ರಾಧಾಕೃಷ್ಣನ್ ಇತ್ಯಾದಿ ಅಂದಿನ ಹಲವಾರು ಚಿಂತಕ ಮಹನೀಯರು ಅದರ ಪ್ರಾರಂಭಿಕ ಸದಸ್ಯರಾಗಿದ್ದರು. ಕಾಲಾನಂತರದಲ್ಲಿ ೧೯೫೨ ರಲ್ಲಿ ಅಲಹಾಬಾದ ವಿಶ್ವವಿದ್ಯಾಲಯದ ಕುಲಪತಿ ಸ್ಥಾನದ ನಿವೃತ್ತಿ ನಂತರ, ಅವರು ಈ ಸಂಸ್ಥೆಯನ್ನು ಬೆಳಗಾವಿಗೆ ವರ್ಗಾಯಿಸಿದರು. ಅವರೇ ಪ್ರಥಮ ಟ್ರಸ್ಟಿಗಳಾಗಿ ಅದನ್ನು ಬೆಳಗಾವಿಯಲ್ಲಿ ನೊಂದಾಯಿಸಿದರು. ಅಂದಿನಿಂದ ಇಂದಿನವರೆಗೆ ಸಂಸ್ಥೆಯು ಅವರು ರಚಿಸಿದ ನಿಯಮಾವಳಿಯಂತೆ ಕಾರ್ಯ ನಿರ್ವಹಿಸುತ್ತ ಬಂದಿದೆ. ನಿತ್ಯನಿರಂತರ ನಡೆಯುತ್ತಿರುವ ಹಲವಾರು ಚಟುವಟಿಕೆಗಳ ಜೊತೆಗೆ, ಪುಸ್ತಕ ಪ್ರಕಟಣೆ ಸಂಸ್ಥೆಯ ಬಹುಮುಖ್ಯ ಕಾರ್ಯಭಾರವಾಗಿದೆ. ಆ ಸರಣಿಯಲ್ಲಿಯ ಮತ್ತೊಂದು ಕುಸುಮವನ್ನು ತಮ್ಮ ಕೈಯಲ್ಲಿಡಲು ಹರ್ಷವಾಗುತ್ತಿದೆ.

ಶ್ರೀ ಗುರುದೇವ ಡಾ|| ಆರ್. ಡಿ. ರಾನಡೆಯವರು ತಮ್ಮ ಪರಮ ಗುರುಗಳಾದ ಸಂಪ್ರದಾಯದ ಹರಿಕಾರ ಶ್ರೀ ನಿಂಬರಗೀ ಮಹಾರಾಜರ ಮತ್ತು ತಮ್ಮ ಗುರುಗಳಾದ ಶ್ರೀ ಭಾವೂಸಾಹೇಬ್ ಮಹಾರಾಜರ ಗಂಗೋತ್ರಿ- ಯಮನೋತ್ರಿಗಳಿಂದ ಹರಿದುಬಂದ ಜ್ಞಾನಧಾರೆಯನ್ನು ಸಾವಿರಾರು ಸಾಧಕ ಚೇತನಗಳಿಗೆ ತಲುಪುವಂತೆ ವ್ಯವಸ್ಥೆಗೊಳಿಸಿದರು. ಅವರ ಜ್ಞಾನ ಸಹೋದರರು, ಗುರು ಬಂಧುಗಳು ಇದರಲ್ಲಿ ಸಹಭಾಗಿಗಳು ಅವರ ಜೀವನಗಾಥೆಯು ನಮ್ಮ ಬಾಳಿನ ದಾರಿಯ ಕೈದೀವಿಗೆ, ಪ್ರಸ್ತುತದಲ್ಲಿ ಅಂತಹ ಐದು ಮಹಾನ್ ಸಂತರ ಸಂಕ್ಷಿಪ್ತ ವಿವರಗಳುಳ್ಳ ಪ್ರತ್ಯೇಕ ಐದು ಗ್ರಂಥಗಳನ್ನು ಪರಿಷ್ಕೃತ ಆವೃತ್ತಿಯ ರೂಪದಲ್ಲಿ ಪ್ರಕಟಿಸುತ್ತಿದ್ದೇವೆ.

ಈ ಹೊತ್ತಿಗೆ ಪೂಜ್ಯ ಶಿವಶರಣೆ, ಸಂತ ಶಿವಲಿಂಗವ್ವ ಅಕ್ಕಾರವರು ಸಾಧಿಸಿದ ಇಹ-ಪರ ಸಮನ್ವಯದ ಯಶೋಗಾಥೆಯಾಗಿದೆ. ಅವರು ''ಸ್ವರೂಪ ಸಂಪ್ರದಾಯ''ದ ಪಂಚರತ್ನಗಳಲ್ಲೊಬ್ಬರು. ಒಬ್ಬ ಆತ್ಮಜ್ಞಾನ ಪರಿಪೂರ್ಣ, ಅದರಲ್ಲೂ ಮಹಿಳೆಗೆ ಯಾವ ಸಾಮಾಜಿಕ ಕಟ್ಟುಪಾಡುಗಳು, ಕಷ್ಟ ಕಾರ್ಪಣ್ಯಗಳೂ ಬಂಧನವಲ್ಲ ಎಂಬುದನ್ನು ಸಾಧಿಸಿ ತೋರಿಸಿದ ಚರಿತ್ರೆಯಿದು. 'ಗುರುಕೃಪೆ' ಎಂಬುದು ಎಂಥಹ ಸಂದರ್ಭದಲ್ಲೂ ಶಿಷ್ಯರಾದವರ, ಆತ್ಮಹಿತ-ಲೋಕಹಿತ ಎರಡನ್ನೂ ರಕ್ಷಿಸುತ್ತಿದೆ ಎಂಬುದನ್ನು ಸಮಾಜಕ್ಕೆ ದಾಖಲೆಯ ರೂಪದಲ್ಲಿ ಒದಗಿಸಿಕೊಟ್ಟ ಕೃತಿ ಇದು.

ಈ ಸಂದರ್ಭದಲ್ಲಿ ಪೂಜ್ಯ ಶಿವಲಿಂಗವ್ವ ಅಕ್ಕಾರವರ, ಗುರುನಿಷ್ಠೆ ಮತ್ತು ಅವರ ವ್ಯಕ್ತಿತ್ವದ ಹಾಗೂ ಸಾಧನೆಯ ಅಗಾಧತೆಯನ್ನು ಹೇಳಲೇಬೇಕು. ಪರಮ ಪೂಜ್ಯ ಶ್ರೀ ಭಾವೂಸಾಹೇಬ್ ಮಹಾರಾಜರ ಶಿಷ್ಯರಲ್ಲಿ ಶಿವಲಿಂಗವ್ವ ಅಕ್ಕಾರವರು ಅಗ್ರಗಣ್ಯರು. ಶ್ರೀ ಮನೋಹರಪಂತ ದೇಶಪಾಂಡೆರವರು ತಮ್ಮ ಪುಸ್ತಕದಲ್ಲಿ ಹೇಳಿರುವಂತೆ ''ಶ್ರೀ ಬಸವಣ್ಣನವರಿಗೆ ಮಹಾದೇವಿ ಅಕ್ಕನವರೂ – ಶ್ರೀ ಸಮರ್ಥರಿಗೆ ಶ್ರೀ ವೇಣು ಅಕ್ಕನವರೂ ಇದ್ದಂತೆ ಶ್ರೀಮಹಾರಾಜರಿಗೆ ಶಿವಲಿಂಗವ್ವ ಅಕ್ಕನವರು. ಅಕ್ಕರವರ ಯೋಗ್ಯತೆ ಈ ಮೇಲ್ಕಾಣಿಸಿದ ಮಾತೆಯರಿಗಿಂತ ಕಡಿಮೆ ಇರಲಿಲ್ಲ. ಅವರಿಗೆ ಬಾಲ್ಯದಲ್ಲಿಯೇ ವೈಧವ್ಯದ ಪೆಟ್ಟು ತಗುಲಿದ ಮೂಲಕ ಅತೀವ ವಿಹ್ವಲರಾದಾಗ, ಶ್ರೀಮಹಾರಾಜರ ದರ್ಶನ-ಅನುಗ್ರಹ ಲಭಿಸಿದವು. ಮುಂದೆ ಅಕ್ಕನವರು ಕಠೋರ ಸಾಧನೆ ಮಾಡಿ ಅದ್ಭುತವಾದ ಅನುಭವ ಪಡೆದರು. ಒಮ್ಮೆ ಧೃಢಾಸನದಲ್ಲಿ ಕುಳಿತರೆ ಆರು ಘಂಟೆಗಳವರೆಗೆ ಕದಲುತ್ತಿರಲಿಲ್ಲ. ಮುಂದೆ ಅವರ ಸಾಧನೆ ಹಗಲು, ಇರುಳು ಕೂಡಿಯೇ ನಡೆಯಿತು. ಅಕ್ಕನವರಲ್ಲಿ ಕವಿತ್ವ ಶಕ್ತಿಯೂ ಅಪ್ರತಿಮವಾಗಿದ್ದಿತ್ತು. ಅವರು ತಮ್ಮ ಉಜ್ವಲ ಭಾವ ಅನುಭಾವಗಳನ್ನು ಪದಗಳಲ್ಲಿಯೂ, ಆರತಿಗಳಲ್ಲಿಯೂ ಓಲೆಗಳಲ್ಲಿಯೂ ಅಂದವಾಗಿ ಚಿತ್ರಿಸಿರುವರು. ಅವು ಸಾಧಕ ಬಂಧು ಭಗಿನಿಯರಿಗೆ ಸ್ಫೂರ್ತಿಯ ನೆಲೆಗಳಾಗಿವೆ''.

ಅಕಾಡೆಮಿ ಆಫ್ ಕಂಪೆರಿಟಿವ್ ಫಿಲಾಸಾಫಿ ಆ್ಯಂಡ ರಿಲಿಜನ್, ಗುರುದೇವ ಮಂದಿರ, ಹಿಂದವಾಡಿ ಬೆಳಗಾವಿಯು ೧೯೭೭ ರಲ್ಲಿ ಪ್ರಕಟಿಸಿದ್ದ ಈ ಪುಸ್ತಕದ ಪ್ರತಿ ಅಲಭ್ಯವಾಗಿದ್ದು, ಇಂದಿನ ಸಮಾಜಕ್ಕೆ ಇದರ ಅಗತ್ಯವಿದೆ ಎಂಬ ಕಾರಣಕ್ಕೆ ದಾನಿಗಳ ನೆರವಿನಿಂದ ಪ್ರಕಟಿಸಿ ನಿಮ್ಮ ಕೈಲಿಡುತ್ತಿದ್ದೇವೆ.

ಈ ಪರಿಸ್ಕೃತ ಆವೃತ್ತಿಗೆ ಮುನ್ನುಡಿಯನ್ನು ದಯಪಾಲಿಸಿದ ಪರಮ ಪೂಜ್ಯ ಶ್ರೀಮನ್ನಿರಂಜನ ಜಗದ್ಗುರು ಪಂಚಮ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಶ್ರೀ ಜಗದ್ಗುರು ದುರದುಂಡೀಶ್ವರ ಸಿದ್ಧಸಂಸ್ಥಾನಮಠ, ನಿಡಸೋಸಿ ಶ್ರೀಗಳಿಗೆ ಭಕ್ತಿಪೂರ್ವಕ ನಮನಗಳು. ಆರ್ಥಿಕ ಸಹಾಯ ಒದಗಿಸಿಕೊಟ್ಟ ಶ್ರೀ ಅನಿಲ ಗುರುಪಾದಯ್ಯ ಮುಳವಾಡಮಠ, ವಕೀಲರು ಬೆಳಗಾವಿ ಇವರಿಗೆ ಗುರುಕೃಪೆ ಲಭಿಸಲಿ ಎಂದು ಪ್ರಾರ್ಥಿಸುತ್ತೇವೆ. ಕರಡು ಪ್ರತಿಯನ್ನು ತಿದ್ದಿದ ಸಂಸ್ಥೆಯ ಉಪಕಾರ್ಯದರ್ಶಿ ಶ್ರೀ ಆರ್. ಜಿ. ಜಕಾತಿಯವರಿಗೆ ಗುರುಸ್ಮರಣಪೂರ್ವಕ ವಂದನೆಗಳು. ಅಂದವಾದ ಮುದ್ರಣಕ್ಕೆ ಇಮೇಜ್ ಪ್ರಿಂಟ್ಸ್‌ದ ಕುಶಲಕರ್ಮಿಗಳಿಗೆ ಕೃತಜ್ಞತೆಗಳು.

ಇತಿ ಸಜ್ಜನ ವಿಧೇಯ,

**ಶ್ರೀ ಮಾರುತಿ ಬಿ. ಝಿರಲಿ**

ಗೌರವ ಕಾರ್ಯದರ್ಶಿಗಳು

ಅಕಾಡೆಮಿ ಆಫ್ ಕಂಪೆರಿಟಿವ್ ಫಿಲಾಸಾಪಿ ಆ್ಯಂಡ್ ರಿಲಿಜನ್,

ಗುರುದೇವ ಮಂದಿರ, ಹಿಂದವಾಡಿ, ಬೆಳಗಾವಿ.

# ಮುನ್ನುಡಿ

ಶ್ರೀ ಶಿವಲಿಂಗವ್ವಾ ಅವರ ಜೀವನ ಹಾಗೂ ಬೋಧನೆಗಳನ್ನು ಕುರಿತು ಒಂದು ಗ್ರಂಥ ಜನರೆದುರು ಬರಬೇಕೆಂದು ಬಹುದಿನದ ಬಯಕೆ ನನ್ನದು. ಅದು ಪರಮಾತ್ಮನ ಕೃಪೆಯಿಂದ ಮತ್ತು ಶ್ರೀ ಆರ್. ಪಿ. ಕುಲಕರ್ಣಿಯವರ ಅವಿರತ ಪರಿಶ್ರಮದಿಂದ ಈಡೇರುವ ಸುಯೋಗ ಈಗ ಬಂದಿರುವುದು ಒಂದು ಸಂತಸದ ಸಂಗತಿಯಾಗಿದೆ. ಸುದೈವದಿಂದ ಶ್ರೀ ಶಿವಲಿಂಗವ್ವನವರ ಬಗೆಗಿನ ಕೆಲವು ಸಾಹಿತ್ಯ ಇಂದಿಗೂ ಉಪಲಬ್ಧವಿದೆ. ಅವರು ರಚಿಸಿದ ಪದಗಳು, ವಚನಗಳು ಕನ್ನಡ ಸಾಹಿತ್ಯದಲ್ಲಿ ಒಂದು ಗಣ್ಯಸ್ಥಾನವನ್ನು ಪಡೆಯಲು ಅರ್ಹವಾದವುಗಳೆಂದು ಹೇಳಬಹುದು. ಈ ಸಾಹಿತ್ಯವನ್ನೆಲ್ಲ ದೊರಕಿಸಿ, ಅದನ್ನು ಸಂಶೋಧಕರ ರೀತಿಯಲ್ಲಿ ಪರಿಶೀಲಿಸಿ, ಶ್ರೀ ಶಿವಲಿಂಗವ್ವನವರ ಅಧ್ಯಾತ್ಮಜೀವನದ ಪ್ರಾರಂಭ, ಪ್ರಗತಿ ಮತ್ತು ಪರಿಣತಿ ಇವುಗಳನ್ನು ವಿವರಿಸುವಾಗ ಅದನ್ನು ಒಳ್ಳೇ ಕುಶಲತೆ ಯಿಂದ ಬಳಸಿರುವರು. ಶ್ರೀ ಶಿವಲಿಂಗವ್ವನವರ ಪ್ರತ್ಯಕ್ಷ ದರ್ಶನದ ಲಾಭವನ್ನೂ ಅವರು ಪಡೆದಿರುವರು. ಆದುದರಿಂದ ಅವರ ಈ ಬರವಣಿಗೆಯು ಒಂದು ಬಗೆಯ ಅಧಿಕೃತ ಸ್ವರೂಪವನ್ನು ಹೊಂದಿದೆ.

ಗುರುದೇವ ರಾನಡೆಯವರು ತಮ್ಮ ಅಧ್ಯಾತ್ಮ ಗ್ರಂಥಮಾಲೆಯ ಮುನ್ನುಡಿಯಲ್ಲಿ ಈ ರೀತಿ ಹೇಳಿರುವರು: "ಚಮತ್ಕಾರಗಳ ದೃಷ್ಟಿಯಿಂದ ಸಾಧುಗಳ ಚರಿತ್ರೆಗಳ ಕಡೆಗೆ ನೋಡದೆ, ಅವರ ಗ್ರಂಥೋಕ್ತಿಗಳ ದೃಷ್ಟಿಯಿಂದ ಅವುಗಳ ಕಡೆಗೆ ನೋಡಲು ನಾವು ಕಲಿಯಬೇಕಾಗಿದೆ; ಮತ್ತು ಈ ರೀತಿಯಿಂದ ನೋಡಿದ್ದಾದರೆ ತರ್ಕಸಮ್ಮತ ಅನುಭಾವವೇ (Rational Mysticism) ಅವರ ಗ್ರಂಥಗಳಲ್ಲಿ ಹೇಳಲಾಗಿದೆ ಎಂದು ನಾವು ಮನಗಾಣಬಹುದು."

ಅದೇ ರೀತಿಯನ್ನನುಸರಿಸಿ ಶ್ರೀ ಶಿವಲಿಂಗವ್ವನವರ ಚರಿತ್ರೆಯನ್ನು ರೂಪಿಸು ವುದರಲ್ಲಿ ಚಮತ್ಕಾರಗಳ ಕಡೆಗೆ ಗಮನ ಕೊಡದೆ, ಸಾಕ್ಷಾತ್ಕಾರದ ಮಾನಸಶಾಸ್ತ್ರದ (Psychology of Mysticism) ದೃಷ್ಟಿಯಿಂದ ಅವರ ಜೀವನದಲ್ಲಿಯ ವಿವಿಧ ಘಟನೆಗಳ ವಿಶ್ಲೇಷಣೆಯನ್ನು ಶ್ರೀ ಆರ್. ಪಿ. ಕುಲಕರ್ಣಿಯವರು ಒಳ್ಳೇ ಉದ್ಬೋಧಕ ರೀತಿಯಿಂದ ಮಾಡಿರುವರು. ಇದೊಂದು ಈ ಗ್ರಂಥದ ವೈಶಿಷ್ಟ್ಯವೆಂದು ಹೇಳಬಹುದು.

ಶ್ರೀ ಶಿವಲಿಂಗವ್ವನವರಿಗೆ ಬಾಲ್ಯಾವಸ್ಥೆಯಲ್ಲಿಯೇ ಶ್ರೀ ಭಾವುಸಾಹೇಬ ಮಹಾರಾಜ ಉಮದೀಕರ ಅವರಿಂದ ಮೂಲಮಂತ್ರದ ಉಪದೇಶವನ್ನು ಪಡೆಯುವ ಭಾಗ್ಯವು ದೊರಕಿತು. ಆದರೆ, ಸಾಧಕಾವಸ್ಥೆಯಲ್ಲಿಯ ಅವರ ಸಾಂಸಾರಿಕ ಜೀವನವು ಅತೀವ ಕಷ್ಟಕರವಾಗಿದ್ದಿತು. ಅಧ್ಯಾತ್ಮ ಸಾಧನೆಯ ಕಡೆಗಿದ್ದ ಅವರ ಒಲವು ಪತಿಯಾದ ಕರಬಸ್ಸಯ್ಯನವರಿಗೆ ಒಪ್ಪಿತವಾಗದಿದ್ದುದರಿಂದ ಅವರ ಸಾಂಸಾರಿಕ ಜೀವನದಲ್ಲಿ ಒಂದು ಬಗೆಯ ವಿಸಂವಾದವುಂಟಾಗಿತ್ತು. ಅದರ ಜತೆ ಅವರಿಗಾದ ಇಬ್ಬರು ಮಕ್ಕಳು ಚಿಕ್ಕವರಿರು ವಾಗಲೇ ಶಿವೈಕ್ಯರಾದರು. ಆರ್ಥಿಕ ದುಃಸ್ಥಿತಿಯ ಕಾಟವಂತೂ ಎಡೆಬಿಡದೆ ಅವರನ್ನು ಹೆದರಿಸುತ್ತಿತ್ತು. ಅಂದಮೇಲೆ ಅದೆಂಥ ಸಂಸಾರ! ಆದರೆ, ಇವೆಲ್ಲ ಆಪತ್ತುಗಳಿಂದ ಎದೆಗುಂದದೆ, ತಮ್ಮ ಆತ್ಮಸಾಧನೆಯನ್ನು ಮಾತ್ರ ಅವರು ಒಳ್ಳೇ ಉತ್ಸಾಹದಿಂದ ಮುಂದು ವರಿಸಿದರು. ಅವರ ಅಚಲ ಗುರುನಿಷ್ಠೆ, ಪ್ರಖರ ವೈರಾಗ್ಯ ಮತ್ತು ಕಟ್ಟುನಿಟ್ಟಿನ ಸಾಧನೆ ಇವುಗಳ ಪ್ರಭಾವದಿಂದ ಕ್ಷಿಪ್ರದಲ್ಲಿಯೇ ಅವರಿಗೆ ಉಚ್ಚ ತರಗತಿಯ ಆತ್ಮಾನುಭವಗಳ ಲಾಭವಾಯಿತು.

ಆದರೆ, ಪ್ರಾರಂಭದ ಅವರ ಈ ಉತ್ಸಾಹದ ಹಿಂದೆ ಒಂದು ಸೂಕ್ಷ್ಮವಾದ ಅಹಂಕಾರವು ಅಡಗಿಕೊಂಡಿದ್ದಿತು. ಅದನ್ನರಿಯದ ಅವರು 'ಬಾಳೆಗಿಡಕ್ಕೆ ಇದುವರೆಗೆ ಕೊಡದಿಂದ ಹೊಯ್ದು ನೀರು ಉಣಿಸುತ್ತಿದ್ದೆ. ಆದರೆ, ಈಗ ಕಾವಲಿಯಿಂದ ನೀರುಣಿಸುತ್ತಿರುವೆ' ಎಂದು ತಮ್ಮ ಗುರುಗಳಿಗೆ ಕಾಗದ ಬರೆದು ತಿಳಿಸಿದರು. ಅಹಂಕಾರವು- ಅದು ಪ್ರಾಪಂಚಿಕ ವಿಷಯಕ್ಕೆ ಸಂಬಂಧಿಸಿರಲಿ ಅಥವಾ ಪರಮಾರ್ಥದ- ವಿಷಯಕ್ಕೆ ಸಂಬಂಧಿಸಿರಲಿ-ಎಲ್ಲಿಯಾದರೂ ಅದು ಹಾನಿಕಾರವೇ. ಅದರಲ್ಲಿಯೂ ತನ್ನ ಪರಮಾರ್ಥದ ಬಗೆಗಿನ ಅಹಂಕಾರವು- 'ನಾನು ಪರಮಾರ್ಥಿ, ನಾನು ಒಳ್ಳೆಯ ಸಾಧಕ' ಅಂಬುವ ಸೂಕ್ಷ್ಮ ಅಹಂಕಾರವಿದ್ದರೆ ಸಾಧಕನಿಗೆ ಅದರ ಅರಿವು ಉಂಟಾಗುವುದು ಕೂಡ ಕಠಿಣವಾದುದು. ಆದರೆ, ಅದರಿಂದ ಪರಮಾರ್ಥದಲ್ಲಿಯ ಪ್ರಗತಿಗೆ ತಡೆಯುಂಟಾಗುವ ಭಯ ಮಾತ್ರ ಹೆಚ್ಚು. ಇಂಥ ಮನಃಸ್ಥಿತಿಯಲ್ಲಿರುವಾಗ ಸುದೈವದಿಂದ ಶಿವಲಿಂಗವ್ವನವರಿಗೆ ಅವರ ಗುರುಗಳು ಎಚ್ಚರಿಕೆಯನ್ನಿತ್ತು, ಈ ಗಂಡಾಂತರದಿಂದ ಅವರನ್ನು ಉಳಿಸಿದರು. ಆಮೇಲೆ ಮಾತ್ರ ಗುರುಗಳಲ್ಲಿ ದೃಢನಂಬಿಕೆಯನ್ನಿಟ್ಟು, ಸಂಪೂರ್ಣ ದಾಸೋಹಭಾವದಿಂದ ಅವರು ಕಠೋರವಾದ ಸಾಧನೆಯನ್ನು ಮಾಡತೊಡಗಿದರು. ಮುಂದೆ, ಈ ಅವರ ಸಾಧನೆಯು ಆತ್ಮಪ್ರೇರಿತವಾಗಿ, ಅವರ ಸಹಜ ಸ್ವಭಾವವೇ ಆಗಿ ಪರಿಣಮಿಸಿತು.

ಅಧ್ಯಾತ್ಮ ಸಾಧನೆಗೆ ತೋಟದಲ್ಲಿಯ ಗಿಡಗಳಿಗೆ ನೀರುಣಿಸುವ ಉಪಮೆಯನ್ನು ಪಾಶ್ಚಾತ್ಯರಲ್ಲಿಯ ಪ್ರಸಿದ್ಧ ಅನುಭಾವಿಯಾದ ಸೆಂಟ ಟೆರೆಸಾ (Saint Terasa) ಇವಳು ತನ್ನ ಆತ್ಮಚರಿತ್ರೆಯಲ್ಲಿ ನಾಲ್ಕು ವಿಧವಾಗಿ ಕಾಣಿಸಿರುವಳು:

"Our soul is like a garden out of which God plucks the weeds and plants the flowers which we have to water by prayer. There are four ways of doing this, first by drawing water from the well; second by a water-wheel; third by causing stream to flow through it; and fourth by rain from heaven."

ಮೇಲಿನ ಈ ಅವತರಣಿಕೆಯಲ್ಲಿ ಕಾಣಿಸಿದ ಸಾಧನೆಯ ನಾಲ್ಕು ಹಂತಗಳಲ್ಲಿ ಮೊದಲಿನ ಮೂರು ಹಂತಗಳನ್ನು ಮೀರಿ, ಶಿವಲಿಂಗವ್ವನವರು ನಾಲ್ಕನೆಯ ಹಂತವನ್ನು ಮುಟ್ಟಿದುದನ್ನು ಅವರ ವಚನ ಹಾಗೂ ಪದಗಳಲ್ಲಿಯ ನುಡಿಗಳಿಂದ ಗುರುತಿಸಬಹುದು. ಪರಮಾರ್ಥದಲ್ಲಿಯ ಅವರ ಯೋಗ್ಯತೆಯನ್ನು ಕುರಿತು ಗುರುದೇವ ರಾನಡೆಯವರು ಅವರಿಗೆ ಬರೆದ ಒಂದು ಪತ್ರದಲ್ಲಿಯ ಕೆಳಕಾಣಿಸಿದ ಮಾತುಗಳು ಅರ್ಥಪೂರ್ಣವಾಗಿವೆ:

"ಆತ್ಮಾಚ್ಯಾ ವಾಟೆನೆ ಜಾವೂನ ಜ್ಯಾನಿ ಅತಿಶಯ ಉಚ್ಚ ಸ್ಥಾನ ಗಾಂಠಲೆ ವ ಜ್ಯಾನಿ ಗುರುಪ್ರಚಿತಿ ವ ಆತ್ಮಪ್ರಚಿತಿ ಯಾಂಚೆ ಐಕ್ಯ ಕೆಲೆ ಅಶಾ ಆಪಲ್ಯಾಸಾರಖ್ಯಾ ಸಂತಾನಿ ಜೊ ಧಡಾ ಘಾಲೂನ ದಿಲಾ ಆಹೇ ತೋಚ ಗಿರವಣೆ ಮಾಝ್ಯಾಸಾರಖ್ಯಾ ಅಜ್ಞಜನಾಂಚೆ ಕರ್ತವ್ಯ ಆಹೆ."

ಶ್ರೀ ಶಿವಲಿಂಗವ್ವನವರ ಆತ್ಮಾನುಭವಗಳಲ್ಲಿ ವಿವಿಧತೆಯಿದೆ. ವಿಪುಲತೆಯೂ ಇದೆ. 'ಅನಂತ ವೇಷೆ ಅನಂತ ರೂಪೆ ದೇಖಿಲಾಮಿ ಮಿ ತ್ಯಾಸಿ' ಎಂದು ಜ್ಞಾನೇಶ್ವರರು ಹೇಳುವಂತೆ, ಶಿವಲಿಂಗವ್ವನವರು ದೇವರನ್ನು ಅನೇಕ ರೂಪುಗಳಿಂದ ಅನೇಕ ಸನ್ನಿವೇಶ ಗಳಲ್ಲಿ ಕಂಡಿರುವರು. "ಗುರುವಿನ ದಯದಿಂದ ಪರವಸ್ತು ನಾ ಕಂಡೆ, ಪರಲೋಕವನ್ನು ನಾ ಕಂಡೆ; ಥಂದ ಥಂದ ಬೆಳಕಿನಲ್ಲಿ ಹೊಂದಿಕೊಂಡಿರುವಂಥ ತಂದಿ ಗುರುವಿನ ಪಾದವನು ನಾ ಕಂಡೆ " ಎಂದು ಅವರು ಹೇಳುವರು. "ಕಾಯಾ ಪಟ್ಟಣದಲ್ಲಿರುವಂಥ ಆತ್ಮಲಿಂಗ"ವನ್ನು ಅವರು ಕಂಡರಲ್ಲದೆ, ಪರಮಾತ್ಮನ 'ಸಮರೂಪವನ್ನೂ' ಅವರು ಸಾಧಿಸಿಕೊಂಡರು. 'ಭಾಗವತರ ಸಮ್ಮೇಳವ ಕಂಡೆ' ಎಂದು ಕನಕದಾಸರು ಹೇಳಿದಂತೆ, 'ಸಾಧುಸಂತರ ಸಭಾ ಕಂಡೆನೆ । ಯೋಗಿ ಜೋಗಿ ಇರುವುದು ನೋಡಿದೆನೆ" ಎಂದು ಶಿವಲಿಂಗವ್ವನವರು ಹೇಳುವರು. 'ದೇವೇಂದ್ರನ ಸಭೆಯೆಲ್ಲ ಬೆಳಕಾಗಿ' ಎಂಬಂತೆ ಬೆರಟೂರ ಶರಣರು ಕಂಡರೆ, 'ದೇವೇಂದ್ರನ ಸಭೆಯ ನೋಡ । ದೇವಲೋಕದ ಹೂವು ನೋಡ' ಎಂದು ಶಿವಲಿಂಗವ್ವನವರು ನುಡಿಯುವರು. 'ಇದೇ ಅನುಭವ ಮಂಟಪವೋ । ಇದು ಘನತರ ಮೋಕ್ಷದುನ್ಮನಿಯ ಸಾಧನವೋ।' ಎಂದು ಕಲ್ಯಾಣ ಪಟ್ಟಣದಲ್ಲಿಯ ಅನುಭವ ಮಂಟಪದಂತೆ, ಕಾಯಾ ಪಟ್ಟಣದಲ್ಲಿಯ ಅನುಭವ ಮಂಟಪವನ್ನು ಬೆರಟೂರ ಶರಣರು ವರ್ಣಿಸಿದರೆ, 'ಇದು ಎನ್ನ ಅನುಭಾವ ಮಂಟಪವೊ ಶಿವಾ। ಆತ್ಮನಿರುವುದು ಇದು ಐಶ್ವರ್ಯ ಠಾವೊ।' ಎಂದು ತಮ್ಮ ಅಂತರಂಗದಲ್ಲಿಯ

ಅನುಭಾವ ಮಂಟಪವನ್ನು ಶಿವಲಿಂಗವ್ವನವರು ಎತ್ತಿ ತೋರಿಸಿರುವರು. 'ರನ್ನಕೆಚ್ಚಿದ ಸಿಂಹಾಸನ' ಹಾಗೂ ಅದರ ಮೇಲೆ 'ಚೆನ್ನಬಸವನು ತಾನು ತನ್ನೊಳು ಆದ' ಸನ್ನಿವೇಶವನ್ನು ಬೆರಟೂರ ಶರಣರು ಕಂಡಂತೆ, 'ವಜ್ರದ ಲೇಪಾ ಮುತ್ತಿನ ಗೋಪಾ। ಸಿಂಹಾಸನ ಮೇಲೆ ಆ ಚಿನ್ಮಯ ರೂಪ । ಘನವಾಯಿತಪ್ಪ ಸ್ವರ್ಗ ಸ್ವರೂಪ' ಎಂದು ತಮಗಾದ ಆಧ್ಯಾತ್ಮಿಕ ಅನುಭವವನ್ನು ಶಿವಲಿಂಗವ್ವನವರು ವಿವರಿಸಿರುವರು. 'ನಾದದೊಳಗೆ ಸೂಸು ನಾದ ಎದ್ದು ದಿಂಪಿತು' ಎಂದು ಕಲ್ಮೇಶ್ವರರು ಹೇಳಿದಂತೆ 'ಪರನಾದ ದಿಮ್ಮದೊಳು ಮುಳುಗುವೆ ನಾ' ಎಂಬಲ್ಲಿ ಶಿವಲಿಂಗವ್ವನವರು ತಮ್ಮ ನಾದಾನುಭವವನ್ನು ನುಡಿದಿರುವರು. 'ಉಡತ ಗುಲಾಲ ಲಾಲ ಭಯೋ ಅಂಬರ' ಎಂದು ಮೀರಾಬಾಯಿಯವರು ತಮ್ಮ ಅನುಭವ ಹೇಳಿದಂತೆ, 'ಗುಲಾಲ ಝುಮ್ಮರ ಹಾರಿತರಿ' ಎಂದು ಶಿವಲಿಂಗವ್ವನವರು ತಮ್ಮ ವರ್ಣಾನುಭವವನ್ನು ಬಣ್ಣಿಸಿರುವರು. 'ಪುಷ್ಪಾಚಾ ಪರಿಮಳ ವೆಗಳಾ ಕಾಢೀಲಾ । ತೋ ಹಾರ ಲೇಇಲಾ ಸೋಪಾನದೇವ' ಎಂಬುದರಲ್ಲಿ ಚಾಂಗದೇವ ಅವರು ತಮ್ಮ ಹಾಗೂ ಸೋಪಾನದೇವ ಅವರ ಪರಿಮಳಾನುಭವವನ್ನು ಹೇಳಿರುವಂತೆ 'ಎಸಳ ಮಲ್ಲಿಗಿ ವಾಸ ನೋಡ।' ಎಂಬಲ್ಲಿ ಶಿವಲಿಂಗವ್ವನವರು ತಮ್ಮ ಪರಿಮಳಾನುಭವವನ್ನು ಉಸುರಿರುವರು. 'ನಿತ್ಯ ನಿರಂಜನ ನಿರ್ವಿಕಾರಗೆ ಮಂಗಳಂ' ಎಂದು ಲೋಕಾಪೂರ ಯೋಗಿಗಳು ಆರತಿ ಮಾಡಿದಂತೆ, 'ನಿರಾಲಂಬ ನಿರಾಕಾರಗೆ ಮಂಗಳಂ' ಎಂದು ಶಿವಲಿಂಗವ್ವನವರು ಆರತಿಯನ್ನು ಬೆಳಗಿರುವರು. 'ತೊಟ್ಟಿಲ ತೂಗಿದೆನೆ ಆತನ ರೂಪದೊಳಾಡಿದೆನೆ' ಎಂದು ವಾತ್ಸಲ್ಯ ಭಾವದಲ್ಲಿ ತನ್ಮಯರಾಗಿ, ಪರಮಾತ್ಮನ ತೊಟ್ಟಿಲನ್ನು ತೂಗುತ್ತ, 'ಜೋಗುಳ ಹಾಡೇವು ನೋಡುತ ಅವನ । ಕಂಡೇವೀಗ ನಮ್ಮ ವಸ್ತು ಬಾಲನ್ನ।' ಎಂದು ಅಂದವಾಗಿ ಅವರು ಜೋಗುಳವನ್ನು ಹಾಡಿದರು. 'ಇಂಥ ಸುಗಂಧ ಸುವಾಸಿಕ ಪೂಜೆ ಯೋಗದೊಳಗಾಗಿ, ತನ್ನೊಳು ತಾನಾಗಿ, ಮನತುಂಬಿ ಮರವಾಗಿ, ಕಿವಿತುಂಬಿ ನಾದಾಗಿ, ಕಣ್ಣು ತುಂಬಿ ಬೆಳಕಾಗಿ, ಇಂತು ಅಪ್ಪಯ್ಯನ ಪೂಜೆ ನೋಡುತ್ತ' ಶಿವಲಿಂಗವ್ವನವರು ತುಂಬು ಜೀವನವನ್ನು ಬಾಳಿ ಬೆಳಗಿದರು.

ಆತ್ಮಸಾಕ್ಷಾತ್ಕಾರದ ಆಂತರಿಕ ಪ್ರತೀತಿಯ ಲಕ್ಷಣಗಳನ್ನು ಶ್ರೀ ಸಮರ್ಥ ರಾಮದಾಸರು ಈ ರೀತಿ ಗುರುತಿಸಿರುವರು:

> ಪಾಪದ ಖಂಡನೆ ಆಯಿತು । ಜನ್ಮಯಾತನೆ ತಪ್ಪಿತು।
> ಇಂತು ಅನುಭವ ಬಂದಿತು । ಅಂದರೆ ಸರಿ॥

ಅವರು ಹೇಳಿರುವ ಈ ಅನುಭೂತಿಯ ಕುರುಹುಗಳನ್ನು ಶಿವಲಿಂಗವ್ವನವರ ಕೆಳಗಿನ ನುಡಿಗಳನ್ನು ನಾವು ಕಾಣಬಹುದು. 'ಆಯಿತು ಪಾಪದ ಖಂಡನಾ । ಗುರುವಿನ

ಪಾದಕ ಹೊಂದಿ ನಾ।' 'ರಾಜಯೋಗವ ಮಾಡಿ । ಸುಖಭೋಗದೊಳಗೆ ಆಡಿ । ನೀಗಿದೆ ಭವಧಾಡಿ।', 'ಅಂತಪಾರವಿಲ್ಲದಂಥ ಆತ್ಮನ ಸಾಧಿಸಿಕೊಂಡುದರಿಂದ ಹುಟ್ಟುವುದು, ಸಾಯುವುದು–ಹುಟ್ಟು ಮುರಿದು ಬಿಟ್ಟ ನಮ್ಮ ಗುರುವು।' ಎಂಬೀ ನುಡಿಗಳಲ್ಲಿ ತಾವು ನಿಷ್ಪಾಪರಾಗಿ ಅಮರ ಜೀವನವನ್ನು ಹೊಂದಿರುವುದಾಗಿ ಶಿವಲಿಂಗವ್ವನವರು ನಿಃಸಂದೇಹವಾಗಿ ನುಡಿಯುವರು. 'ನಿನ್ನ ಉನ್ಮನಿ ಸುಖ ಉಂಡು ಉಂಡು ತನ್ಮಯ ನಾದೆನೊ ದೇವಾ।' ಎಂದು ಆತ್ಮಾನಂದದಲ್ಲಿ ಮೈಮರೆತು ಅವರು ಉಸುರಿರುವರು. 'ನಿನ್ನ ಹಾಡಿ, ನಿನ್ನ ನೋಡಿ, ನಿನ್ನೊಳು ಬೆಳಗಿ, ಇನ್ನೊಂದು ಬಯಸದೆ, ನಿನ್ನೊಳು ಬೆರೆತು ಹೋದೆ।' ಎಂದು ತಮಗಾದ ಐಕ್ಯಸ್ಥಿತಿಯ ಅನುಭವವನ್ನು ಅವರು ಸೂಚಿಸಿರುವರು. 'ಧನ್ಯ ಧನ್ಯ ಧನ್ಯವೈ । ಧನ್ಯ ಗುರುರಾಯರೈ । ಧನ್ಯ ಉಮದಿ ಪ್ರಭುವೈ । ಆತನ ಮಹಿಮೆ ಹಿರಿಯದೈ।' ಎಂದು ತಮ್ಮ ಜೀವನದಲ್ಲಿ ಧನ್ಯತೆಯನ್ನು ಪಡೆದುದನ್ನು ಅವರು ಸುಷ್ಪಷ್ಟವಾಗಿ ಸಾರಿರುವರು.

ಈ ಗ್ರಂಥದ ಎರಡನೆಯ ಭಾಗದಲ್ಲಿ ಶಿವಲಿಂಗವ್ವನವರ ಸಾಧನ ಸೋಪಾನವನ್ನು ವಿವರಿಸಲಾಗಿದೆ. ಮೊದಲು ಮಾನವಜನ್ಮದ ಮಹತ್ವವನ್ನು ಹೇಳಿ, ಆಮೇಲೆ, ಆತ್ಮ ಸಾಕ್ಷಾತ್ಕಾರವೇ ಮಾನವನ ಸರ್ವಶ್ರೇಷ್ಠವಾದ ಗುರಿಯೆಂದು ಕಾಣಿಸಲಾಗಿದೆ. 'ಈ ಭವದೊಳಗೆ ಹುಟ್ಟಿಬಂದ ಬಳಿಕ ಅಂದಿಗೆ ಇಂದಿಗೆ ಇದ್ದಂಥ ಆತ್ಮನು, ಆತನೇ ನಮ್ಮ ಕುಲದೈವತನು; 'ಕಾಯಾ ಪಟ್ಟಣದಲ್ಲಿ ಬಂದು, ಪರಮಾತ್ಮನ ಖೂನ ಹಿಡಿಯದೆ ಹೋದರೆ, ಈ ಪಟ್ಟಣವು ಹಾಳು ಬಿದ್ದಂತೆ।' ಎಂದು ಅವರು ಹೇಳುವರು.

"ಲಬ್ಧಾ ವಿದ್ಯಾ ರಾಜಮಾನ್ಯಾ ತತಃ ಕಿಮ್ । ಪ್ರಾಪ್ತಾ ಸಂಪತ್
ಪ್ರಭಾವಾಢ್ಯಾ ತತಃ ಕಿಮ್। ಯೆನೈವಾತ್ಮಾ ನೈವ ಸಾಕ್ಷಾತ್ಕೃತೋಽಸ್ತಿ।"

ಎಂಬೀ ಶ್ರೀ ಶಂಕರಾಚಾರ್ಯರ ಸಿದ್ಧಾಂತ ನುಡಿಯಂತೆ, 'ಎಂಥಾ ಶಾಣ್ಯಾ ನಾದರೂ ಆಗಲಿ, ಎಂಥ ವಿದ್ವಾನ್ ಆದರೂ ಆಗಲಿ, ಗುರುವಿನ ಕೃಪಾವಂದಿಲ್ಲದೆ, ಆತ್ಮಜ್ಞಾನ ಆಗದೆ, ಏನು ಮಾಡಿದರೂ ವ್ಯರ್ಥ।' ಎಂದು ಶಿವಲಿಂಗವ್ವನವರು ಸಾರಿ ಹೇಳುವರು. 'ದೇಹಸುಖದ ಬೆನ್ನು ಹತ್ತಿ, ದರಿದ್ರತನವನ್ನು ಭೋಗಿಸುತ್ತ ದುಃಖ ಪಡಬಾರದು. ಈ ಪಟ್ಟಣಕ್ಕೆ ಬಂದು, ಪಟ್ಟಣದಲ್ಲಿರುವಂಥ ಪರಮಾತ್ಮನ ಸ್ಮರಣೆಯನ್ನು ನಿಷ್ಠೆಯಿಂದ ಮಾಡಿ, ನಿಜರೂಪವನ್ನು ನೋಡಿ, ಮರಣ ನೀಗಿ ಹೋದರೆ, ಈ ಪಟ್ಟಣಕ್ಕೆ ಬಂದದ್ದು ಫಲವಾಯಿತು' ಎಂಬುದು ಶಿವಲಿಂಗವ್ವನವರ ಅಭಿಮತ.

ಇದರಂತೆ ನರಜನ್ಮ ಸಾರ್ಥಕವಾಗಬೇಕಾದರೆ, ಮೊದಲು ಗುರುಕೃಪೆಯು ಅವಶ್ಯವಾದುದು. 'ಗುರುವಿನ ಪ್ರಸಾದದಿಂದ ಈ ಮರವಿನ ದೇಹಕ್ಕೆ ಅರವು ಆಗುವುದು' ಎಂದು ಶಿವಲಿಂಗವ್ವನವರು ಹೇಳುವರು. ಆದರೆ, ಇಂಥ ಸಾಮರ್ಥ್ಯವುಳ್ಳ ಸದ್ಗುರುಗಳು

ಯಾರು, ಅವರನ್ನು ಗುರುತಿಸುವುದೆಂತು? ಇದೊಂದು ಬಿಗಿಯಾದ ಸಮಸ್ಯೆ. ಅದಕ್ಕಾಗಿ ಅವರು 'ಗುಪ್ತ ನಿಧಿಯನ್ನು ಸ್ಪಷ್ಟವಾಗಿ ತೋರಿಸಬಲ್ಲವನೇ ನಿಜವಾದ ಗುರು' ಎಂದು ಅಂಧಶ್ರದ್ಧೆಯುಳ್ಳ ಜನರಿಗೆ ಎಚ್ಚರಿಕೆಯನ್ನಿತ್ತಿರುವರು. 'ಹರಮಂತ್ರ ಗುರುಬಲ್ಲ; ಆತನು ನರನಲ್ಲ, ನಾರಾಯಣ ಸ್ವರೂಪನು; ಜಾತಿಯೊಳಗೆ ಪುಟ್ಟಿ ಅಜಾತನಾದವನು. ಆತನೇ ಜಗದುದ್ಧಾರಕ ವಸ್ತು' ಆದುದರಿಂದ ಇಂಥ ಆತ್ಮಜ್ಞಾನಿಯಾದ ಸದ್ಗುರುವಿಗೆ ಶರಣು ಹೋಗಿ, ಮೂಲಮಂತ್ರದ ಉಪದೇಶವನ್ನು ಪಡೆಯಬೇಕೆಂದು ಭಾವಿಕರಿಗೆ ನಿಜವಾದ ಪರಮಾರ್ಥದ ದಾರಿಯನ್ನು ಕಾಣಿಸಿರುವರು. 'ಗುರುಮಂತ್ರಬಲದಿಂದ ಶಿವನು ತಾನು ಒಲಿಯುವನು। ಗುರುಮಂತ್ರ ಬಲದಿಂದ ಶಿವಪದಕ್ಕೆ ಮುಟ್ಟುವರು।'. ಆದುದರಿಂದ, ನಾಮಸ್ಮರಣೆಯನ್ನು ನಿಷ್ಠೆಯಿಂದ, ಆದರದಿಂದ, ಭಾವದಿಂದ, ಅಂತರಂಗದೊಳಗೆ ಹಗಲಿರುಳು ಅಖಂಡವಾಗಿ ಮಾಡುತ್ತಿರಬೇಕು ಎಂದು ಭಕ್ತರಿಗೆ ಅವರು ಬೋಧಿಸಿರುವರು. ಆದರೆ, ಈ ರೀತಿ ಸಾಧನೆಯು ಸುಸೂತ್ರವಾಗಿ ಸಾಗಬೇಕಾದರೆ, 'ನಡಿನುಡಿ ಕೆಡಗುಡಬಾರದು, ಜಪ್ಪಿಸುತ್ತಿರಬೇಕು'. 'ಮನಸ್ಸು ಸ್ವೇ ಬಿಡಬಾರದು; ಮನಸ್ಸಿಗೆ ಬೋಧೆ ಮಾಡಿ, ಕಟ್ಟಿ ಹಾಕಿ, ಸ್ಮರಣೆಗೆ ಹಚ್ಚಬೇಕು. ಅಂದರೆ ಮನಸ್ಸು ಕೈವಾಸವಾಗುವುದು' ಎಂದು ಸಾಧಕರಿಗೆ ವಿಶೇಷ ಎಚ್ಚರಿಕೆ ಅವರದು. ಈ ರೀತಿ ಆಚರಣೆಯನ್ನು ಪರಿಶುದ್ಧ ವಾಗಿಟ್ಟುಕೊಂಡು, ನಿಷ್ಠೆಯಿಂದ ಸುದೀರ್ಘಕಾಲ ನಾಮಸ್ಮರಣೆಯನ್ನು ಮಾಡಿ, ಆತ್ಮಸಾಕ್ಷತ್ಕಾರದ ಆನಂದವನ್ನು ಸವಿಯುವುದರಲ್ಲಿಯೇ ಮಾನವ ಜೀವನದ ಸಾರ್ಥಕತೆ ಇದೆ. ಇದುವೇ ಶಿವಲಿಂಗವ್ವನವರ ಸಾಧನ ಸೋಪಾನದ ಸಾರ.

ಪರಮಾರ್ಥದಲ್ಲಿ ಪ್ರೀತಿಯುಳ್ಳ ಜನರಿಗೆ ಈ ಗ್ರಂಥವು ಒಳ್ಳೇ ಉದ್ಬೋಧಕ ವೆನಿಸುವಂತಿದೆ. ಪರಮಾರ್ಥ ಪಥದಲ್ಲಿ ಸಾಗುತ್ತಿರುವ ಸಾಧಕ ಭಕ್ತರಿಗೆ ಇದು ಅತ್ಯಂತ ಉಪಯುಕ್ತವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಈ ಮೊದಲು ಶ್ರೀ ಅಂಬುರಾವ ಮಹಾರಾಜರವರ 'ಜೀವನ-ದರ್ಶನ'ದ ಲಾಭವನ್ನು ನಮ್ಮೆಲ್ಲರಿಗೆ ಶ್ರೀ ಆರ್. ಪಿ. ಅವರು ದೊರಕಿಸಿಕೊಟ್ಟಿರುವರು. ಈಗ ಈ ಗ್ರಂಥದ ಮುಖಾಂತರ ಶ್ರೀ ಶಿವಲಿಂಗವ್ವನವರ ಜೀವನ ಹಾಗೂ ಸಾಧನ ಸೋಪಾನ ಇವುಗಳ ಪರಿಚಯವನ್ನು ಮಾಡಿಕೊಟ್ಟು ಪರಮಾರ್ಥದಲ್ಲಿ ಆಸಕ್ತಿಯುಳ್ಳ ಎಲ್ಲರನ್ನೂ ಅವರು ಉಪಕೃತರನ್ನಾಗಿರಿಸಿರುವರು. ಶರಣ ಸಾಹಿತ್ಯಕ್ಕೆ ಇದೊಂದು ಬೆಲೆಯುಳ್ಳ ಕೊಡುಗೆಯೆನಿಸುವುದು.

ಅಥಣಿ ಕೆ. ಡಿ. ಸಂಗೋರಾಮ

ದಿ. ೮-೯-೧೯೭೭

# ೧
# ಚರಿತ್ರೆ

**ಗುರುಪರಂಪರೆ :**

ಕರ್ನಾಟಕದ ಉತ್ತರಭಾಗ, ವಿಜಯಪುರ ನಾಡು. ಭಕ್ತಿಯ ಬೀಡು. ಭಕ್ತಿಜ್ಞಾನಗಳ ಹುಲುಸಾದ ಫಸಲನ್ನೀವ ಈ ನಾಡು ಭೌತಿಕ ಬೆಳೆಯನ್ನೀಯದ ಬರಡು ಕಾಡೆಂದು ಹೆಸರು ಪಡೆದಿದೆ. ವಿಜಯಪುರ ಜಿಲ್ಲೆಗೆ ಸೇರಿದ ಬಾಗೇವಾಡಿಯು ಭಕ್ತಿಭಂಡಾರಿ ಬಸವಣ್ಣನವರ ಹುಟ್ಟೂರು. ಕೂಡಲಸಂಗಮವು ಅವರ ತಪೋಭೂಮಿಯಾದರೆ, ಸಂಗಮನಾಥನು ಅವರ ಆರಾಧ್ಯ ದೈವತವು. ದಾಸವರೇಣ್ಯರೆನಿಸಿದ ಮಹಿಪತಿ ರಾಯರು ವಿಜಯಪುರದ ಹತ್ತಿರದ ಕಾಖಂಡಕಿಯವರು. ಅವರ ಪುತ್ರರೂ, ಮಹಾ ಗುರುಭಕ್ತರೂ ಆದ ಕೃಷ್ಣರಾಯರು ಭಕ್ತಶ್ರೇಷ್ಠರೆಂದು ಹೆಸರು ಪಡೆದರು. ಮಹಿಪತಿರಾಯರ ಸಮಕಾಲೀನ ರೆನಿಸಿದ ಭಕ್ತಶ್ರೇಷ್ಠರಾದ ರುಕ್ಮಿಣೀಪಂಡಿತರು ವಿಜಯಪುರದವರಾದರೆ, ಕೃಷ್ಣದ್ವೈಪಾಯನಾ ಚಾರ್ಯರು ಅಗರಖೇಡದವರು. ಅದೇ ಕಾಲಕ್ಕೆ ಯೋಗಿಭಕ್ತರೆಂದು ಪ್ರಸಿದ್ಧರಾದ ಜಕ್ಕಪ್ಪಯ್ಯನವರು ಸಿಂದಗಿಯವರು. ಅಂದು ಮೆರೆದ ಭಕ್ತಿಜ್ಞಾನದ ಪರಂಪರೆಯು ಇಂದಿಗೂ ವಿಜಯಪುರದ ಪರಿಸರದ ಪ್ರದೇಶದಲ್ಲಿ ಬಾಳಿ, ಬೆಳಗಿ, ಬಾಳುತ್ತಿರುವುದನ್ನು ನಾವು ಕಾಣುತ್ತೇವೆ, ಕೇಳುತ್ತೇವೆ.

ಅಂದು ಕ್ರಿ.ಶ. ೧೩ನೇ ಶತಮಾನದಿಂದ ಕ್ರಿ.ಶ. ೧೫ನೇ ಶತಮಾನದ ಅವಧಿಯಲ್ಲಿ ವಿಜಯಪುರದ ಪ್ರದೇಶದಲ್ಲಿ ಬೆಳಗಿದ ಆತ್ಮಜ್ಞಾನದ ಬೆಳಕು ಮುಸಕು ಮುಸಕಾಗುತ್ತಿರುವಾಗಲೇ ಕ್ರಿ.ಶ. ೧೮ನೇ ಶತಮಾನದ ಕೊನೆಯ ಅವಧಿಯಲ್ಲಿ ವಿಜಯಪುರ ಜಿಲ್ಲೆಯ ಇಂಡೀ ತಹಶೀಲದಲ್ಲಿಯ ದೇವನಿಂಬರ್ಗಿ ಗ್ರಾಮದಲ್ಲಿ, ಮಿಣುಕು ಮಿಣುಕಾಗುತ್ತಿದ್ದ ಆತ್ಮಜ್ಞಾನದ ಜ್ಯೋತಿಯನ್ನು ಹೊಸ ತೇಜದಿಂದ ಪ್ರಜ್ವಲಿಸುವ ಕುರಿತು ಭಗವಂತನ ಅವತಾರವಾಯಿತು. ಭಗವಂತನಿಗೆ ಜಾತಿ-ಮತಗಳ ಕಟ್ಟು ಪಾಡುಗಳಿಲ್ಲ. ತನಗೆ ಬೇಕಾದಲ್ಲಿ, ಬೇಕಾದವರಲ್ಲಿ ಅವನು ಹುಟ್ಟಿ ಬರಬಹುದು. ನಿಂಬರ್ಗಿಯ ನಿಳಾರಿ ಎಂಬ ನೀಲಗಾರ ಮನೆತನದಲ್ಲಿ ನಾರಾಯಣನೆಂಬ ನಾಮಧೇಯವನ್ನು ತಾಳಿ, ಅವನು ಜನಿಸಿ ಬಂದನು. ತಂದೆ-ತಾಯಂದಿರು ಆ ಬಾಲಕನಿಗೆ ನಾರಾಯಣನೆಂದು ಹೆಸರಿಟ್ಟರೂ 'ಭಾವು' ಎಂದು ಎಲ್ಲರು ಅವನನ್ನು ಕರೆಯಹತ್ತಿದರು. ಅವರು ತಮ್ಮ ಅಂಕಿತವನ್ನು ಕೂಡ 'ಭಾವು ನಿರಾಳಿ' ಎಂದೇ ಬರೆಯುತ್ತಿದ್ದರು. ಶ್ರೀ ಭಾವುರಾವ

ನಿಂಬರ್ಗಿಯವರು ತಮ್ಮ ತಪೋಬಲದಿಂದ ಆತ್ಮಸಾಕ್ಷಾತ್ಕಾರವನ್ನು ಪಡೆದರು. ಪೂರ್ಣಸಾಕ್ಷಾತ್ಕಾರಿ ಪುರುಷರಾದರು. 'ಶ್ರೀ ನಿಂಬರ್ಗಿಮಹಾರಾಜರು ಸ್ವಯಂಸಿದ್ಧ ಸತ್ಪುರುಷ'ರೆಂದು ಗುರುದೇವ ರಾನಡೆಯವರು ಹೇಳುತ್ತಿದ್ದರು.

ತೋಟದ ಒಂದು ಮೂಲೆಯಲ್ಲಿ ಬೆಳೆದ ಬಕುಳೀ ಗಿಡದ ಹೂಗಳ ಸುವಾಸನೆಯು ಸುತ್ತಲಿನ ಪರಿಸರದಲ್ಲಿ ಪಸರಿಸುವಂತೆ, ಜಿಲ್ಲೆಯ ಒಂದು ಬದಿಯಲ್ಲಿಯ ಹಳ್ಳಿಯಲ್ಲಿ ವಾಸವಾಗಿದ್ದ ಶ್ರೀ ನಿಂಬರ್ಗಿ ಮಹಾರಾಜರ ಆತ್ಮಜ್ಞಾನದ ಕಂಪು ಆ ಹಳ್ಳಿಯ ಸುತ್ತೆಲ್ಲಾ ಹರಡಿತು. ಆತ್ಮಜ್ಞಾನದ ಆನಂದದ ಸವಿಯನ್ನು ಸವಿಯಲು ಸುತ್ತಲಿನ ಊರುಗಳಿಂದ ಭಕ್ತರು ಶ್ರೀ ನಿಂಬರ್ಗಿ ಮಹಾರಾಜರಲ್ಲಿ ಬಂದು ಅವರ ಉಪದೇಶವನ್ನು ಪಡೆಯ ಹತ್ತಿದರು. ಹೀಗೆ ಶ್ರೀ ನಿಂಬರ್ಗಿ ಮಹಾರಾಜರಲ್ಲಿ ಆತ್ಮಜ್ಞಾನಾರ್ಥಿಯಾಗಿ ಬಂದ ಭಕ್ತರಲ್ಲಿ ಉಮದಿಯ ಶ್ರೀ ವೆಂಕಟೇಶ ಉರ್ಫ ಭಾವುಸಾಹೇಬ ದೇಶಪಾಂಡೆಯವರು ಒಬ್ಬರು. ಶ್ರೀ ಭಾವುಸಾಹೇಬರು ಉಮದಿಯ ವತನದಾರ ದೇಶಪಾಂಡೆ ಮನೆತನದವರು. ಚಿಕ್ಕ ವಯಸ್ಸಿನಲ್ಲಿಯೇ ಶ್ರೀ ನಿಂಬರ್ಗಿ ಮಹಾರಾಜರಿಂದ ಅನುಗ್ರಹೀತರಾದ ಅವರು ತಮ್ಮ ಪ್ರಖರವಾದ ವೈರಾಗ್ಯ, ಅಚಲವಾದ ಗುರುಭಕ್ತಿ, ಅಸಾಮಾನ್ಯವಾದ ತಪಸ್ಸು, ಇವುಗಳ ಫಲವಾಗಿ ತಮ್ಮ ಗುರುಗಳ ಪೂರ್ಣಕೃಪೆಗೆ ಪಾತ್ರರಾದರು, ಪೂರ್ಣಾವಸ್ಥೆ ಯನ್ನು ಪಡೆದರು. ತಮ್ಮ ಶಿಷ್ಯನ ಆಧ್ಯಾತ್ಮಿಕ ಯೋಗ್ಯತೆಯನ್ನರಿತ ಶ್ರೀ ನಿಂಬರ್ಗಿ ಮಹಾರಾಜರು ತಮ್ಮ ಜೀವಮಾನದಲ್ಲಿಯೇ ಭಕ್ತಿಪ್ರಸಾರದ ಕಾರ್ಯವನ್ನು ಕೈಕೊಳ್ಳಲು ಅವರಿಗೆ ಆಜ್ಞೆಯಿತ್ತರು. ಶ್ರೀ ಉಮದೀ ಮಹಾರಾಜರು ತಮ್ಮ ಗುರುಗಳ ಅಪ್ಪಣೆಯನ್ನು ಸಿರಸಾ ಮನ್ನಿಸಿ ಆ ಮಹಾಕಾರ್ಯದ ಹೊಣೆಯನ್ನು ಹೊತ್ತು, ಆತ್ಮಜ್ಞಾನವನ್ನು ಪಡೆಯಬೇಕೆಂದು ಬಯಸಿ ಬಂದ ಭಕ್ತರಿಗೆ ಮೂಲಮಂತ್ರದ ಉಪದೇಶ ಮಾಡಿ ಅವರಿಗೆ ಪರಮಾರ್ಥ ಮಾರ್ಗವನ್ನು ತೋರಿಸಹತ್ತಿದರು.

ಅಂದಿನ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿ ಜತ್ತ ಸಂಸ್ಥಾನವು ಒಂದಾಗಿತ್ತು. ಉಮದಿಯ ಆ ಸಂಸ್ಥಾನಕ್ಕೆ ಸೇರಿದ ಒಂದು ಹಳ್ಳಿಯು. ತಮ್ಮ ಹಳ್ಳಿಯು ಜತ್ತಿ ಸಂಸ್ಥಾನಕ್ಕೆ ಸೇರಿದುದರಿಂದ ಮತ್ತು ತಮ್ಮ ಮನೆತನವು ವತನದಾರ ಮನೆತನಕ್ಕೆ ಸೇರಿದುದರಿಂದ, ತಮ್ಮ ಆಸ್ತಿಯ ಮತ್ತು ವತನದ ಕೆಲಸಕಾರ್ಯಗಳಿಗಾಗಿ ಶ್ರೀ ಉಮದಿ ಮಹಾರಾಜರು ಮೇಲಿಂದ ಮೇಲೆ ಜತ್ತಿಗೆ ಹೋಗಿ ಬರಬೇಕಾಗುತ್ತಿತ್ತು. ಜತ್ತಿಯಲ್ಲಿಯ ಪ್ರತಿಷ್ಠಿತ ನಾಗರಿಕರಿಗೆ ಮತ್ತು ಅಧಿಕಾರಿ ವರ್ಗಕ್ಕೆ ಶ್ರೀ ಉಮದಿಮಹಾರಾಜರ ಪರಿಚಯವು ಚನ್ನಾಗಿಯೇ ಇದ್ದಿತು. ಶ್ರೀಮಹಾರಾಜರ ಬುದ್ಧಿಮತ್ತೆ, ಪ್ರಾಮಾಣಿಕತನದ ಪರಿಚಯವಿದ್ದ

ಜತ್ತಿಯ ಯಜಮಾನರು ಅವರಿಗೆ ಮಾಮಲತಿಯನ್ನು ಕೊಡಮಾಡಿದರು. ಆದರೆ ಅಧ್ಯಾತ್ಮ ಸಾಧನವನ್ನೇ ತಮ್ಮ ಜೀವನದ ಗುರಿಯನ್ನಾಗಿ ಇರಿಸಿಕೊಂಡ ಶ್ರೀ ಉಮದೀ ಮಹಾರಾಜರು ಯಜಮಾನರ ಸೂಚನೆಯನ್ನು ಸಾದರ ನಿರಾಕರಿಸಿದರು. 'ಮಾಮಲತಿಯನ್ನು ನಿರಾಕರಿಸಿದರು' ಎಂದು ನಿತ್ಯನೇಮಾವಲಿಯ ಪಂಚಸಮಾಸಿ ಎರಡನೇ ಸಮಾಸದಲ್ಲಿ ಗುರುದೇವ ರಾನಡೆಯವರು ಬರೆದುದರ ಮೇಲಿಂದ ಕಂಡು ಬರುವುದು.

ಮನೆತನ : ಜತ್ತಿಯಲ್ಲಿ ಅರಳಿಯವರೆಂಬ ಶ್ರೀಮಂತ ವ್ಯಾಪಾರಿಗಳ ಲಿಂಗಾಯತ ಮನೆತನವೊಂದಿದೆ. ಆ ಮನೆತನದ ಪೂರ್ವಜರಲ್ಲಿಬ್ಬರು ತಮ್ಮ ಮನೆತನಕ್ಕೆ ಸ್ವತಂತ್ರ ಜಂಗಮರೊಬ್ಬರಿರಬೇಕೆಂದು ಬಗೆದು ವಿಜಾಪುರ ಜಿಲ್ಲೆಯ ಮಮದಾಪೂರ ಗ್ರಾಮ ವಾಸಿಗಳಾದ ಚಿಮ್ಮಲಗಿಮಠ ಎಂಬ ಹೆಸರಿನ ಜಂಗಮ ಮನೆತನದ, ರಾಚಯ್ಯ ಅಥವಾ ರಾಚೋಟಯ್ಯಾ ಎಂಬವರನ್ನು ಜತ್ತಿಗೆ ಕರೆದುಕೊಂಡು ಬಂದರು. ಮನೆ ಮಾಡಿಕೊಂಡು ಮಠವನ್ನು ನಡೆಸಿಕೊಂಡು ಹೋಗಲು ಅವರಿಗೆ ಸ್ಥಳವನ್ನು ಕೊಟ್ಟರು. ರಾಚಯ್ಯನವರು ಮಠಮಾಡಿಕೊಂಡು ಜತ್ತಿಯಲ್ಲಿಯೇ ಇರಹತ್ತಿದರು. ರಾಚಯ್ಯನವರ ಮಠವೇ ಜಂಗಮಮಠವೆಂದು ಕರೆಯಲ್ಪಡಹತ್ತಿತು. ಇಂದಿಗೂ ಜಂಗಮ ಮಠವೆಂದು ಅದು ಪ್ರಸಿದ್ಧವಿದೆ.

ಜನ್ಮ : ಈ ಮಠದ ಸಂಸ್ಥಾಪಕರೆನ್ನಲಾದ ರಾಚಯ್ಯನವರಿಗೆ ಮೂರು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ. ಈ ಮೂವರಲ್ಲಿ ನೀಲವ್ವ ಹಿರಿಯ ಮಗಳು ಮತ್ತು ಯಾರ ಬಗ್ಗೆ ಈ ಚರಿತ್ರವಿದೆಯೋ ಅವರು–ಶಿವಲಿಂಗವ್ವ ಕಿರಿಯ ಮಗಳು. ಮಡಿವಾಳಯ್ಯನೆಂಬ ಗಂಡು ಮಗನು ನೀಲವ್ವನಕಿಂತ ಕಿರಿಯನು ಮತ್ತು ಶಿವಲಿಂಗವ್ವನವರಿಗೆ ಅಣ್ಣನಾಗಿದ್ದನು. ಇವರ ತಾಯಿಯ ಹೆಸರು ಬಸವ್ವಾ ಎಂದು ಇದ್ದಿತು. ಕ್ರಿ.ಶ. ೧೯೦೦ರಲ್ಲಿ ಜಮಖಂಡಿಯಿಂದ ಮಡಿವಾಳಯ್ಯನಿಗೆ ಕಾಗದ ಬರೆಯುವಾಗ 'ಬಸವ್ವಾ ತಾಯಿ' ಎಂದು ಬಸಪ್ಪ ಕಟಗಿ ಬರೆದಿರುವರು. ಶಿವಲಿಂಗವ್ವನವರ ಜನ್ಮವಾದುದು ಕ್ರಿ.ಶ. ೧೮೬೭ರಲ್ಲಿ. ಜತ್ತಿಯಲ್ಲಿಯ ಜಂಗಮ ಮಠದಲ್ಲಿರುವ ಅವರ ಸಮಾಧಿಯ ಮೇಲೆ ಅವರ ಜನ್ಮ ವರ್ಷವು ಕ್ರಿ.ಶ. ೧೮೬೭ ಎಂದು ಕೆತ್ತಲಾಗಿದೆ. ಅಕ್ಕ ನೀಲವ್ವನಿಗೆ ಮುರಿಗೆವ್ವನೆಂಬ ಒಬ್ಬ ಮಗಳು ಮತ್ತು ಪಾವಾಡೆಯ್ಯನೆಂಬ ಒಬ್ಬ ಮಗನು ಇದ್ದರು. ನೀಲವ್ವನು ತನ್ನ ಮಗಳಾದ ಮುರಗೆವ್ವನನ್ನು ತನ್ನ ತಮ್ಮನಾದ ಮಡಿವಾಳಯ್ಯನಿಗೆ ಕೊಟ್ಟು ಮದುವೆ ಮಾಡಿದ್ದಳು. ಮಡಿವಾಳಯ್ಯ, ಮರಿಗೆವ್ವ ಮತ್ತು ಪಾವಾಡೆಯ್ಯ ಇವರು ಶಿವಲಿಂಗವ್ವನವರಿಗೆ ಅನೇಕ ಬಗೆಯ ನೆರವು ನೀಡಿ ಅವರ ಅಧ್ಯಾತ್ಮ ಸಾಧನಕ್ಕೆ ಸಹಾಯಕಾರಿಯಾಗಿರುತ್ತಿದ್ದರು. ಇದನ್ನು ನಾವು ಶಿವಲಿಂಗವ್ವನವರ ಜೀವನದಲ್ಲಿಯ ಘಟನೆಗಳಿಂದ ಕಂಡುಕೊಳ್ಳಬಹುದು.

'ಮೂಲಮಂತ್ರಾ ಕರೆದು ಕೊಟ್ಟಾ' : ತಮ್ಮ ಕೆಲಸ ಕಾರ್ಯಗಳಿಗಾಗಿ ಜತ್ತಿಗೆ ಹೋದಾಗಲೆಲ್ಲ ಉಮದೀಮಹಾರಾಜರು ಜಂಗಮಮಠದಲ್ಲಿಯೇ ಉಳಿದು ಕೊಳ್ಳುತ್ತಿದ್ದರು. ತಮ್ಮ ಕುದುರೆಯನ್ನು ಅಲ್ಲಿಯೆ ಕಟ್ಟಿ ತಾವೂ ಕೂಡ ಅಲ್ಲಿಯೆ ವಸತಿ ಮಾಡುತ್ತಿದ್ದರು. ತಮ್ಮ ಧ್ಯಾನ (ನೇಮ) ಪೋಥಿ (ಗ್ರಂಥವಾಚನ) ತೀರಿಸಿಕೊಂಡು, ತಮ್ಮ ವಾಡಿಕೆಯ ಭಜನೆಯನ್ನೂ ಅವರು ಮಾಡುವರು. ಅದರಿಂದ ರಾಚಯ್ಯನವರಿಗೆ ಮತ್ತು ಅವರ ಮನೆಯ ಹಿರಿಕಿರಿಯ ಸದಸ್ಯರಿಗೆ ಶ್ರೀ ಉಮದೀಮಹಾರಾಜರ ಪರಿಚಯ ಚನ್ನಾಗಿ ಆಗಿದ್ದಿತಲ್ಲದೆ, ಅವರೆಲ್ಲರಲ್ಲಿ ಮಹಾರಾಜರ ಬಗ್ಗೆ ಆದರ ಭಾವವು ಬೆಳೆದು ಬಂದಿದ್ದಿತು. ಶ್ರೀ ಉಮದೀ ಮಹಾರಾಜರು ಶಿವಲಿಂಗವ್ವನನ್ನು ಬಾಲ್ಯದಿಂದ ಕಂಡಿರಲಿಕ್ಕೆ ಸಾಕು.

ಒಂದು ಸಲ ಶ್ರೀಉಮದೀಮಹಾರಾಜರು ಜತ್ತಿಗೆ ಬಂದಿರುವಾಗ್ಗೆ, ವಾಡಿಕೆಯಂತೆ ಜಂಗಮ ಮಠದಲ್ಲಿ ಉಳಿದುಕೊಂಡರು. ಎಲ್ಲಿಯೇ ಹೋದರೂ ಅವರು ತಮ್ಮ ನಿತ್ಯಕ್ರಮದಲ್ಲಿ ಎಂದೂ ಬದಲಾವಣೆ ಮಾಡುತ್ತಿರಲಿಲ್ಲ. ಅವರ ತ್ರಿಕಾಲ ನೇಮ, ಪೋಥಿ, ಭಜನೆ ಆಗಲೇಬೇಕು. ಎಂದಿನಂತೆ ಮಹಾರಾಜರು ಆ ಮಠದ ಮೊಗಸಾಲೆಯಲ್ಲಿ ಕುಳಿತು ತಮ್ಮ ಗ್ರಂಥವಾಚನ ಮಾಡುತ್ತಿರುವಂತೆ, ಎದುರು ಅಂಗಳದಲ್ಲಿ ತನ್ನ ಸಂಗಾತಿ ಗಳನ್ನು ಕೂಡಿಕೊಂಡು ಮಕ್ಕಳ ಆಟವನ್ನಾಡುತ್ತಿದ್ದ ಶಿವಕ್ಕನ ಕಡೆಗೆ ಅವರ ದೃಷ್ಟಿ ಹರಿಯಿತು. ಶಿವಲಿಂಗವ್ವನವರಲ್ಲಿದ್ದ ಆತ್ಮಶಕ್ತಿಯನ್ನು ಮಹಾರಾಜರು ತಮ್ಮ ಜ್ಞಾನದೃಷ್ಟಿ ಯಿಂದ ಕಂಡಿರಬಹುದೆಂದು ತೋರುತ್ತದೆ; ಅಂತೇ ಬಾಲಕಿಯಾದ ಶಿವಕ್ಕನಿಗೆ ಮೂಲಮಂತ್ರದ ಉಪದೇಶ ಮಾಡಲು ಮನದಲ್ಲಿ ನಿಶ್ಚಯಿಸಿ 'ಶಿವಕ್ಕಾ ಬಾರವಾ ಇತ್ತ', ಎಂದು ಅವಳನ್ನು ಕರೆದರು. ಮಹಾರಾಜರ ಕರೆಯನ್ನು ಕೇಳಿ ಕೂಡಲೆ ಅವಳು ಅವರತ್ತ ಓಡಿ ಹೋದಳು. 'ನಾನು ನಿನಗ ನಾಮ ಕೊಡತೀನಿ ತಗೋತೀಯಾ?' ಎಂದು ೬-೭ ವರುಷದ ಆ ಚಿಕ್ಕ ಶಿವಕ್ಕನನ್ನು ಕುರಿತು ಮಹಾರಾಜರು ಕೇಳಿದರು. ಶಿವಕ್ಕನಿಗೆ ಯಾವುದೂ ತಿಳಿಯದಂತಾಯಿತು. ತನ್ನ ಕತ್ತನ್ನಲ್ಲಾಡಿಸಿ ಸನ್ನೆಯಿಂದ ಬೇಡಾ ಎಂದು ಅವಳು ಹೇಳಿದಳು. ನಾಮವೆಂದರೆ ಏನು, ಅದರ ಮಹತ್ವವೇನು ಎಂಬುದನ್ನು ಅರಿಯದವಳಾದ ಆ ಮುಗ್ಧಬಾಲಿಕೆ ಮತ್ತೇನನ್ನು ಹೇಳುವುದು ಸಾಧ್ಯ?

ತನ್ನ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣವಾದ ಮತ್ತು ಪವಿತ್ರವಾದ ಆ ಕ್ಷಣದ ಘಟನೆಯನ್ನು ತಪ್ಪಿಸುವುದು ಶಿವಕ್ಕನಿಗೆ ಸಾಧ್ಯವಿರಲಿಲ್ಲ. ಶ್ರೀಉಮದೀ ಮಹಾರಾಜರು ಪರಮಾತ್ಮನಲ್ಲಿ ಏಕರೂಪವಾಗಿರುವುದರಿಂದ ಅವರ ಇಚ್ಛೆ ದೇವರ ಇಚ್ಛೆ ಒಂದೇ ಆಗಿದ್ದಿತು. ಪರಮಾತ್ಮನ ಸಂಕೇತವನ್ನು ಅರಿತುಕೊಂಡೇ ಮಹಾರಾಜರು ಶಿವಕ್ಕನನ್ನು ಕರೆದು ಮೂಲಮಂತ್ರವನ್ನು ಕೊಡಲು ಮುಂದೆ ಬಂದಿರಲಿಕ್ಕೆ ಬೇಕು. 'ಹಾಗನ್ನಬಾರದು.

ನಾಮವು ಬಹಳ ಮಹತ್ವದ್ದಿರುತ್ತದೆ. ಬೇಡಾ ಅನ್ನಬೇಡಾ' ಎಂದು ಹೇಳಿ ಶ್ರೀ ಉಮದೀ ಮಹಾರಾಜರು ನಾಮಮಂತ್ರವನ್ನು ಅವಳಿಗೆ ಹೇಳಿಯೇ ಬಿಟ್ಟರು. 'ಎಂಥಾ ಲೀಲಾ ಮಾಡಿದಾರಯ್ಯಾ' ಎಂಬ ತಮ್ಮ ಪದ್ಯದಲ್ಲಿ 'ಮೂಲ ಮಂತ್ರಾ ಕರೆದು ಕೊಟ್ಟಾ' ಎಂದು ಶಿವಲಿಂಗವ್ವನವರು ಬರೆದಿರುವರು. ಶ್ರೀ ಉಮದೀ ಮಹಾರಾಜರು ಕರೆದು ನಾಮ ಕೊಟ್ಟ ಇನ್ನೊಂದು ಉದಾಹರಣೆಯೆಂದರೆ ಶ್ರೀ ಅಂಬುರಾವ ಮಹಾರಾಜರದು. ತಮಗೆ ನಾಮ ತೆಗೆದುಕೊಳ್ಳುವ ಇಚ್ಛೆ ಇಲ್ಲವೆಂದು ಹೊರಟ ಕಾಲಕ್ಕೆ, ತಮ್ಮ ಶಿಷ್ಯನೋರ್ವನಿಂದ ಹಿಡಿದು ತರಿಸಿ ಶ್ರೀ ಉಮದೀ ಮಹಾರಾಜರು ಬಲವಂತದಿಂದ ಅವರಿಗೆ ಮೂಲಮಂತ್ರದ ಉಪದೇಶ ಮಾಡಿದರು. ಬೇಡವೆಂದರೂ ಮಹಾರಾಜರು ಇವರಿಬ್ಬರಿಗೆ ಮೂಲಮಂತ್ರವನ್ನು ಯಾಕೆ ದಯಪಾಲಿಸಿದರೆಂಬುದು ಅವರಿಬ್ಬರ ಮುಂದಿನ ಜೀವನದಿಂದ ಸಿದ್ಧವಾಗುವುದು.

ಚಿಕ್ಕ ವಯಸ್ಸಿನಲ್ಲಿ ಶಿವಲಿಂಗವ್ವನವರಿಗೆ ಮೂಲಮಂತ್ರವು ದೊರೆಯಿತು. ಆದರೆ ಆ ಮಂತ್ರಧ್ಯಾನದ ರೀತಿಯನ್ನು ಅವರು ಅರಿತಿರಲಿಲ್ಲ; ಅರಿಯುವುದು ಇಂಥ ಚಿಕ್ಕ ವಯಸ್ಸಿನಲ್ಲಿ ಸಾಧ್ಯವೂ ಇರಲಿಲ್ಲ. ಶಿವಕ್ಕನ ತಂದೆಯವರ ಒಪ್ಪಿಗೆಯನ್ನು ಪಡೆದು ಶ್ರೀ ಉಮದೀ ಮಹಾರಾಜರು ಅವರನ್ನು ಒಂದೆರಡು ಊರುಗಳಿಗೆ ತಮ್ಮ ಸಂಗಡ ಕರೆದುಕೊಂಡು ಹೋಗಿ ಬೇರೆ ನಾಮಧಾರಕರು ಸಾಧನವನ್ನು ಹೇಗೆ ಮಾಡುವರು; ಅವರು ದೃಷ್ಟಿಯನ್ನಿಟ್ಟುಕೊಂಡು ಧ್ಯಾನಕ್ಕೆ ಹೇಗೆ ಕುಳಿತುಕೊಳ್ಳುವರು, ಇತ್ಯಾದಿಯ ಬಗ್ಗೆ ಶಿವಕ್ಕನಿಗೆ ತಿಳಿವಳಿಕೆ ಮಾಡಿಕೊಟ್ಟರು. ಅದನ್ನು ಅರಿತ ಶಿವಕ್ಕನು ಶಿವಧ್ಯಾನ ಮಾಡಹತ್ತಿದಳು. ಅವಳ ಮನಸ್ಸು ನಾಮಸಾಧನದಲ್ಲಿ ವಿರಮಿಸಹತ್ತಿತು. ಭೌತಿಕ ಜೀವನದ ಸುಖ-ಸೌಕರ್ಯಗಳ ಬಗ್ಗೆ ಅವಳು ಉದಾಸೀನಳಾಗಿದ್ದಳು.

ಮನಸ್ಸಿಲ್ಲದ ಮದುವೆ : ಅಕ್ಕಮಹಾದೇವಿ, ಮೀರಾಬಾಯಿ ಇವರ ಜೀವನದಲ್ಲಿಯ ಕೆಲವು ಮಹತ್ವದ ಘಟನೆಗಳಿಗೂ ಶಿವಲಿಂಗವ್ವನವರ ಜೀವನದಲ್ಲಿಯ ಘಟನೆಗಳಿಗೂ ಸಾಮ್ಯವಿದ್ದುದು ಕಂಡು ಬರುತ್ತದೆ. ಅಕ್ಕನವರದಾಗಲಿ, ಮೀರಾಬಾಯಿಯವರದಾಗಲಿ ಮನಸ್ಸಿಲ್ಲದ ಮದುವೆಯೆಂಬ ಸಂಗತಿಯು ಸರ್ವರಿಗೂ ತಿಳಿದ ಸಂಗತಿಯಾಗಿದೆ. 'ಶರಣ ಸತಿ ಲಿಂಗಪತಿ' ಎಂದು ಅಕ್ಕನವರ ಭಾವನೆ ಇದ್ದರೆ, ಶ್ರೀಕೃಷ್ಣ ಪರಮಾತ್ಮನಿಗೆ ತಮ್ಮ ದೇಹವರ್ಪಿತವೆಂದು ಮೀರಾಬಾಯಿಯವರು ಭಾವಿಸಿದ್ದರು. ತಮ್ಮ ದೇಹವು ಪರಮಾತ್ಮನಿಗರ್ಪಿತವೆಂದೇ ಅವರಿಬ್ಬರ ದೃಢನಂಬಿಕೆಯಿದ್ದಿತು.

ಶಿವಲಿಂಗವ್ವನವರು ದೊಡ್ಡವರಾದಂತೆ ತಂದೆ ತಾಯಿಗಳು ಅವರ ಮದುವೆಯ ಬಗ್ಗೆ ವಿಚಾರ ಮಾಡಹತ್ತಿದರು. ಆದರೆ ಶಿವಲಿಂಗವ್ವನವರು ಅದಕ್ಕೆ ಒಪ್ಪದಾದರು. ಅಂದಿನ ಸಾಮಾಜಿಕ ರೂಢಿಯನ್ನು ಎದುರಿಸಿ ನಿಲ್ಲುವುದು ರಾಚಯ್ಯ ಮತ್ತು ಬಸವ್ವಾ

ಇವರಿಗೆ ಶಕ್ಯವಿರಲಿಲ್ಲ. ಶಿವಕ್ಕನ ಮದುವೆಯ ವಿಷಯವು ಶ್ರೀ ಉಮದೀಮಹಾರಾಜರ ಕಡೆಗೆ ಹೋಯಿತು. ಮಹಾರಾಜರು ಶಿವಲಿಂಗವ್ವನವರಿಗೆ ಮದುವೆಗೆ ಒಪ್ಪಲು ಹೇಳಿದ ಮೇಲೆ ಗುರು ಆಜ್ಞೆಯೆಂದು ತಮ್ಮ ವಿವಾಹಕ್ಕೆ ಅವರು ಒಪ್ಪಿದರು. ಜತ್ತಿ ಸಂಸ್ಥಾನದ ಉಮರಾಣಿ ಎಂಬ ಹಳ್ಳಿಯು ಜತ್ತಿಯಿಂದ ೧೦ ಮೈಲು ಅಂತರದ ಮೇಲಿದೆ. ಅಲ್ಲಿಯ ನಂದಿಕೋಲಮಠದ ಜಂಗಮ ಮನೆತನದವರಾದ ಪರಯ್ಯಾ ಇವರ ಚಿರಂಜೀವರಾದ ಕರಬಸಯ್ಯನವರಿಗೆ ಶಿವಲಿಂಗವ್ವನವರನ್ನು ಕೊಟ್ಟು ಮದುವೆ ಮಾಡಲಾಯಿತು. ಹೀಗೆ ಶಿವಲಿಂಗವ್ವನವರ ಮನಸ್ಸಿಲ್ಲದ ಮದುವೆಯಾಯಿತು.

ಮದುವೆಯಂತೂ ಆಯಿತು. ಆದರೆ ಶಿವಲಿಂಗವ್ವನವರ ಮನಸ್ಸು ಸಂಸಾರದಲ್ಲಿ ಇರಲಿಲ್ಲ. ವಯಸ್ಸಿಗೆ ಬಂದರೂ ಪತಿಗೃಹಕ್ಕೆ ಹೋಗಲು ಅವರ ಮನಸ್ಸು ಒಪ್ಪದಾಯಿತು. ಸಂಸಾರದ ಸುಳಿಯಲ್ಲಿ ಸಿಲುಕಿ ದುಃಖ ಭೋಗಿಸುವುದಕ್ಕಿಂತ ದೂರಿದ್ದು ಪರಮಾರ್ಥವನ್ನು ಸಾಧಿಸಬೇಕೆಂದು ಅವರು ಬಯಸಿದ್ದರು. ಆಗ ಮತ್ತೆ ಶ್ರೀ ಉಮದೀ ಮಹಾರಾಜರೇ ಅವರಿಗೆ ತಿಳಿಹೇಳಬೇಕಾಯಿತು. ಮಹಾರಾಜರು ಹೇಳಿದ ಮೇಲೆ, ಅವರ ಆಜ್ಞೆಯನ್ನು ಪಾಲಿಸುವುದೇ ತಮ್ಮ ಕರ್ತವ್ಯವೆಂದು ಬಗೆದು, ಪತಿಗೃಹಕ್ಕೆ ಹೋಗಲು ಅವರು ಒಪ್ಪಿದರು. ಶಿವಲಿಂಗವ್ವನವರ ಸ್ವಾರಸ್ಯವಿಲ್ಲದ ಸಂಸಾರವು ಆರಂಭವಾಯಿತು. ಸಂಸಾರದಲ್ಲಿ ಮಾಯಾಮೋಹಗಳುಂಟಾಗಿ ಅವರ ಮನವನ್ನು ಸೆಳೆಯುವ ರೀತಿಯಲ್ಲಿ ಅವರಿಗೆ ಪತಿಸುಖವಿರಲಿಲ್ಲವೆಂದು ತೋರುವುದು. ಇತ್ತ ಪರಮಾರ್ಥದಲ್ಲಿ ಪ್ರೇಮ, ಇನ್ನೊಂದೆಡೆ ಅತ್ತ ಸಂಸಾರಸುಖದ ಅಭಾವ ಹೀಗಾಗಿ ಶಿವಲಿಂಗವ್ವನವರು ತಮ್ಮ ಸಂಸಾರದಲ್ಲಿ ಉದಾಸೀನರಾಗಿಯೇ ಇದ್ದರು.

ಮಕ್ಕಳ ಮೋಹ : ಪ್ರಪಂಚದಲ್ಲಿಯ ಔದಾಸೀನ್ಯತೆ ಬಹುಕಾಲ ಉಳಿಯಲಿಲ್ಲ. ಅವರ ಮಾಯಾಮೋಹಗಳಿಗೆ ಕುಡಿಯೊಡೆಯಿತು. ಅವರಿಗೆ ಒಂದು ಗಂಡು ಮಗುವಾಯಿತು. ಆ ಮಗುವಿನ ದುಂಡಯ್ಯನ ಸುಖದಲ್ಲಿ ತಮ್ಮ ಸಂಸಾರಿಕ ಸುಖದ ಕನಸನ್ನು ಅವರು ಕಾಣಹತ್ತಿದರು. ಸ್ತ್ರೀಸಹಜವಾದ ಸ್ವಭಾವಕ್ಕನುಗುಣವಾಗಿ ಮಗುವಿನ ಮೇಲಿನ ಮೋಹ ಅವರ ಮನಸ್ಸನ್ನು ಆವರಿಸಿತು. ಮುಂದೆ ಕೆಲವು ಕಾಲದ ನಂತರ ಅವರಲ್ಲಿ ಒಂದು ಹೆಣ್ಣು ಕೂಸು ಹುಟ್ಟಿತು. ತಮ್ಮ ಮಕ್ಕಳಾದ ದುಂಡಯ್ಯ ಮತ್ತು ಭಾಗವ್ವಾ ಇವರಲ್ಲಿ ತಮ್ಮ ಉದಾಸೀನತೆಯ ಮನಸ್ಥಿತಿಯನ್ನು ಮರೆತು ಸಂಸಾರದ ಮಾಯಾಪಾಶದಲ್ಲಿ ಸಿಲುಕುವುದರಲ್ಲಿ ಅವರು ಇದ್ದರು; ಸಂಸಾರದಲ್ಲಿ ಸುಖದ ಕನಸನ್ನು ಕಾಣಬಯಸಿದರು. ಆದರೆ ಅವರು ಈ ಭೂಮಿಯ ಮೇಲೆ ಜನ್ಮತಾಳಿದುದು ಕಾಲಕರ್ಮಗಳ ಕಟ್ಟು ಪಾಡಿಗೆ ಸಿಲುಕಿದ ಮಣ್ಣಿನ ಮಗುಗಳಲ್ಲಿ ಸುಖವನ್ನರಸುವುದಕ್ಕಲ್ಲ, ಆದರೆ ಆಧ್ಯಾತ್ಮದ ಕೂಸನ್ನು ಕಂಡು, ಅದರ ಆನಂದದಲ್ಲಿ, ಒಪ್ಪುಳ್ಳ ಮಗನ ಜೋಗುಳ ಹಾಡುವುದಕ್ಕಾಗಿ.

'ಸಂಸಾರವಘಟಿತ ಮಾಯಾ' : ಮಕ್ಕಳ ಸುಖವು ಅವರಿಗೆ ಬಹುದಿವಸ ಲಭಿಸಲಿಲ್ಲ. ಮೂರು-ನಾಲ್ಕು ವರುಷದವನಾಗುತ್ತಲೇ ದುಂಡಯ್ಯನು ಶಿವಪುರವನ್ನು ಸೇರಿದನು. ತಮ್ಮ ಕಣ್ಮಣಿಯಾದ ಗಂಡು ಮಗುವು ಶಿವಸದನವನ್ನೈದಿದ್ದರಿಂದ ಶಿವಲಿಂಗವ್ವನವರಿಗೆ ಹಿಡಿಸಲಾರದ ದುಃಖವಾಯಿತು. ಇನ್ನೂ ಹೆಚ್ಚಿನ ದುಃಖದ ಪ್ರಸಂಗವು ತಮ್ಮೆದುರು ಕಾದು ನಿಂತಿತ್ತೆಂಬುದು ಅವರಿಗೆ ತಿಳಿದಿರಲಿಲ್ಲ. ಹಸಿಹುಣ್ಣಿನ ಮೇಲೆ ಉಪ್ಪೆರಚಿದಂತೆ, ಮಗನ ಅಗಲುವಿಕೆಯ ದುಃಖವನ್ನು ಮರೆಯುವಷ್ಟರಲ್ಲಿ ಇದ್ದೊಬ್ಬ ಮಗಳು ಮೃತ್ಯು ಮುಖಕ್ಕೆ ತುತ್ತಾದಳು. ಶಿವಲಿಂಗವ್ವನವರು ದುಃಖದ ಮಡುವಿನಲ್ಲಿ ಮುಳುಗಿದರು. ಆಗ ಶ್ರೀ ಉಮದೀ ಮಹಾರಾಜರು ಜತ್ತಿಗೆ ಬಂದಾಗ್ಗೆ ಅವರಿಗೆ ಮೋಲಿಲ್ಲದ ಮಾತಹೇಳಿ 'ಜತ್ತನಾಗಿ ಜ್ವಾಕಿ' ಎಂದು ಕೆಲವು ಮಾತುಗಳನ್ನು ಹೇಳಿ ಸಾಂತ್ವನಗೊಳಿಸಿದರು. 'ಸಂಸಾರ ವೆಂಬುದು ಅಘಟಿತ ಮಾಯಾ' ಎಂಬ ಅರಿವನ್ನು ಮಹಾರಾಜರು ಅವರಿಗೆ ಮಾಡಿಕೊಟ್ಟರು. 'ಸಂಸಾರವಘಟಿತ ಮಾಯಾ ಹಿಡಿಯಬೇಕು ಎನ್ನ ಕೈಯಾ' ಎಂದು ಶಿವಲಿಂಗವ್ವನವರು ತಮ್ಮ ಗುರುಗಳಲ್ಲಿ ಮೊರೆಯಿಟ್ಟರು. ತಮಗಾದ ದುಃಖದ ಮತ್ತು ತಮ್ಮನ್ನು ಮಹಾರಾಜರು ಸಾಂತ್ವನಗೊಳಿಸಿದ ಬಗ್ಗೆ ಅವರು ಗುರುದೇವ ರಾನಡೆಯವರಿಗೆ ಕ್ರಿ.ಶ. ೧೯೧೬ರಲ್ಲಿ ಬರೆದ ತಮ್ಮ ಒಂದು ಪತ್ರದಲ್ಲಿ ಸೂಚ್ಯವಾಗಿ ಬರೆದುದು ಕಂಡು ಬರುತ್ತದೆ. 'ಸಮರ್ಥರಿರುವಾಗ್ಗೆ ಬಹಳ ದುಃಖವಾಗಿತ್ತು. ಅದರೆ ಸಮರ್ಥರು ಅತ್ತ ಕಡೆಗೆ ನೋಡಗೊಡಲಿಲ್ಲ'.

ಸಂಸಾರದ ಮಾಯಾಮೋಹಗಳಲ್ಲಿ ಸಿಲುಕಿದ ಶಿವಲಿಂಗವ್ವನವರಿಂದ ಯಾವ ಮಟ್ಟದ ಸಾಧನಬೇಕಿತ್ತು, ಆ ಮಟ್ಟದ ಸಾಧನವಾಗುತ್ತಿರಲಿಲ್ಲ. ಇದರ ಅರಿವು ಅವರಿಗೆ ಇಲ್ಲದೆ ಇರಲಿಲ್ಲ. ಕೆಲವುಕಾಲ ಉಮರಾಣಿಗೆ ಅತ್ತೆ ಮನೆಯಲ್ಲಿ ಇರಬೇಕಾಗಿ ಬರುತ್ತಿತ್ತು. ಇಂಥ ಸ್ಥಿತಿಯಲ್ಲಿ ಅವರ ಸಾಧನವು ನಿಧಾನವಾಗಿ ಸಾಗಿರಲಿಕ್ಕೆ ಸಾಕು. ಆದರೂ ಗುರುವಚನದಲ್ಲಿಯ ಅವರ ನಂಬಿಕೆ ಅಚಲವಾಗಿದ್ದಿತು. ಗುರುಕೊಟ್ಟ ಮೂಲಮಂತ್ರದ ಮೇಲಿನ ಅವರ ನಿಷ್ಠೆ ತುಸುಮಟ್ಟಿಗೂ ಕಡಿಮೆಯಾಗಿರಲಿಲ್ಲ. 'ಗುರುವೆ ಹರ, ಹರನೇ ಗುರು' ಎಂಬ ಭಾವ ಅವರ ಅಂತರಂಗದಲ್ಲಿ ಹುಟ್ಟುಗುಣವಾಗಿ ಬೆಳೆದಿದ್ದಿತು. ಶ್ರೀ ಉಮದೀಮಹಾರಾಜರ ಬಗ್ಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಮಾಡುವಾಗ ಮೇಲೆ ಹೇಳಿದ ಅವರ ಭಾವವು ವ್ಯಕ್ತವಾಗುತ್ತದೆ. ಶಿವಲಿಂಗವ್ವನವರಂಥ ಸಿದ್ಧವ್ಯಕ್ತಿಯು ಮಕ್ಕಳ ಮಾಯಾಮೋಹಗಳಲ್ಲಿ ಸಿಲುಕಿರುವುದು ಆತ್ಮನಿಗೆ ಒಪ್ಪಿಗೆಯಾಗಲಿಲ್ಲವೆಂದು ತೋರುವುದು. ಭಕ್ತನ ಅಂತಃಕರಣದಲ್ಲಿ ತನ್ನನ್ನು ಬಿಟ್ಟು ಅನ್ಯರಿಗೆ ಸ್ಥಾನವಿರಕೂಡದೆಂದು ಹೇಳುವಷ್ಟು ಆ ಪರಮಾತ್ಮನು ಮತ್ಸರಿ ಇರುವನೆಂದು ಗುರುದೇವ ರಾನಡೆಯವರು ತಮ್ಮ 'ಮಹಾರಾಷ್ಟ್ರ ಮಿಸ್ಟಿಸಿಜಂ' ಎಂಬ ಗ್ರಂಥದಲ್ಲಿ ಹೇಳಿದುದನ್ನು ವಾಚಕರ ಗಮನಕ್ಕೆ ತರಬಯಸುತ್ತೇವೆ. "They also show that God is a very jealous God, who would not allow any love to be given to any other object beside Himself." (M.M.P.210)

ಶಿವಲಿಂಗವ್ವನವರ ಮನಸ್ಥಿತಿಯನ್ನು ಕಂಡು, ಭವಕ್ಕೆ ಬಂದದ್ದು ದುಃಖ ಭೋಗಿಸುವುದಕ್ಕಾಗಿ, ಅದನ್ನು ಹೋಗಲಾಡಿಸಬೇಕಾದರೆ ನಾಮಸ್ಮರಣೆಯೊಂದೇ ಸಾಧನವೆಂದೂ, ಸಂಸಾರದಲ್ಲಿ ಸುಖವನರಸುವುದೆಂದರೆ ಗಾಳಿಮೂಟೆಯನ್ನು ಕಟ್ಟಿದಂತೆಯೇ ಸರಿ ಎಂದೂ ಹೇಳಿ ಎಲ್ಲ ದುಃಖವನ್ನು ಮರೆತು, ನಾಮದ ಮೇಲೆ ಪ್ರೇಮವನ್ನಿಟ್ಟು ಧ್ಯಾನದಲ್ಲಿ ನಿರತರಾಗಗಲು ಶ್ರೀ ಉಮದೀ ಮಹಾರಾಜರು ಶಿವಲಿಂಗವ್ವನವರಿಗೆ ಉಪದೇಶ ಮಾಡಿದರು. 'ಹಸ್ತವ್ವಾದರ ಹಸ್ತ ಇಟ್ವಾ' ಹಸಿದು ಹೋದರೆ ತಮ್ಮ ಕೃಪಾಪ್ರಸಾದವನ್ನು ಉಣ್ಣಿಸಿದರೆಂದು ಶಿವಲಿಂಗವ್ವನವರು ತಮ್ಮ ಮನದ ಹಸಿವೆಯನ್ನು ಮತ್ತು ಗುರುಗಳ ಕೃಪೆಯನ್ನು ಮೇಲಿನ ಒಂದೇ ವಾಕ್ಯದಲ್ಲಿ ಹೇಳಿದುದು ಕಂಡುಬರುತ್ತದೆ. 'ಎಂಥಾ ಲೀಲಾ ಮಾಡಿದರಯ್ಯಾ' ಎಂಬ ಶಿವಲಿಂಗವ್ವನವರ ಪದ್ಯವು ಅವರ ಜೀವನದಲ್ಲಿಯ ಕೆಲವು ಮಹತ್ವದ ಘಟನೆಗಳನ್ನು ವಾಚಕರ ನೆನಪಿಗೆ ತಂದುಕೊಡುತ್ತದೆ.

ಸಂಸಾರ ಹೇಯವೆಂಬ ತಿಳಿವಳಿಕೆ ಶಿವಲಿಂಗವ್ವನವರಲ್ಲಿ ಮೂಡಿತು. ತಮಗೆ ಬಂದೊದಗಿದ ದುಃಖದ ಪ್ರಸಂಗಗಳಿಂದ ಸಂಸಾರವು ಅಸಾರವೆಂಬ ಅರಿವು ಅವರಲ್ಲಿ ಉಂಟಾಯಿತು. ಒಂದು ಕಡೆಗೆ ವೈರಾಗ್ಯ ಇನ್ನೊಂದು ಕಡೆಗೆ ನಾಮದ ಮೇಲೆ ಅನುರಾಗ. ಇವೆಲ್ಲವುಗಳ ಮೇಲೆ ಗುರುವಿನ ಉಪದೇಶ, ಕೃಪಾಛತ್ರ, ಶಿವಲಿಂಗವ್ವನವರ ಸುಪ್ತವಾದ ಇಚ್ಛಾಶಕ್ತಿಯು ಸಿಡಿದೆದ್ದಿತು. ಅವರು ತಮ್ಮ ಕರಣಗಳನ್ನು ಖಂಡಿಸಿ ದೇಹವನ್ನು ದಂಡಿಸಿ ಧ್ಯಾನದಲ್ಲಿ ಮೈಮರೆಯಹತ್ತಿದರು.

'ತನ್ನ ಅಂತರ್ಮನದಲ್ಲಿ ಅಡಗಿದ ಭಾವವು ತನ್ನನ್ನು ತಾನೇ ತಿಳಿಯಗೊಡುವುದಿಲ್ಲ' ಎಂದು ಶ್ರೀಉಮದೀ ಮಹಾರಾಜರು ಹೇಳುತ್ತಿದ್ದರು. ತಮ್ಮ ಕಠೋರ ಸಾಧನದ ಹಿಂದೆ ತಾವು ಒಳ್ಳೇ ಸಾಧಕರೆಂಬ ಸುಪ್ತವಾದ ಅಹಂಕಾರವು ಅಡಗಿತ್ತೆಂಬುದರ ಅರಿವು ಶಿವಲಿಂಗವ್ವನವರಿಗೆ ಇರಲಿಲ್ಲ. ಅದನ್ನರಿಯದ ಅವರು 'ಇಷ್ಟು ದಿವಸ ಬಾಳೇಗಿಡಕ್ಕೆ ಹೊಯ್ನೀರು ಹಣಿಸುತ್ತಿದ್ದೆ. ಈಗ ಕಾವಲಿಯಿಂದ ನೀರು ಹರಿಯಿಸುವೆ' ಎಂದು ಮಹಾರಾಜರಿಗೆ ಒಂದು ಕಾಗದ ಬರೆದು ತಿಳಿಸಿದರು. ಅದನ್ನು ಓದಿದ ಶ್ರೀ ಉಮದೀ ಮಹಾರಾಜರಿಗೆ ಒಂದು ರೀತಿಯ ಕೋಪ ಬಂದಿತ್ತು. ಈ ಬಗೆಯ ಅಹಂಕಾರವು ತರವಲ್ಲವೆಂದು ಅವರಿಗೆ ಕಂಡು ಬಂದಿತು. ಆಗ ಅವರು ಶಿವಲಿಂಗವ್ವನವರಿಗೆ ಉತ್ತರ ರೂಪವಾಗಿ ಒಂದು ಕಾಗದ ಬರೆದರು. ಆದರೆ ಅದನ್ನು ಶಿವಲಿಂಗವ್ವನವರಿಗೆ ಅವರು ಕಳಿಸಲಿಲ್ಲ. ಅವರು ಅವರಿಗೆ ಬಾಯಿಮಾತಿನಿಂದ ಈ ರೀತಿ ಸಂದೇಶ ಕಳಿಸಿದರು. 'ಬಾಳೇಗಿಡದ ಬದಿಯಲ್ಲಿ ಮುಳ್ಳುಕಂಟಿಗಳಿವೆ, ಜಪ್ಪಿಸಿ ಇರಬೇಕು' ಇದರ ಅರ್ಥವನ್ನು ಅರಿಯಲು ಶಿವಲಿಂಗವ್ವನವರಿಗೆ ಅವಕಾಶ ಹಿಡಿಯಲಿಲ್ಲ. ಮಹಾರಾಜರ ಮಾತಿನಂತೆ

ಶಿವಲಿಂಗವ್ವನವರ ಜೀವನವು ಸುಖಮಯವಾಗಿರಲಿಲ್ಲ. ಆರ್ಥಿಕ ತೊಂದರೆಗಳನ್ನು ಎದುರಿಸಬೇಕಾದುದಲ್ಲದೆ ಪತಿವಿರಹದ ದುಃಖವನ್ನು ಅನುಭವಿಸಬೇಕಾಯಿತೆಂದು ಗುರುದೇವ ರಾನಡೆಯವರು ಹೇಳುತ್ತಿದ್ದರು.

ಸ್ವದೋಷ ದರ್ಶನ : ಮಹಾರಾಜರು ಕೊಟ್ಟ ಎಚ್ಚರಿಕೆಯಿಂದ ಶಿವಲಿಂಗವ್ವನವರು ಅಂತರ್ಮುಖಿಗಳಾದರು. ಅವರ ಸಾಧನವು ಹೆಚ್ಚು ಭಾವಪೂರ್ಣವಾಗಿ ಸಾಗಹತ್ತಿತ್ತಲ್ಲದೆ, ಅದರ ಕಾಲಾವಕಾಶವು ಹೆಚ್ಚಾಯಿತು. ತಮ್ಮ ಸಾಧನಕ್ಕೆ ಅಡ್ಡಿಯನ್ನು ತಂದೊಡ್ಡುವ ಕಾಮಾದಿ ಗುಣಗಳ ಅರಿವಾಯಿತು ಅವರಿಗೆ. ಮಾಯಾಮೋಹಗಳ ತಿಳವಳಿಕೆಯಾಗಿ ಅದರಿಂದ ಪಾರಾಗಲು ಸ್ವಪ್ರಯತ್ನ ಸಾಲದೆಂಬುದನ್ನು ಅರಿತ ಶಿವಲಿಂಗವ್ವನವರು 'ಓಡಿಯಬೇಕು ಎನ್ನ ಕೈಯಾ' ಎಂದು ತಮ್ಮ ಗುರುಗಳಿಗೆ ಶರಣು ಹೋದರು. ಕಾಮಾದಿ ವಿಕಾರಗಳು ತಮ್ಮ ಮನದಲ್ಲಿದ್ದುದನ್ನು ಅವರು ಕಂಡುಕೊಂಡರು. ತಮ್ಮ ಮನದಲ್ಲಿ ಅನೇಕ ಸಂಶಯಗಳಿರುವುದದರ ಅರಿವಾಯಿತು ಅವರಿಗೆ. ತಮ್ಮ ಸಾಧನವು ಸುಗಮವಾಗಿ ನಿರ್ವಿಕಲ್ಪವಾಗಿ ಸಾಗಬೇಕಾದರೆ ಅದಕ್ಕೆ ನೀತಿಯ ತಳಪಾಯ ಬೇಕೆಂಬುದು ಶಿವಲಿಂಗವ್ವನವರಿಗೆ ಮನದಟ್ಟಾಯಿತು. 'ಮನಸಿನ ಮುರಗಿಯ ತಿದ್ದಿಸೋ ದೇವಾ' ಎಂದು ಶ್ರೀ ನಿಂಬರ್ಗಿ ಮಹಾರಾಜರು ಕೂಡ ತಮ್ಮ ಮನದಲ್ಲಿಯ ದೋಷಗಳನ್ನು ಸ್ವಪ್ರಯತ್ನದಿಂದ ಅಳಿಸಲಿಕ್ಕಾಗದೆ ಪರಮಾತ್ಮನನ್ನು ಪ್ರಾರ್ಥಿಸಿಕೊಳ್ಳಬೇಕಾಯಿತು. ಇದನ್ನರಿತ ಶಿವಲಿಂಗವ್ವನವರಲ್ಲಿ ವಿವೇಕವು ಜಾಗ್ರತವಾಯಿತು. ತಮ್ಮ ನಾಮ ಸಾಧನಕ್ಕೆ ಅಡ್ಡಿಯನ್ನೊಡ್ಡುವ ತಮ್ಮ ದೋಷಗಳ ಬಗ್ಗೆ ತಮ್ಮನ್ನು ತಾವೇ ಹಳಿದುಕೊಂಡರು. ಮನದಲ್ಲಿಯೇ ಮರುಗಿದರು. ತಮ್ಮಲ್ಲಿ ಅನನ್ಯ ಭಕ್ತಿ ಒಂದಿನಿತು ಇಲ್ಲ ಎಂದು ಹೇಳಿಕೊಂಡರು. 'ಭಕ್ತಿ, ನೀತಿ ಎರಡೂ ಇಲ್ಲ' ಎಂದು ಹೇಳಹತ್ತಿದರು. 'ಎನ್ನಲ್ಲಿ ನಿನ್ನ ಭಕ್ತಿ ಸಾಸಿವೆಯ ಷಡ್ಭಾಗದಿನಿತಿಲ್ಲ' ಎಂದು ಬಸವಣ್ಣನವರು ಹೇಳಿರುವರು. ಪ್ರತಿಯೊಬ್ಬ ಭಕ್ತನ ಜೀವನದಲ್ಲಿ ಇಂಥ ಮನಸ್ಥಿತಿಯು ಒಮ್ಮೆ ಬಂದೇಬರುವುದೆಂದು ತೋರುವುದು. ಸ್ವದೋಷದರ್ಶನವು ಆತ್ಮಸಿದ್ಧಿಯ ಸಾಧನದಲ್ಲಿಯ ಒಂದು ಮೆಟ್ಟಲೆಂದೇ ಹೇಳಬಹುದು.

ತಮ್ಮ ಮನಸ್ಸು ಅಂಕಿತದಲ್ಲಿ ಬಾರದಿದ್ದುದನ್ನು ಕಂಡು ಬಸವಣ್ಣನವರು, ಅದನ್ನು ಒಂದು ನಾಯಿಗೆ ಹೋಲಿಸಿ, ಮನಸನ್ನು ಕಟ್ಟಿಹಾಕುವದು ಮಾನವ ಪ್ರಯತ್ನವನ್ನು ಮೀರಿದುದೆಂದು ಸೂಚಿಸಿರುವರು. 'ಅಂದಣವನೇರಿದ ಸೊಣಗ' ಎಂದು ತಮ್ಮ ಮನವನ್ನು ಕುರಿತು ಅವರು ಹೇಳಿಕೊಂಡಿರುವರು. ಪುರಂದರದಾಸರು ತಮ್ಮ ಮನಸನ್ನು 'ಡೊಂಕುಬಾಲದ' ನಾಯಕರಿಗೆ ಹೋಲಿಸಿರುವರು. ಶಿವಲಿಂಗವ್ವನವರು ಕೂಡ 'ಶುದ್ಧ ಶ್ವಾನನಂತೆ ತಿಂದು ತಿರುಗುವೆನಲ್ಲಾ' ಎಂದು ತಮ್ಮನ್ನು ತಾವೇ ಹಳಿದುಕೊಂಡು ಪಶ್ಚಾತ್ತಾಪ ಪಟ್ಟುದನ್ನು ಕಾಣುತ್ತೇವೆ.

ತಮ್ಮಲ್ಲಿಯ ಭಕ್ತಿಯ ಅಭಾವವನ್ನರಿತ ಶಿವಲಿಂಗವ್ವನವರು ಅದರ ಕಾರಣವನ್ನು ಶೋಧಿಸಹತ್ತಿದರು. ಶ್ವಾನನಂತೆ ತಮ್ಮ ಮನಸ್ಸು ಅತ್ತಿತ್ತ ಹರಿದಾಡುತ್ತಿರುವುದನ್ನು ಅವರು ಅರಿತರು. ಕಾಮಾದಿಗುಣಗಳು ಇನ್ನೂ ಅಳಿದಿಲ್ಲವೆಂಬುದನ್ನು ತಿಳಿದರು. 'ಆಶೆ ಅಂಬೋದು ಅಳಿದೇ ಇಲ್ಲ! ನಾಮ ಘೋಷ ಎನ್ನಲಿ ಒಂದು ನಿಜವಾಗಿಲ್ಲ' ಎಂದು ತಾವು ಆಶಾಪಾಶದಲ್ಲಿ ಸಿಲುಕಿದ ಬಗ್ಗೆ ಮತ್ತು ಸಾಧನವು ಏಕೋಭಾವದಿಂದ ಸಾಗದೇ ಇದ್ದ ಬಗ್ಗೆ ಅವರು ಹೇಳಿಕೊಂಡಿರುವರು. 'ಚಿಂತೆ ಅಂಬೋದು ಅಳಿದೇ ಇಲ್ಲ', 'ಭಕ್ತಿ ಭಾವ ಎರಡೂ ಇಲ್ಲ', 'ಒಣ ಸಂತಾಪಿಲಿ ಬಿದ್ದು ಬಳಲುವೆನಲ್ಲಾ' ಎಂದು ತಮ್ಮಲ್ಲಿ ಅಡಗಿದ ಚಿಂತೆ, ಕ್ರೋಧಾದಿ ಗುಣಗಳ ಬಗ್ಗೆ ಹೇಳಿ, ಅದರ ಮೂಲಕ ತಮ್ಮ ಭಕ್ತಿ ದೃಢವಾಗಲೊಲ್ಲದೆಂಬ ವಿಚಾರಕ್ಕೆ ಅವರು ಬಂದರು. ಮೇಲಿನ ನುಡಿಗಳಲ್ಲಿ ತಮ್ಮ ಸಾಧನದ ಹೆದ್ದಾರಿಯಲ್ಲಿ ಅಡ್ಡ ಬಿದ್ದು ತಮಗೆ ಅಡ್ಡಿ ಮಾಡುತ್ತಿದ್ದ ಮನದಲ್ಲಿಯ ವಿವಿಧ ಗುಣದೋಷಗಳನ್ನು ಅವರು ಹೇಳಿಕೊಂಡಿರುವರು. ಈ ರೀತಿ ಆತ್ಮಶೋಧನೆಯನ್ನು ಮಾಡುತ್ತ ವಿವೇಕಯುಕ್ತ ಸಾಧನವನ್ನು ಶಿವಲಿಂಗವ್ವನವರು ಮಾಡಹತ್ತಿದರು.

**ಗುರುಧ್ಯಾಸದೊಳಗಿರು ಕೂಸು :** ತಮ್ಮ ಆತ್ಮ ಧ್ಯಾನದ ಬಾಳೇ ಗಿಡದ ಸುತ್ತುಮುತ್ತು ನೈತಿಕ ಆಚಾರವಿಚಾರಗಳ ಬೇಲಿಯನ್ನು ಹಚ್ಚಿ, 'ಸರ್ವಸಂಗ ತ್ಯಾಗ ಮಾಡಿ' ಅವರು 'ಗುರುಪಾದಕೆ ಈ ಕಾಯಾ' ಎಂದು ತನುವನ್ನು ಗುರುಸ್ಮರಣೆಗಾಗಿ ಮೀಸಲಾಗಿ ಇಟ್ಟರು. ನಾಮಸ್ಮರಣದಲ್ಲಿ ನಿರತರಾದರು. ಅಂತರ್ಮುಖಿಗಳಾಗಿ, ಆತ್ಮಪರೀಕ್ಷೆಯನ್ನು ಮಾಡುತ್ತ, ನಡೆನುಡಿಗಳನ್ನು ಒಂದುಗೂಡಿಸಿ ದಾಸೋಹ ಭಾವದಿಂದ, ಗುರುವಿಗೆ ಶರಣು ಹೋದರು. ಅವರ ಆಜ್ಞೆಯಂತೆ 'ಸ್ಮರಣೆಯೊಂದೇ ಸಾಲದೆ' ಎಂದು, ನಾಮಸ್ಮರಣದಲ್ಲಿ ತಮ್ಮ ಕಾಲ ಕಳೆಯಹತ್ತಿದರು. 'ದೋಷ ಗುಣಗಳನ್ನು ನೋಡದೆ ಪಾವನ ಮಾಡು' ಎಂದು ತಮ್ಮ ಗುರುಗಳನ್ನು ಪ್ರಾರ್ಥಿಸಿದರು. ದೀನರಾಗಿ, ಲೀನರಾಗಿ ಗುರುವಿನ ಕರುಣೆಯನ್ನು ಕೋರಿದರು. 'ಪಾಪಗೇಡಿ ದೋಷಗೇಡಿ' ಎಂದು ತಮ್ಮ ದೋಷಗಳ ಬಗ್ಗೆ ಪಶ್ಚಾತ್ತಾಪ ಪಟ್ಟರು. 'ಅಯ್ಯಾ ಗುರುವೆ ನಿಮ್ಮ ಪಾದಕ್ಕೆ ಸಾಷ್ಟಾಂಗ ಭಾವದಲ್ಲಿ, ಸತ್ಯಸ್ವರೂಪದಲ್ಲಿ, ನಿತ್ಯ ಕಾಲದಲ್ಲಿ ತಪ್ಪದೆ ನಿಮ್ಮ ಪಾದಕ್ಕೆ ಶರಣವಯ್ಯಾ' ಎಂದು ಅವರು ಗುರುವಿಗೆ ಶರಣು ಹೋದರು. 'ಗುರು ತಾರಿ, ಗುರು ಶಿರಿ ಗುರು ಎನಗೆ ಐಸಿರಿ' ಎಂದು ಸದ್ಗುರುವೇ ತಮ್ಮ ಸರ್ವಸ್ವವೆಂದು ಅವರು ಬಗೆದರು. ಗುರುವೇ ತಮ್ಮ ಜೀವನದ ಆಧಾರವೆಂದು ಅವರು ಮನದಲ್ಲಿ ನಿಶ್ಚಯಿಸಿದರು. ಸಂಸಾರದ ತಾಪವನ್ನು ತಡೆಯಲು ಗುರುಕರುಣೆಯ ಛತ್ತರಗಿ ನೆರಳು ಬೇಕು. ಪ್ರಪಂಚದಲ್ಲಿ ಬರುವ ಆಘಾತಗಳಿಂದ ರಕ್ಷಿಸಿಕೊಳ್ಳಲು ಗುರುವಿನ ಆಶ್ರಯ ಬೇಕು. ಈ ಎರಡನ್ನು ಕಂಡುಕೊಂಡ ಅವರು 'ನೀನು ನನಗೆ ಛತ್ತರಗಿ ನೆರಳವಯ್ಯಾ, ನೀನು ಎನಗೆ ಆನೆಯ ಮೇಲಿನ ಢಾಲವಯ್ಯಾ' ಎಂದು ಗುರುವಿನ ಬಗ್ಗೆ ಹೇಳಿಕೊಂಡರು. 'ಕುಂಜರವು

ಕಾನನವ ನೆನೆವಂತೆ' ಶಿವಲಿಂಗವ್ವನವರು ಗುರುಕೊಟ್ಟ ಮೂಲಮಂತ್ರದ ಧ್ಯಾಸದಲ್ಲಿ ಮುಳುಗಿದರು. 'ನಿನ್ನ ಧ್ಯಾಸದೊಳಗಿರು ಕೂಸನಾ' ಎಂದು ಅವರು ಹೇಳಿಕೊಂಡರು. ಗುರುವಿನ ಆಜ್ಞಾಧಾರಕರಾಗಿ, ಅವರ ವಚನದ ಪಾಲಕರಾಗಿ, ಅವರ ದಾಸರಾಗಿ ಕೂಸಿಗೆ ತಾಯಿಯ ಧ್ಯಾಸ ಹತ್ತುವಂತೆ ಮೂಲಮಂತ್ರದ ಅಂದರೆ ಗುರುವಿನ, ಗುರುಕೊಟ್ಟ ನಾಮದ ಧ್ಯಾಸ ಹತ್ತಿತು ಅವರಿಗೆ.

'ನಿನ್ನ ಧ್ಯಾಸದೊಳಗಿರು ಕೂಸನಾ' ಎಂಬ ಅವರ ನುಡಿಯು ಒಳ್ಳೇ ಅರ್ಥ ಪೂರ್ಣವಾಗಿದೆ. ಅಕ್ಕಮಹಾದೇವಿಯಾಗಲಿ, ಮೀರಾಬಾಯಿಯಾಗಲಿ ಸತಿ-ಪತಿ ಭಾವದಿಂದ ಭಕ್ತಿಯನ್ನು ಮಾಡಿದರು. 'ಶರಣ ಸತಿ ಲಿಂಗಪತಿ' ಎಂದು ಅಕ್ಕಮಹಾದೇವಿ ಯವರು ಹೇಳಿದರೆ, ನಂದಗೋಪನನ್ನೇ ತಮ್ಮ ಪತಿಯನ್ನಾಗಿ ವರಿಸಿದ ಬಗ್ಗೆ ಮೀರಾಬಾಯಿಯು ಹೇಳುವರು. ಶಿವಲಿಂಗವ್ವನವರ ಭಕ್ತಿಯ ಸ್ವರೂಪವು ಯಶೋದಾ. ದೇವಕಿಯರ ಭಕ್ತಿಯಂತೆ ವಾತ್ಸಲ್ಯ ಭಕ್ತಿಯಿದ್ದಿತು. ತಾಯಿ ಮಗುವಿನ ಪ್ರೇಮವಿದ್ದಿತು ಅಲ್ಲಿ. ಧ್ರುವ, ಪ್ರಲ್ಹಾದರಿಗೆ ಹತ್ತಿದ ಪರಮಾತ್ಮನ ಧ್ಯಾಸವು ಶಿವಲಿಂಗವ್ವನವರಿಗೆ ಹತ್ತಿತು. 'ಧ್ಯಾನ' ಎಂಬ ಪದವನ್ನು ಸಾಮಾನ್ಯವಾಗಿ ಎಲ್ಲರೂ ಬಳಸುವುದುಂಟು. ಆದರೆ ಶಿವಲಿಂಗವ್ವನವರು 'ಧ್ಯಾನ' ಎಂಬ ಪದದ ಬದಲಾಗಿ 'ಧ್ಯಾಸ' ಎಂಬ ಪದವನ್ನು ಉಪಯೋಗಿಸುವರು. 'ಧ್ಯಾನ'ಕ್ಕಿಂತಲೂ 'ಧ್ಯಾಸ'ವು ಶ್ರೇಷ್ಠವಾದದ್ದು ಮತ್ತು ಅರ್ಥಗರ್ಭಿತ ವಾದದ್ದು ಇರುತ್ತದೆ.

ಗುರುನಾಮದ ಧ್ಯಾಸ ಹತ್ತಿದ ಶಿವಲಿಂಗವ್ವನವರ ದೇಹದ ಗುಣಗಳು ಒಂದೊಂದಾಗಿ ಅಳಿದವು. ಅವರ ಭವದುಃಖವು ಕ್ರಮೇಣ ಕಡಿಮೆಯಾಗಹತ್ತಿತು. ಅವರ 'ಕಾಮದ ಗುಣಗಳು' ಅಳಿದವು, ಅವರ ವಾಸನಾ ವೃತ್ತಿಗಳು ಕಡಿಮೆಯಾಗ ಹತ್ತಿದವು. ಅವರ 'ಮನಸಿನ ಸಂಶಯವು ಕಡಿಯಿತು'. ಅವರು ಗುರುನಾಮದ ಸಂಗತಿಯನ್ನು ಹಿಡಿದರು. ನಾಮಸಾಧನದಿಂದ ಬಂದ ಆತ್ಮಾನುಭವಗಳ ಆನಂದದಲ್ಲಿ ಅವರು ಭವದುಃಖವನ್ನು ಮರೆಯಹತ್ತಿದರು. ಪರಮಾತ್ಮನು ಬಾಲರೂಪದಿಂದ ಶಿವಲಿಂಗವ್ವನವರಿಗೆ ದರ್ಶನವಿತ್ತುದರಿಂದ ಅದರ ಆನಂದದಲ್ಲಿ ಅವರು ಪುರವಿರಹದ ದುಃಖವನ್ನು ಮರೆತರು. ಆಗ ಅವರು 'ನಿರ್ದಯಾ ಯಾಕೆ ಇನ್ನ' ಎಂದು ತಮ್ಮ ಗುರುಗಳನ್ನು ಕೊಂಡಾಡಿದರು. 'ಭಕ್ತರ ಮನೋರಥ ಪೂರೈಸಿದಿ ಗುರುನಾಥಾ। ಕೊಂಡು ಕಂದನ ಕೊಟ್ಟಿ' ಎಂದು ಆನಂದದಿಂದ ಗುರುವಿನ ಉಪಕಾರವನ್ನು ಸ್ಮರಿಸಿದರು. ಅಧ್ಯಾತ್ಮ ಸುಖವು ಹೆಚ್ಚಿದಂತೆ ಅವರ ಸಂಸಾರ ದುಃಖವು ಅಳಿಯಹತ್ತಿತು. ಅದರಿಂದಾಗಿ ಗುರುಭಕ್ತಿಯು ಚಿಗುರೊಡೆಯಿತು. 'ಗುರುಚ್ಯಾ ಉಪಕಾರಾ ನಾಹೀ ಪಾರಾವಾರಾ' ಎಂದು ಮರಾಠಿ ಸಂತರಾದ ಶಿವದಿನಿ ಕೇಸರಿಯವರು ತಮ್ಮ ಗುರುಗಳ ಉಪಕಾರವನ್ನು ಕುರಿತು ಹೇಳಿದಂತೆ ಶಿವಲಿಂಗವ್ವನವರ ಅಂತಃಕರಣವು ಗುರುಗಳ ಬಗ್ಗೆ ಕೃತಜ್ಞತಾ

ಭಾವದಿಂದ ತುಂಬಿ ತುಳುಕಹತ್ತಿತು. ಅವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಅವರಿಗೆ ಸಾಲದಂತಾಯಿತು. ಪ್ರಾರಂಭದ ಗುರುಭಕ್ತಿಯು ಸಾಕ್ಷಾತ್ಕಾರ ಪೂರ್ವದ ಗುರುಭಕ್ತಿಯು. ಆದರೆ ಈಗ ಆ ಗುರುಭಕ್ತಿಯು ವಸ್ತುನಿಷ್ಠವಾಯಿತು. ಅದಕ್ಕೆ ಅನುಭವದ ಭದ್ರವಾದ ಆಧಾರ ದೊರೆಯಿತು.

ನಿರಂತರ ಧ್ಯಾನ : ಪತಂಜಲಿಯು ತನ್ನ ಯೋಗಸೂತ್ರದಲ್ಲಿ ಹೇಳಿದಂತೆ 'ನಿರಂತರ ತೈಲಧಾರಾವತ್ ಸತ್ಕಾರ ಸೇವಿತಾ ದೃಢಭೂಮಿಃ'. ಶಿವಲಿಂಗವ್ವನವರ ಸಾಧನವು ನಿರಂತರವಾಗಿ, ಒಂದು ಕ್ಷಣವು ಕೂಡ ಬಿಡದೆ, ಪ್ರೇಮಾದರಗಳಿಂದಕೂಡಿದ ಮನಸಿನಿಂದ ಸಾಗಿತು. 'ನಿನ್ನ ಸ್ಮರಣೆ ಮಾಡೇನು ಮರಿಯದೆ । ನಿನ್ನ ರೂಪ ನೋಡೇನು ಯೋಗ ಮಾಡಿ । ನಿನ್ನ ನಾಮ ಅಂತರದೊಳಗೆ ಪ್ರೇಮ' ಎಂದು ಅವರು ತಮ್ಮ ಸಾಧನದ ರೀತಿಯನ್ನು ಕುರಿತು ಹೇಳಿರುವರು. ಅಂತರದಲ್ಲಿರುವ ಪ್ರೇಮದಿಂದ, ಪರಮಾತ್ಮನ ರೂಪ ನೋಡುತ್ತ ಮರೆಯದೆ ಮಾಡಿದ ಸಾಧನದಿಂದ ಶಿವಲಿಂಗವ್ವನವರು ತಮ್ಮ ಗುರುಗಳ ಪ್ರೀತ್ಯಾದರಗಳಿಗೆ ಪಾತ್ರರಾದರು. ಶ್ರೀ ಉಮದೀ ಮಹಾರಾಜರ ಶ್ರೇಷ್ಠ ಶಿಷ್ಯರಲ್ಲಿ ಒಬ್ಬರೆನಿಸಿದರು. 'ಅನುಭವವುಳ್ಳವರು ಗುರುಪಾದವನ್ನು ಬಯಸುವರು' ಎಂದು ಹೇಳಿದಂತೆ, ತಮ್ಮ ಅಧ್ಯಾತ್ಮಿಕ ಅನುಭವಗಳಲ್ಲಿ ಪ್ರಗತಿಯಾದಂತೆ ಶಿವಲಿಂಗವ್ವನವರು ಗುರುಪಾದದ ಅಡಿಯಲ್ಲಿದ್ದು ಸಾಧನ ಮಾಡಲು ಬಯಸಹತ್ತಿದರು.

ಶ್ರೀ ನಿಂಬರ್ಗಿ ಮಹಾರಾಜರ ನಿರ್ಯಾಣದ ನಂತರ ಶ್ರಾವಣಮಾಸದ ಸಾಧನ ಸಪ್ತಾಹವು ಶ್ರೀ ಉಮದೀ ಮಹಾರಾಜರ ಮನೆಯಲ್ಲಿ, ಉಮದೀಯಲ್ಲಿಯೇ ನಡೆಸ ಲಾಗುತ್ತಿತ್ತು. ಸಪ್ತಾಹದ ಎಲ್ಲ ಹೊಣೆಯನ್ನು ಖರ್ಚನ್ನು ಸಹ ಮಹಾರಾಜರೊಬ್ಬರೇ ವಹಿಸಿ ಸಪ್ತಾಹವನ್ನು ನೆರವೇರಿಸುತ್ತಿದ್ದರು. ಅಂದಿನ ಸಾಧನದ ರೀತಿಯು ಕಠೋರವಾದದ್ದೂ, ಕಟ್ಟುನಿಟ್ಟಾದದ್ದೂ ಇದ್ದುದರಿಂದ, ಅಂಥಾ ಸಾಧನವನ್ನು ಮಾಡುವ ಸಾಮರ್ಥ್ಯವುಳ್ಳ ಕೆಲವೇ ಜನರು ಅದರಲ್ಲಿ ಭಾಗವಹಿಸುತ್ತಿದ್ದರು. ಬೆಳಿಗ್ಗೆ ಸರಿಯಾಗಿ ೬ ಗಂಟೆಗೆ ನೇಮದ ಅಂದರೆ ಧ್ಯಾನದ ಕಾರ್ಯಕ್ರಮವು ಆರಂಭವಾಗುವುದು; ಅಲ್ಲಿಂದ ಅದು ಮಧ್ಯಾಹ್ನ ೩ ಗಂಟೆಯ ವರೆಗೆ ನಡೆಯಬೇಕು. ಈ ೯ ಗಂಟೆಯ ಧ್ಯಾನದ ಅವಧಿಯಲ್ಲಿ ಧ್ಯಾನಕ್ಕೆ ಕುಳಿತ ವ್ಯಕ್ತಿಯು ತನ್ನ ಸ್ಥಳವನ್ನು ಬಿಟ್ಟು ಕದಲುವ ಹಾಗಿಲ್ಲವೆಂಬ ಕಟ್ಟುನಿಟ್ಟಾದ ನಿಯಮವಿದ್ದಿತು. ಈ ಕಟ್ಟುನಿಟ್ಟಾದ ಕಠೋರ ನಿಯಮವನ್ನು ಪಾಲಿಸುವ ಮನಸ್ಸು ಮತ್ತು ಅಷ್ಟು ಭಕ್ತಿಯುಳ್ಳವರೇ ಈ ತಿಂಗಳ ಸಪ್ತಾಹದಲ್ಲಿ ಭಾಗವಹಿಸುತ್ತಿದ್ದರು. ಅಂದಿನ ಶ್ರಾವಣಮಾಸದ ಸಪ್ತಾಹವೆಂದರೆ ನುರಿತ ಸಾಧಕರ ಸಮ್ಮೇಳನವೆಂದೇ ಹೇಳಬಹುದು. ತಮ್ಮಲ್ಲಿ ಸಪ್ತಾಹಕ್ಕೆ ಬಂದ ಸಾಧಕರ ಪಟ್ಟಿಯೊಂದನ್ನು ಸಿದ್ಧಪಡಿಸಿ ಶ್ರೀ ಉಮದೀ ಮಹಾರಾಜರು ಇಡುತ್ತಿದ್ದರೆಂಬುದು ಅವರ ಕಾಗದ ಪತ್ರಗಳಿಂದ ಕಂಡು ಬರುತ್ತದೆ. ಕ್ರಿ.ಶ.೧೯೪೭೦ರ ಅಂಥ ಒಂದು ಪಟ್ಟಿಯಲ್ಲಿ ಶಿವಲಿಂಗವ್ವ ಮತ್ತು

ಬಸವ್ವ ಇವರ ಹೆಸರುಗಳಿವೆ. ಬಸವ್ವನೆಂದರೆ ಶಿವಲಿಂಗವ್ವನವರ ತಾಯಿಯಿರಬೇಕೆಂದು ತೋರುವುದು. ಆಗ ಶಿವಲಿಂಗವ್ವನವರ ವಯಸ್ಸು ೩೦ ಮಾತ್ರ ಇದ್ದಿತೆಂಬುದನ್ನು ವಾಚಕರು ಗಮನಿಸಬೇಕು. ತಮ್ಮ ಗುರುಗಳ ಆದರಕ್ಕೆ ಪಾತ್ರರಾದ ಶಿವಲಿಂಗವ್ವರನ್ನು ಬೇರೆ ಸಾಧಕರು ಒಳ್ಳೇ ಮರ್ಯಾದೆಯಿಂದ ಕಾಣುತ್ತಿದ್ದರು. ಕ್ರಿ.ಶ. ೧೯೦೦ರಲ್ಲಿ ಶ್ರೀ ಉಮದೀ ಮಹಾರಾಜರ ಹಿರಿಯ ಶಿಷ್ಯರಲ್ಲಿ ಒಬ್ಬರಾದ ಜಮಖಂಡಿಯ ಬಸಪ್ಪಾ ಕಟಗಿಯವರು ಶಿವಲಿಂಗವ್ವನವರ ಅಣ್ಣಂದಿರಾದ ಮಡಿವಾಳಯ್ಯನವರಿಗೆ ಬರೆದ ಪತ್ರದಲ್ಲಿ ಹೀಗೆ ಬರೆಯುತ್ತಾರೆ. 'ತೀ.ಸೌ. ಶಿವಲಿಂಗವ್ವಾ ಅಕ್ಕಾ ಮತ್ತು ಬಸವ್ವಾ ತಾಯಿಯವರು ಸುಖರೂಪವಿದ್ದುದು ತಿಳಿಯಿತು.' ೩೩ ವರುಷದ ಶಿವಲಿಂಗವ್ವನವರಿಗೆ ಬಸಪ್ಪನವರು ತೀರ್ಥರೂಪರೆಂದು ಕರೆದುದು ಗಮನಾರ್ಹವಾಗಿದೆ. ಶಿವಲಿಂಗವ್ವನವರ ಪತಿಯಾದ ಕರಬಸಯ್ಯನವರು ಕ್ರಿ.ಶ. ೧೯೦೦ರಲ್ಲಿ ಜೀವಿತರಿದ್ದರೆಂಬುದು ಮೇಲಿನ ಪತ್ರದಿಂದ ಸಿದ್ಧವಾಗುತ್ತದೆ. ಮಡಿವಾಳಯ್ಯನವರಿಗೆ ಬರೆದ ಮೇಲಿನ ಪತ್ರದಲ್ಲಿ ಬಸಪ್ಪನವರು ಶ್ರೀ ಉಮದೀ ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸಿ, ಅವರ ಚಿರಂಜೀವ ರಾದ ಕೃಷ್ಣಾಜಿಪಂತ, ರಾಮರಾವ ಮತ್ತು ಭೀಮರಾಯರಿಗೆ ನಮಸ್ಕಾರ ತಿಳಿಸಿರುವರು. ಈ ಪತ್ರ ಬರೆದ ಕಾಲಕ್ಕೆ ಶ್ರೀ ಉಮದೀ ಮಹಾರಾಜರು ಜತ್ತಿಯಲ್ಲಿ ಇದ್ದರೆಂಬುದು ಗೊತ್ತಾಗುತ್ತದೆ.

ಶ್ರೀ ಉಮದೀ ಮಹಾರಾಜರ ಚಿರಂಜೀವರಾದ ಕೃಷ್ಣಾಜಿಪಂತರು ಜತ್ತಿಯಲ್ಲಿ ಸರಕಾರೀ ಕೆಲಸದಲ್ಲಿದ್ದುದರಿಂದ ಮತ್ತು ಮಹಾರಾಜರು ಅಲ್ಲಿ ಬಂದು ಹೋಗುತ್ತಿದ್ದುದರಿಂದ ಶಿವಲಿಂಗವ್ವನವರು ಕೃಷ್ಣಾಜಿ ಪಂತರ ಮನೆಗೆ ಮೇಲಿಂದ ಮೇಲೆ ಹೋಗಬೇಕಾಗಿ ಬರುತ್ತಿತ್ತು. ಆದ್ದರಿಂದ ಶಿವಲಿಂಗವ್ವನವರಿಗೂ, ಮಹಾರಾಜರ ಮನೆಯ ಹೆಣ್ಣುಮಕ್ಕಳಿಗೂ ಹೆಚ್ಚು ನಿಕಟವಾದ ಸಂಬಂಧ ಬೆಳೆದು ಬಂದಿತು. ಮೇಲಾಗಿ ಉಮದಿಯಲ್ಲಿ ಶ್ರಾವಣಮಾಸದ ಸಪ್ತಾಹಕ್ಕೆ ಶಿವಲಿಂಗವ್ವನವರು ಹೋದ ಕಾಲಕ್ಕೆ ಶ್ರೀ ಉಮದೀ ಮಹಾರಾಜರ ಅಣ್ಣಂದಿರಾದ ನಾನಾಸಾಹೇಬ ಮತ್ತು ಅವರ ಕುಟುಂಬದವರ ಪರಿಚಯವು ಶಿವಲಿಂಗವ್ವನವರಿಗೆ ಆಗಿರಲಿಕ್ಕೆ ಸಾಕು. ಹೀಗಾಗಿ ಶಿವಲಿಂಗವ್ವನವರ ಬಗ್ಗೆ ಮಹಾರಾಜರ ಮನೆತನದ ಎಲ್ಲ ಜನರಿಗೆ ಆತ್ಮೀಯ ಭಾವವು ಸಹಜವಾಗಿಯೇ ಬೆಳೆದು ಬಂದಿತು. ಮಹಾರಾಜರು ಶಿವಲಿಂಗವ್ವನವರನ್ನು ತಮ್ಮ ಮಗಳಂತೆ ನೋಡಿಕೊಳ್ಳುತ್ತಿದ್ದರು. ಶಿವಲಿಂಗವ್ವನವರಾದರೂ ಮಹಾರಾಜರ ಕೂಡ ಅಷ್ಟೇ ಪ್ರೇಮದಿಂದ ಮತ್ತು ಸಲಿಗೆಯಿಂದ ನಡೆದುಕೊಳ್ಳುತ್ತಿದ್ದರು. ಕೆಲವೊಂದು ಅನಿರೀಕ್ಷಿತ ಕಾರಣಗಳಿಗಾಗಿ ಉಮದಿಯಲ್ಲಿ ನಡೆಯುತ್ತಿದ್ದ ಭಕ್ತಿಯ ಕಾರ್ಯವನ್ನು ಬೇರೆ ಕಡೆಗೆ ಸ್ಥಳಾಂತರಿಸುವ ಪ್ರಸಂಗವೊದಗಿತು. ಆಗ ಮಹಾರಾಜರು ಶ್ರೀ ಅಂಬುರಾವ ಮಹಾರಾಜರು ಇರುತ್ತಿದ್ದ ಇಂಚಗೇರಿಯನ್ನು ತಮ್ಮ ಭಕ್ತಿಪ್ರಸಾರದ ಕಾರ್ಯಕ್ಕಾಗಿ

ಆಯ್ದುಕೊಂಡು, ಕ್ರಿ.ಶ. ೧೯೦೩ರರ ಶ್ರಾವಣಮಾಸದ ಸಪ್ತಾಹವನ್ನು ಹಳ್ಳದ ಆಚೆಬದಿಯಲ್ಲಿ ಇರುವ ಕೌದೆಪ್ಪನ ಮಠದಲ್ಲಿ ಪ್ರಾರಂಭಿಸಿದರು. ಆದರೆ ಆ ಸಪ್ತಾಹದ ಅವಧಿಯಲ್ಲಿ ಮಹಾರಾಜರಿಗೆ ವಿಷಮಜ್ವರದ ಬಾಧೆಯಾಗಿ ನಿರ್ದಿಷ್ಟ ಅವಧಿಯ ಮೊದಲೆ ಸಪ್ತಾಹವನ್ನು ಮುಗಿಸಿ, ಎತ್ತಿನ ಬಂಡಿಯಲ್ಲಿ ಮಹಾರಾಜರು ಉಮದಿಗೆ ಹೊರಟರು. ಅವರ ಜೊತೆ ಶಿವಲಿಂಗವ್ವನವರೂ ಹೊರಟರು. ತಮಗೆ ವಿಷಮಜ್ವರದ ಬಾಧೆ ಯಾಕಾಗಿರಬೇಕೆಂದು ಮಹಾರಾಜರು ಕೇಳಿದಾಗ ಶಿವಲಿಂಗವ್ವನವರು ಹೆಣ್ಣು ಮಕ್ಕಳ ಮುಗ್ಧ ಸ್ವಭಾವಕ್ಕನುಗುಣವಾಗಿ, 'ನಾನಾಸಾಹೇಬರ ಮನಸ ಖಿನ್ನ ಮಾಡಿ ನೀವು ಹಿಂಚಗೇರಿಯಲ್ಲಿ ಸಪ್ತಾಹ ಹಚ್ಚಿದಿರಿ, ಅದಕ ನಿಮಗೆ ಜ್ವರ ಬಂತು' ಎಂದು ಹೇಳಿದರು. ತಂದೆಯ ಕೂಡ ಮಗಳು ಮಾತನಾಡುವ ರೀತಿಯಲ್ಲಿ ಶಿವಲಿಂಗವ್ವನವರು ತಮ್ಮ ಮನದಲ್ಲಿ ಬಂದ ವಿಚಾರವನ್ನು ಮಹಾರಾಜರಿಗೆ ಹೇಳಿಬಿಟ್ಟರು.

**ಮುಳ್ಳುಕಂಟೆಯೊಳಗಿಂದ ಮುಂದಕ್ಕೆ :** ಅಧ್ಯಾತ್ಮ ಸಾಧನೆಯು ಒಂದು ಅಸಿಧಾರಾ ವ್ರತವು. 'ಬ್ರಹ್ಮಪದವನ್ನು ಪಡೆಯಬೇಕಾದರೆ ಕಬ್ಬಿಣ ಕಡಲೆಯನ್ನು ತಿನ್ನಬೇಕಾಗುವುದು' ಎಂದು ಮರಾಠಿ ಸಂತರಾದ ತುಕಾರಾಮರು ಹೇಳುವಂತೆ, ಅಧ್ಯಾತ್ಮವನ್ನು ಸಾಧಿಸುತ್ತಿರುವ ಸಾಧಕನಿಗೆ ಅನೇಕ ಬಗೆಯ ಭೌತಿಕ ಸಂಕಷ್ಟಗಳನ್ನು ಎದುರಿಸಬೇಕಾಗುವುದೆಂಬುದನ್ನು ಅಧ್ಯಾತ್ಮಜೀವಿಗಳ ಜೀವನದಿಂದ ಕಂಡುಕೊಳ್ಳಬಹುದಾಗಿದೆ. ಶಿವಲಿಂಗವ್ವನವರು ಈ ನಿಯಮಕ್ಕೆ ಹೊರತಾಗಿರಲಿಲ್ಲ. ಸಾಧುರ ಸಂಗತಿಯ ಸದಾನಂದದಲ್ಲಿ, ಸದ್ಗುರು ವಸ್ತುವಿನ ನಿಜಾನಂದದಲ್ಲಿ ಮಕ್ಕಳ ಮರಣದ ದುಃಖವನ್ನು ಮರೆತು ತಮ್ಮ ಜೀವನವನ್ನು ಸಾಗಿಸುತ್ತಿರುವಂತೆ, ಹಿಂದೆ ಮಹಾರಾಜರು ತಿಳಿಸಿದ ಮುಳ್ಳುಕಂಟಿಗಳನ್ನು ಶಿವಲಿಂಗವ್ವನವರು ಎದುರಿಸಬೇಕಾಗಿ ಬಂದಿತು. ಅವರ ಜೀವನದಲ್ಲಿ ಪ್ರಾಪಂಚಿಕ ತೊಂದರೆಗಳು ತಲೆದೋರ ಹತ್ತಿದವು. ಅವರ ಪತಿಯಾದ ಕರಬಸಯ್ಯನವರು ಉಮರಾಣಿಯಲ್ಲಿ ಇರುತ್ತಿರುವಾಗಲೇ, ತಮ್ಮ ಆಸ್ತಿಯ ಮೇಲೆ ಸಾಲದ ಹೊರೆಯನ್ನು ಹೊರಸಿದರು. ಉಮರಾಣಿಯಲ್ಲಿಯ ತಮ್ಮ ಮನೆತನದ ಭೂಮಿಗಳನ್ನು ಅವರು ಒತ್ತೀ ಹಾಕಿದರು. ಕ್ರಿ.ಶ.೧೯೦೭ರಲ್ಲಿ ಕರಬಸಯ್ಯನವರು ಬರೆದುಕೊಟ್ಟ ಒತ್ತೀ ಕಾಗದದ ಮೇಲಿಂದ ಅವರು ಕ್ರಿ.ಶ. ೧೯೦೭ರಲ್ಲಿ ಇನ್ನೂ ಇದ್ದರೆಂಬುದು ಗೊತ್ತಾಗುವುದು. ಕ್ರಿ.ಶ. ೧೯೦೫ರಲ್ಲಿ ಶಿವಲಿಂಗವ್ವನವರು ಜತ್ತಿ ಮಾಮಲೇದಾರರ ಕಚೇರಿಯಲ್ಲಿ ಒಂದು ವಾರಸಾ ಕೆಲಸವನ್ನು ನಡೆಸಿದುದು ಕಂಡು ಬರುವುದು. ಇದರ ಮೇಲಿಂದ ಕರಬಸಯ್ಯನವರು ಕ್ರಿ.ಶ. ೧೯೦೭ರಿಂದ ೧೯೦೫ರ ಅವಧಿಯಲ್ಲಿ ಶಿವೈಕ್ಯರಾಗಿರ ಬೇಕೆಂದು ಕಂಡುಬರುವುದು. ಕರಬಸಯ್ಯನವರ ಮರಣದಿಂದ ಅತ್ತೇ ಮನೆಯ ಕಡೆಯ ಶಿವಲಿಂಗವ್ವನವರ ಇದ್ದು ಬಿದ್ದ ಆಧಾರವು ಕಡಿದಂತಾಯಿತು. ಪತಿಯು ಮಾಡಿದ ಸಾಲದ ಹೊರೆಯನ್ನು ಹೊತ್ತು, ತಮ್ಮ ಮನೆತನದ ದಾಯಾದಿಗಳ ಕೂಡ ಅವರು

ವ್ಯಾಜ್ಯವನ್ನು ನಡೆಸಬೇಕಾಯಿತು. ಈ ಎಲ್ಲ ಪ್ರಾಪಂಚಿಕ ಹೊಣೆಗಳನ್ನು ಅವರ ಅಣ್ಣಂದಿರಾದ ಮಡಿವಾಳಯ್ಯನವರು ಹೊತ್ತು ನಿರ್ವಹಿಸಿದರು. ಅದರಿಂದ ಪರಮಾರ್ಥದಲ್ಲಿ ಮನಸು ಹಾಕಲು ಮತ್ತು ಸಾಧನವನ್ನು ಮಾಡಲು ಶಿವಲಿಂಗವ್ವನವರಿಗೆ ಅನುಕೂಲವಾಯಿತು.

ನನ್ನ ನಿನ್ನ ರಾಜ್ಯ ವಿಠ್ಠಲಾ : ಮಕ್ಕಳ ಮೇಲಿನ ಮಾಯಾಮೋಹಗಳು ಮೊದಲಿಗೇ ಮಾಯವಾಗಿದ್ದವು. ಪತಿಯ ಬಂಧನವೂ ಇಂದು ಕಡಿಯಿತು. 'ವಿಠ್ಠಲಾ ಇನ್ನು ನನ್ನ ನಿನ್ನ ರಾಜ್ಯ' ಎಂಬಂತೆ ಅಧ್ಯಾತ್ಮದ ಹೊರತು ಬೇರೆ ಯಾವ ಬಂಧನವೂ, ಅವರಿಗೆ ಉಳಿಯಲಿಲ್ಲ. ತಮ್ಮ ಪುರುಷನು ಶಿವೈಕ್ಯನಾದ ಮೇಲೆ ಅವರು ಪರ ಪುರುಷರ ದರ್ಶನವನ್ನೇ ನಿಲ್ಲಿಸಿಬಿಟ್ಟಂತೆ ಮಾಡಿದರು. ತಮ್ಮಲ್ಲಿಗೆ ಬಂದ ಪುರುಷರ ದರ್ಶನವು ತಮಗಾಗಬಾರದೆಂದು, ಪರದೆಯ ಮರೆಗೆ ಕುಳಿತುಕೊಂಡು ಬಂದವರ ಜತೆ ಮಾತನಾಡುತ್ತಿದ್ದರು. 'ಮೋಹವು ಕಣ್ಣಲ್ಲಿದೆ' ಎಂದು ಶ್ರೀ ಉಮದೀ ಮಹಾರಾಜರು, ಅವರ ತರುವಾಯ ಶ್ರೀ ಅಂಬುರಾವ ಮಹಾರಾಜರು ಹೇಳುತ್ತಿದ್ದರು. ಕಣ್ಣಲ್ಲಿಯ ಮೋಹಕ್ಕೆ ಎಡೆಗೊಡಬಾರದೆಂದು ಶಿವಲಿಂಗವ್ವನವರು ಪರದೆಯ ಮರೆಗೆ ಕುಳಿತುಕೊಂಡು ಪುರುಷರ ಕೂಡ ಮಾತನಾಡುತ್ತಿದ್ದರು. ಈ ಕಠೋರವಾದ ವ್ರತವನ್ನು ತಮ್ಮ ಜೀವನದ ಉದ್ದಕ್ಕೂ ಅವರು ಪಾಲಿಸಿದರೆಂದರೆ ತಪ್ಪಾಗದು. ಆದರೆ ಅವರ ಈ ನಿಯಮಕ್ಕೆ ಅಪವಾದಗಳಿಲ್ಲದೆ ಇರಲಿಲ್ಲ.

ಅವರ ಕಠೋರ ನಿಯಮದ ಪಾಲನೆಯ ಕಾಲದಲ್ಲಿ ಸಂಭವಿಸಿದ ಒಂದೆರಡು ರಸನಿಮಿಷಗಳನ್ನು ಇಲ್ಲಿ ವಿವರಿಸಿದರೆ ಅಪ್ರಸ್ತುತವಾಗಲಾರದು. ಶಿವಲಿಂಗವ್ವನವರ ಅಧ್ಯಾತ್ಮಿಕ ಶ್ರೇಷ್ಠತೆಯು ಇಂಚಗೇರಿಗೆ ಬರುವ ಸಾಧಕರ ಬಾಯಿಮಾತಾಗಿದ್ದಿತು. ತಮ್ಮ ಸಾಧನ ಮತ್ತು ಅಧ್ಯಾತ್ಮಿಕ ಅನುಭವಗಳ ಮೂಲಕ ಶ್ರೀ ಉಮದೀ ಮಹಾರಾಜರ ಆದರಕ್ಕೆ ಅವರು ಪಾತ್ರರಾಗಿದ್ದರು. ಅಂಥ ಶ್ರೇಷ್ಠ ಅನುಭಾವಿಗಳನ್ನು ಕಣ್ಣಾರೆ ಕಾಣಬೇಕೆಂದು ಇಂಚಗೇರಿಗೆ ಬರುವ ಎಲ್ಲ ಸಾಧಕರು ಹಾತೊರೆಯುತ್ತಿದ್ದರು. ಆದರೆ ಅವರ ಆಶೆ ಈಡೇರುವುದು ಅಸಾಧ್ಯವಾಗಿತ್ತು. ಶಿವಲಿಂಗವ್ವನವರು ಇರುವ ಕೋಣೆಗೆ ಹೋಗಿ ಅವರ ದರ್ಶನ ಪಡೆಯಬೇಕೆಂದರೆ, ಮಹಾರಾಜರ ಅಪ್ಪಣೆ ಪಡೆಯದೆ ಅವರಲ್ಲಿ ಹೋಗುವಂತಿರಲಿಲ್ಲ. ಅವರ ಅಪ್ಪಣೆ ದೊರಕಿಸುವುದು ಸುಲಭ ಸಾಧ್ಯವಿರಲಿಲ್ಲ. ಒಂದು ವೇಳೆ ಮಹಾರಾಜರ ಅಪ್ಪಣೆ ದೊರೆತರೂ, ಪರದೆಯ ಮರೆಗೆ ಕುಳಿತುಕೊಂಡೇ ಶಿವಲಿಂಗವ್ವನವರು ಮಾತನಾಡುತ್ತಿದ್ದುದರಿಂದ, ಅವರ ಪ್ರತ್ಯಕ್ಷ ದರ್ಶನವು ಸಾಧ್ಯವಾಗುತ್ತಿರಲಿಲ್ಲ. ಇನ್ನು ನೇಮಕ್ಕೆ ಕುಳಿತುಕೊಳ್ಳಲು ಬರುವಕಾಲಕ್ಕೆ ಇಲ್ಲವೆ ಭಜನೆ ಮುಗಿದ ಮೇಲೆ ಕಾಣಬೇಕೆಂದರೆ ಅದು ಕೂಡ ಸಾಧ್ಯವಿರಲಿಲ್ಲ. ನೇಮಕ್ಕೆ ಕುಳಿತುಕೊಳ್ಳಲು

ಅವರಿಗೆ ಸ್ವತಂತ್ರ ಜಾಗದ ವ್ಯವಸ್ಥೆ ಇದ್ದಿತು. ಶ್ರೀ ನಿಂಬರ್ಗಿ ಮಹಾರಾಜರ ಸಮಾಧಿಯ ಹಿಂಬದಿಯ ಪಡವಿಯ ಗೋಡೆಯಲ್ಲಿ ಒಂದು ದೊಡ್ಡ ಮಾಡವಿದ್ದಿತು. ಆ ಮಾಡದಲ್ಲಿ ಶಿವಲಿಂಗವ್ವನವರು ನೇಮಕ್ಕೆ ಕುಳಿತುಕೊಳ್ಳುತ್ತಿದ್ದರು. ಮತ್ತು ಆ ಮಾಡದ ಮುಂದೆ ಒಂದು ಪರದೆ ಇರುತ್ತಿತ್ತು. ಮುಂಜಾವಿನ ಪ್ರಾರಂಭದ ಆರತಿಯಾಗಿ ಎಲ್ಲರೂ ನೇಮಕ್ಕೆ ಕುಳಿತುಕೊಂಡ ಮೇಲೆ ಶಿವಲಿಂಗವ್ವನವರು ಮುಖದ ಮೇಲೆ ತಮ್ಮ ಸೀರೆಯ ಸೆರಗನ್ನು ಮುಚ್ಚಿಕೊಂಡು ಶ್ರೀ ನಿಂಬರಗಿ ಮಹಾರಾಜರ ಸಮಾಧಿಯ ಹಿಂದಿನ ಬಾಗಿಲಿನಿಂದ ಒಳಗೆ ಬಂದು ತಮ್ಮ ಸ್ಥಳದಲ್ಲಿ ನೇಮಕ್ಕೆ ಕುಳಿತುಕೊಳ್ಳುತ್ತಿದ್ದರು. ಮೇಲಾಗಿ ಸ್ತ್ರೀ ಸಾಧಕರು ಕುಳಿತುಕೊಂಡುದನ್ನು ಪುರುಷರು ನೋಡಬಾರದೆಂದು, ಪುರುಷರು ಕುಳಿತಿದನ್ನು ಸ್ತ್ರೀಯರು ನೋಡಬಾರದೆಂದು ಸ್ತ್ರೀ ಸಾಧಕರು ಮರೆಯಾಗುವಂತೆ ಒಂದು ಪರದೆಯನ್ನು ಕಟ್ಟಲಾಗುತ್ತಿತ್ತು. ಹೀಗಾಗಿ ಪುರುಷರಿಗೆ ಶಿವಲಿಂಗವ್ವನವರ ದರ್ಶನವು ಅಶಕ್ಯವೂ ಅಸಾಧ್ಯವೂ ಆಗಿದ್ದಿತು.

ಶಿವಲಿಂಗವ್ವನವರನ್ನು ಪ್ರತ್ಯಕ್ಷ ಕಾಣಬೇಕೆಂಬ ಹಂಬಲವುಳ್ಳ ಕೆಲವು ಸಾಧಕರು ಅವರನ್ನು ಕಾಣಲು ಒಂದು ಹಂಚಿಕೆಯನ್ನು ಮಾಡಿದರು. ಶಿವಲಿಂಗವ್ವನವರು ದಿನಾಲು ಬೆಳಿಗ್ಗೆ ಮಠದ ಪಶ್ಚಿಮಕ್ಕಿರುವ ಅಬ್ದುಲ್ಲನ ಬಾವಿಯ ದಿಶೆಯಲ್ಲಿ ಹೋಗಿ ತಮ್ಮ ನಿತ್ಯದ ವಿಧಿಗಳನ್ನು ತೀರಿಸಿಕೊಂಡು, ಆ ಬಾವಿಯಲ್ಲಿ ಕೈಕಾಲು ಮುಖ ತೊಳೆದುಕೊಂಡು ಬರುವ ರೂಢಿಯಾಗಿದ್ದಿತು. ಅವರನ್ನು ಕಾಣಲು ಅದೇ ಒಂದು ಅವಕಾಶವೆಂದು ಒಂದು ದಿವಸ ಆರಣಿಯ ಮೇಲಿನ ಕಾಲು ದಾರಿಯಿಂದ ಅವರು ಮಠದ ಕಡೆಗೆ ಬರುತ್ತಿದ್ದುದನ್ನು ಕಂಡು, ಅವರನ್ನು ಕಾಣಬೇಕೆಂಬ ಹಂಬಲವುಳ್ಳ ಆ ಸಾಧಕರು ಅವರ ಎದುರುಬದಿಯಿಂದ,ಅದೇ ಕಾಲುದಾರಿಯಿಂದ ಹೊರಟರು. ಶಿವಲಿಂಗವ್ವನವರು ತಮ್ಮ ಎದುರು ಬದಿಯಿಂದ ಬರಲೇಬೇಕೆಂದೂ, ಆಗ ಅವರನ್ನು ಕಂಡು ಮಾತನಾಡಿಸ ಬಹುದೆಂದೂ, ಆ ಸಾಧಕರು ಮನದಲ್ಲಿ ಮಂಡಿಗಿಯನ್ನು ತಿನ್ನುತ್ತ ಹೊರಟರು. ಆದರೆ ಅವರ ಆಸೆ ನಿರಾಸೆಯಾಗಲು ಬಹಳ ಕಾಲ ಬೇಕಾಗಲಿಲ್ಲ. ತಮ್ಮ ಎದುರುಬದಿಯಿಂದ ಯಾರೀ ಪುರುಷರು ಬರುತ್ತಿರುವುದನ್ನು ಕಂಡ ಅವರು ಆ ಅರಣಿಯ ಕೆಳಗಿಳಿದು ಪಕ್ಕದ ಹೊಲದಲ್ಲಿ ದೂರ ಹೋಗಿ, ತಮ್ಮ ಮುಖದ ಮೇಲೆ ಸೀರೆಯ ಸೆರಗನ್ನು ಎಳೆದುಕೊಂಡು ಸಾಧಕರ ಕಡೆಗೆ ಬೆನ್ನು ಮಾಡಿ ನಿಂತುಬಿಟ್ಟರು. ಅವಮಾನವಾದಂತಾಗಿ ಆ ಸಾಧಕರು ಹಾಗೇ ಮುಂದೆ ಹೋದರು. ಅವರು ದೂರ ಹೋದುದನ್ನು ನೋಡಿ ಶಿವಲಿಂಗವ್ವನವರು ಮಠದ ಕಡೆಗೆ ಹೊರಟರು.

ಒಂದೆರಡು ದಿವಸಗಳು ಕಳೆದವು. ಆ ಗುಂಪಿನಲ್ಲಿಯ ಒಬ್ಬಿಬ್ಬರು ಮಹಾರಾಜರ ಒಪ್ಪಿಗೆ ಪಡೆದು, ಶಿವಲಿಂಗವ್ವನವರನ್ನು ಕಂಡು ಮಾತನಾಡಲು ಹೋದರು. ಪ್ರಾರಂಭದ

ಮಾತುಗಳು ಮುಗಿದ ಮೇಲೆ 'ಅಂದು ನಾವು ನಿಮ್ಮ ಎದುರು ಬಂದಾಗ್ಗೆ ಆ ಆರಣಿಯ ಮೇಲಿಂದ ಕೆಳಗಿಳಿದು ದೂರ ಹೊಲದಲ್ಲಿ ಯಾಕೆ ಹೋಗಿ ನಿಂತಿರಿ' ಎಂದು ಅವರಲ್ಲಿಯ ಒಬ್ಬರು ಶಿವಲಿಂಗವ್ವನವರನ್ನು ಕೇಳಿದರು. 'ಪರಪುರುಷರು ಎದುರು ಬಂದಾಗ, ಅವರೆದುರು ಯಾಕೆ ನಿಲ್ಲಬೇಕು, ಎಂದು ಹೊಲದಲ್ಲಿ ಹೋಗಿ ನಿಂತೆ', ಎಂದು ಉತ್ತರ ಬಂದಿತು. 'ನಾವೆಲ್ಲರೂ ಒಬ್ಬರೇ ಗುರುಗಳ ಮಕ್ಕಳು. ಗುರುಬಂಧುಗಳು, ಪರಪುರುಷರು ಹೇಗೆ?' ಎಂದು ಬಂದವರಲ್ಲಿ ಒಬ್ಬರು ಕೇಳಿದರು. ಮೊದಲು ನೋಡಬೇಕೇಕೆ, ನೋಡುವುದನ್ನೇ ಬಿಟ್ಟರೆ ಒಳ್ಳೆಯದಲ್ಲವೆ?' ಎಂದು ಶಿವಲಿಂಗವ್ವನವರು ಬಂದವರಿಗೆ ಮರುಪ್ರಶ್ನೆ ಕೇಳಿ ಅವರನ್ನು ಚಕಿತಗೊಳಿಸಿದರು. ಇದಾಯಿತು ಪರಪುರುಷರ ದರ್ಶನವನ್ನು ಅವರು ಹೇಗೆ ತಪ್ಪಿಸುತ್ತಿದ್ದರೆಂಬ ಬಗ್ಗೆ. ಈ ಕಟ್ಟುನಿಟ್ಟಾದ ನಿಯಮಕ್ಕೆ ಅಪವಾದಗಳಿಲ್ಲದೆ ಇರಲಿಲ್ಲ. ಇಂಥ ಅಪವಾದಗಳಲ್ಲಿ ಕೆಳಗಿನವರ ಹೆಸರನ್ನು ಹೇಳಬಹುದು. ಶ್ರೀ ಉಮದೀ ಮಹಾರಾಜರ ಚಿರಂಜೀವರಾದ ಕೃಷ್ಣಾಜಿ ಪಂತರು, ಶ್ರೀ ಅಂಬುರಾವ ಮಹಾರಾಜರು, ಗುರುದೇವ ರಾನಡೆಯವರು ಮತ್ತು ಕೋಳಗೇರಿ ಬಸಪ್ಪನವರು. ಕೃಷ್ಣಾಜಿ ಪಂತರು ಜತ್ತಿಯಲ್ಲಿ ಕೆಲಸ ಹಿಡಿದ ಮೇಲೆ ಶ್ರೀ ಉಮದೀ ಮಹಾರಾಜರು ಜತ್ತಿಗೆ ಹೋದಾಗಲೆಲ್ಲ ತಮ್ಮ ಚಿರಂಜೀವರ ಮನೆಯಲ್ಲಿ ಉಳಿದು ಕೊಳ್ಳುತ್ತಿದ್ದರು. ಶಿವಲಿಂಗವ್ವನವರು ಕೃಷ್ಣಾಜಿಪಂತರ ಮನೆಗೆ ಮಹಾರಾಜರ ದರ್ಶನಕ್ಕಾಗಿ ಹೋಗುತ್ತಿದ್ದರು, ಮೇಲಾಗಿ ಮಹಾರಾಜರ ಚಿರಂಜೀವರೂ ಒಳ್ಳೇ ಸಾಧಕರೂ ಆದ ಕೃಷ್ಣಾಜಿ ಪಂತರನ್ನು ಶಿವಲಿಂಗವ್ವನವರು ತಮ್ಮ ಒಡಹುಟ್ಟಿದ ತಮ್ಮನಂತೆ ಭಾವಿಸಿದ್ದರು. ಶಿವಲಿಂಗವ್ವನವರು ಬರೆದುಕೊಟ್ಟ ಒಂದು ಖರೀದಿ ಕಾಗದದ ಮೇಲೆ ಕೃಷ್ಣಾಜಿ ಪಂತರು ಅವರ ಗುರುತು ಹೇಳಿದ ಬಗ್ಗೆ ಸಹಿ ಹಾಕಿರುವರು.

ತಾವು ಎಲ್ಲಿಯಾದರೂ ಪರವೂರಿಗೆ ಹೋಗಬೇಕಾದರೆ, ವಿಶೇಷವಾಗಿ ನಿಂಬಾಳಕ್ಕೆ, ಗುರುದೇವ ರಾನಡೆಯವರಲ್ಲಿ ಬಂದು ನಿಂತಕಾಲಕ್ಕೆ ಕೊಳಗೇರಿ ಬಸಪ್ಪನು ಅವರ ಸಂಗಡ ಹೋಗುತ್ತಿದ್ದನಲ್ಲದೆ, ಅವರ ಊಟದ ವ್ಯವಸ್ಥೆಯನ್ನು ಅವನೇ ಮಾಡುವನು. ಇನ್ನು ಮೂರನೆಯವರೆಂದರೆ ಶ್ರೀ ಅಂಬುರಾವ ಮಹಾರಾಜರು. ಅವರಿಬ್ಬರ ಸಂದರ್ಶನದ ಬಗ್ಗೆ ನಡೆದ ಒಂದು ರಸನಿಮಿಷವನ್ನು ಇಲ್ಲಿ ವಿವರಿಸಬಯಸುವೆವು. ಶ್ರೀ ಉಮದೀಮಹಾರಾಜರು ಜತ್ತಿಗೆ ಹೋದಾಗ್ಗೆ ತಮ್ಮ ಚಿರಂಜೀವರ ಮನೆಯಲ್ಲಿ ಉಳಿದುಕೊಂಡರೂ ಜಂಗಮ ಮಠದ ಮರ್ಯಾದೆಯನ್ನು ಕಾಯುವುದಕ್ಕಾಗಿ ಅಲ್ಲಿಯ ಪತ್ರಿಗಿಡಕ್ಕೆ ಕಾಯಿ ಒಡೆದು ಕಪ್ಪರವನ್ನು ಹಚ್ಚಿ ಬರುವ ರೂಢಿಯನ್ನು ಇಟ್ಟುಕೊಂಡಿದ್ದರು. ತಮ್ಮ ಜತೆಯಿದ್ದ ಶಿಷ್ಯರಲ್ಲಿ ಯಾರನ್ನಾದರೂ ಆ ಮಠಕ್ಕೆ ಕಳುಹಿಸಿ ಕಾಯಿಕರ್ಪುರಗಳನ್ನು ಸಲ್ಲಿಸುತ್ತಿದ್ದರು. ಒಂದು ಸಲ ಮಹಾರಾಜರು ಶ್ರೀ ಅಂಬುರಾವ ಮಹಾರಾಜರನ್ನು ತಮ್ಮ ಸಂಗಡ ಜತ್ತಿಗೆ ಕರೆದುಕೊಂಡು ಹೋಗಿದ್ದರು. ಆಸಲ 'ಅಂಬುರಾಯಾ

ಜಂಗಮ ಮಠಕ್ಕೆ ಹೋಗಿ ಅಲ್ಲಿಯ ಪತ್ರಿಗಿಡಕ್ಕೆ ಕಾಯಿ ಒಡೆದು ಕಪ್ಪುರಾ ಹಚ್ಚಿ ಬಾ' ಎಂದು ಮಹಾರಾಜರು ಅವರಿಗೆ ಹೇಳಿದರು. ಗುರುಗಳ ಆಜ್ಞೆಯೆಂದು ಬಗೆದು ಕಾಯಿಕರ್ಪುರ ತಕ್ಕೊಂಡು ಶ್ರೀ ಅಂಬುರಾವ ಮಹಾರಾಜರು ಅಲ್ಲಿಗೆ ಹೋಗಿ ಪತ್ರಿಗಿಡಕ್ಕೆ ಕಾಯಿಕರ್ಪುರವನ್ನು ಸಲ್ಲಿಸಿ ತಿರುಗಿ ಹೊರಟರು; ಅಷ್ಟರಲ್ಲಿ ಆ ಮಠದಲ್ಲಿ ಶಿವಲಿಂಗವ್ವ ನವರಿರುವುದು ಅವರಿಗೆ ನೆನಪಾಯಿತು. ಅವರನ್ನು ಕಂಡು ಮಾತನಾಡಿಸಿ ಹೋಗಬೇಕೆಂದು, ತಾವು ಶಿವಲಿಂಗವ್ವನವರನ್ನು ಕಾಣಬಯಸುತ್ತಿರುವುದಾಗಿ ಅಲ್ಲಿದ್ದ ಓರ್ವ ಹೆಣ್ಣುಮಗಳಿಗೆ ತಿಳಿಸಿದರು. 'ನಿಮ್ಮನ್ನು ನೋಡಲಾಕ ಯಾರೋ ಬಂದಿದಾರ' ಎಂದು ಆ ಹೆಣ್ಣುಮಗಳು ಶಿವಲಿಂಗವ್ವನವರಿಗೆ ತಿಳಿಸಲಾಗಿ, 'ಬಂದವರೆಲ್ಲಾ ನನ್ನ ನೋಡತೀವಂತ ಬರತಾರ. ನನ್ನ ಏನು ನೋಡತಿದ್ದಾರು?' ಎಂದು ಸಿಟ್ಟಿನಿಂದ ಅವರು ನುಡಿದುದನ್ನು ಅಲ್ಲಿಯೇ ಹೊರಗೆ ನಿಂತ ಶ್ರೀ ಅಂಬುರಾವ ಮಹಾರಾಜರು ಕೇಳಿದರು. 'ನಾ ಏನ ಅವರನ್ನ ನೋಡಲಿಕ್ಕೆ ಬಂದಿಲ್ಲ. ಅಪ್ಪಾ ಅವರು (ಮಹಾರಾಜರು) ಪತ್ರಿ ಗಿಡಕ್ಕೆ ಕಾಯಿ ಒಡಿಸಿಕೊಂಡು ಬಾ ಅಂದರು ಅಂತ ಬಂದೀನಿ. ಇಲ್ಲಿತನಕ ಬಂದು ಅವರನ್ನು ನೋಡದೆ ಹೋಗುವುದು ಸರಿ ಅಲ್ಲ ಅಂತ ಕೇಳಿದೆ' ಎಂದು ನಿಷ್ಠುರವಾಗಿ ಹೇಳಿ ಅಲ್ಲಿಂದ ಅವರು ಹೊರಟೇ ಬಿಟ್ಟರು. ಅವರ ದನಿಯನ್ನು ಕೇಳಿ, ಅಂಬುರಾಯರು ಬಂದಿರುವುದನ್ನು ತಿಳಿದು ಶಿವಲಿಂಗವ್ವನವರು ಅವರನ್ನು ಕರೆಯಿಸಿಕೊಂಡರು. ಅವರು ಬಂದು ಕುಳಿತುಕೊಳ್ಳುತ್ತಲೇ, ತಮ್ಮ ಮುಂದಿನ ಪರದೆಯನ್ನು ಬದಿಗೆ ಸರಿಸಿ ಅವರ ಕೂಡ ನೇರವಾಗಿ ಮಾತನಾಡಹತ್ತಿದರು. 'ಅನುಭಾವಿ ಸಂತರು ಒಂದೆಡೆ ಸೇರಿದರೆ ಅದು ಏಕಾಂತಕ್ಕಿಂತಲೂ ಏಕಾಂತ' ಎಂದು ಶ್ರೀ ಸಮರ್ಥ ರಾಮದಾಸರು ಹೇಳಿದುದನ್ನು ನಾವು ಇಲ್ಲಿ ನೆನಿಸಿಕೊಳ್ಳಬಹುದು. ಯಾವುದೇ ಮುಚ್ಚುಮರೆಯಿಲ್ಲದೆ ಗುರುದೇವ ರಾನಡೆಯವರ ಕೂಡ ಶಿವಲಿಂಗವ್ವನವರು ಮಾತನಾಡುತ್ತಿದ್ದರೆಂಬುದು, ಮುಂದೆ ವಿವರಿಸಿದ ಸಂಗತಿಗಳಿಂದ ತಿಳಿದು ಬರುವಂತಿದೆ.

**ಆರ್ಥಿಕ ಇಕ್ಕಟ್ಟಿನಲ್ಲಿ :** ಪತಿಯ ಮರಣದ ತರುವಾಯ ಅನೇಕ ಬಗೆಯ ಆರ್ಥಿಕ ತೊಂದರೆಗಳನ್ನು ಶಿವಲಿಂಗವ್ವನವರು ಎದುರಿಸಬೇಕಾಯಿತು. ಕೋರ್ಟಿನಲ್ಲಿ ವ್ಯಾಜ್ಯ ನಡೆಸಬೇಕಾಯಿತು. ಪತಿಯ ಸಾಲವನ್ನು ತೀರಿಸುವ ಹೊಣೆ ಇವರ ಮೇಲೆ ಬಿದ್ದಿತು. ಪತಿಯ ಸಾಲವನ್ನು ತೀರಿಸುವುದು ತಮ್ಮ ಕರ್ತವ್ಯವೆಂದು ಬಗೆದು, ಅವರು ತಮ್ಮ ಆಸ್ತಿಯನ್ನು ಒತ್ತೀ ಹಾಕಿ ಗಂಡನ ಸಾಲವನ್ನು ಕೆಲಮಟ್ಟಿಗೆ ತೀರಿಸಿದರು. ಜತ್ತ ಕೋರ್ಟಿನಲ್ಲಿ ತಮ್ಮ ಪತಿಯ ಮೇಲಾದ ಹುಕಂ ನಾಮೆಯ ಹಣವನ್ನು ಪಡೆಯಲು ಸಾವುಕಾರರು ಕೊಟ್ಟ ದ.ನಂ. ೧೭೪/೧೯೦೯ರಲ್ಲಿ ಹಣ ತುಂಬ ಬೇಕಾಗಿ ಬಂದದ್ದರಿಂದ ದಿ. ೨೫-೯-೧೯೦೯ನೇ ದಿವಸ ರೂ. ೨೦೦ ರರಲ್ಲಿ ನಿಂಗಪ್ಪ ಪಾಟೋಳೆ ಎಂಬುವರಿಗೆ ತಮ್ಮ ಹೊಲದ ಒತ್ತೀ ಕಾಗದವನ್ನು ಬರಕೊಟ್ಟು ಹಣಪಡೆದು ಪತಿಯ ಸಾಲವನ್ನು

ಕೆಲಮಟ್ಟಿಗೆ ತೀರಿಸಿದರು. ಇಷ್ಟರಿಂದಲೇ ಅವರ ಪತಿಯ ಸಾಲವು ತೀರಲಿಲ್ಲ. ಮುಂದೆ ಕ್ರಿ.ಶ. ೧೯೧೧ರಲ್ಲಿ ಇದ್ದು ಬಿದ್ದ ತಮ್ಮ ಆಸ್ತಿಯನ್ನೆಲ್ಲ ಮಾರಿ ಶಿವೈಕ್ಯರಾದ ಪತಿಯನ್ನು ಸಾಲದ ಹೊರೆಯಿಂದ ಮುಕ್ತಮಾಡಿದರು. ಉಮರಾಣಿಯಲ್ಲಿದ್ದ ತಮ್ಮ ಗಂಡನ ಆಸ್ತಿಯನ್ನು ಕ್ರಿ.ಶ. ೧೯೧೧ರಲ್ಲಿ ರೂ. ೬೦೦/–ಕ್ಕೆ ಮಾರಾಟ ಮಾಡಿದರು. ಈ ಖರೀದಿ ಕಾಗದದ ಮೇಲೆ ಶ್ರೀ ಉಮದೀ ಮಹಾರಾಜರ ಚಿರಂಜೀವರಾದ ಕೃಷ್ಣಾಜಿ ಪಂತರು ಶಿವಲಿಂಗವ್ವನವರ ಗುರುತು ಹೇಳಿದ ಬಗ್ಗೆ ಆ ಕಾಗದದ ಮೇಲೆ ಸಹಿ ಹಾಕಿದ್ದಾರೆ. ಶ್ರೀ ಉಮದೀ ಮಹಾರಾಜರ ಮನೆತನದ ಜನಕ್ಕೂ ಶಿವಲಿಂಗವ್ವನವರಿಗೂ ನಿಕಟವಾದ ಪರಿಚಯವಿದ್ದಿರಬೇಕೆಂಬುದು ಮೇಲಿನ ಸಂಗತಿಯಿಂದ ಸಿದ್ಧವಾಗುವುದು.

ಇಂಥ ಆರ್ಥಿಕ ತೊಂದರೆಗಳನ್ನೆದುರಿಸುತ್ತಿರುವಾಗಲೆ ಶಿವಲಿಂಗವ್ವನವರು ಇನ್ನೊಂದು ದುಃಖದ ಪ್ರಸಂಗಕ್ಕೆ ಈಡಾಗಬೇಕಾಯಿತು. ಕ್ರಿ.ಶ. ೧೯೦೭ರಲ್ಲಿ ಅವರ ಅಣ್ಣಂದಿರೂ ಅವರ ಹಿತಚಿಂತಕರೂ ಆದ ಮಡಿವಾಳಯ್ಯನವರು ಶಿವೈಕ್ಯರಾದರು. ಶಿವಲಿಂಗವ್ವನವರ ಪ್ರಾಪಂಚಿಕ ವ್ಯವಹಾರಗಳನ್ನು ಮಡಿವಾಳಯ್ಯನವರೇ ನೋಡಿ ಕೊಳ್ಳುತ್ತಿದ್ದುದರಿಂದ ಶಿವಲಿಂಗವ್ವನವರ ಆಧಾರವೇ ಕತ್ತರಿಸಿ ಹೋದಂತಾಯಿತು. ಅಕ್ಕನ ಮಗಳು ಮುರಿಗೆವ್ವನು ಅನಾಥೆಯಾದಳು. ತಮಗಾದ ದುಃಖವನ್ನು ನುಂಗಿಕೊಂಡು ಮುರಿಗೆವ್ವನನ್ನು ಸಾಂತ್ವನಗೊಳಿಸಬೇಕಾಯಿತು ಶಿವಲಿಂಗವ್ವನವರಿಗೆ. ಮುರಿಗೆವ್ವನ ಮುಂದಿನ ಜೀವನದ ಹೊರೆಯು ಅವರ ಮೇಲೆಯೇ ಬಿದ್ದಿತು. ಹೀಗಾಗಿ ಶಿವಲಿಂಗವ್ವನವರು ಎಲ್ಲ ಕಡೆಯಿಂದಲೂ ಪ್ರಾಪಂಚಿಕ ಸಂಕಷ್ಟಗಳಿಗೆ ಗುರಿಯಾದರು. ಎಂಥ ಕಷ್ಟಗಳು ಬಂದರೂ ಅವರು ತಮ್ಮ ನಾಮ, ನೇಮಗಳನ್ನು ಬಿಟ್ಟಿರಲಿಲ್ಲ. ಅವರ ಗುರುಭಕ್ತಿಯಲ್ಲಿ ಎಳ್ಳಷ್ಟೂ ಕೊರತೆಯಾಗಿರಲಿಲ್ಲ.

**ಅಳಿದು ಉಳಿದರು :** ಶಿವಲಿಂಗವ್ವನವರ ಆಧ್ಯಾತ್ಮಿಕ ಯೋಗ್ಯತೆಯ ಮತ್ತು ಅವರ ಪ್ರತಿಭಾಶಕ್ತಿಯ ಕೀರ್ತಿಯು ಜತ್ತಿಯಲ್ಲಿ ಪಸರಿಸಿತು. ತಮ್ಮ ಮನೆಯಲ್ಲಿ ತ್ರಿಕಾಲ ನೇಮ, ಭಜನೆ ಮತ್ತು ಶ್ರೀ ಸಮರ್ಥ ರಾಮದಾಸರ ಗ್ರಂಥವಾದ ದಾಸಬೋಧ ಮತ್ತು ಜ್ಞಾನೇಶ್ವರರ ಜ್ಞಾನೇಶ್ವರೀ ಗ್ರಂಥಗಳ ವಾಚನವನ್ನು ಅವರು ಇಟ್ಟುಕೊಂಡಿದ್ದರು. 'ದಾಸಬೋಧ' ಗ್ರಂಥದ ಆಧಾರದ ಮೇಲಿಂದ ಅವರು ಆಧ್ಯಾತ್ಮಿಕ ಪ್ರವಚನವನ್ನು ಮಾಡುತ್ತಿದ್ದರು. ಅವರ ಉಪನ್ಯಾಸ ಕೇಳಲು ಮತ್ತು ಅಲ್ಲಿ ನಡೆಯುತ್ತಿದ್ದ ಭಜನೆಗೆ ಜತ್ತಿಯಲ್ಲಿಯ ನಾಮಧಾರಿಗಳೆಲ್ಲ ಬರುತ್ತಿದ್ದರು. ಶಿವಲಿಂಗವ್ವನವರ ಮನೆಯು ಶ್ರೀ ಉಮದೀ ಮಹಾರಾಜರ ಭಕ್ತಿಯ ಕೇಂದ್ರವಾಗಿದ್ದಿತು. ಭಕ್ತರು ಕಾಯಿಕರ್ಪೂರಗಳನ್ನು ಸಲ್ಲಿಸಿ ಶ್ರೀ ಉಮದೀ ಮಹಾರಾಜರ ಹೆಸರಿನಿಂದ ಜಯಜಯಕಾರ ಮಾಡುತ್ತಿದ್ದರು. ಇದಕ್ಕೆ ಕಾರಣವ್ಯಕ್ತಿಯಾದ ಶಿವಲಿಂಗವ್ವನವರ ಭಕ್ತಿಯನ್ನು ಕಂಡು ಅವರ ಯೋಗ್ಯತೆಯನ್ನರಿತು ಅವರ ಪಾದಕ್ಕೆ ಬಿದ್ದು ನಮಸ್ಕಾರ ಮಾಡಹತ್ತಿದರು.

ಈ ಎಲ್ಲ ಮನ್ನಣೆಗೆ ಶ್ರೀ ಉಮದೀ ಮಹಾರಾಜರ ಕರುಣೆಯೇ ಕಾರಣವೆಂದು ಶಿವಲಿಂಗವ್ವನವರು ಭಾವಿಸಿದ್ದರು. ಜನರು ಬಂದು ತಮ್ಮ ಪಾದಮುಟ್ಟಿ ನಮಸ್ಕರಿಸುವುದು ತಮ್ಮ ಗುರುಗಳ ಕೃಪೆಯೆಂದೇ ಅವರ ಅಂತರಂಗದ ಒಳದನಿಯು ನುಡಿಯುತ್ತಿತ್ತು. ಆ ಮರ್ಯಾದೆಗಳು, ಆ ನಮಸ್ಕಾರಗಳು ತಮ್ಮ ಗುರುಗಳಾದ ಶ್ರೀ ಉಮದೀ ಮಹಾರಾಜರಿಗೆ ಸಲ್ಲತಕ್ಕವೆಂದು ಅವರ ತಿಳವಳಿಕೆಯಿದ್ದಿತು. ತಮ್ಮ ಮನದಲ್ಲಿಯ ಮೇಲಿನ ವಿಚಾರಗಳನ್ನು ಅವರು ಕೆಳಗಿನಂತೆ ಒಂದು ಕಾಗದ ಬರೆದು ತಮ್ಮ ಗುರುಗಳಲ್ಲಿ ಅರಿಕೆ ಮಾಡಿಕೊಂಡರು.

ಶ್ರೀ

"ಸದ್ಗುರುನಾಥ ಮಹಾರಾಜ, ತಮ್ಮ ಪಾದಕ್ಕೆ ಸಾಷ್ಟಾಂಗ ನಮಸ್ಕಾರ. ತಮ್ಮ ಕಡಿಂದ ಏನೇನು ಮಜಕೂರ ತಿಳಿಯತಕ್ಕದು. ಆ ಕಾರಣಕ್ಕೆ ಸರ್ವ ಭಾವದಾ ಪತ್ರ ಬರೆದು ನನಗೆ ತಿಳಿಸಬೇಕು. ತಮ್ಮ ಪಾದ ದಯದಿಂದ ಸರ್ವಮಂಡಳಿ ಸುಖ ಇದಾರ, ತ್ರಿಕಾಲ ನೇಮದೊಳಗ ಆನಂದ ಇದಾರು, ಭಕ್ತಿ-ಭಾವದಿಂದ ಭಜನಿ ಮಾಡತಿದೀವಿ. ಸರ್ವ ಮಂಡಳಿ ಭಜನಿಗೆ ಬರತಿದಾರೆ. ತಮ್ಮ ಹೆಸರ್ಲೆ ಕರ್ಪುರಾ ಹಚ್ಚತಿದ್ದಾರೆ, ಕಾಯಿ ಒಡೀತಿದ್ದಾರೆ, ಸಕ್ಕರಿ ಹಚ್ಚತಿದ್ದಾರೆ, ಬಹಳೆ ಪ್ರೇಮದಿಂದ ಗುರುವೆ ನಿಮ್ಮ ಭಕ್ತಿ ನಡಿಶಾರು. ಅಂದಮ್ಯಾಲೆ ಮಹಾ ಮಹಾ ಸಂಕಷ್ಟಗಳು ಗುರುವೆ ನಿಮ್ಮ ದಯದಿಂದ ದೂರ ಆದವು. ನಿನ್ನ ಕೃಪಾ ದೊಡ್ಡದು. ಗುರುವೆ ನಿನ್ನ ಮನೀಮಾತು ತಿಳಿಯತಕ್ಕದ್ದು. ದಯಾವಂತಾ, ಕೃಪಾವಂತಾ, ಕ್ಷಮಾವಂತಾ, ಭಾಗ್ಯವಂತಾ ನಿನ್ನ ದಯದಿಂದೆ ಸರ್ವಭಾಗ್ಯ ಎನಗೆ ದೋರೀತು. ನರದೇಹದೊಳಗ ನಾರಾಯಣ ರೂಪ ಸಾಕ್ಷಾತ್ ಪರಮಾತ್ಮನ ಗುರುವೆ ನಿನ್ನ ದಯದಿಂದ ಕಂಡೀವಿ. ಹಿಂತಾ ಅಪರೂಪ ಬದಕಾ ನಾಮಸ್ಮರಣೇ ನಿತ್ಯ ನೇಮದಿಂದ ತಪ್ಪಗೊಡದೆ ಸಾಧನದೊಳಗ ನಿಮಗ್ನ ಇದ್ದೀನು. ಇದಕ ತಮ್ಮ ಆಸರಾ ಪರಿಪೂರ್ಣ ಇರಬೇಕು. ಅಂದ ಮ್ಯಾಲೆ ನನಗ ಭಾಳ ತಿಳೂದಿಲ್ಲ. ಮಾನ ಮಾನ ಮಾಡಲಿಕ್ಕೆ ಹತ್ತಿದರ ಎನಗ ಅಂಜಿಕೆ ಬರುತ್ತದೆ. ಅಂದಮ್ಯಾಲೆ ಆ ವ್ಯಾಖ್ಯಾಕ್ಕೆ ಗುರುವೆ ನೀ ಬಂದು ಆ ಮಾನಕ್ಕೆ ಅಧಿಕಾರ ನೀನು, ಬಹಳ ನಿಮಗೆ ಏನು ಬೇಡಿಕೊಳ್ಳೋದು. ಅದು ನಿಮ್ಮ ಕೃಪಾ ಇರಲೆಂದು ಕೈಮುಗಿದು ಭಿಕ್ಷಾ ಬೇಡುತ್ತಿದ್ದೇನೆ. ಸದ್ಗುರುನಾಥಾ ಮಹಾರಾಜ ನಿಮ್ಮ ಪಾದಕ್ಕ ನಮಸ್ಕಾರ, ನಾನಾಸಾಹೇಬ ಮಹಾರಾಜರಿಗೆ ನಮಸ್ಕಾರ, ಕಾಶಕ್ಕಾಗ ನಮಸ್ಕಾರ, ಚಂದ್ರಕ್ಕಾಗ ನಮಸ್ಕಾರ".

ಶಿವಲಿಂಗವ್ವನವರ ಕೀರ್ತಿಯು ಜತ್ತಿ ಊರಲ್ಲಿ ಹರಡಿತು. ಶಿವಲಿಂಗವ್ವನವರ ಭಕ್ತಿಜ್ಞಾನದ ಬೆಳಕು ಜತ್ತಿಯ ಅರಮನೆಯಲ್ಲಿ ಬಿದ್ದಿತು. ಜತ್ತಿಯ ರಾಣೀಸಾಹೇಬರು ಶಿವಲಿಂಗವ್ವನವರನ್ನು ತಮ್ಮ ಅರಮನೆಗೆ ಬರಮಾಡಿಕೊಂಡು, ಅವರಿಂದ ಅಧ್ಯಾತ್ಮದ ವಿಷಯದ ಬಗ್ಗೆ ಮೋಲಿಲ್ಲದ ಮಾತುಗಳನ್ನು ಕೇಳುವರು. ಈ ರೀತಿ ಶಿವಲಿಂಗವ್ವನವರಿಗೆ ಜತ್ತಿ ಸಂಸ್ಥಾನಿಕರ ಅರಮನೆಯಲ್ಲಿ ಒಳ್ಳೇ ಮರ್ಯಾದೆಯ ಸ್ಥಾನವಿದ್ದಿತು. ಶಿವಲಿಂಗವ್ವನವರ ಪರಿಚಯವು ಹೆಚ್ಚಾದಂತೆ ರಾಣೀಸಾಹೇಬರಿಗೆ ಅವರ ಅರ್ಥಿಕ ತೊಂದರೆಯ ಸುಳಿವು ಹತ್ತಿತು. ಅವರ ಆರ್ಥಿಕ ತೊಂದರೆಯಲ್ಲಿ ತುಸು ಮಟ್ಟಿಗೆ ನೆರವಾಗಬೇಕೆಂಬ ಉದ್ದೇಶದಿಂದ ಜತ್ತಿಯ ರಾಣೀ ಸಾಹೇಬರು ಅವರಿಗೊಂದು ಕೆಲಸವನ್ನು ಕೊಡಿಸಿದರು. ಜತ್ತಿಯಲ್ಲಿಯ ಹೆಣ್ಣುಮಕ್ಕಳ ಶಾಲೆಯಲ್ಲಿ ಕಸೂತಿ ಕಲಿಸುವ ಶಿಕ್ಷಕಿಯೆಂದು ಶಿವಲಿಂಗವ್ವನವರ ನೇಮಕವಾಯಿತು. ಜತ್ತ ಸಂಸ್ಥಾನದ ಜಾವಕ ನಂ. ೪೨/೧೯೧೦–೧೧ ಪ್ರಕಾರ ದಿ. ೨೨–೬–೧೯೧೦ರಂದು ತಿಂಗಳೊಂದಕ್ಕೆ ರೂ. ೫/- ಸಂಬಳದ ಮೇಲೆ ಶಿವಲಿಂಗವ್ವನವರು ಶಿಕ್ಷಕಿಯೆಂದು ನೇಮಿಸಲ್ಪಟ್ಟರು. ಆಗ ಅವರು ೪೩ ವಯಸ್ಸಿನವರಿದ್ದರು. ಈ ಮೇಲಿನ ಘಟನೆಯಿಂದ ಶಿವಲಿಂಗವ್ವನವರಿಗೆ ಯಾವ ಬಗೆಯ ಪ್ರಾಪಂಚಿಕ ತೊಂದರೆಗಳಿದ್ದವೆಂಬುದರ ಕಲ್ಪನೆಯು ವಾಚಕರಿಗೆ ಬರಬಹುದು. ಬಂಗಾರದ ಶುದ್ಧತೆಯು ಅದನ್ನು ಬೆಂಕಿಯಲ್ಲಿಟ್ಟು ಕಾಯಿಸಿದಾಗ ಮಾತ್ರ ಗೊತ್ತಾಗುವುದು. ಅದರಂತೆ ಅಧ್ಯಾತ್ಮದ ಯೋಗ್ಯತೆಯು ಅಗ್ನಿದಿವ್ಯದಿಂದಲೇ ಗೊತ್ತಾಗುವುದೆಂಬುದನ್ನು ಶಿವಶರಣರ ದಾಸರ ಮತ್ತು ಸಂತರ ಜೀವನದಿಂದ ಕಂಡುಕೊಳ್ಳಬಹುದಾಗಿದೆ. ಅಧ್ಯಾತ್ಮ ಮಾರ್ಗವನ್ನು ಕ್ರಮಿಸುವ ಸಾಮಾನ್ಯವಾಗಿ ಎಲ್ಲ ಸಾಧಕರು ತಮ್ಮ ಭೌತಿಕ ಜೀವನದಲ್ಲಿ ಕಷ್ಟಗಳನ್ನು ಅನುಭವಿಸಿದುದನ್ನು ನಾವು ಕಾಣುತ್ತೇವೆ. ಪರಮಾತ್ಮನ ಆ ಕಠಿಣ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಅವನನ್ನೇ ಕೂಡಿಕೊಂಡು ಅವರು ಮಹಾಪುರುಷರೆನಿಸಿಕೊಂಡುದನ್ನೂ ನಾವು ಕಾಣುತ್ತೇವೆ. ಶ್ರೀ ಉಮದೀ ಮಹಾರಾಜರು ಶಿವಲಿಂಗವ್ವನವರ ಚಿಕ್ಕ ವಯಸ್ಸಿನಲ್ಲಿಯೇ ಅವರನ್ನು ತಾವಾಗಿಯೇ ಕರೆದು ಮೂಲಮಂತ್ರವನ್ನು ಅವರ ಕಿವಿಯಲ್ಲಿ ಊದಿದರು. ಮಕ್ಕಳ ಮರಣ, ಪತಿವಿರಹ, ಅಣ್ಣನ ಅಗಲುವಿಕೆ ಇತ್ಯಾದಿ ದಾರುಣ ದುಃಖದ ಪ್ರಸಂಗಗಳ ಜತೆಗೆ ಆರ್ಥಿಕ ತೊಂದರೆ, ಹೀಗೆ ತ್ರಿವಿಧ ತಾಪಗಳಲ್ಲಿ ಬೆಂದು ಬೆಂಡಾದರೂ ಅವುಗಳನ್ನು ಲೆಕ್ಕಿಸದೆ, ಯಾವುದೇ ತೊಂದರೆಗೆ ತಗ್ಗದೆ, ಅಧ್ಯಾತ್ಮದ ದಾರಿಯಿಂದ ಅವರ ಅತ್ತಿತ್ತ ಚಲಿಸಲಿಲ್ಲ. ಇಷ್ಟೇ ಅಲ್ಲ ಒಳ್ಳೇ ಸಾಹಸದಿಂದ ಮುನ್ನುಗ್ಗಿ ಕೈಲಾಸದ ಸುಖವನ್ನು ಸವಿದರು, ಆತ್ಮಪುರವನ್ನು ತಲುಪಿದರು.

**ಪ್ರತಿಭೆಯ ಪ್ರಭಾವ :** ಶಿವಲಿಂಗವ್ವನವರ ಇಚ್ಛಾಶಕ್ತಿಯು ಅಲೌಕಿಕವಾದದ್ದು. ಇಚ್ಛಾಶಕ್ತಿಯಿಲ್ಲದೆ ಮನುಷ್ಯನಿಂದ ಯಾವ ಕಾರ್ಯವೂ ಸಾಧ್ಯವಾಗಲಾರದು. ಬುದ್ಧಿ, ಭಾವಗಳಿದ್ದರೂ ಇಚ್ಛೆಯು ಬಲವತ್ತರವಾದರೆ ಮಾತ್ರ ಮನುಷ್ಯನು ಕಾರ್ಯಪ್ರವೃತ್ತ

ನಾಗುವನು. ಬುದ್ಧಿ, ಭಾವ ಮತ್ತು ಇಚ್ಛಾಶಕ್ತಿಗಳ ಜತೆಗೆ ಅವರಲ್ಲಿ ಕಾವ್ಯಪ್ರತಿಭೆಯೂ ಇದ್ದಿತು. ತಮ್ಮ ಎಲ್ಲ ಶಕ್ತಿಗಳನ್ನು ಆತ್ಮನನ್ನು ಸಾಧಿಸಿಕೊಳ್ಳುವಲ್ಲಿ ಅವರು ವ್ಯಯ ಮಾಡಿದರು. ಓರ್ವ ಮರಾಠಿ ಸಂತರು ಹೇಳುವ ಹಾಗೆ 'ನನ್ನಲ್ಲಿರುವ ಎಲ್ಲ ಶಕ್ತಿಗಳನ್ನು ಶ್ರೀಪತಿಗರ್ಪಿಸುವೆ'. ಶಿವಲಿಂಗವ್ವನವರು ತಮ್ಮಲ್ಲಿಯ ಬುದ್ಧಿ, ಭಾವ, ಇಚ್ಛಾ ಮತ್ತು ಪ್ರತಿಭಾಶಕ್ತಿಗಳನ್ನು ಪರಮಾತ್ಮನ ಸೇವೆಗಾಗಿ ಮುಡುಪಿಟ್ಟರು. ತಮ್ಮ ಆಂತರಿಕ ಪರಿವರ್ತನೆಯನ್ನು, ತಮ್ಮ ಗುರುಭಕ್ತಿಯನ್ನು ತಮ್ಮ ಆತ್ಮಿಕ ಅನುಭವಗಳನ್ನು, ಜನತೆಗೆ ಮಾಡಿದ ಉಪದೇಶವನ್ನು ಭಾವಪೂರ್ಣವಾಗಿ, ಓದುಗರ ಬುದ್ಧಿ ಮನಂಬೊಗುವಂತೆ ಒಳ್ಳೇ ಸಾಹಿತ್ಯ ಶೈಲಿಯಲ್ಲಿ, ಅಲಂಕಾರಯುಕ್ತವಾದ ಕಾವ್ಯರೀತಿಯಲ್ಲಿ, ಪದ್ಯರೂಪದಲ್ಲಿ, ಗದ್ಯಶೈಲಿಯಲ್ಲಿ, ಪತ್ರಗಳಲ್ಲಿ ವ್ಯಕ್ತಮಾಡಿದ್ದುದು ಕಂಡು ಬರುತ್ತದೆ. ಅವರ ಕೃತಿಗಳೆಂದರೆ ಕನ್ನಡದ ಅಧ್ಯಾತ್ಮ ಸಾಹಿತ್ಯಕ್ಕೆ ಒಂದು ಮಹಾಕೊಡುಗೆಯೆಂದೇ ಹೇಳಬೇಕು.

ಶ್ರೀ ಉಮದೀಮಹಾರಾಜರು ದೇಹದಿಂದಿರುತ್ತಿರುವಾಗಲೇ ಶಿವಲಿಂಗವ್ವನವರ ಕಾವ್ಯಶಕ್ತಿಗೆ ಕುಡಿಯೊಡೆಯಿತು. ಆಗಿಂದಲೇ ಅವರ ಅಧ್ಯಾತ್ಮಸಾಹಿತ್ಯ ರಚನೆ ಪ್ರಾರಂಭವಾಯಿತು. ಅವರು ತಮ್ಮ ಗುರುಗಳ ಹೆಸರಾದ 'ಶ್ರೀಉಮದೀಗುರು', 'ಗುರು ಭಾವುರಾಯ' ಇತ್ಯಾದಿಯಾಗಿ ತಮ್ಮ ಗುರುಗಳ ಹೆಸರನ್ನೇ ತಮ್ಮ ಕಾವ್ಯ ಮುದ್ರಿಕೆಯಾಗಿ ಬಳಸಿದುದು ಕಂಡುಬರುತ್ತದೆ. ಆದರೆ ಕೆಲವು ಪದ್ಯಗಳ ಮುದ್ರಿಕೆಯು 'ಗುರುಲಿಂಗ ಜಂಗಮ', 'ನಿಂಬರ್ಗಿ ಗುರು', 'ಗುರುಲಿಂಗ ಜಂಗಮ ಉಮದೀ ಸದ್ಗುರು' ಎಂದು ಇರುವುದು ಕಂಡುಬರುವುದು. 'ಏನೇನು ತಿಳಿಯುವುದಿಲ್ಲ ಈ ಲೋಕಕ್ಕೆಲ್ಲಾ' ಎಂಬ ಪದ್ಯದ ಕೊನೆಗೆ 'ಗುರುಲಿಂಗಜಂಗಮ ಉಮದೀ ಸದ್ಗುರು' ಎಂದೂ 'ಮಗಾ ಹುಟ್ಟಿದವ್ವಾ' ಎಂಬ ಪದ್ಯಕ್ಕೆ 'ನಿಂಬರ್ಗಿ ಗುರುತಂದಿ' ಎಂದೂ ಮುದ್ರಿಕೆಗಳಿರುವುದನ್ನು ಕಾಣಬಹುದು. 'ಸೈಸೈ ಕುಂತಿದೆನೆ' ಎಂಬ ಅವರ ಪ್ರಸಿದ್ಧವಾದ ಪದದ ಮುದ್ರಿಕೆಯು 'ಗುರು ನಿಂಬರ್ಗಿ ಮಹಾರಾಜ ಸಾಧೂರು' ಎಂದಿದೆ. ಬೇರೆ ಎಲ್ಲ ಪದ್ಯಗಳಿಗೆ ಆರತಿ ಮತ್ತು ಜೋಗುಳಗಳಿಗೆ 'ಉಮದೀ ಗುರು' 'ಉಮದೀ ಸದ್ಗುರು' ಎಂದೇ ಮುದ್ರಿಕೆಯು ಇರುವುದು.

ಮೇಲೆ ಶ್ರೀ ನಿಂಬರ್ಗಿ ಮಹಾರಾಜರ ಹೆಸರಿನ ಮುದ್ರಿಕೆಗಳುಳ್ಳ ಪದಗಳು ಅವರ ಪ್ರಥಮ ಕೃತಿಗಳಿರಬಹುದೆಂದು ಕೆಳಗಿನ ಒಂದು ಘಟನೆಯಿಂದ ಊಹಿಸಲು ಅವಕಾಶವಿದೆ. ತಾವು ಪದ್ಯರಚನೆಗೆ ಪ್ರಾರಂಭ ಮಾಡಿದ ಮೇಲೆ ಅವರು ತಾವು ಬರೆದ ಪದ್ಯಗಳನ್ನು ಶ್ರೀಉಮದೀ ಮಹಾರಾಜರಿಗೆ ಓದಿ ತೋರಿಸಿದರು. ಅವನ್ನು ಕೇಳಿ ಮಹಾರಾಜರಿಗೆ ಆನಂದವಾಯಿತು. ಶಿವಲಿಂಗವ್ವನವರ ಪದ್ಯರಚನೆಗೆ ಅವರು ಒಪ್ಪಿಗೆಯನ್ನಿತ್ತರು; ಆ ಪದ್ಯದ ಕೊನೆಗಿದ್ದ ತಮ್ಮ ಹೆಸರು ಅವರಿಗೆ ಒಪ್ಪಿತವಾಗಲಿಲ್ಲ. ತಮ್ಮ

ಹೆಸರನ್ನು ಉಪಯೋಗಿಸದೆ ಪದ್ಯ ರಚನೆ ಮಾಡಲು ಶಿವಲಿಂಗವ್ವನವರಿಗೆ ಮಹಾರಾಜರು ಅನುಮತಿಯನ್ನಿತ್ತರು. ಉಮದೀಮಹಾರಾಜರ ಮುದ್ರಿಕೆಯುಳ್ಳ ಪದ್ಯಗಳನ್ನು, ಅವರ ನಿರ್ಯಾಣದ ತರುವಾಯ ಶಿವಲಿಂಗವ್ವನವರು ರಚಿಸಿರ ಬಹುದೆಂದು ತೋರುವುದು.

ಇಂಚಗೇರಿಯಲ್ಲಿ ಜರುಗುತ್ತಿದ್ದ ಶ್ರಾವಣ ಮಾರ್ಗಶೀರ್ಷ ಮತ್ತು ಚೈತ್ರ ಸಪ್ತಾಹ ಗಳಿಗೆ ಸಾಮಾನ್ಯವಾಗಿ ಹೋಗುವ ರೂಢಿಯನ್ನು ಶಿವಲಿಂಗವ್ವನವರು ಇಟ್ಟು ಕೊಂಡಿದ್ದರು. ಆ ಸಪ್ತಾಹಗಳಿಂದ ತಮಗಾದ ಲಾಭವನ್ನು, ಸಂತಸಂಗತಿಯಿಂದ ತಮಗಾದ ಆನಂದವನ್ನು ಕುರಿತು ಭಾವಪೂರ್ಣವಾಗಿ ಪದ್ಯರೂಪದಲ್ಲಿ 'ಸಾಧೂರ ಸಂಗತಿ ಸದಾನಂದಾ ಸದ್ಗುರು ವಸ್ತು ನಿಜಾನಂದಾ' ಎಂದು ಅವರು ತಮ್ಮ ಅನುಭವವನ್ನು ವ್ಯಕ್ತಮಾಡಿರುವರು. ಸಾಧುರಸಂಗತಿಯಿಂದ ಪಾಪದ ಖಂಡನವಾಯಿತು ಎಂದು ಹೇಳುವರು. 'ಗುರುಪಾದದ ದರ್ಶನ, ಸಾಧುಗಳ ಭೇಟಿ, ಆನಂದ ವೃಷ್ಟಿ' ಎಂದು ಅವರು ವರ್ಣಿಸಿದುದು ಯಥಾರ್ಥವಾಗಿದೆ. ಅಖಂಡಸಾಧನ, ಸದ್ಗುರುಗಳ ದರ್ಶನ, ಮತ್ತು ಸಂತರ ಸಮಾಗಮದ ಆನಂದವೆಂಬ ತ್ರಿವೇಣಿ ಸಂಗಮದಲ್ಲಿ ಮಿಂದು ಸದ್ಗುರು ವಸ್ತುವಿನ ನಿಜಾನಂದವನ್ನು ಅನುಭವಿಸುತ್ತ ಶಿವಲಿಂಗವ್ವನವರು ಸಪ್ತಾಹದ ಕಾಲದ ತಮ್ಮ ಅನುಭವವನ್ನು ಕಾವ್ಯಶೈಲಿಯಲ್ಲಿ ಪದ್ಯರೂಪದಲ್ಲಿ ವರ್ಣಿಸಿರುವರು.

ಇಂಚಗೇರಿಯಲ್ಲಿ ಆಗ್ಗೆ ಜರುಗುತ್ತಿದ್ದ ಶ್ರಾವಣಮಾಸದ ಸಪ್ತಾಹದ ವಾಸ್ತವ ವರ್ಣನೆಯನ್ನು ಅವರು ಒಳ್ಳೇ ಸ್ವಾರಸ್ಯಮಯವಾಗಿ, ಸಾಹಿತ್ಯಪ್ರಚುರ ರೀತಿಯಲ್ಲಿ ವರ್ಣಿಸಿರುವರು. ಅವರ ವರ್ಣನಾ ಕೌಶಲ್ಯವು ಅದರಲ್ಲಿ ಒಡೆದು ಕಾಣುವಂತಿದ್ದು ಪ್ರಾಸಾಲಂಕಾರಗಳು ಸಹಜವಾಗಿ ಅವರ ಲೆಕ್ಕಣಿಕೆಯಿಂದ ಹೊರಚಿಮ್ಮುವಂತೆ ತೋರುವುದು. 'ಪೂಜೆಯ ಮಾಡುವ ಪುಸ್ತಕ ಓದುವ ಪುರುಷರ ನೋಡುಣು ಬಾ' 'ಶ್ರಾವಣ ಮಾಸಾ ನಾಮದ ಘೋಷಾ ಸ್ಮರಣೀಯ ಮಾಡುಣು ಬಾ' ಎಂದು ಶ್ರಾವಣ ಮಾಸದಲ್ಲಿಯ ಮುಖ್ಯ ಕಾರ್ಯಕ್ರಮಗಳನ್ನು ಹೇಳುವುದರ ಜತೆಗೆ 'ಕರ್ಪುರ ಊದಬತ್ತಿ ಸುಗಂಧ ಓಡದ್ಯೆತಿ ಬೇಗನೆ ಹೋಗೋಣು ಬಾ' ಎಂದು ಅಲ್ಲಿಯ ಪರಿಸರದ ವರ್ಣನೆಯನ್ನು ಒಂದೇ ವಾಕ್ಯದಲ್ಲಿ ಮಾಡಿದುದು ಕಂಡು ಬರುತ್ತದೆ. 'ಉತ್ಸವ ನೋಡುಣು ಬಾ ಮುಕ್ತಿಯ ಪಡಿಯೋಣು ಬಾ' ಎಂದು ಶ್ರಾವಣಮಾಸ ಸಪ್ತಾಹದ ಮಹತ್ವವನ್ನು ಅವರು ಮೇಲಿನ ವಾಕ್ಯದಲ್ಲಿ ಹೇಳಿರುವರು. ಶ್ರಾವಣ ಸಪ್ತಾಹದ ಕಾಲದಲ್ಲಿ 'ಶಿವಲಿಂಗವ್ವಾ ಒಂದು ಪದ ಹೇಳವಾ' ಎಂದು ಶ್ರೀ ಉಮದೀ ಮಹಾರಾಜರು ಹೇಳಿದರೆ ಮಾತ್ರ ಅವರು ಹಾಡಹೇಳುವರು.

**ಆಧ್ಯಾತ್ಮಿಕ ಅನುಭವ :** ಅಂತರಂಗದಲ್ಲಿಯ ಅಹಂಕಾರವನ್ನು ಅಳಿದು ತನುಮನ ಗಳನ್ನು ಗುರುನಾಮಕ್ಕರ್ಪಿಸಿ, ಭಕ್ತಿಸಾಧನ ಮಾಡುತ್ತಿರುವಂತೆ ಶಿವಲಿಂಗವ್ವನವರು

ಆತ್ಮನ ಅನುಭವದ ಆನಂದವನ್ನು ಸವಿಯಹತ್ತಿದರು. ನಾದ, ರಸ, ರೂಪ, ಗಂಧ, ಸ್ಪರ್ಶಾದಿ ಅನುಭವಗಳನ್ನು ತಾವು ಪಡೆದ ಬಗ್ಗೆ ಅವರು ಹೇಳುವರು. ಅವರ ದೃಶ್ಯಾನುಭವ ಗಳಲ್ಲಿ ವಿವಿಧತೆ ಕಂಡುಬರುತ್ತದೆ. ಮುತ್ತಿನಂತೆ ಪರಮಾತ್ಮನ ರೂಪವನ್ನು ಕಂಡ ಬಗ್ಗೆ ಅನೇಕ ಕಡೆಗೆ ಅವರು ಹೇಳಿದುದು ಕಾಣುವುದು. ಪುರಂದರದಾಸರು, ಚಿದಾನಂದರು ಸಹ ಮುತ್ತಿನ ಅನುಭವದ ಬಗ್ಗೆ ಹೇಳುವರು. 'ಹತ್ತರೊಳಗೊಂದು ಮುತ್ತಿನ ಮೂಗುತಿ ಚಂದ' ಎಂದೂ, 'ಮುತ್ತಿನ ಮೂಗುತಿ ಮೂಗಿನಲ್ಲಿಟ್ಟು' ಎಂದೂ 'ತೊಟ್ಟಿಲ ಸುತ್ತೆಲ್ಲ ಮುತ್ತಿನ ಗೊಂಚಲ' ಎಂದೂ ವಿವಿಧ ರೀತಿಯಲ್ಲಿ ಮುತ್ತಿನ ಅನುಭವವನ್ನು ಕುರಿತು ಶಿವಲಿಂಗವ್ವನವರು ಹೇಳುವರು. ದುಃಖದಲ್ಲಿ ಸುಖವನ್ನು ಕಂಡು ಶಿವಲಿಂಗವ್ವನವರು ಶಿವಸ್ವರೂಪವನ್ನು ಬಾಲರೂಪದಲ್ಲಿ ಕಂಡರು. 'ಮಗಾ ಹುಟ್ಟಿದವ್ವಾ' ಎಂದು ಹಾಡಿದರೆ, 'ಸಾಕು ಹುಟ್ಟಿದ ಉದರಲಿ ಒಬ್ಬ ಪುತ್ರ' ಎಂದು ತಮ್ಮ ಸಂತೃಪ್ತಿಯನ್ನು ವ್ಯಕ್ತಮಾಡಿದರು. 'ಯಾ ನಿಶಾ ಸರ್ವ ಭೂತಾನಾಂ ತಸ್ಯಾಂ ಜಾಗೃತಿ ಸಂಯಮಿ' ಎಂದು ಭಗವದ್ಗೀತೆ ಯಲ್ಲಿ ಹೇಳಿದುದನ್ನು ಶಿವಲಿಂಗವ್ವನವರು ತಾವು ಕೃತಿಯಲ್ಲಿ ತಂದ ಬಗ್ಗೆ 'ಶಯನವ ಮಾಡುತ ಗುಪ್ತದೊಳ್ ನಾಮವ ಬಲಿಸುತ। ಚಕ ಚಕ ಏಳುತ, ಝಗ ಝಗ ಹೊಳೆವುತ', ಎಂದು ತಮ್ಮ ರಾತ್ರಿಯಲ್ಲಿಯ ನಾಮ ಸಾಧನದ ಬಗ್ಗೆ ಮತ್ತು ಕತ್ತಲೆಯೆಂಬುದನ್ನು ತಾವು ಕಾಣರೆಂದು ಹೇಳುವರು. ಒಳ್ಳೇ ಪ್ರಚಾರದಲ್ಲಿರುವ ಅವರ ಪದ್ಯಗಳಾದ 'ಮಗಾ ಹುಟ್ಟಿದ್ವಾ' ಮತ್ತು 'ಸ್ಯೆಸ್ಯೆ ಕುಂತಿದೆನೆ' ಇವು ಶಿವಲಿಂಗವ್ವನವರ ವೈವಿಧ್ಯಪೂರ್ಣವಾದ ಅನುಭವಗಳನ್ನು ವರ್ಣಿಸುವವು. ಅವರ ಜೋಗುಳ ಪದ್ಯಗಳಾದ 'ಎದ್ದಫಳಗಿ ಮೊದಲ' ಮತ್ತು 'ಒಂಬತ್ತು ಖಿಡಕಿಯ ಫಡಕಿನ ತೊಟ್ಟಿಲ' ಇವು ಅವರ ಶ್ರೇಷ್ಠ ಅನುಭವಗಳ ವಿವರಣೆಯ ಜತೆಗೆ ಅವರ ಪ್ರತಿಭೆಯನ್ನು ಪ್ರತಿಬಿಂಬಿಸುವವು. ಶಿವಲಿಂಗವ್ವನವರ ಪದಗಳ, ವಚನಗಳ ಮತ್ತು ಅವರ ಇತರ ಸಾಹಿತ್ಯದ ವಿವರವಾದ ಚರ್ಚೆಯನ್ನು ಭಾಗ-೨ರಲ್ಲಿ ವಿವರಿಸಲಾಗಿದೆ. ಸಾಕ್ಷಾತ್ಕಾರದ ಶಿಖರವೆಂದು ತಿಳಿಯಲಾದ ಆತ್ಮ ಸ್ವರೂಪದ ಅನುಭವವು ತಮಗೆ ಬಂದ ಬಗ್ಗೆ ಅವರು ತಮ್ಮ ಒಂದು ಮರಾಠಿ ಪದ್ಯದಲ್ಲಿ 'ನನ್ನ ರೂಪಕ್ಕೂ ಆ ರೂಪಕ್ಕೂ ಭಿನ್ನವಿಲ್ಲ' ಎಂದು ಬರೆದುದನ್ನು ನಾವು ವಾಚಕರ ಗಮನಕ್ಕೆ ತರಬಯಸುತ್ತೇವೆ. ಹೀಗೆ ಅತೀಂದ್ರಿಯ ಸುಖವನ್ನುಂಡು ಆತ್ಮಸ್ವರೂಪದ ಅನುಭವದ ಆನಂದವನ್ನು ಸವಿಯುತ್ತಿರುವಂತೆ ಅವರ ಸ್ಮರಣವು ಅಖಂಡವಾಗಿ ಸಾಗಿತು. 'ನಿತ್ಯನೇಮದೊಳಗೆ ತಪ್ಪಗೊಡದೆ ಸಾಧನದೊಳಗ ನಿಮಗ್ನ ಇದ್ದೀನು' ಎಂದು ಅವರು ತಮ್ಮ ಗುರುಗಳಿಗೆ ಕಾಗದ ಬರೆದು ತಿಳಿಸಿರುವುದು ಅವರ ಅಖಂಡ ನಾಮಸ್ಮರಣೆಯ ನಿದರ್ಶನವಾಗಿದೆ. ಆದರೆ ಅದರ ಅಹಂಕಾರವು ಮಾತ್ರ ಅವರಲ್ಲಿ ಇರಲಿಲ್ಲ. ಅಖಂಡ ಸ್ಮರಣೆಯು ಕೊನೆಯ ಕೊನೆಯ ಘಳಿಗೆಯವರೆಗೆ ಸಾಧಿಸಬೇಕಾದರೆ ಗುರುಗಳ ಕೃಪೆ ಬೇಕೆಂದು ಅವರು ಹೇಳುವರು.

ತಮ್ಮ ಕಠೋರ ತಪಸ್ಸು ಮತ್ತು ಅಚಲವಾದ ಗುರುಭಕ್ತಿಯಿಂದ ಶಿವಲಿಂಗವ್ವನವರು ತಮ್ಮ ಗುರುಗಳ ಪ್ರೀತ್ಯಾದರಗಳಿಗೆ ಪಾತ್ರರಾದರು. ಶ್ರೀಸಮರ್ಥ ರಾಮದಾಸರ ಶಿಷ್ಯಿಣಿಯರಾದ ವೇಣು ಅಕ್ಕಾ ಇದ್ದಂತೆ ಶ್ರೀ ಉಮದೀ ಮಹಾರಾಜರ ಶಿಷ್ಯರಲ್ಲಿ ಶಿವಲಿಂಗವ್ವನವರೆಂದು ಗುರುದೇವ ರಾನಡೆಯವರು ನಿತ್ಯನೇಮಾಲಿಯ ಪಂಚ ಸಮಾಸಗಳಲ್ಲಿಯ ನಾಲ್ಕನೇ ಸಮಾಸದಲ್ಲಿ ಬರೆದಿರುವರು. ಶ್ರೀ ಉಮದಿ ಮಹಾರಾಜರು ಭಕ್ತಿಪ್ರಸಾರದ ಮಹಾಕಾರ್ಯಕ್ಕಾಗಿ ತಮ್ಮ ಶಿಷ್ಯರ ವಿನಂತಿಯ ಮೇಲಿಂದ ಪ್ರವಾಸ ಕೈಕೊಂಡು ಭಕ್ತಿಪ್ರಸಾರದ ಕಾರ್ಯವನ್ನು ಮಾಡುವ ವಾಡಿಕೆಯಾಗಿದ್ದಿತು. ತಮ್ಮ ಪ್ರವಾಸದಲ್ಲಿ ತಮ್ಮ ಜತೆ ಕೆಲವು ಶಿಷ್ಯರನ್ನು ಕರೆದುಕೊಂಡು ಹೋಗುವ ರೂಢಿಯನ್ನು ಅವರು ಇಟ್ಟುಕೊಂಡಿದ್ದರು. ಕೆಲವು ಸಲ ಅವರು ತಮ್ಮ ಸಂಗಡ ಶಿವಲಿಂಗವ್ವನವರನ್ನು ಕರೆದುಕೊಂಡು ಹೋದುದು ಕಂಡು ಬರುತ್ತದೆ. ಶಿವಲಿಂಗವ್ವನವರು ಜಮಖಂಡಿಗೆ ಹೋಗಿದ್ದರೆಂಬುದು ಅವರು ನಂದೆಪ್ಪಣ್ಣನವರಿಗೆ ಬರೆದ ಪತ್ರದ ಮೇಲಿಂದ ತಿಳಿದು ಬರುವಂತಿದೆ. 'ನಾನು ಹೊರಡುವ ಕಾಲಕ್ಕೆ ಸಿದ್ದವ್ವಾ ತಾಯಿಯವರು ಬಹಳ ಅಳುತ್ತಿದ್ದರು. ಅವರಿಗೆ ಆನಂದ ಆನಂದವೆಂದು ಹೇಳಬೇಕು' ಎಂದು ಅವರು ಜಮಖಂಡಿಯ ವಿಳಾಸದ ಮೇಲೆ ನಂದೆಪ್ಪಣ್ಣನವರಿಗೆ ಪತ್ರ ಬರೆದಿರುವುದು ಕಂಡುಬರುವುದು.

ಕ್ರಿ.ಶ. ೧೯೦೯-೧೯೧೦ರಲ್ಲಿ ಶ್ರೀ ಉಮದೀ ಮಹಾರಾಜರು ತಮ್ಮ ಶಿಷ್ಯರಲ್ಲಿ ಕೆಲವರನ್ನು ಸಂಗಡ ಕರೆದುಕೊಂಡು, ತಮ್ಮ ಹರಕೆಯನ್ನು ಸಲ್ಲಿಸಲು ಪಂಢರಪುರಕ್ಕೆ ಹೋಗಿದ್ದರು. ಆ ಶಿಷ್ಯರಲ್ಲಿ ಶಿವಲಿಂಗವ್ವನವರೂ ಇದ್ದರು. ದೀಡ ನಮಸ್ಕಾರದ ತಮ್ಮ ಹರಕೆಯನ್ನು ಸಲ್ಲಿಸಿದ ಮೇಲೆ, ಮಹಾರಾಜರು ಗರ್ಭಗುಡಿಯಲ್ಲಿ ಹೋಗಿ ಪಾಂಡುರಂಗ ಮೂರ್ತಿಗೆ ಆಲಿಂಗನ ಕೊಟ್ಟರು. ಆ ಕಾಲದ ದೃಶ್ಯವನ್ನು ಅಪೂರ್ವವೆಂದು, ತಮ್ಮ ಅಧ್ಯಾತ್ಮ ದೃಷ್ಟಿಗೆ ಬಂದ ಅನುಭವವನ್ನು ಒಂದು ಪತ್ರದಲ್ಲಿ ಬರೆದು ಶಿವಲಿಂಗವ್ವನವರು ತಿಳಿಸಿರುವರು. 'ಮಹಾರಾಜರ ಮತ್ತು ವಿಠ್ಠಲನ ಭೇಟಿಯಾಯಿತು. ಹೂಮಳೆಗರೆಯಿತು. ನೋಡಿದವರಿಗೆ ಮಾತ್ರ ಅದು ಗೋಚರವಾಯಿತು' ಎಂದು ಅವರು ಬರೆದಿರುವರು. ಶಿವಲಿಂಗವ್ವನವರ ದಿವ್ಯದೃಷ್ಟಿಗೆ ಆ ದೃಶ್ಯವು ಕಾಣಿಸಿಕೊಂಡಿರಲಿಕ್ಕೆ ಸಾಕು. 'ಆವದೇಶದ ಹೂವಿದ್ದಾವ' ಎಂಬ ತಮ್ಮ ಪದ್ಯದಲ್ಲಿ ದೇವಲೋಕದ ಹೂಮಳೆಗರೆಯುವ ಅನುಭವವು ತಮಗೆ ಬಂದ ಬಗ್ಗೆ ಅವರು ಹೇಳುವರು, ಪಾಂಡುರಂಗ ಮತ್ತು ಮಹಾರಾಜರು ಒಂದಾದರೆಂದು ಅವರು ಬರೆಯುವರು. ಶ್ರೀಉಮದೀ ಮಹಾರಾಜರಿಗೆ ಬಂದ ಅನುಭವವನ್ನು ಶಿವಲಿಂಗವ್ವನವರು ಕಂಡಂತೆ ಕಾಣುತ್ತದೆ. ಇಂಥ ಅನುಭವಗಳು ಬಂದ ಬಗ್ಗೆ ಆಧಾರಗಳು ಇಲ್ಲದೆ ಇಲ್ಲ. ನಾಮದೇವರೆಂಬ ಮಹಾರಾಷ್ಟ್ರ ಸಂತರು ಕೀರ್ತನ ಹೇಳುತ್ತಿರುವಲ್ಲಿ ಪಾಂಡುರಂಗನು ಕುಣಿಯುತ್ತಿರುವುದನ್ನು ಜನಾಬಾಯಿಯು

ತಾನು ಕಂಡ ಬಗ್ಗೆ ಬರೆಯುವಳು. ಭಗವದ್ಗೀತೆಯಲ್ಲಿಯ ಸಂಜಯನು ಅರ್ಜುನನನ್ನು ಮತ್ತು ವಿಶ್ವರೂಪವನ್ನು ಕಂಡನು. ಅದೇ ಪ್ರಕಾರದ ಅನುಭವವನ್ನು ಶಿವಲಿಂಗವ್ವನವರು ಪಡೆದಿರಬಹುದೆಂದು ಹೇಳಬಹುದು.

**ಗುರು ಬಂಧು ಭಗಿನೀ ಸಂಬಂಧ :** ಶಿವಲಿಂಗವ್ವನವರ ಆಧ್ಯಾತ್ಮಿಕ ಜೀವನದಲ್ಲಿ ಅತ್ಯಧಿಕ ಸಂಬಂಧಬಂದ ವ್ಯಕ್ತಿಗಳಲ್ಲಿ ಗುರುದೇವ ರಾನಡೆಯವರು ಒಬ್ಬರು. ಶಿವಲಿಂಗವ್ವನವರು ಗುರುದೇವ ರಾನಡೆಯವರನ್ನು ಮೊದಲು ಕಂಡದ್ದು ಕ್ರಿ.ಶ. ೧೯೧೦ರ ಶ್ರಾವಣ ಮಾಸದಲ್ಲಿ, ಅದು ಇಂಚಗೇರಿ ಮಠದಲ್ಲಿ. ಆದರೆ ಗುರುದೇವ ರಾನಡೆಯವರು ಕಾಯಿಲೆಯಿಂದ ತೀರ ಅಶಕ್ತರೂ, ಕೃಶರೂ ಆದುದರಿಂದಲೂ, ಗುರುದೇವ ರಾನಡೆಯವರು ಇಂಚಗೇರಿಗೆ ಬಂದುದು ಅದೇ ಮೊದಲು ಸಲವಾದುದರಿಂದಲೂ, ಅವರಿಗೂ ಮತ್ತು ಶಿವಲಿಂಗವ್ವನವರಿಗೂ ಪರಸ್ಪರ ಭೇಟಿಯ ಪ್ರಸಂಗವೊದಗಿರಲಿಲ್ಲ. ಆದರೆ ಶಿವಲಿಂಗವ್ವನವರ ಆಧ್ಯಾತ್ಮಿಕ ಯೋಗ್ಯತೆಯನ್ನು ಗುರುದೇವ ರಾನಡೆಯವರು ಕೇಳಿ ತಿಳಿದುಕೊಂಡಿದ್ದರು. ಅವರನ್ನು ಕಾಣಬೇಕೆಂಬ ಹಂಬಲವೂ ಅವರಲ್ಲಿ ಇದ್ದಿತು. ಅವರ ಈ ಬಯಕೆಯು ಕ್ರಿ.ಶ. ೧೯೧೩ರರ ಮಾರ್ಗಶೀರ್ಷ ಸಪ್ತಾಹದ ಕಾಲದಲ್ಲಿ ಈಡೇರಿತು. ಅದರ ಬಗ್ಗೆ ಅವರು ಶಿವಲಿಂಗವ್ವನವರಿಗೆ ಕೆಳಗಿನ ಪತ್ರವನ್ನು ಬರೆದಿರುವರು.

"ಶ್ರೀ ಸದ್ಗುರು ಸಮರ್ಥ"

೨೦-೧೨-೧೯೧೩

"…..ತಮ್ಮನ್ನು ಬೀಳ್ಕೊಂಡು ಹೊರಟವನು ನಾನು ಗುರುವಾರ ಬೆಳಿಗ್ಗೆ ಇಲ್ಲಿ ಸುಖರೂಪವಾಗಿ ಬಂದು ತಲುಪಿದೆನು….ತಮ್ಮನ್ನು ಕಾಣಬೇಕೆಂಬ ಇಚ್ಛೆ ಬಹುದಿನದಿಂದ ಇದ್ದಿತು. ಹೋದ ಮಾರ್ಗಶೀರ್ಷ ಸಪ್ತಾಹದ ಕಾಲಕ್ಕೆ ಅದು ಈಡೇರಿದುದನ್ನು ನೋಡಿ ನನಗೆ ಬಹಳ ಆನಂದವಾಗಿದೆ. 'ಮನಸಿಗಿಂದಾಯಿತು ಪರಮಾನಂದಾ ಈ ಸಂತರ ಭೇಟಿಯಾದು ದರಿಂದ' ಜ್ಞಾನೇಶ್ವರರ ಈ ವಚನದಂತೆ ತಮ್ಮ ಸಂದರ್ಶನದಿಂದ ಪರಮಾನಂದವಾಗಿದೆ. ಆತ್ಮನ ದಾರಿಯನು ತುಳಿದು, ಆತ್ಮಾನುಭವದ ಶ್ರೇಷ್ಠ ಪದವಿಯನ್ನು ಪಡೆದವರಾದ, ಗುರುಪ್ರಚೀತಿ, ಆತ್ಮಪ್ರಚೀತಿಗಳ ಐಕ್ಯವನ್ನು ಸಾಧಿಸಿದ ತಮ್ಮಂಥ ಸಂತರು ಈ ಜಗತ್ತಿಗೆ ಹಾಕಿಕೊಟ್ಟ ಪಾಠವನ್ನು ಪಠಿಸುವುದೇ ನನ್ನಂಥ ಅಜ್ಞಜನರ ಕರ್ತವ್ಯವಾಗಿದೆ."

ಆತ್ಮಜ್ಞಾನ ಮತ್ತು ಆತ್ಮಜ್ಞಾನದ ಪ್ರಸಾರ ಇವುಗಳನ್ನೆ ತಮ್ಮ ಗುರಿಯನ್ನಾಗಿ ಇರಿಸಿಕೊಂಡ ಗುರುದೇವ ರಾನಡೆಯವರು ಶಿವಲಿಂಗವ್ವನವರ ಅಧ್ಯಾತ್ಮದ ಯೋಗ್ಯತೆಯನ್ನು ಕುರಿತು ತಮಗಾದ ಆನಂದ ಮತ್ತು ಅವರ ವಿಷಯ ತಮ್ಮಲ್ಲಿರುವ

ಆದರ ಭಾವನೆಗಳನ್ನು ಮೇಲಿನ ಪತ್ರದಲ್ಲಿ ವಿವರಿಸಿರುವರು. ಗುರುದೇವ ರಾನಡೆಯವರ ಮನದಲ್ಲಿ ಮೂಡಿದ ಶಿವಲಿಂಗವ್ವನವರ ವಿಷಯದ ಆದರ ಭಾವವು ದಿನದಿನಕ್ಕೆ ಬೆಳೆಯುತ್ತಲೇ ಹೋಯಿತೆಂಬುದು, ಪರಸ್ಪರರಲ್ಲಿ ನಡೆದ ಪತ್ರವ್ಯವಹಾರ ಮತ್ತು ಅವರ ಜೀವನದಲ್ಲಿಯ ಮುಂದಿನ ಘಟನೆಗಳಿಂದ ತಿಳಿದು ಬರುವಂತಿದೆ. ಗುರುದೇವ ರಾನಡೆಯವರಂಥ ಸುಶಿಕ್ಷಿತರೂ, ಬುದ್ಧಿವಂತರೂ, ಸಾಧಕರೂ ಆದ ಗುರು ಬಂಧುಗಳ ಪರಿಚಯ ತಮಗಾದ ಬಗ್ಗೆ ಶಿವಲಿಂಗವ್ವನವರಿಗೆ ಹಿಡಿಸಲಾರದ ಆನಂದವಾಯಿತು.

ಗುರುದೇವ ರಾನಡೆಯವರಂಥ ವ್ಯಕ್ತಿಯ ಪರಿಚಯವು ತಮಗಾದ ಬಗ್ಗೆ ಆನಂದ ಪಡುತ್ತಿರುವಾಗಲೇ, ಹಿರಿದಾದ ದುಃಖದ ಪ್ರಸಂಗವು ಶಿವಲಿಂಗವ್ವನವರ ಮುಂದೆ ನಿಂತಿದ್ದಿತು. ಕ್ರಿ.ಶ. ೧೯೧೪ರ ಮಾರ್ಗಶೀರ್ಷ ಸಪ್ತಾಹದ ಅವಧಿಯಲ್ಲಿಯೇ ಮಹಾರಾಜರ ಮೈಯಲ್ಲಿ ಸರಿಯಾಗಿರಲಿಲ್ಲ. ಆದರೆ ಅವರು ಅದನ್ನು ಅದನ್ನು ಯಾರಿಗೂ ತಿಳಿಯಗೊಡಲಿಲ್ಲ. ಮಾರ್ಗಶೀರ್ಷ ಸಪ್ತಾಹವು ಮುಗಿದಮೇಲೆ ಮಹಾರಾಜರು ಉಮದಿಗೆ ಹೋದರು. ಅಲ್ಲಿಂದ ಅವರು ತಮ್ಮ ಯಾವುದೋ ಕೆಲಸಕ್ಕಾಗಿ ಜತ್ತಿಗೆ ತಮ್ಮ ಚಿರಂಜೀವರಾದ ಕೃಷ್ಣಾಜಿಪಂತರ ಕಡೆಗೆ ಹೋದರು. ಜತ್ತಿಯಲ್ಲಿಯ ಕೆಲಸವನ್ನು ತೀರಿಸಿಕೊಂಡು ಎತ್ತಿನ ಬಂಡಿಯಲ್ಲಿ ಮಹಾರಾಜರು ಇಂಚಗೇರಿಗೆ ಹೊರಟರು. ಆಗ ಅವರ ಜತೆ ಹಣಮಂತರಾವ ಕನ್ನೂರ, ಶಿವಲಿಂಗವ್ವ, ಕೋಳಗೇರಿ ಬಸಪ್ಪಾ ಮತ್ತು ನಂದೆಪ್ಪಾ ನ್ಯಾಮಗೌಡ ಇಷ್ಟು ಜನರಿದ್ದರು. ಇವರಲ್ಲಿ ಮಹಾರಾಜರ ಚಿರಂಜೀವರಾದ ಭೀಮರಾವ ಅವರೂ ಇದ್ದರು. ದಾರಿಯಲ್ಲಿ ಕೋಳಗೇರಿಗೆ ಒಂದು ದಿವಸ ನಿಂತು ಮುಂದೆ ಇಂಚಗೇರಿಗೆ ಹೋಗಬೇಕೆಂದು ಮಹಾರಾಜರು ಕೊಳಗೇರಿಯಲ್ಲಿ ವಸತಿ ಮಾಡಿದರು. ದುರ್ದೈವದ ಸಂಗತಿಯೆಂದರೆ ಕೋಳಗೇರಿಯಲ್ಲಿ ಇರುವಾಗ್ಗೆ ಮೂತ್ರ ತಡೆದು ಮಹಾರಾಜರು ಅಸ್ವಸ್ಥರಾದರು. ಕೋಳಗೇರಿಯಲ್ಲಿ ಔಷಧೋಪಚಾರಕ್ಕೆಂದು ಒಂದೆರಡು ದಿವಸ ನಿಂತು, ಆಮೇಲೆ ಅವರು ಇಂಚಗೇರಿಗೆ ಹೋದರು. ಮಹಾರಾಜರನ್ನು ಇಂಚಗೇರಿಗೆ ಬಿಟ್ಟು, ಅವರ ಅಪ್ಪಣೆ ಪಡೆದು ಶಿವಲಿಂಗವ್ವನವರು ಜತ್ತಿಗೆ ತೆರಳಿದರು. ಮಹಾರಾಜರ ಜಡ್ಡು ದಿನದಿನಕ್ಕೆ ಹೆಚ್ಚಾಗಹತ್ತಿತು. ಆಗ ಅವರ ಸಮೀಪದ ಶಿಷ್ಯರೊಬ್ಬರು 'ಮಹಾರಾಜರ! ನಿಮ್ಮಿಂದ ಯಾವ ರೀತಿಯಿಂದಲೂ ನಡಿನುಡಿ ತಪ್ಪಿಲ್ಲ, ಅಂದಮ್ಯಾಲೆ ಈ ಜಡ್ಡು ನಿಮಗ ಯಾಕ ಬಂದದ?' ಎಂದು ಕೇಳಿದರು. 'ನನಗ ಜಡ್ಡ ಯಾಕ ಬಂದದ ಅದನ್ನ ಒಂದು ಅಂಬುರಾಯ ಹೇಳಬೇಕು ಇಲ್ಲಾ ಶಿವಲಿಂಗವ್ವ ಹೇಳಬೇಕು' ಎಂದು ಮಹಾರಾಜರು ಉತ್ತರ ಹೇಳಿದರು. ಇತ್ತ ಮಹಾರಾಜರ ಜಡ್ಡು ಹೆಚ್ಚಾಗಹತ್ತಿತು. ತಮ್ಮ ಜಡ್ಡಿನ ಸುದ್ದಿಯನ್ನು ಅವರು ಯಾರಿಗೂ ತಿಳಿಸಲಿಲ್ಲ. ಅವರ ನಿರ್ಯಾಣದ ದಿನವು ಸಮೀಪಿಸಿತು. ಮಹಾರಾಜರ ನಿರ್ಯಾಣದ ಕಾಲಕ್ಕೇನೆ ಶಿವಲಿಂಗವ್ವನವರಿಗೆ ದೃಷ್ಟಾಂತವಾಯಿತು. ಅವರ ನೇಮದಲ್ಲಿ ಮಹಾರಾಜರು

ಕಾಣಿಸಿಕೊಂಡು 'ನಾವಿನ್ನು ಹಾರಿ ಸ್ವರ್ಗಕ್ಕೆ ಹೋಗತೀವಿ' ಎಂದು ಹೇಳಿದರು. ಮರು ದಿವಸನೇ ಮಹಾರಾಜರ ನಿರ್ಯಾಣದ ಸುದ್ದಿ ಬಂದಿತು, ಮಹಾರಾಜರ ಸಗುಣರೂಪಕ್ಕೆ ಅವರ ಶಿಷ್ಯರು ಎರವಾದರು.

ಮಹಾರಾಜರ ನಿರ್ಯಾಣವೆಂದರೆ ಶಿವಲಿಂಗವ್ವನವರಿಗೆ ಆಕಾಶವೇ ಮೈಮೇಲೆ ಕಳಚಿ ಬಿದ್ದಂತಾಯಿತು. ಚಿಕ್ಕಂದಿನಿಂದ ಶ್ರೀಉಮದೀ ಮಹಾರಾಜರ ಮಾಯಾ ಮೋಹರಹಿತವಾದ ಶುದ್ಧ ಪಿತೃಪ್ರೇಮದ ಛತ್ರದ ನೆರಳಿನಲ್ಲಿ ಅವರು ಬೆಳೆದು ಬಂದಿದ್ದರು. ತಾಯಿ, ತಂದೆ ಬಂಧುಬಳಗವೆಲ್ಲವೂ ತಮ್ಮ ಸದ್ಗುರುಗಳೇ ಎಂದು ಬಗೆದಿದ್ದ ಶಿವಲಿಂಗವ್ವನವರು ಇಂದು ಆ ಸಗುಣ ರೂಪಕ್ಕೆ ಎರವಾದರು. ಅವರು ಪರದೇಶಿ ಯಾದರು, ಅನಾಥರಾದರು. 'ಆವಕೊಂಡವ ಹಾಯ್ವೆನೊ, ಆವ ಗರಳವ ಕುಡಿವೆನೊ' ಎನ್ನುವಂತಾಯಿತು ಅವರಿಗೆ. ಸಂಸಾರದ ತ್ರಿವಿಧ ತಾಪಗಳಲ್ಲಿ ಬಿದ್ದು ಬೇದು ಬೆಂಡಾದಂತಾಗುತ್ತಿರುವಾಗ, ಅವರಿಗೆ ನೆರಳಾಗಿ ರಕ್ಷಿಸಿದ ಛತ್ತರಗಿ ಇಂದು ಕತ್ತರಿಸಿ ಬಿದ್ದಂತಾಯಿತು. ತಮ್ಮ ಮನದಲ್ಲಿಯ ಅನೇಕ ಬಗೆಯ ವಾಸನಾ ವೃತ್ತಿಗಳೆಂಬ ವೈರಿಗಳಿಂದ ರಕ್ಷಿಸಿದ ಆನೆಯ ಮೇಲಿನ ಢಾಲವು ಇಂದು ಕಳಚಿ ಬಿದ್ದಂತಾಯಿತು ಅವರಿಗೆ.

ಶ್ರೀಉಮದೀ ಮಹಾರಾಜರ ನಿರ್ಯಾಣದ ತರುವಾಯ ಕೆಲವೇ ದಿವಸಗಳಾದ ಮೇಲೆ ಶಿವಲಿಂಗವ್ವನವರು ನಾಗಪ್ಪಣ್ಣಾ ನಿಂಬರ್ಗಿ ಮತ್ತು ನಂದೆಪ್ಪಣ್ಣಾ ನ್ಯಾಮಗೌಡಾ ಇವರನ್ನು ಜತೆ ಕರೆದುಕೊಂಡು ಉಮದಿಗೆ ಕೃಷ್ಣಾಜಿಪಂತರನ್ನು ಭೇಟಿ ಮಾಡಿ, ಮಾತಾಡಿಸಬೇಕೆಂದು ಹೋದರು. ಅಲ್ಲಿ ಹೋದ ಮೇಲೆ ಶ್ರೀಉಮದೀ ಮಹಾರಾಜರು ಅಡವಿಯಲ್ಲಿ ನೇಮಕ್ಕೆ ಹೋಗಿ ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ನೋಡಬೇಕೆಂದು ಶಿವಲಿಂಗವ್ವನವರ ಮನಸಿನಲ್ಲಿ ಬಂದಿತು. ಆಗ ಅವರು, ನಂದೆಪ್ಪಣ್ಣಾ ಮತ್ತು ನಾಗಪ್ಪಣ್ಣಾ ಈ ಮೂವರು ಹೊರಟರು. ಮಹಾರಾಜರು ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ನೋಡಿದ ಕೂಡಲೆ ಶಿವಲಿಂಗವ್ವನವರು ಭಾವಪರವಶರಾದಂತಾಗಿ ಆ ಸ್ಥಳದಲ್ಲಿ ಅರ್ಧಗಂಟೆ ನೇಮಮಾಡಲು ಅಲ್ಲಿಯೇ ಕುಳಿತು ಬಿಟ್ಟರು. ಆ ಅರ್ಧಗಂಟೆಯ ಅವಧಿಯಲ್ಲಿ ತಮಗೆ ಬಂದ ಅನುಭವ ಮತ್ತು ತಮಗಾದ ಆನಂದವನ್ನು ಅವರು ಹೀಗೆ ಬರೆದಿಟ್ಟಿರುವರು.

"ಆ ಸ್ಥಳದಲ್ಲಿ ಸದ್ಗುರುಗಳ ಸ್ಮರಣೆ ಮಾಡುತ್ತ ಒಂದು ಅರ್ಧ ಗಂಟೆ ಕುಳಿತು ಕೊಂಡಿದ್ದೆ. ಅಷ್ಟರಲ್ಲಿ ಆದ ಚಮತ್ಕಾರವನ್ನು ಹೇಳುವೆ ಕೇಳು. ಎಲ್ಲ ಕಡೆಗೆ ಗುಡುಗಿದ ಸಪ್ಪಳವಾಗುತ್ತಿರುವಂತೆ, ಮಳೆಹನಿಗಳು ಒಂದೊಂದಾಗಿ ಉದುರುತ್ತಿದ್ದವು. ಅಷ್ಟರಲ್ಲಿ ಆ ಸ್ಥಳದಲ್ಲಿ ಸೂರ್ಯಪ್ರಕಾಶದ

ಬೆಳಕು ಹೇಳಲು ಬಾರದಂತೆ ತೇಜೋಮಯವಾಗಿ ಬಿದ್ದಿದ್ದಿತು. ಕಣ್ಣು ಕುಕ್ಕುವಂತಿದ್ದಿತು. ಸಮರ್ಥರ ಸ್ವರ್ಗಭುವನವು ತೂಗಾಡುವಂತೆ ಕಂಡಿತು. ಅದನ್ನು ಹೇಳಲು ಬಾರದು. ಆಗ 'ಹೇ ಸದ್ಗುರು ಸಮರ್ಥಾ, ಪರಮೇಶ್ವರಾ ದೀನದಯಾಳಾ. ಕೃಪಾವಂತಾ, ಭಕ್ತವತ್ಸಲಾ ನನ್ನನ್ನು ಈ ಸ್ವರ್ಗಭುವನದಿಂದ ಎಬ್ಬಿಸಬೇಡ. ಮೇಲೇರಿದ ಸ್ಮರಣೆಯನ್ನು ಕೆಳಗಿಳಿಸಬೇಡ' ಎಂದು ಸಮರ್ಥರನ್ನು ಪ್ರಾರ್ಥಿಸಿಕೊಂಡೆ. ಅರ್ಧಗಂಟೆ, ಒಂದು ಗಂಟೆ ಈ ಐಶ್ವರ್ಯವು ಮತ್ತು ಆನಂದವು ತೂಗಾಡಹತ್ತಿತು. ಸಮರ್ಥರು ೨೫ ವರುಷ ಅರಣ್ಯವಾಸ ಸ್ಮರಣೆ ಮಾಡಿ ಸ್ವರ್ಗಭುವನವನ್ನು ಕಂಡು, ದೇವಲೋಕದಲ್ಲಿ ಹೋಗಿ ಭೇಟಿಕೊಟ್ಟು ಮತ್ತೆ ನರಲೋಕ ರಕ್ಷಣೆಗಾಗಿ ಬರುತ್ತಿದ್ದರು...'

ತಮ್ಮ ಸದ್ಗುರುಗಳ ಸಗುಣರೂಪಕ್ಕೆ ಎರವಾದುದರಿಂದ ಆದ ಅಪಾರ ದುಃಖವನ್ನು ಅನುಭವಿಸುತ್ತಿರುವಾಗಲೇ ಶಿವಲಿಂಗವ್ವನವರಿಗೆ ಇನ್ನೊಂದು ಸಹಿಸಲಾಗದ ಆಘಾತ ವನ್ನು ಎದುರಿಸಬೇಕಾಯಿತು. ತಮ್ಮ ಅಕ್ಕ ನೀಲವ್ವನ ಒಬ್ಬನೇ ಒಬ್ಬ ಮಗನಾದ, ಇದ್ದು ಬಿದ್ದ ತಮ್ಮ ಆಸ್ತಿಯ ಮೇಲ್ವಿಚಾರಕನಾದ, ಮನೆತನಕ್ಕೆ ಹಿರಿಯನಾದ ಮತ್ತು ಜತ್ತಿಯ ಜಂಗಮ ಮಠದ ಮಠಾಧಿಕಾರಿಯಾದ ಪಾವಡಯ್ಯನು ಆಕಸ್ಮಿಕವಾಗಿ ಶಿವೈಕ್ಯನಾದನು. ಒಂದೆಡೆ ಆಧ್ಯಾತ್ಮದ ಆಧಾರ ತಪ್ಪಿದಂತಾದರೆ ಇನ್ನೊಂದು ಕಡೆ ಪ್ರಪಂಚದಲ್ಲಿಯ ಆಧಾರವೂ ತಪ್ಪಿದ್ದರಿಂದ ಒಂದು ಬಗೆಯಿಂದ ಶಿವಲಿಂಗವ್ವನವರು ನಿರಾಧಾರರಾದರು. ತಮ್ಮ ಅಕ್ಕನ ಮಗನು ತೀರಿಕೊಂಡ ಸುದ್ದಿಯನ್ನು ಅವರು ಗುರುದೇವ ರಾನಡೆಯವರಿಗೆ ಬರೆದು ತಿಳಿಸಿದರು. ಗುರುದೇವ ರಾನಡೆಯವರು ದಿ. ೧೭-೫-೧೯೧೬ರಂದು ಅವರಿಗೊಂದು ಸಾಂತ್ವನಪರ ಪತ್ರವನ್ನು ಬರೆದರು.

'ಸಮರ್ಥರು ಪಾವಾಡೆಯ್ಯಾಸ್ವಾಮಿಯವರು ತಮ್ಮಲ್ಲಿಗೆ ಕರೆದೊಯ್ದರು. ಆಗಿನಿಂದ ತಾವು ಬಹಳ ಉದ್ವಿಗ್ನ ಮನಸ್ಥಿತಿಯಲ್ಲಿರಬಹುದು...'

ಈ ರೀತಿ ತಮಗಾದ ಇಬ್ಬಗೆಯ ದುಃಖದ ಬೇಗೆಯನ್ನು ಸಹಿಸಲಾರದೆ, ತುಸು ಮಟ್ಟಿಗಾದರೂ ಆ ಬೇಗೆ ಕಡಿಮೆಯಾಗಬಹುದೆಂಬ ಆಶೆಯಿಂದ ಶ್ರೀಉಮದೀ ಮಹಾರಾಜರ ತಪೋಭೂಮಿಯಾದ, ಅವರ ಕರ್ಮಭೂಮಿಯಾದ, ಅವರ ಪಾದಸ್ಪರ್ಶದಿಂದ ಪಾವನವಾದ ಹಿಂಚಗೇರಿ ಮಠದಲ್ಲಿ, ಸದ್ಗುರುಗಳ ಸವಿನೆನಪುಗಳನ್ನು ಮೆಲ್ಲುತ್ತ, ನಾಮಸಾಧನದಲ್ಲಿ ನಿಮಗ್ನರಾಗಿ, ಸಂತ ಸಂಗತಿಯ ಆನಂದದಲ್ಲಿ ಕೆಲವು ಕಾಲ ಕಳೆಯಬೇಕೆಂದು ಶಿವಲಿಂಗವ್ವನವರು ಅಲ್ಲಿಯೇ ಕೆಲವು ದಿವಸ ಬಂದು ನಿಂತು ಬಿಟ್ಟರು. ಆದರೆ ಅಲ್ಲಿಯ ವಿಚಿತ್ರವಾದ ವಾತಾವರಣವು ಅವರ ಮನಸ್ಸಿಗೆ ಇನ್ನಷ್ಟು

ದುಃಖವನ್ನೆ ತಂದೊಡ್ಡಿತು. ಹಿಂಚಗೇರಿ ಮಠದ ಮಹತ್ತ್ವವನ್ನು ಕಡಿಮೆ ಮಾಡಬೇಕೆಂಬ ಪ್ರಯತ್ನಗಳು ನಡೆದಿದ್ದುದು ಶಿವಲಿಂಗವ್ವನವರ ಉದ್ವಿಗ್ನತೆಗೆ ಇನ್ನೊಂದು ಕಾರಣ ವಾಗಿರಬೇಕು. ಹೀಗಾಗಿ ಇಂಚಗೇರಿ ಮಠದಲ್ಲಿ ತಾವು ಬಯಸಿದಷ್ಟು ಶಾಂತಿ ಸಮಾಧಾನ ಗಳು ಲಭಿಸದಾದುದರಿಂದ ತಮ್ಮ ನಿರಾಶೆಯ ಕಳವಳವನ್ನು ಅವರು ಗುರುದೇವ ರಾನಡೆಯವರಿಗೆ ದಿ. ೬-೬-೧೯೧೬ರಂದು ಈ ರೀತಿ ಕಾಗದ ಬರೆದು ತಿಳಿಸಿದರು.

"...ಸದ್ಯಕ್ಕೆ ನನ್ನ ಸ್ಥಿತಿಯು ಸರಿಯಾಗಿಲ್ಲ. ಯಾಕಂದರೆ ಸಮರ್ಥರಿರುವಾಗ ಬಹಳ ದುಃಖವಾಗಿದ್ದಿತು. ಸಮರ್ಥರು ಆ ದುಃಖದ ಕಡೆಗೆ ನೋಡಗೊಡಲಿಲ್ಲ. ಇನ್ನು ಸಮರ್ಥರ ಹಾಗೆ ಸಗುಣ ಸುಖ ಮತ್ತು ನಿರ್ಗುಣ ಸುಖವನ್ನು ಯಾರು ಹೇಳಬಹುದೆಂದು ಎಲ್ಲ ಸಂತ ಮಹಂತರನ್ನು ಬೇಡಿಕೊಳ್ಳುತ್ತಿರುವೆ. ಆಕಾಶವೇ ಕಳಚಿ ಬಿದ್ದಂತಾಗಿದೆ. ಸಮರ್ಥಾ ಸಮರ್ಥಾ ಎಂದು ಹುಚ್ಚಿಯ ಹಾಗೆ ಅಲೆದಾಡುತ್ತಿರುವೆ.

ಸಮರ್ಥರ ನಾಮನೇಮಗಳನ್ನು ನೋಡಿ ಯಾರಾದರು ಮನಕ್ಕೆ ಸಮಾಧಾನ ಹೇಳಬಹುದೆಂದು ತಿಳಿದು ಇಂಚಗೇರಿಯಲ್ಲಿ ಮೂರು ತಿಂಗಳಕಾಲ ಇದ್ದೆ, ಆದರೆ ಈ ಮನಕ್ಕೆ ಸಮಾಧಾನವಾಗದಿದ್ದರೆ ಇರುವುದೆಲ್ಲಿ? ಎಂದು ಸಮರ್ಥರ ಹೆಸರು ತಕ್ಕೊಂಡು ಗಂಗೆಯ ಉಡಿಯಲ್ಲಿ ಬಿದ್ದು ಹೋಗಬೇಕು, ಇದೇ ನಿಶ್ಚಯ ಮಾಡುವೆ. ನಮ್ಮಂಥ ಅನಾಥರನ್ನು ಕೇಳುವವರಾರು?'

ತಮ್ಮ ಧರ್ಮದ ಅಕ್ಕ,<br>ಶಿವಕ್ಕ

ಶ್ರೀಉಮದೀಮಹಾರಾಜರ ನಿರ್ಯಾಣದಿಂದ ಇದೇ ರೀತಿ ದುಃಖವನ್ನು ಅನುಭವಿಸಿದ ಅವರ ಶಿಷ್ಯರೆಂದರೆ ಶ್ರೀ ಅಂಬುರಾವ ಮಹಾರಾಜರು ಮತ್ತು ಗುರುದೇವ ರಾನಡೆಯವರು, ಅವರ ಬೇರೆ ಶಿಷ್ಯರಿಗೂ ದುಃಖವಾಗಿರಲಿಕ್ಕೆ ಬೇಕು. ಕ್ರಿ.ಶ. ೧೯೧೪ರಿಂದ ತುಂಬಾ ಎರಡು ವರ್ಷಕಾಲ ಶಿವಲಿಂಗವ್ವನವರು ಗುರುವಿರಹದ ದುಃಖದ ಬೇಗೆಯಲ್ಲಿ ಬೇಯುತ್ತಿದ್ದರೆಂಬುದು ಮೇಲಿನ ಅವರ ಪತ್ರದ ಮೇಲಿಂದ ಕಂಡು ಬರುವಂತಿದೆ.

ಶಿವಲಿಂಗವ್ವನವರ ಮೇಲಿನ ಪತ್ರಕ್ಕೆ ಗುರುದೇವ ರಾನಡೆಯವರು ಬರೆದ ಉತ್ತರವು ಬಹಳ ಮಹತ್ವದ್ದಿದೆ. ಅವರು ದಿ. ೧೬-೭-೧೯೧೬ರಂದು ಉತ್ತರ ಬರೆದರು. ಅದರಲ್ಲಿಯ ಮುಖ್ಯಾಂಶಗಳನ್ನು ಮಾತ್ರ ಕೆಳಗೆ ಕೊಟ್ಟಿದೆ.

"....ತಮ್ಮ ಆರನೇ ಜೂನದ ಪತ್ರ ಮುಟ್ಟಿತು. ಅದನ್ನು ಓದಿ ಬಹಳೇ ದುಃಖವಾಯಿತು. ಶ್ರೀಸಮರ್ಥರ ಹಿಂದೆ ತಾವೇ ನಮಗೆಲ್ಲ ಆಧಾರವಾಗಿರುವುದರಿಂದ, ತಾವು 'ನಂದಿ ಗಂಗೆಯ ಉಡಿಯಲ್ಲಿ ಬಿದ್ದು ಹೋಗುವೆ' ಎಂದು ಬರೆದಿರಿ. ಅಂದಮೇಲೆ ನಮಗೆ ಯಾವ ಬಗೆಯಿಂದ ಸಮಾಧಾನವಾಗಬೇಕು? ಅಲ್ಲದೆ ತಮ್ಮನ್ನು ಸಮಾಧಾನ ಪಡಿಸುವ ಶಕ್ತಿ ಸಮರ್ಥರನ್ನುಳಿದು ಇನ್ನಾರಲ್ಲಿದೆ?..."

**ಯೋಗ್ಯತೆ :** ಶಿವಲಿಂಗವ್ವನವರು ತಮಗೆ ಆಧಾರವೆಂದು ಗುರುದೇವ ರಾನಡೆಯವರು ಬರೆದುದರ ಮೇಲಿಂದ, ಅವರ ಆಧ್ಯಾತ್ಮಿಕ ಯೋಗ್ಯತೆ ಯಾವ ಮುಟ್ಟದ್ದಿರಬೇಕೆಂಬುದರ ಕಲ್ಪನೆ ವಾಚಕರಿಗೆ ಬಂದಿರಲಿಕ್ಕೆ ಸಾಕು. ಶ್ರೀಉಮದೀ ಮಹಾರಾಜರಿರುವಾಗಲೇ ಶಿವಲಿಂಗವ್ವನವರು ಆತ್ಮಾನುಭವದಲ್ಲಿ ಮೇಲ್ಮಟ್ಟದ ಯೋಗ್ಯತೆಯನ್ನು ಪಡೆದವರಾಗಿದ್ದರು. ಕ್ರಿ.ಶ. ೧೯೧೧ರ ನಿತ್ಯನೇಮಾವಲಿಯ ಪಂಚಸಮಾಸಿ ಶಿಷ್ಯ ನಿರೂಪಣ ಸಮಾಸದಲ್ಲಿ ಶಿವಲಿಂಗವ್ವನವರ ಯೋಗ್ಯತೆಯನ್ನು ಕುರಿತು ಗುರುದೇವ ರಾನಡೆಯವರು ಹೀಗೆ ಬರೆಯುತ್ತಾರೆ:

"ರಾಮದಾಸರ ಶಿಷ್ಯಣಿ ವೇಣು ಅಕ್ಕಾ । ಸಮರ್ಥರ ಶಿಷ್ಯಿಣಿ ಶಿವಲಿಂಗವ್ವಕ್ಕಾ॥ ದೃಷ್ಟಿಯಲ್ಲಿ ಆತ್ಮಜ್ಞಾನ । ಸದಾ ನಿರತ ಸಾಧನ॥ ಮಹಿಮೆಯವರದು ಧನ್ಯ । ನನ್ನಿಂದಾಗದು ವರ್ಣನ॥"

ಸ್ವತಂತ್ರವಾಗಿ ಮಠಮಾಡಿಕೊಂಡು ಜಗದೋದ್ಧಾರದ ಕಾರ್ಯವನ್ನು ಕೈಕೊಳ್ಳಲು ಶ್ರೀಸಮರ್ಥ ರಾಮದಾಸರು ವೇಣು ಅಕ್ಕಾ ಅವರಿಗೆ ಒಪ್ಪಿಗೆಯನ್ನಿತ್ತಿದ್ದರು. ಶ್ರೀ ಉಮದೀ ಮಹಾರಾಜರ ನಿರ್ಯಾಣದ ನಂತರ ಶ್ರೀ ಅಂಬುರಾವ ಮಹಾರಾಜರಿಗಾದ ದರ್ಶನದಲ್ಲಿ ತಮಗೂ, ಶಿವಲಿಂಗವ್ವನವರಿಗೂ ಭಕ್ತಿ ಪ್ರಸಾರದ ಕಾರ್ಯಕೈಕೊಳ್ಳಲು ಮಹಾರಾಜರು ಅಪ್ಪಣೆಯಿತ್ತುದಾಗಿ ಶ್ರೀ ಅಂಬುರಾವ ಮಹಾರಾಜರು ಬರೆದಿಟ್ಟಿರುವರು. ಆದರೆ ಶಿವಲಿಂಗವ್ವನವರು ಎಷ್ಟು ಜನಕ್ಕೆ ಮಂತ್ರೋಪದೇಶ ಮಾಡಿದರೆಂಬುದು ಮಾತ್ರ ತಿಳಿದಿಲ್ಲ. ಆದ್ದರಿಂದ ಅವರ ಭಕ್ತಿಪ್ರಸಾರದ ಕಾರ್ಯದ ಬಗ್ಗೆ ವಿವರಗಳನ್ನು ಬರೆಯುವುದು ಸಾಧ್ಯವಿಲ್ಲ. ಒಂದು ಸಂಗತಿಯನ್ನು ಮಾತ್ರ ಖಚಿತವಾಗಿ ಹೇಳಬಹುದು. ಗುರುದೇವ ರಾನಡೆಯವರು ತಮ್ಮ ಒಬ್ಬಳೇ ಒಬ್ಬ ಮಗಳಾದ ಸೌ. ಶಕುಂತಲಾ ತಾಯಿಯವರಿಗೆ ಶಿವಲಿಂಗವ್ವನವರಿಂದಲೇ ಮಂತ್ರೋಪದೇಶ ಮಾಡಿಸಿದ್ದರು.

**ಬುದ್ಧಿಶಕ್ತಿಯ ವಿಕಾಸ :** ತಮ್ಮ Pathway to God in Kannada Literature ಎಂಬ ಗ್ರಂಥದ ಪ್ರಸ್ತಾವನೆಯಲ್ಲಿ 'intellectual power and absolute clarity of thought seem to be primary criteria of mystical experience' 'ಬುದ್ಧಿಯ ಸಾಮರ್ಥ್ಯ

ಮತ್ತು ಅತ್ಯಂತ ಸ್ಪಷ್ಟವಾದ ವಿಚಾರಧಾರೆ (ತಿಳಿಯಾದ ತಿಳವಳಿಕೆ) ಇವು ಆತ್ಮಾನುಭವದ ಮುಖ್ಯ ಪ್ರಮಾಣಗಳು' ಎಂದು ಗುರುದೇವ ರಾನಡೆಯವರು ಹೇಳುವರು. ಶಿವಲಿಂಗವ್ವನವರ ಶಿಕ್ಷಣವಾದದ್ದು ಕೇವಲ ಮರಾಠಿ ೪ನೇ ತರಗತಿಯವರೆಗೆ ಮಾತ್ರ. ಆದರೆ ಅವರ ಆತ್ಮಾನುಭವದ ಪ್ರಭಾವದಿಂದ ಅವರ ಬುದ್ಧಿಯು ತೀಕ್ಷ್ಣವೂ ತಿಳಿಯಾದದ್ದೂ ಆಗಿದ್ದಿತು. ಅವರು ಒಂದೆರಡು ಸಭೆಗಳನ್ನುದ್ದೇಶಿಸಿ ಮಾಡಿದ ಭಾಷಣಗಳೇ ಅದಕ್ಕೆ ಸಾಕ್ಷಿ. ಈ ಕೆಳಗಿನ ಅವರ ಭಾಷಣದಲ್ಲಿ ಅವರ ದೇವಪ್ರೇಮ, ದೇಶಪ್ರೇಮ ಮತ್ತು ಧರ್ಮಪ್ರೇಮಗಳು ಒಡೆದು ಕಾಣುವಂತಿವೆ. ಅದರಲ್ಲಿ ಅವರ ಭಾವಶಕ್ತಿ ಮತ್ತು ಪ್ರತಿಭಾಶಕ್ತಿಯು ಒಡೆದು ಮೂಡಿವೆ. ಮೂಲ ಭಾಷಣವು ಮರಾಠಿ ಭಾಷೆಯಲ್ಲಿದೆ, ಅದರ ಕನ್ನಡ ಅನುವಾದವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

> "ಯಾವುದೇ ಮಾತಿನ ಅಭಿಲಾಷೆ ಇರಕೂಡದು. ಪ್ರಾರಂಭದಲ್ಲಿ ಶಾರೀರಿಕ ಮತ್ತು ಮಾನಸಿಕ ಸಂಕಷ್ಟಗಳು ಬಂದೊದಗುವುದು ಸಹಜವು. ಅಂಥ ಕಷ್ಟಗಳು ಬಂದೊದಗಿದರೂ ನಿಶ್ಚಿಂತರಾಗಿರಬೇಕು. ಸದಾಕಾಲ ಪ್ರಸನ್ನಚಿತ್ತರಾಗಿದ್ದು, ಕಾಮ ಕ್ರೋಧಾದಿಗಳಿಂದ ನಿರ್ಭಯತೆಯಿಂದಿರುವುದೇ ಉಪಮಾತೀತವಾದ ಸುಖವು; ನಮ್ಮ ಹಿಂದೂಜರ ಆಸ್ತಿಯು. ಅದು ಅನಾದಿಕಾಲದಿಂದ ಬಂದಿದೆ. ಇಂಥ ಸಂಪತ್ತನ್ನು ಪಡೆಯಬೇಕೆಂದು ಈ ಭರತಖಂಡದಲ್ಲಿ ಅನೇಕ ಮಹಾತ್ಮರು ಪ್ರಯತ್ನಪಟ್ಟು ಪೂರ್ಣತೆಯನ್ನು ಪಡೆದರು. ಮನೋಜಯವೇ ಅವರ ದೊಡ್ಡ ಜಯವು. ಈ ದುಷ್ಟ ಮನಸ್ಸಿನಿಂದಲೇ ದುಃಖ ಪ್ರಾಪ್ತಿಯು. ಪರಮ ಸುಖವನ್ನು ಒಂದೆಡೆ ಬದಿಗೊತ್ತಿ, ತೀರ ಕ್ಷಣಿಕವಾದ ಸುಖದ ಕಡೆಗೆ ಮನುಷ್ಯನು ಒಲಿಯುವುದು ಈ ದುಷ್ಟ ಮನಸಿನ ಮೂಲಕ. ಮನಸಿನಲ್ಲಿ ಅನೇಕ ಕಲ್ಪನೆಯ ತರಂಗಗಳು ಏಳುವವೆಂಬುದಕ್ಕೆ, ಪಾಶ್ಚಿಮಾತ್ಯರ ಈ ಬೆಳವಣಿಗೆಯ ಮೋಹದ ದೊಡ್ಡ ಬಂಡೆಗಲ್ಲು ನಮ್ಮ ದೇಶದ ಮೇಲೆ ಬಂದು ಬಿದ್ದಿರುವುದು. ಮತ್ತು ಅದರ ಮೋಹಜಾಲದಲ್ಲಿ ಸಿಲುಕಿ ನಾವು ನಮ್ಮ ಹಿಂದಿನ ವೈಭವವನ್ನು ಮರೆತು ಅಡ್ಡದಾರಿಯಿಂದ ಹೋಗುತ್ತಿರುವುದೇ ಅದಕ್ಕೆ ಸಾಕ್ಷಿಯಾಗಿದೆ. ನಮ್ಮ ನಿಜವಾದ ಸುಖ ಮತ್ತು ವೈಭವದ ಒಂದು ಅಂಶದಷ್ಟು ಕೂಡ ಆ ಪಾಶ್ಚಿಮಾತ್ಯ ಉನ್ನತಿಗೆ ಬೆಲೆಯಿಲ್ಲ".

ಇನ್ನೊಂದು ಸಂದರ್ಭದಲ್ಲಿ ಶಿವಲಿಂಗವ್ವನವರು ಜ್ಞಾನೇಶ್ವರರ ಜ್ಞಾನೇಶ್ವರೀ ಗ್ರಂಥದ ಮಹತ್ವವನ್ನು ಕುರಿತು ಮಾತನಾಡಿದುದು ಕಂಡು ಬರುವುದು. ಆ ಭಾಷಣವು

ಕೂಡ ಮರಾಠಿಯಲ್ಲಿಯೇ ಇರುವುದು. ಅದರ ಕನ್ನಡ ಅನುವಾದವನ್ನು ಮಾತ್ರ ಇಲ್ಲಿ ಕೊಟ್ಟಿದೆ.

> "ಜ್ಞಾನೇಶ್ವರಿಯಲ್ಲಿಯ ಯಾವ ವಿಷಯವನ್ನು ನೋಡಿದರೂ ಅದು ಲೋಕೋತ್ತರವಾಗಿದ್ದು, ಒಳ್ಳೇ ಬೋಧಪ್ರದವಾದದ್ದೂ ಸರಳ ರೀತಿಯಲ್ಲಿ ಪ್ರತಿಪಾದಿತ ವಾದದ್ದೂ ಇರುತ್ತದೆ. ಕರ್ಮ, ಉಪಾಸನಾ ಮತ್ತು ಜ್ಞಾನ ಇವು ಮೂರು ಆತ್ಮ ಸಂತೋಷದ ಮುಖ್ಯ ಸಾಧನಗಳಿವೆ. ಜನರು ಭಿನ್ನ ಭಿನ್ನ ಅಭಿರುಚಿಯವರು. ಅಂತೇ ಪರಮ ದಯಾಳುವಾದ ಜ್ಞಾನೇಶ್ವರರು ಅವುಗಳನ್ನು ಬೇರೆ ಬೇರೆಯಾಗಿ, ಆಯಾ ಮಾರ್ಗಗಳ ಫಲದರ್ಶನ ಪೂರ್ವಕವಾಗಿ ಅಲ್ಲಲ್ಲಿ ಸ್ಪಷ್ಟ ಪಡಿಸಿದ್ದಾರೆ. ಇವುಗಳಲ್ಲಿ ಯಾವುದೇ ಮಾರ್ಗವನ್ನು ಅನುಸರಿಸಿದರೂ ಕಾರ್ಯ ಸಾಧ್ಯವಾಗದೇ ಇರಲಾರದು. ಕೇವಲ ಲೋಕೋದ್ಧಾರಕ್ಕಾಗಿ ಬರೆದ ಜ್ಞಾನೇಶ್ವರೀ ಗ್ರಂಥವನ್ನು ಪೂರ್ಣ ನಂಬಿಗೆಯನ್ನಿಟ್ಟು, ಪ್ರೇಮದಿಂದ ರಾತ್ರಿ ಹಗಲು ಓದಿದರೆ ಯಾರೇ ಆಗಲಿ ಅವರು ಈಶಕೃಪೆಗೆ ಪಾತ್ರರಾಗಿ ದುಸ್ತರವಾದ ಈ ಭವಸಾಗರದಂದ ಪಾರಾಗಿ ಹೋಗುವರು. ವಿಷಯಿ ಮನುಷ್ಯನ ಮನಸ್ಸು ವಿಷಯದತ್ತ ಹರಿಯುವಂತೆ ಅವನಿಗೆ ಜ್ಞಾನೇಶ್ವರಿಯ ವ್ಯಸನ ಹತ್ತಬೇಕು."

ಕೇವಲ ಮರಾಠಿ ೪ನೇ ವರ್ಗದ ಮಟ್ಟಿಗೆ ಶಿಕ್ಷಣ ಪಡೆದ ಶಿವಲಿಂಗವ್ವನವರು 'ಜ್ಞಾನೇಶ್ವರೀ'ಯಂಥ ಮಹಾಗ್ರಂಥದ ವಿಮರ್ಶೆಯನ್ನು ಕೆಲವೇ ವಾಕ್ಯಗಳಲ್ಲಿ ಮಾಡಿದುದು ಒಂದು ಪವಾಡವೆಂದೇ ಹೇಳಬೇಕು. ಜ್ಞಾನೇಶ್ವರಿಯಲ್ಲಿ ಚರ್ಚಿಸಲಾದ ಕರ್ಮ, ಜ್ಞಾನ ಮತ್ತು ಉಪಾಸನಾ ಅಂದರೆ ಭಕ್ತಿಯ ವಿಷಯಗಳೇ ಜ್ಞಾನೇಶ್ವರಿಯಲ್ಲಿಯ ಮುಖ್ಯ ವಿಷಯಗಳೆಂದು ಕಂಡುಕೊಂಡ ಶಿವಲಿಂಗವ್ವನವರು ಅವುಗಳ ವಿಶಿಷ್ಟ ಫಲಗಳನ್ನು ಕುರಿತು ಸೂಚಿಸಿದುದು ಮಹತ್ವದ್ದಾಗಿದೆ. ಆತ್ಮಜ್ಞಾನದ ಆಧಾರದ ಮೇಲಿಂದ ಅವರು ಮಾಡಿದ ವಿಮರ್ಶೆ ಯಾವುದೇ ಪಂಡಿತರ ವಿಮರ್ಶೆಗಿಂತಲೂ ಕಡಿಮೆ ಇಲ್ಲ.

ಇನ್ನೊಂದೆಡೆ ಅವರು ಹೆಣ್ಣುಮಕ್ಕಳ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣವು ಶಿವಲಿಂಗವ್ವನವರ ಸಾಮಾಜಿಕ ವಿಚಾರಗಳನ್ನು ಪ್ರತಿಬಿಂಬಿಸುವವು. ಆ ಸಭೆಯಲ್ಲಿ ಅವರು ಪತಿವ್ರತಾ ಧರ್ಮವನ್ನು ಕುರಿತು ಭಾಷಣ ಮಾಡಿ ಸ್ತ್ರೀಯರಿಗೆ ಉಪದೇಶ ಮಾಡಿರುವರು. ಅದನ್ನು ಪರಿವಿಡಿಯಲ್ಲಿ ಕೊಟ್ಟಿದೆ.

ಶಿವಲಿಂಗವ್ವ ಮತ್ತು ಗುರುದೇವ ರಾನಡೆ ಇವರಲ್ಲಿ ಪತ್ರವ್ಯವಹಾರ ನಡೆದಿದ್ದರೂ ಕೂಡ ಅವರಿಬ್ಬರೂ ಒಂದೇ ಕಡೆಗೆ ಇರಲು ಬಂದುದು ಕ್ರಿ.ಶ. ೧೯೨೦ರಲ್ಲಿ. ಕ್ರಿ.ಶ.

೧೯೨೦ರಲ್ಲಿ ತಮ್ಮ ಜಡ್ಡು ಕೈಮೀರಿದ್ದರಿಂದ ಗುರುದೇವ ರಾನಡೆಯವರು ಇಂಚಗೇರಿಗೆ ಇರುವುದನ್ನು ನಿಶ್ಚಯಿಸಿ ಅಲ್ಲಿಗೆ ಬಂದರು. ಆಗ ಶಿವಲಿಂಗವ್ವನವರೂ ಅಲ್ಲಿಯೇ ಇರುತ್ತಿದ್ದರು. ಇಬ್ಬರೂ ಶ್ರೇಷ್ಠ ಸಾಧಕರು, ಆತ್ಮಾನಂದವನ್ನು ಉಂಡು ಸಾಕ್ಷಾತ್ಕಾರದ ಶಿಖರವನ್ನು ಸಮೀಪಿಸಿದವರು. ಅದರಿಂದಾಗಿ ಪರಸ್ಪರರಲ್ಲಿ ಆಧ್ಯಾತ್ಮಿಕ ಆತ್ಮೀಯತೆಯು ಬೆಳೆದು ಬಂದಿತು. ಆದರೆ ಸ್ವಸಂವೇದನೆಗೆ ಅಂಟಿಕೊಂಡ ಸೂಕ್ಷ್ಮ ಅಹಂಕಾರವು, ಅಂಥ ಸಾಧಕರಿಗೂ ಕೂಡ ತಿಳಿದಿರಲಿಲ್ಲವೆಂಬುದು ಕೆಳಗೆ ವರ್ಣಿಸಿದ ಒಂದು ಘಟನೆಯಿಂದ ತಿಳಿದು ಬರುವಂತಿದೆ.

ಒಂದು ದಿವಸ ಗುರುದೇವ ರಾನಡೆಯವರು ಧ್ಯಾನಕ್ಕೆ (ನೇಮಕ್ಕೆ) ಕುಳಿತಾಗ ಅವರಿಗೆ 'ಅಭಿಮಾನ, ಅಭಿಮಾನ ಅಂದರ ಏನು ಅನ್ನುವದನ್ನು ನಾಲ್ಕು ದಿವಸದಾಗ ತೋರಿಸತೀನು' ಎಂಬ ಅನಾಹತ ಶಬ್ದಗಳು ಕೇಳಿಸಿದವು. ಗುರುದೇವ ರಾನಡೆಯವರಿಗೆ ಅದರ ಅರ್ಥವಾಗಲಿಲ್ಲ. ಮೂರು ದಿನಗಳು ಸಂದವು. ಅಭಿಮಾನದ ಯಾವ ಘಟನೆಗಳೂ ಸಂಭವಿಸಲಿಲ್ಲ. ಆದರೆ ನಾಲ್ಕನೇ ದಿವಸ ಶಿವಲಿಂಗವ್ವನವರು ಕಡಲೆಬೇಳೆ ಹೂರಣವನ್ನು ಹಾಕಿ ಕಡಬು ಮಾಡಿಕೊಂಡು ಒಂದು ತಟ್ಟೆಯಲ್ಲಿ ನಾಲ್ಕು ಕಡುಬುಗಳನ್ನಿಟ್ಟುಕೊಂಡು ಗುರುದೇವ ರಾನಡೆಯವರ ಕೋಣೆಗೆ ಬಂದು 'ಈ ಕಡುಬುಗಳನ್ನು ನಾನೇ ನನ್ನ ಕೈಯಿಂದ ಮಾಡಿದ್ದೇನೆ. ಮಹಾರಾಜರಿಗೆ ನೈವೇದ್ಯ ಕೊಟ್ಟು ತಂದಿದ್ದೇನೆ. ನೀವು ತಿನ್ನಬೇಕು' ಎಂದು ಗುರುದೇವ ರಾನಡೆಯವರನ್ನು ಕೇಳಿಕೊಂಡರು. ಆಗ ಅವರಿಗೆ ಹಾಲು ಕೂಡ ಪಚನವಾಗುತ್ತಿರಲಿಲ್ಲ. ಕಡುಬು ತಿನ್ನುವುದೆಂತು? 'ನನಗೆ ಹಾಲು ಕೂಡ ಜೀರ್ಣಿಸುವುದಿಲ್ಲ; ಕಡುಬು ಹೇಗೆ ತಿನ್ನುವುದು?' ಎಂದು ಹೇಳಿ ಗುರುದೇವ ರಾನಡೆ ಅವರು ಕಡುಬು ತಿನ್ನಲು ನಿರಾಕರಿಸಿದರು. 'ಕಡುಬು ನಾನು ಅಧ್ಯಾತ್ಮದೃಷ್ಟಿ ಇಟ್ಟು ಮಾಡಿದ್ದೇನೆ, ತಿನ್ನಲೇಬೇಕು' ಎಂದು ಶಿವಲಿಂಗವ್ವನವರು ಗುರುದೇವ ರಾನಡೆಯವರಿಗೆ ಒತ್ತಾಯಪಡಿಸಹತ್ತಿದರು. 'ಅದು ಸಾಧ್ಯವಿಲ್ಲ'ವೆಂದು ಅವರು ಹೇಳಹತ್ತಿದರು. ಈ ವಿಷಯದ ಬಗ್ಗೆ ಪರಸ್ಪರರಲ್ಲಿ ಮಾತುಗಳು ಬೆಳೆದು ಕೊನೆಗೆ ಮನಸ್ತಾಪಕ್ಕೆ ಇಟ್ಟಿತು. ಗುರುದೇವ ರಾನಡೆಯವರಿಗೆ ತಮಗಾದ ದೃಷ್ಟಾಂತದ ಅರ್ಥವಾಯಿತು. ಈ ರಸನಿಮಿಷವನ್ನು ಹೇಳಿ ಗುರುದೇವ ರಾನಡೆಯವರು ಎಲ್ಲರನ್ನು ನಗೆಗಡಲಲ್ಲಿ ತೇಲಿಸಿ ಬಿಡುತ್ತಿದ್ದರಲ್ಲದೆ ಅಹಂಕಾರವು ಎಷ್ಟು ಸೂಕ್ಷ್ಮವಾಗಿ ನಮಗೆ ತಿಳಿಯದಂತೆ ಹೇಗೆ ಅಡಗಿರುವ ಸಂಭವವಿದೆಯೆಂಬುದನ್ನು ಸೂಚ್ಯವಾಗಿ ತಿಳಿಸುತ್ತಿದ್ದರು.

**ಚಿಮ್ಮಡದ ಉತ್ಸಹ :** ಶಿವಲಿಂಗವ್ವನವರು ತಮ್ಮ ಗುರುಸ್ಥಾನಗಳಾದ ನಿಂಬರ್ಗಿ, ಇಂಚಗೇರಿಗೆ ಹೋಗುತ್ತಿದ್ದಂತೆ, ಶ್ರೀಉಮದೀ ಮಹಾರಾಜರಿಗೆ ಮಂತ್ರಾಕ್ಷಗಳನ್ನು ಹೇಳಿದ ಶ್ರೀರಘುನಾಥಪ್ರಿಯ ಸಾಧುಮಹಾರಾಜರ ಪುಣ್ಯಭೂಮಿಯಾದ ಚಿಮ್ಮಡಕ್ಕೂ

ಹೋಗುತ್ತಿದ್ದರೆಂಬುದು ಅವರು ಬರೆದಿಟ್ಟ ಸಂಗತಿಗಳ ಮೇಲಿಂದ ತಿಳಿದು ಬರುವಂತಿದೆ.

ಶಿವಲಿಂಗವ್ವನವರು ಚಿಮ್ಮಡಕ್ಕೆ ಶ್ರೀರಘುನಾಥಪ್ರಿಯ ಸಾಧುರವರ ಉತ್ಸವಕ್ಕೆ ಕ್ರಿ.ಶ.೧೯೨೧-೨೨ರಲ್ಲಿ ಹೋಗಿದ್ದರೆಂದು ಅವರು ಅಲ್ಲಿಯ ಉತ್ಸವದ ವರ್ಣನೆಯನ್ನು ಮಾಡಿರುವುದರ ಮೇಲಿಂದ ತಿಳಿದು ಬರುವಂತಿದೆ. ನಮಗೆ ದೊರೆತ ಅವರ ಸಂಬಂಧದ ಕಾಗದಪತ್ರಗಳಲ್ಲಿ ದಿ. ೨೦ ಸೆಪ್ಟಂಬರ್ ೧೯೨೨ ಎಂದು ದಿನಾಂಕವನ್ನು ಬರೆದು ಅದರ ಕೆಳಗೆ-

> "ಲಕ್ಷಕೊಟ್ಟು ನೋಡಿದೆ । ಲಕ್ಷಜ್ಯೋತಿ ಹಚ್ಚಿದೆ । ಲಕ್ಷದಲ್ಲಿ ನಿಂತಿದೆ। ರಘುನಾಥ ಮಹೋತ್ಸವ ಮೂರ್ತಿ ॥ ಹೊತ್ತುಕೊಂಡು ತರುವರು ರಥ। ಜನ ನೋಡುವರದ । ಹೂಮಳೆ ದೇವಗಣ । ಗರೆಯುವುದು ನಾ ಕಂಡೆ॥"

ಎಂದು ಶ್ರೀರಘುನಾಥಪ್ರಿಯ ಸಾಧುರ ರಥೋತ್ಸವವು ಪಾಪನಾಶೀ ಕುಂಡದಲ್ಲಿ ಆಗುವುದನ್ನು ಕಂಡು ಅದರ ವರ್ಣನೆಯನ್ನು ಅವರು ಮಾಡಿರುವರು. ಇನ್ನೊಂದೆಡೆಗೆ ಅಲ್ಲಿಯ ರಥೋತ್ಸವದ ಸವಿಸ್ತಾರ ವರ್ಣನೆಯು ದೊರೆಯುವುದು. ಇನ್ನೊಂದು ಕಾಗದದ ಮೇಲೆ :

> "ರಥ ಬಿಟ್ಟರು ನಿನ್ನ । ರಘುನಾಥ ಮಹಿಮೆಯ । ನಿನ್ನ ರಘುನಾಥ ಮಹಿಮೆಯ । ನಿನ್ನ ಪ್ರದಕ್ಷಿಣೆ ಮೂರು । ಮೂರು ವೇಳೆ ಮೂರ್ತಿಯು ನಿಂತಿತು । ರಥ ನಿಂತಿತು । ರಥ ತಿರುಗಿ ಹರಿ ಬಂದರು ಆರತಿ ಬೆಳಗಿದರು।.... ಸುಂದರ ಶಬ್ದಗಳಿಂದ ಗಂಗಾತೀರದಲ್ಲಿ ಬಿಟ್ಟರು." (ಚಿಮ್ಮಡದಲ್ಲಿಯ ಪ್ರಸಂಗದ ಮೇಲೆ) 'ಮುತ್ತಿನ ಕುಂಡ ತಾಯಿ । ಒಳಗೆ ನೋಡಲು । ಕುಂಡದಲಿ ಮೂರ್ತಿ ನಿಂತಿತು. ನೋಡಿ ಮೈಮರೆತೆನಮ್ಮಾ, ಈ ವಸ್ತು ವರ್ಣನ ಮಾಡುವದೆಷ್ಟಮ್ಮಾ"

ಎಂದು ಶಿವಲಿಂಗವ್ವನವರು ತಮಗಾದ ಶ್ರೀರಘುನಾಥಪ್ರಿಯ ಸಾಧುಗಳ ದರ್ಶನವನ್ನು ಕುರಿತು ಹೇಳಿದಂತೆ ತೋರುತ್ತದೆ.

**ಗುರುದೇವ ರಾನಡೆಯವರ ಆಶ್ರಮದಲ್ಲಿ :** ಕ್ರಿ.ಶ. ೧೯೨೪-೨೫ರಲ್ಲಿ ಗುರುದೇವ ರಾನಡೆಯವರು ನಿಂಬಾಳ ಸ್ಟೇಶನದ ಪಕ್ಕದಲ್ಲಿ ತಾವು ಕೊಂಡುಕೊಂಡ ಹೊಲದಲ್ಲಿ ತಮಗಾಗಿ ಒಂದು ಮನೆಯನ್ನು ಕಟ್ಟಿಸಿದರು. ತಮ್ಮ ಗುರುಬಂಧುಗಳಲ್ಲಿ ಕೆಲವು ಹಿರಿಯ ಸಾಧಕರನ್ನು ಬರಮಾಡಿಕೊಂಡು ನಾಮಸಪ್ತಾಹವನ್ನು ನೆರವೇರಿಸಿ ವಾಸ್ತುಶಾಂತಿಯನ್ನು ಮಾಡಬೇಕೆಂದು ಗೊತ್ತು ಮಾಡಿ ಶಿವಲಿಂಗವ್ವನವರಿಗೆ ಔತಣದ ಓಲೆಯನ್ನು ಕಳಿಸಿದರು.

ದಿ: ೧-೪-೧೯೨೫

"ಕೃ.ಸಾ.ನ.ವಿ.ವಿ. ಬರುವ ಚೈತ್ರ ವದ್ಯ ಪ್ರತಿಪದೆಯಿಂದ ತೃತಿಯೆಯವರೆಗೆ ಇಲ್ಲಿಯ ಹೊಸಮನೆಯ ವಾಸ್ತುಶಾಂತಿಯ ನಿಮಿತ್ತ ಸಪ್ತಾಹವನ್ನು ನೆರವೇರಿಸುವುದು ಗೊತ್ತಾಗಿದೆ..... ತಾವು ಕೋಳಗೇರಿ ಬಸಪ್ಪನನ್ನು ಸಂಗಡ ಕರಕೊಂಡು ಅವಶ್ಯವಾಗಿ ಬರಬೇಕು. ಇಂತಿ ವಿನಂತಿ.

ಆಮಂತ್ರಣವು ಯೋಗ್ಯ ವೇಳೆಗೆ ಶಿವಲಿಂಗವ್ವನವರಿಗೆ ತಲುಪಲಿಲ್ಲ. ಆದ್ದರಿಂದ ಅವರಿಗೆ ವಾಸ್ತುಶಾಂತಿಗೆ ಬರುವುದಾಗಲಿಲ್ಲ. ಆಗ ಗುರುದೇವ ರಾನಡೆಯವರು ಅವರಿಗೆ ಕೆಳಗಿನಂತೆ ಕಾಗದ ಬರೆದಿರುವರು.

೧೬-೪-೧೯೨೫

"ಸಪ್ತಾಹವು ನಿರ್ವಿಘ್ನವಾಗಿ ಮುಗಿಯಿತು. ತಾವು ಬರಬಹುದೆಂದು ನಮಗೆ ಬಹಳ ಉತ್ಸಾಹವಿದ್ದಿತು. ಆದರೆ ತಮಗೆ ಬರುವುದಾಗಲಿಲ್ಲ. ಅದರಿಂದ ನಮಗೆ ವಿಷಾದವಾಯಿತು..."

ಶಿವಲಿಂಗವ್ವನವರು ತಮ್ಮಲ್ಲಿ ಬರಬೇಕೆಂದು ಗುರುದೇವ ರಾನಡೆಯವರ ಮನಸ್ಸಿನಲ್ಲಿದ್ದಂತೆ ತಾವು ನಿಂಬಾಳಕ್ಕೆ ಹೋಗಿ ಗುರುದೇವ ರಾನಡೆಯವರ ಮನೆಯಲ್ಲಿ ಕೆಲವು ದಿವಸದ ಮಟ್ಟಿಗೆ ಇದ್ದು ನೇಮ ಮಾಡಿಕೊಂಡು ಬರಬೇಕೆಂದು ಶಿವಲಿಂಗವ್ವನವರ ಮನದಲ್ಲಿಯೂ ಇದ್ದಿತು. ಕ್ರಿ.ಶ. ೧೯೨೫ರ ಶ್ರಾವಣಮಾಸದಲ್ಲಿ ಗುರುದೇವ ರಾನಡೆಯವರ ಇಚ್ಛೆಯಂತೆ, ನಿಂಬಾಳಕ್ಕೆ ಹೋಗಿ, ೧೫ ದಿವಸ ಅವರಲ್ಲಿ ಇದ್ದುಕೊಂಡು ನಾಮ ಸಾಧನವನ್ನು ಮಾಡಿಕೊಂಡು ಆತ್ಮಾನಂದದ ಆನಂದವನ್ನು ಉಂಡು ಶಿವಲಿಂಗವ್ವನವರು ನಿಂಬಾಳದಿಂದ ಜತ್ತಿಗೆ ಹೋದ ಮೇಲೆ ಅವರು ಗುರುದೇವ ರಾನಡೆಯವರಿಗೆ ಕೆಳಗಿನಂತೆ ಕಾಗದ ಬರೆದರು.

"ತಮ್ಮ ಆಶ್ರಮದಲ್ಲಿ ೧೫ ದಿವಸ ಆನಂದ ಐಶ್ವರ್ಯದಲ್ಲಿ ಕಾಲ ಕಳೆದೆನು. ಅದನ್ನು ಹೇಳಲು ಬಾರದು. ಸಾಧನ, ಪ್ರಕಾಶ, ಪ್ರಭಾ, ಮಧುರ ಸ್ವರ, ಮೂರ್ತಿರೂಪ ಈ ಯೋಗದಲ್ಲಿ ತುಂಬಿ ತುಳುಕುತ್ತಿತ್ತು..."

ನಿಂಬಾಳಕ್ಕೆ ಗುರುದೇವ ರಾನಡೆಯವರಲ್ಲಿ ಬಂದಾಗಲೆಲ್ಲ ಅವರ ಮನೆಯಲ್ಲಿಯ ಅಡಿಗೆ ಮನೆಯ ಪಕ್ಕದ ಕೋಣೆಯಲ್ಲಿ (ಗುರುದೇವ ರಾನಡೆಯವರ ಚಹಾದ ಕೋಣೆ) ಶಿವಲಿಂಗವ್ವನವರು ಉಳಿದುಕೊಳ್ಳುತ್ತಿದ್ದರು. ಅಲ್ಲಿಯೇ ಅವರು ನೇಮಕ್ಕೆ ಕುಳಿತು ಕೊಳ್ಳುತ್ತಿದ್ದರು. ನಿಂಬಾಳಕ್ಕೆ ಬಂದಾಗಲೆಲ್ಲ ನಮ್ಮ ಸಂಗಡ ಶ್ರೀ ಉಮದೀ ಮಹಾರಾಜರ ಶಿಷ್ಯರಾದ ಕೋಳಗೇರಿ ಬಸಪ್ಪನನ್ನು ತಮ್ಮ ಊಟ ಉಡಿಗೆಯ ವ್ಯವಸ್ಥೆ ಮಾಡಲು

ಶಿವಲಿಂಗವ್ವನವರು ತಮ್ಮ ಸಂಗಡ ಕರೆತರುತ್ತಿದ್ದರು. ಬಸಪ್ಪನು ಅವರ ಅಡಿಗೆ ಮಾಡಬೇಕು, ಅವರಿಗೆ ಊಟಕ್ಕೆ ಬಡಿಸಬೇಕು, ಕಸ ಮುಸುರೆಯನ್ನು ತೆಗೆದು ಕೋಣೆಯನ್ನು ಸ್ವಚ್ಛವಾಗಿ ಇಡಬೇಕು ಅಲ್ಲದೆ ಬಾವಿಯಿಂದ ಅವರಿಗಾಗಿ ನೀರು ತರಬೇಕು. ಈ ರೀತಿ ಪ್ರತಿವರುಷ ಕೆಲವು ದಿವಸಗಳ ಮಟ್ಟಿಗಾದರೂ ಶಿವಲಿಂಗವ್ವನವರು ನಿಂಬಾಳಕ್ಕೆ ಬಂದು ಗುರುದೇವ ರಾನಡೆಯವರ ಮನೆಯಲ್ಲಿದ್ದು ಆತ್ಮಾನುಭವದ ಆನಂದವನ್ನು ಉಂಡು ತಣಿದು ತಮ್ಮ ಊರಿಗೆ ಮರಳಿ ಹೋಗುತ್ತಿದ್ದರು.

ಗುರುದೇವ ರಾನಡೆಯವರ ಮನೆಯಲ್ಲಿದ್ದು ನೇಮ ಮಾಡುವ ಕಾಲಕ್ಕೆ ಅವರಿಗೆ ಅನೇಕ ಬಗೆಯ ಆತ್ಮಾನುಭವಗಳು ಬಂದಿವೆಯೆಂಬುದು ಕಂಡು ಬರುತ್ತದೆ. ತಮಗೆ ಬಂದ ಅನುಭವಗಳನ್ನು ಕೆಲವು ಸಲ ಅವರು ಗುರುದೇವ ರಾನಡೆಯವರಿಗೆ ಪತ್ರ ಬರೆದು ತಿಳಿಸುತ್ತಿದ್ದರು. ಒಂದು ಸಲ ಅವರು ತಮ್ಮ ಅನುಭವಗಳನ್ನು ಗುರುದೇವ ರಾನಡೆಯವರ ಟಂಕಲೇಖಕರಾದ ಧರ್ಮಾಧಿಕಾರಿಯವರ ಹೆಸರಿನಿಂದ ಕಾಗದ ಬರೆದು ತಿಳಿಸಿದುದು ಕಂಡುಬರುತ್ತದೆ. ಆ ಪತ್ರದ ಮುಖ್ಯಾಂಶಗಳು ಇಂತಿವೆ.

> "ಸಾಧು ಸಂತರ ಚರಣವು ನಿತ್ಯವಾಗಲಿ. ಸಾಧುಸಂತರ ಮನೆಗೆ ಅನುಭವದ ಆರಾಸವು ಸೂಜಿ, ಜಾಜಿ ಮಲ್ಲಿಗೆಗಳ ಸುವಾಸವು. ಆನಂದದ ವಾತಾವರಣವು. ಏಳು ದಿವಸ ಸಪ್ತಾಹ ಶ್ರೀರಾಮದೇವರಾಯರ ಆಶ್ರಮದಲ್ಲಿ ಆಯಿತು. ಆ ಆನಂದವನ್ನು ಹೇಳಬೇಕಾದರೆ ಕಂಠ ತುಂಬಿ ಬರುವುದು. ಹೇಳಲು ಸಾಧ್ಯವಿಲ್ಲ. ಗುಣಗಾನ ಮಾಡುವುದರಿಂದ ಮನಸಿನಲ್ಲಿ ನಿರಂತರ ಏಕಾಗ್ರತೆಯಾಗುವುದರಿಂದ ಉಪರತಿಯಾಗಿ ಜಲಚರ ವನಚರಗಳು ಓಡಿಹೋದವು.
>
> ಬಳ್ಳಿಯಿಲ್ಲದೆ ಹೂವಿಲ್ಲ. ಹೂವಿಲ್ಲದೆ ಬಳ್ಳಿಯಿಲ್ಲ. ಬಳ್ಳಿಗೆ ಹೂವಿಲ್ಲ. ಹೂವಿಗೆ ಬಳ್ಳಿಯಿಲ್ಲ. ಇದೆಂಥ ಸುಗಂಧವು."

ಶಿವಲಿಂಗವ್ವನವರು ನಿಂಬಾಳದಲ್ಲಿರುವ ವೇಳೆಯಲ್ಲಿ ಅವರು ನೇಮಕ್ಕೆ ಕುಳಿತಾಗ್ಗೆ, 'ನಿಂಬಾಳ ಆಶ್ರಮದಲ್ಲಿ ಸಾವಿರಾರು ಜನರು ಕೂಡಿದಂತೆ, ಅಲ್ಲಲ್ಲಿ ಡೇರೆಗಳನ್ನು ಹೊಡೆದು ಜನರು ಇದ್ದಂತೆ ರಾಜರು ಮೊದಲಾದ ಅನೇಕ ಯೋಗ್ಯತೆಯ ಜನರು ಅಲ್ಲಿ ನೆರೆದಂತೆ' ತಮಗೆ ದೃಷ್ಟಾಂತವಾದ ಬಗ್ಗೆ ಶಿವಲಿಂಗವ್ವನವರು ಹೇಳಿದರೆಂದು ಗುರುದೇವ ರಾನಡೆಯವರು ಹೇಳುತ್ತಿದ್ದರು. ಅವರ ದೃಷ್ಟಾಂತವು ಸತ್ಯವಾಯಿತೆಂದು, ಸಾಂಗ್ಲಿ, ಮಿರಜ ರಾಜೇಸಾಹೇಬರು, ಮಂತ್ರಿಗಳು ನಿಂಬಾಳಕ್ಕೆ ಬಂದಾಗ ಗುರುದೇವ ರಾನಡೆಯವರು ಹೇಳಿದುದುಂಟು.

ನಿಂಬಾಳದಲ್ಲಿ ಬಂದು ಇರುತ್ತಿರುವಾಗಲೇ ಶಿವಲಿಂಗವ್ವನವರ ಮತ್ತು ಗುರುದೇವ ರಾನಡೆಯವರ ಧರ್ಮಪತ್ನಿಯರಾದ ಸೀತಾಬಾಯಿಯವರ ಪರಸ್ಪರ ಪರಿಚಯ

ಬೆಳೆದು ದೃಢವಾಯಿತು. ಶಿವಲಿಂಗವ್ವನವರು ಅವರನ್ನು ತಮ್ಮ ಚಿಕ್ಕ ತಂಗಿಯಂತೆ ಪ್ರೇಮದಿಂದ ಕಾಣುತ್ತಿದ್ದರೆಂದು ಪ.ಪೂ. ಮಾ. ಸೀತಾಬಾಯಿಯರೇ ಹೇಳುತ್ತಾರೆ. ಸ್ನಾನಕ್ಕಾಗಿ, ಇಲ್ಲವೆ ಬಟ್ಟೆಗಳನ್ನು ಒಗೆದು ಹಾಕುವುದಕ್ಕಾಗಿ ತಾವು ಬಾವಿಗೆ ಹೋಗುವಾಗ, ಸೀತಾಬಾಯಿಯವರನ್ನು ತಮ್ಮ ಸಂಗಡ ಕರೆದುಕೊಂಡು ಹೋಗುತ್ತಿದ್ದರಲ್ಲದೆ ಅವರಿಗೆ ಒಳ್ಳೆಯ ಉಪದೇಶದ ನಾಲ್ಕು ಮಾತುಗಳನ್ನು ಹೇಳುತ್ತಿದ್ದರು. ಗುರುದೇವ ರಾನಡೆಯವರ ಶರೀರ ಪ್ರಕೃತಿಯ ಬಗ್ಗೆ, ಅವರ ಊಟ ಉಪಚಾರದ ಬಗ್ಗೆ ಒಳ್ಳೇ ಜಾಗರೂಕರಾಗಿರಲು ಅವರು ಸೀತಾಬಾಯಿಯವರಿಗೆ ಬೋಧನೆ ಮಾಡುತ್ತಿದ್ದರು. ನಾಮನೇಮವನ್ನು ಸದಾಕಾಲ ಮಾಡುತ್ತಿರಬೇಕೆಂದು ತಮಗೆ ಅವರು ಹೇಳುತ್ತಿದ್ದರೆಂದು ಪ.ಪೂ. ಮಾ. ಸೀತಾಬಾಯಿಯವರೇ ಹೇಳಿದುದುಂಟು. ಶಿವಲಿಂಗವ್ವನವರು ಸೀತಾಬಾಯಿಯವರಿಗೆ ಒಂದೆರಡು ಪತ್ರಗಳನ್ನು ಬರೆದುದು ಈಗ ಬೆಳಕಿಗೆ ಬಂದಿದೆ. ಅವುಗಳಲ್ಲಿಯ ಒಂದು ಪತ್ರವು ಇಂತಿದೆ.

ಶ್ರೀ ಸದ್ಗುರು ಸಮರ್ಥ

"ಶ್ರೀಮತ್ ವಜ್ರಚೂಡಾಮಂಡಿತ ಕುಂ.ಸೌ. ಯುವರಾಜ ಮುಖಪುತ್ರ ಸಂಪನ್ನ ಕುಮಾರೀ ಸೀತಾದೇವಿ ರಾಮಜಾನಕಿ ಇವರಿಗೆ ಆನಂದ ಆಶೀರ್ವಾದ ಸಂಪೂರ್ಣ ನಮನಪೂರ್ವಕ ನಮಸ್ಕಾರ ವಿ.ವಿ.

ಪತ್ರ ಬರೆಯುವ ಕಾರಣವೇನೆಂದರೆ ನಾನು ಹೇಳಿದ ಹಾಗೆ ನೇಮದಿಂದ ನಡಿಯಬೇಕು. ಜ್ಞಾನ ದೃಷ್ಟಿಯಿಂದ ನಾಮಸ್ಮರಣ ಮಾಡುತ್ತಿರಬೇಕು. ದೃಷ್ಟಿಯಿಂದ ನಾಮಸ್ಮರಣ ಮಾಡುತ್ತಿರಬೇಕು. ದೃಷ್ಟಿ ಬಿಡಬಾರದು. ತಮ್ಮ ಪುರುಷನಿಗೆ ಸ್ವಂತ ಮಾಡಿಹಾಕಿ ಅವರ ಹೊಟ್ಟೆಯನ್ನು ನೋಡುತ್ತಿರಬೇಕು. ಚಿ. ರತ್ನಕನ್ಯಾ ಶಕುಂತಲಾಳಿಗೆ ಆಶೀರ್ವಾದ. ನೇಮ ಮಾಡಲು ಹೇಳಬೇಕು.

ಶಿವಕ್ಕಾ."

ಶಿವಲಿಂಗವ್ವನವರು ತಮ್ಮ ಜೀವನದಲ್ಲಿ ಸಂಭವಿಸಿದ ಸುಖದುಃಖದ ಪ್ರಸಂಗಗಳನ್ನು ಸೀತಾಬಾಯಿಯವರಿಗೆ ಹೇಳುತ್ತಿದ್ದರೆಂದೂ, ತಮಗೆ ಮಹಾರಾಜರು ಹೇಗೆ ನಾಮಕೊಟ್ಟರೆಂಬುದನ್ನೂ, ಇವಲ್ಲದೆ ಉಳಿದ ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಮಾತುಗಳನ್ನೂ ಒಳ್ಳೇ ಆತ್ಮೀಯತೆಯಿಂದ ತಮಗೆ ಹೇಳುತ್ತಿದ್ದರೆಂದು ಪ.ಪೂ.ಮಾ. ಸೀತಾಬಾಯಿಯವರು ಹೇಳುವರು.

ಇಂಚಗೇರಿ ಮತ್ತು ನಿಂಬಾಳವನ್ನು ತಮ್ಮ ಸಾಧನದ ಸ್ಥಾನಗಳೆಂದು ಶಿವಲಿಂಗವ್ವನವರು ಬಗೆದಿದ್ದರೂ ಮೂಲಸ್ಥಾನವಾದ ನಿಂಬರ್ಗಿಯನ್ನು ಅವರು

ಬಿಟ್ಟಿರಲಿಲ್ಲ. ಆಗಾಗ್ಗೆ ಅವರು ನಿಂಬರ್ಗಿ ಉತ್ಸವಕ್ಕೂ ಹೋಗುತ್ತಿದ್ದರು. ಅಲ್ಲಿಯ ದೇವಾಲಯದಲ್ಲಿರುವ ಬೆಳ್ಳಿಯ ಬೆತ್ತಗಳಲ್ಲಿ ಒಂದನ್ನು ಶಿವಲಿಂಗವ್ವನವರೇ ಮಾಡಿಸಿ ಕೊಟ್ಟುದುಂಟು. ಕ್ರಿ.ಶ. ೧೯೨೭ರಲ್ಲಿ ಲಿಂಗ ಸ್ಥಾಪನೆಯನ್ನು ಮಾಡುವ ದಿವಸ ಮತ್ತು ವೇಳೆಯನ್ನು ಕುರಿತು ಶಿವಲಿಂಗವ್ವನವರ ಸಂಕೀರ್ಣ ಟಿಪ್ಪಣೆಗಳಲ್ಲಿ ದಿ. ೨೩-೧೦-೧೯೨೭ರ ಟಿಪ್ಪಣಿಯಲ್ಲಿ 'ಮಾರ್ಗಶೀರ್ಷ ಶುದ್ಧ ಏಕಾದಶಿ ರೋಜ ಸೋಮವಾರ ಸೂರ್ಯಉದಯಾಚೆ ಆತ ಸ್ಥಾಪನಾ ಕರಣೆಸ ಯೋಗ್ಯ ನಂತರ ಅಕರಾ ವಾಜಣ್ಯಾಚೆ ಆತ ಪೂಜಾ ವಿಧಾನ ಸಮಾಪ್ತ' ಎಂದು ಇದೆ. ಆದರೆ ಲಿಂಗಸ್ಥಾಪನೆಯಾದದ್ದು ಗುರುವಾರ ಮಾರ್ಗಶೀರ್ಷ ಶು. ಹುಣ್ಣಿಮೆಯ ದಿವಸ ಶ್ರೀನಿಂಬರ್ಗಿ ಮಹಾರಾಜರ ಸಮಾಧಿಯ ಮೇಲೆ ಈಗಿರುವ ಶಿವಲಿಂಗ ಪ್ರತಿಷ್ಠಾಪನೆಯು ಆಯಿತು. ಅದರ ಬಗ್ಗೆ ಅವರು ತಮ್ಮ ಸಂತೋಷವನ್ನು ವ್ಯಕ್ತಮಾಡಿ ಗುರುದೇವ ರಾನಡೆಯವರಿಗೆ ಕಾಗದ ಬರೆದಿರುವರು. ಲಿಂಗ ಸ್ಥಾಪನೆಯ ಕಾಲಕ್ಕೆ ಶಿವಲಿಂಗವ್ವನವರು ಅಲ್ಲಿ ಹೋಗಿದ್ದರೆಂಬುದು ಅವರ ಪತ್ರದ ಮೇಲಿಂದ ಕಂಡು ಬರುವಂತಿದೆ.

ನಿರ್ಯಾಣ: ಹೀಗೆ ಇಂಚಗೇರಿ, ನಿಂಬಾಳ, ಜತ್ತಿಯಲ್ಲಿದ್ದು ತಮ್ಮ ಆತ್ಮಾನುಭವದ ಆನಂದವನ್ನು ಸವಿಯುತ್ತ ಮುಕ್ತಜೀವಿಗಳಾಗಿ ಇರುತ್ತಿರುವಂತೆ ಶಿವಲಿಂಗವ್ವನವರಿಗೆ ಅನಿರೀಕ್ಷಿತವಾಗಿ ಮಾರಿಕಾ ಬೇನೆಯ ಬಾಧೆಯಾಯಿತು. ಇತ್ತ ಶಿವಲಿಂಗವ್ವನವರು ಬಳಲುತ್ತಿರುವ ಕಾಲದಲ್ಲಿ ಅಲಾಹಾಬಾದದಿಂದ ಗುರುದೇವ ರಾನಡೆಯವರು ಅವರಿಗಾಗಿ ಒಂದು ಆಸನವನ್ನು ಕೊಂಡು ಕಳುಹಿಸಿದ್ದರು. ದುರ್ದೈವದ ಸಂಗತಿಯೆಂದರೆ ಆ ಆಸನದ ಮೇಲೆ ಕುಳಿತುಕೊಂಡು ಧ್ಯಾನ ಮಾಡಲು ಶಿವಲಿಂಗವ್ವನವರು ಉಳಿಯಲಿಲ್ಲ. ಆ ಆಸನವು ಶಿವಲಿಂಗವ್ವನವರಿಗೆ ತಲುಪುವಷ್ಟರಲ್ಲಿ ಶಿವಲಿಂಗವ್ವನವರ ಪ್ರಾಣಪಕ್ಷಿಯು ಹಾರಿಹೋಗಿತ್ತು.

ಆ ಕಾಲರಾ ಬೇನೆಯಿಂದ ತಾವು ಉಳಿಯುವುದು ಸಾಧ್ಯವಿಲ್ಲವೆಂದು ಶಿವಲಿಂಗವ್ವನವರಿಗೆ ತಿಳಿಯಿತು. ಆಗ ಅವರು ತಮ್ಮ ಪರಿಚಯಸ್ಥರನ್ನು ಕರೆದು ಇದ್ದುಬಿದ್ದ ತಮ್ಮ ಆಸ್ತಿಯನ್ನು ತಮ್ಮ ಅಕ್ಕನ ಮಗಳಾದ ಮುರಿಗೆವ್ವನಿಗೆ ಕೊಟ್ಟು ಅವರ ಹೆಸರಿನಲ್ಲಿ ಮೃತ್ಯುಪತ್ರವನ್ನು ಮಾಡಿಕೊಟ್ಟುಬಿಟ್ಟರು. ಕ್ರಿ.ಶ. ೧೯೩೦, ನವಂಬರ್ ೭ ರಂದು ಅಂದರೆ ಶಾ.ಶ. ೧೮೫೭ ಕಾರ್ತಿಕ ವ. ಪ್ರತಿಪದೆ ದಿವಸ ಅವರ ಆತ್ಮವು ಪರಮಾತ್ಮನನ್ನು ಸೇರಿತು.

ಶಿವಲಿಂಗವ್ವನವರ ನಿರ್ಯಾಣದ ನಂತರ ಮುರಿಗೆವ್ವನಿಗೆ ಗುರುದೇವ ರಾನಡೆಯವರು ಸಾಂತ್ವನಪರ ಪತ್ರ ಬರೆದರು. ಅದರಲ್ಲಿಯ ಮಹತ್ವದ ಭಾಗವನ್ನು ಕೆಳಗೆ ಕೊಟ್ಟಿದೆ.

೨೬-೧೧-೧೯೩೦

"ಶ್ರೀ ಶಿವಲಿಂಗವ್ವಾ ಅಕ್ಕಾ ಅವರು ಕಾಲರಾ ಬೇನೆಯಿಂದ ಒಮ್ಮಿಂದೊಮ್ಮೆ ಜ್ಯೋತಿಸ್ವರೂಪರಾದ ಸುದ್ದಿಯನ್ನು ಓದಿ ಪರಮ ದುಃಖವಾಯಿತು. ಅದನ್ನು ಶಬ್ದದಲ್ಲಿ ಹೇಳುವುದು ಸಾಧ್ಯವಿಲ್ಲ. ಪರಮಾರ್ಥದಲ್ಲಿ ಅವರಂಥ ಒಂದು ರತ್ನವು ಕಳೆದು ಹೋದುದರಿಂದ ಅತ್ಯಂತ ವ್ಯಥೆಯಾಗಿದೆ. ಈಶನ ನಿಯಮದ ಮುಂದೆ ನಮ್ಮ ಮಾನವರ ಉಪಾಯವೇನು? ಈ ದುಃಖವನ್ನು ಸಹಿಸಲು ಅವನ ನಾಮದ ಆಶ್ರಯವನ್ನೇ ಪಡೆಯಬೇಕಾಗುವುದು. ಅದರ ಹೊರ್ತು ಬೇರೆ ಉಪಾಯವಿಲ್ಲ.

ಶ್ರೀಮಹಾರಾಜರ ತರುವಾಯ ಅವರಂಥ ಕಠೋರ ನೇಮ ಮಾಡುವವರು ಕ್ವಚಿತ್ತಾಗಿಯೆ ದೊರೆಯುವರು."

ರಾ.ದ.ರಾನಡೆ

## ೨

# ಶ್ರೀ ಶಿವಲಿಂಗವ್ವನವರ ಸಾಧನ ಸೋಪಾನ

ನರಜನ್ಮ ಅಪರೂಪವು: ಗುರುದೇವ ರಾನಡೆಯವರು ತಮ್ಮ P.W.G. in Kan. Lit ಎಂಬ ಗ್ರಂಥದಲ್ಲಿ 'ಬಹುದೊಡ್ಡದೀ ಜನ್ಮ ಜಂಬುದ್ವೀಪಾಂತರದಿ' ಎಂಬ ರೇವಣಸಿದ್ಧ ಎಂಬ ಮುದ್ರಿಕೆಯುಳ್ಳ ಅನುಭಾವಿಯ ಪದ್ಯದ ಮೇಲೆ ಭಾಷ್ಯ ಮಾಡುತ್ತ ಮಾನವ ಜನ್ಮದ ಗುರಿಯನ್ನು ಕುರಿತು ಚರ್ಚಿಸುವ ಕಾಲಕ್ಕೆ ಹೀಗೆ ಬರೆಯುವರು. "The first ideal of human life, is to pray incessantly and unceasingly to the God........ The second ideal should be that we should be caught up in His Greatness and lose ourselves in His Glory." P.W.G. in K.L.(P. 16) "ಎಡೆಬಿಡದೆ ಒಂದೇ ಸವನೆ ದೇವನಲ್ಲಿ ಪ್ರಾರ್ಥನೆ ಸಲ್ಲಿಸುವುದೇ ಮಾನವ ಜೀವನದ ಮೊದಲ ಗುರಿಯು... ಎರಡನೆಯದೆಂದರೆ ನಾವು ಅವನ ಮಹಿಮೆಯಿಂದ ಮುಗ್ಧರಾಗಿ ಅವನ ಕೀರ್ತಿಯನ್ನು ಕೊಂಡಾಡುವಲ್ಲಿ ಮೈಮರೆಯಬೇಕು." ಮೇಲಿನ ತಮ್ಮ ವಿವರಣೆಯಲ್ಲಿ ಗುರುದೇವ ರಾನಡೆಯವರು ಮಾನವ ಜೀವನದ ಗುರಿಯು ತಿಳಿಯಾದ ವಿಚಾರವನ್ನು ವಾಚಕರಿಗೆ ಅರುಹಿರುವರು. ಈ ಗುರಿಯನ್ನು ಸಾಧಿಸಲು ಬಂದ ಮಾನವಜನ್ಮವು ಬಹುದೊಡ್ಡ ದೆಂದೂ, ಅದನ್ನು ಸಾಧಿಸುವುದಕ್ಕಾಗಿಯೇ ಮನುಷ್ಯಜನ್ಮವು ಬಂದಿರುವದೆಂದೂ ಆ ಅನುಭಾವಿಯು ತನ್ನ ಪದ್ಯದಲ್ಲಿ ಹೇಳಿರುವನು. ಆದ್ದರಿಂದ ಈ ದೊಡ್ಡದಾದ ನರಜನ್ಮವು ಬರುವುದು ಅಪರೂಪವು. ಇದೇ ಸಂಗತಿಯನ್ನು, ಇದೇ ತತ್ತ್ವವನ್ನು ಒಳ್ಳೇ ತಿಳಿಯಾಗಿ ತಿಳಿಯುವಂತೆ, ಮಾರ್ಮಿಕವಾಗಿ ಕೆಳಗಿನ ವಚನದಲ್ಲಿ ಶಿವಲಿಂಗವ್ವನವರು ಹೇಳಿರುವರು.

"ಈ ನರಜನ್ಮಕ್ಕೆ ಬಂದದ್ದು ಅಪರೂಪವೆಂದು ತಿಳಿಯಬೇಕು. ಇದರಲ್ಲಿ ಪಾಪಮಣ್ಯಾ ಗಳು ತಿಳಿಯುವುದು. ಇದರಲ್ಲಿ ಧರ್ಮಕರ್ಮಗಳು ತಿಳಿಯುವುದು, ಇದರಲ್ಲಿ ಆಚಾರ ವಿಚಾರಗಳು ತಿಳಿಯುವುದು."

ಸಾರಾಸಾರವಿವೇಕಶಕ್ತಿಯು, ಪರಮಾತ್ಮನು ಮಾನವನಿಗೆ ಕೊಟ್ಟ ಅಮೂಲ್ಯವಾದ ಕಾಣಿಕೆಯು, ದೊಡ್ಡದಾದ ದತ್ತಿಯು. ಈ ವಿವೇಕಶಕ್ತಿಯ ಮಾನವನಲ್ಲಿಯಲ್ಲದೆ ಇನ್ನಾವ ಜೀವಿಯಲ್ಲಿ ಇಲ್ಲ. ಆದ್ದರಿಂದ ಮಾನವಜನ್ಮವು ಅಪರೂಪವು. ತನ್ನಲ್ಲಿರುವ ವಿವೇಕಶಕ್ತಿ ಯಿಂದ ತನ್ನ ಕೃತಿಗಳಲ್ಲಿ ಪಾಪಕೃತ್ಯ ಮತ್ತು ಪುಣ್ಯಕೃತಿಗಳನ್ನು ವಿಂಗಡಿಸಿ ಮಾನವ ನಾದವನು ತಿಳಿದುಕೊಳ್ಳಬಲ್ಲನು. ಆ ರೀತಿ ತಿಳಿದುಕೊಳ್ಳಬಲ್ಲವನೇ ಮಾನವನೆನಿಸುವನು.

ಮನುಷ್ಯನಾದವನು ಪಾಪ ಪುಣ್ಯಗಳ ತಿಳವಳಿಕೆ ಮಾಡಿಕೊಂಡು ಅಷ್ಟಕ್ಕೆ ನಿಲ್ಲಲಾಗದು. ತನ್ನ ಕೃತಿಗಳಲ್ಲಿ ಧರ್ಮವಾವುದು ಅಧರ್ಮವಾವುದೆಂಬುದನ್ನು ಅರಿತುಕೊಂಡು ಮುಂದಿನ ಕಾರ್ಯ ಮಾಡಲು ಅಣಿಯಾಗಬೇಕು. ನಾಮ ಸಾಧನಕ್ಕೆ ಅನುಕೂಲವಾದದ್ದು ಪುಣ್ಯವು, ಧರ್ಮವು. ಅದಕ್ಕೆ ಪ್ರತಿಕೂಲವಾದದ್ದು, ವಿರೋಧವಾದದ್ದು ಪಾಪವು ಅಧರ್ಮವು. ಇದನ್ನು ತನ್ನ ವಿವೇಕಶಕ್ತಿಯಿಂದ ಅರಿತುಕೊಂಡು ಅವನು ನಾಮ ಸಾಧನಕ್ಕೆ ಸಿದ್ಧನಾಗುವನು. ತಾನು ಮಾಡುವ ಕರ್ಮದ ಕಾರಣ, ಸ್ವರೂಪ ಮತ್ತು ಅದರ ಪರಿಣಾಮ ವನ್ನು ಅರಿತುಕೊಳ್ಳಬಲ್ಲನು ಮಾನವನು. ಕರ್ಮದ ಆಗುಹೋಗುಗಳನ್ನು ಅರಿತುಕೊಳ್ಳು ವುದಲ್ಲದೆ, ಪಾಪಕರ್ಮವನ್ನು ಬಿಟ್ಟು ಪುಣ್ಯಕರ್ಮವನ್ನು ಅವನು ಮಾಡಬಲ್ಲನು. ಕರ್ಮವೇ ಮಾನವನ ಆಚಾರವಿದ್ದು ತಿಳಿವಳಿಕೆಯೇ ಅವನ ವಿಚಾರವು. ಪಾಪಪುಣ್ಯಗಳ ತಿಳವಳಿಕೆಯನ್ನು ಮಾಡಿಕೊಂಡು ಅವನು ತನ್ನ ಆಚಾರ ವಿಚಾರಗಳಲ್ಲಿ ತಿದ್ದುಪಡಿಯನ್ನು ಮಾಡಿಕೊಳ್ಳಬಲ್ಲನು. ಮೇಲಿನ ಈ ಎಲ್ಲ ವಿಚಾರಗಳು ಶಿವಲಿಂಗವ್ವನವರ ಮೇಲಿನ ವಚನದಲ್ಲಿ ಅಡಕವಾಗಿವೆ.

ಧರ್ಮ–ಅಧರ್ಮ, ಪುಣ್ಯ–ಪಾಪ, ನ್ಯಾಯ–ಅನ್ಯಾಯ, ಇವೆಲ್ಲವುಗಳು ಒಂದೇ ಬಗೆಯ ಅರ್ಥವನ್ನು ಕೊಡುವ ಪದಗಳಾಗಿವೆ. 'ಸ್ವರೂಪದಲ್ಲಿರುವುದೇ ಸ್ವಧರ್ಮ'ವೆಂದು ಮಹಾರಾಷ್ಟ್ರ ಸಂತರಾದ ಶ್ರೀರಾಮದಾಸರು ಹೇಳುವರು. ಮಹಾರಾಷ್ಟ್ರದ ಸಂತಶ್ರೇಷ್ಠ ರೆನಿಸಿದ ಜ್ಞಾನೇಶ್ವರರು ಆತ್ಮಸಾಧನವೇ ಶುದ್ಧಪುಣ್ಯವೆಂದು ಹೇಳಿದುದನ್ನು ವಾಚಕರು ಗಮನಿಸಬೇಕು. ಶಿವಲಿಂಗವ್ವನವರು ನ್ಯಾಯ, ಅನ್ಯಾಯಗಳ ವಿವರವನ್ನು ಕೆಳಗಿನ ವಚನದಲ್ಲಿ ಹೇಳಿದುದು ಕಂಡು ಬರುತ್ತದೆ.

> "ಈ ವಿಷಯದ ಗುಣಗಳ ಬಿಟ್ಟು ನಿರ್ವಿಷಯದಿಂದ ಝಳ ಝಳಿತ
> ನಿರ್ಮಲವಾದಂಥಾ ಶಿವಶಿವಾ ಎಂದು ಶಿವಮಂತ್ರದಿಂದ ಸಾಧಿಸಿ
> ಕೊಂಡು ಇದ್ದರೆ ನ್ಯಾಯವಾಯಿತು ಇಲ್ಲದಿದ್ದರೆ ಅನ್ಯಾಯವಾಯಿತು"

ಮೇಲಿನ ಅವರ ವಚನದಲ್ಲಿಯ ನ್ಯಾಯಾನ್ಯಾಯಗಳ ವ್ಯಾಖ್ಯೆಯು ರಾಮದಾಸರ ಧರ್ಮಾಧರ್ಮದ ಮತ್ತು ಜ್ಞಾನೇಶ್ವರರು ಶುದ್ಧ ಪುಣ್ಯದ ಬಗ್ಗೆ ಹೇಳಿದ ವಿಚಾರಗಳಿಗೆ ಸರಿ ಹೋಗುತ್ತದೆ. ಮೇಲಿನ ತಮ್ಮ ವಚನದಲ್ಲಿ ನ್ಯಾಯಾನ್ಯಾಯಗಳ ಬಗ್ಗೆ ಹೇಳುತ್ತಿರುವಂತೆ ಪುಣ್ಯಪಾಪದ ಬಗ್ಗೆ, ಧರ್ಮಾಧರ್ಮದ ಬಗ್ಗೆಯೂ ಅವರು ಹೇಳಿದಂತಾಗಿದೆ.

**ಮಾನವ ಜೀವನದ ಗುರಿ :** ಮಾನವ ಜನ್ಮದ ಮಹತ್ವವು ಅವನ ಜೀವನದ ಗುರಿಯ ಮೇಲೆ ಅವಲಂಬಿಸಿದೆ. ಗುರಿಯು ಎಷ್ಟು ದೊಡ್ಡದು, ವಿಶಾಲವಾದದ್ದು, ಅಷ್ಟು ಅವನ ಜನ್ಮಕ್ಕೆ ಮಹತ್ವ ಬರುವುದು. ನರದೇಹಕ್ಕೆ ಬಂದ ಮೇಲೆ 'ಶಿವನ ಕಂಡು ಭವನೀಗಬೇಕೆ'ಂದು

ಶಿವಲಿಂಗವ್ವನವರು 'ಕಿರಿದೊಳ್ ಪಿರಿದುಂ' ಪೇಳಿರುವರು; ಮತ್ತು

"ಈ ಕಾಯಾ ಪಟ್ಟಣಕ್ಕೆ ಬಂದು ಪರಮಾತ್ಮನ ಖೂನ ಹಿಡಿಯದೆ
ಹೋದರೆ ಆ ಪಟ್ಟಣವು ಹಾಳು ಬಿದ್ದಂತೆ ನೋಡಾ"

ಎಂದು ಹೇಳಿರುವುದರಲ್ಲಿ 'ಆತ್ಮನ ಖೂನ ಹಿಡಿಯುವುದೆ' ಮಾನವ ಜೀವನದ ಗುರಿಯೆಂಬುದನ್ನು ಸ್ಪಷ್ಟಪಡಿಸಿರುವರು. ಈ ನರದೇಹದೊಳಗೆ ಬಂದ ಮೇಲೆ, ಪಟ್ಟಣದ ಅಂದರೆ ಈ ದೇಹದ ಒಡೆಯನಾದ ಆತ್ಮನನ್ನು ಹೊರತೆಗೆದು ನೋಡುವುದೇ ಪರಮಾತ್ಮನ ಖೂನ ಹಿಡಿಯುವುದು, ಗುರುತು ಕಾಣುವುದು. 'ಒಳಗಿದ್ದ ಆತ್ಮನೇ ಹೊರಗೆ ಬಂದು ತೋರಿದನೆಂದರೆ ಅವನೇ ಪರಮಾತ್ಮನೆನಿಸುವನು' ಎಂದು ಶ್ರೀ ಅಂಬುರಾವ ಮಹಾರಾಜರು ಪರಮಾತ್ಮನ ಖೂನ ಹಿಡಿಯುವ ರೀತಿಯನ್ನು ಕುರಿತು ಹೇಳುತ್ತಿದ್ದರು. ಈ ಕಾಯಾಪುರದಲ್ಲಿ ಬಂದು ಅಲ್ಲಿಯ ಅರಸನನ್ನು ಕಾಣದಿದ್ದರೆ, ಒಳಗಿರುವ ಅರಿಷಡ್ವರ್ಗಗಳು ಜೀವನನ್ನು ಮುತ್ತಿ ಘಾಸಿಗೊಳಿಸುವವು ಎಂದು ಮಹಾರಾಷ್ಟ್ರ ಸಂತರಾದ ಶ್ರೀ ರಾಮದಾಸರು ಹೇಳುವರು. "ಈ ಕಾಯಾಪಟ್ಟಣಕ್ಕೆ ಬಂದದ್ದು ಸಫಲವಾಗಬೇಕಾದರೆ ಶಿವನ ಕೂಡಿ ಮರಣ ನೀಗಿ ಹೋಗಬೇಕು". ಅದನ್ನು ಸಾಧಿಸಬೇಕಾದರೆ–

"ಆ ಪಟ್ಟಣದಲ್ಲಿರುವಂಥಾ ಪರಮಾತ್ಮನ ಪಾದದಲ್ಲಿ ಕಷ್ಟಪಟ್ಟು
ನಿಷ್ಠೆಯಿಂದ ಸ್ಮರಣೆ ಮಾಡಿ, ನಿಜರೂಪವನ್ನು ನೋಡಿ, ಗುರುವೇ
ನೀನೇ ಗತಿಯೆಂದು ಕರಮುಗಿದು ಶಿರಬಾಗಿ ಶರಣು ಮಾಡಿದರೆ ಶಿವನ
ಕೂಡಿ ಮರಣ ನೀಗುವಿರಿ"

ಎಂದು ಹೇಳುವರು ಶಿವಲಿಂಗವ್ವನವರು.

ಸಾಧನದ ಸ್ವರೂಪ : ಮೇಲೆ ಹೇಳಿದ ತಮ್ಮ ವಚನದಲ್ಲಿ 'ಶಿವನ ಕೂಡಿ ಮರಣ ನೀಗುವ' ಸಾಧನದ ಸ್ವರೂಪವನ್ನು ಶಿವಲಿಂಗವ್ವನವರು ಹೇಳಿದುದು ಕಂಡು ಬರುತ್ತದೆ. 'ಕರಣವನು ಖಂಡಿಸದೆ ದೇಹವನು ದಂಡಿಸದೆ ಉಂಡುಂಡು ಸ್ವರ್ಗಕೈದ'ಲಿಕ್ಕಾಗದೆಂದು ಸರ್ವಜ್ಞನೆಂಬ ಕನ್ನಡದ ಅನುಭಾವಿ ಕವಿಯು ಹೇಳಿದುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು.

'ಬ್ರಹ್ಮಪದವಿಯನ್ನು ಪಡೆಯಬೇಕಾದರೆ ಕಬ್ಬಿಣ ಕಡಲೆಯನ್ನು ಮೆಲ್ಲಬೇಕಾಗುವುದು' ಎಂದು ಮಹಾರಾಷ್ಟ್ರ ಸಂತರಾದ ತುಕಾರಾಮರು ಹೇಳಿದರೆ, 'ಸೂಲಿಪರ ಮನ್ಸೂರ ಖಡಾ ಹೈ। ದಾರ ಭೀ ಹೈ ದಿದಾರ ಭೀ ಹೈ' 'ಮನ್ಸೂರನೆಂಬುವನು ಶೂಲದ ಮೇಲೆ ನಿಂತಿರುವನು. ಅಲ್ಲಿ ಮರಣದಂಡನೆಯೂ ಅದೆ, ಆತ್ಮದರ್ಶನವು ಅದೆ' ಎಂದು

ಮುಸಲ್ಮಾನ ಸಾಧುವಾದ ಮನ್ಸೂರನೆಂಬುವನು ಹೇಳಿರುವನು. ಪರಮಾತ್ಮನ ದರ್ಶನದ ಆನಂದವನ್ನು ಪಡೆಯಬೇಕಾದರೆ ಕಷ್ಟಪಡಬೇಕಾಗುವುದೆಂದು ಎಲ್ಲ ಸಾಕ್ಷಾತ್ಕಾರಿ ಸತ್ಪುರುಷರು ಹೇಳುವರು. 'ಮಗಾ ಹುಟ್ಟಿದವ್ವಾ' ಎಂಬ ತಮ್ಮ ಪದ್ಯದಲ್ಲಿ 'ನವ ತಿಂಗಳವ್ವಾ ಮೈಯೆಲ್ಲಾ ನೋವ ತಿಂದೆನವ್ವಾ' ಎಂದು ತಾವು ಕಷ್ಟಪಟ್ಟು ಸಾಧನ ಮಾಡಿದ ಬಗ್ಗೆ ಶಿವಲಿಂಗವ್ವನವರು ಹೇಳಿರುವರು. ಆಧ್ಯಾತ್ಮಿಕ ಮಗನ ಸಾಕ್ಷಾತ್ಕಾರವಾಗಬೇಕಾದರೆ ಕಷ್ಟಪಡಬೇಕಾಗುವುದೆಂದು ಅವರು ಹೇಳುವರು. 'ಶ್ರೀ ಉಮದೀ ಮಹಾರಾಜರ ತರುವಾಯ ಅವರಷ್ಟು ಕಠೋರ ಸಾಧನ ಮಾಡಿದವರು ವಿರಳ' ಎಂದು ಗುರುದೇವ ರಾನಡೆಯವರು ಶಿವಲಿಂಗವ್ವನವರ ನಿರ್ಯಾಣದ ನಂತರ ಮುರಿಗೆವ್ವನಿಗೆ ಬರೆದ ದಿನಾಂಕ ೨೬-೧೧-೧೯೩೦ರ ಪತ್ರದಲ್ಲಿ ಉದ್ಗಾರ ತೆಗೆದುದು ಕಂಡುಬರುತ್ತದೆ. ಮಳೆ, ಬಿಸಿಲು, ಚಳಿಯನ್ನು ಲೆಕ್ಕಿಸದೆ ಅಡವಿಗೆ ಹೋಗಿ ಗುಡ್ಡದ ಹೊದರಿನಲ್ಲಿ ಒಂಬತ್ತು ತಾಸು ಸಾಧನ ಮಾಡಿ ಆತ್ಮಾನುಭವವನ್ನು ಪಡೆದ, ಶಿವಲಿಂಗವ್ವನವರ ಗುರುಬಂಧುಗಳಾದ ಶ್ರೀ ಅಂಬುರಾವ ಮಹಾರಾಜರ ಕಠಿಣವಾದ ಸಾಧನದ ರೀತಿಯನ್ನು ನಾವಿಲ್ಲಿ ವಾಚಕರ ಗಮನಕ್ಕೆ ತರಬಯಸುತ್ತೇವೆ. ಆದರೆ ಕೇವಲ ದೇಹ ದಂಡನೆಯಿಂದ ಸಾಕ್ಷಾತ್ಕಾರವು ಸಾಧ್ಯವಿಲ್ಲ; ದೇಹದಂಡನೆಯು ದುಃಖಕ್ಕೆ ಕಾರಣವು ಮಾತ್ರ. ಆದರೆ ಅದರ ಜತೆ ನಾಮ ಸಾಧನವನ್ನು ಮಾಡುತ್ತಿದ್ದರೆ, ಆ ದೇಹದುಃಖದ ಅರಿವಾಗದು. "ಮೈಯ ಬತ್ತಲೆ ಮಾಡಿ ಮನವ ಕತ್ತಲೆ" ಮಾಡಿದರೆ ಆತ್ಮಜ್ಞಾನವಾಗಲಾರದೆಂದು ಜೈನ ಆತ್ಮಜ್ಞಾನಿ ಕವಿಯಾದ ರತ್ನಾಕರಸಿದ್ಧನು ಕೇವಲ ದೇಹ ದಂಡನೆಯನ್ನು ಖಂಡಿಸಿ ಹೇಳಿರುವನು. 'ಕಷ್ಟಪಟ್ಟು ನಿಷ್ಠೆಯಿಂದ ನಾಮಸ್ಮರಣ' ಮಾಡಬೇಕೆಂದು, ತಾವು ತಮ್ಮ ಅನುಭವದಲ್ಲಿ ಕಂಡು ಉಂಡುದನ್ನು ಖಂಡತುಂಡಾದ ಶಬ್ದಗಳಲ್ಲಿ ಹೇಳಿದವರು ಶಿವಲಿಂಗವ್ವನವರು. 'ನಿಷ್ಠೆಯ ನಾಮಸ್ಮರಣ'ವನ್ನು ಕುರಿತು ಮುಂದೆ ವಿವರವಾಗಿ ಚರ್ಚಿಸಲಾಗಿದೆ.

**ದೇಹಸಂಪತ್ತಿ ಶಿವಸಂಪತ್ತಿ :** ಆಲಸ್ಯವನ್ನು ತೊರೆದು ನಾಮಸಾಧನೆಗಾಗಿ ದೇಹವನ್ನು ದುಡಿಸುವುದೇ ಕಷ್ಟವನ್ನು ಪಡುವನು. ಅದನ್ನು ದುಡಿಮೆ ಅಂದರೆ ಕಠೋರವಾದ ಸಾಧನಕ್ಕೆ ಹಚ್ಚಬೇಕಾದರೆ ಅದರಲ್ಲಿ ಬಲಬೇಕು. ಆದ್ದರಿಂದ 'ನ್ಯಾಯಮಾತ್ಮಾ ಬಲಹೀನೇನ ಲಭ್ಯ' ಎಂದು ಉಪನಿಷತ್ಕಾರರು ಹೇಳಿರುವುದನ್ನು ನಾವಿಲ್ಲಿ ವಾಚಕರ ಗಮನಕ್ಕೆ ತರಬಯಸುತ್ತೇವೆ.

> 'ದೇಹಸಂಪತ್ತಿ ಇರುವವರಲ್ಲಿ ಶಿವಸಂಪತ್ತಿ ಮಾಡಿಕೊಳ್ಳಬೇಕು. ಅಂದರೆ
> ತನಗೆ ಮುಂದಿನ ಮಾರ್ಗವು ಹಸನಾಗಿ ಇರುತ್ತದೆ. ಈ ಮಾತುಗಳು
> ಅವ್ಹೇರ ಮಾಡಿದರೆ ನಿಮ್ಮ ಕುತ್ತಿಗೆ ನೀವೇ ಕೊಯ್ದುಕೊಂಡಂತಾಯಿತು'

ಎಂದು ಶಿವಲಿಂಗವ್ವನವರು ದೇಹಬಲವು ಆತ್ಮನ ಕಾರ್ಯಕ್ಕಾಗಿ ವಿನಿಯೋಗ

ವಾಗಬೇಕೆಂದು ಹೇಳುವರು. ಈ ದೇಹದಲ್ಲಿ ಬಲವಿರುವವರೆಗೆ ಆತ್ಮಧ್ಯಾನ ಮಾಡಬೇಕು. ಹರಸ್ಮರಣೆ ಮಾಡಬೇಕು, ಎಂದು ಅವರು ಮೇಲಿನ ತಮ್ಮ ವಚನದಲ್ಲಿ ಹೇಳಿರುವರು. 'ಶಕ್ತಿಯುಕ್ತರಿಗೆ ಒಲಿದಾತಾಗೆ ಮಂಗಳ' ಎಂದು ಅವರು ಇನ್ನೊಂದೆಡೆ ಹೇಳಿರುವರು.

ಇನ್ನೊಂದು ಅರ್ಥದಲ್ಲಿ ಮಾನವನ ಆಯುಷ್ಯವೇ ದೇವನು ದಯಪಾಲಿಸಿದ ಅವನ ಸಂಪತ್ತು. ಅದುವೇ ಅವನ ನಿಜವಾದ ಆಸ್ತಿಯು. 'ಬರುವ ಮುಂದೆ ತಂದ ಸರಕು' ಎಂದು ಪುರಂದರದಾಸರು ಅದರ ಬಗ್ಗೆ ಹೇಳಿ ಅದು ಒಮ್ಮೆ ತೀರಿತೆಂದರೆ ತಿರುಗಿ ಬರಲಾರದು, ತಮ್ಮ ಗಂಡು ಬರಿಗಂಡು, ಎಂದೂ ಅವರು ಹೇಳುವರು. ಅದಕ್ಕಾಗಿ 'ಎಲೋ ದಾರಿಕಾರನೆ ಮಲಗಿಕೊಂಬರೆ ಹೀಗೆ' ಎಂದು ಅವರು ಭಕ್ತಿಯಿಲ್ಲದ ಮಾನವನನ್ನು ಕೇಳುವರು. ಕೃಷ್ಣಾನಂದರೆಂಬ ಹಿಂದೀ ಸಂತಕವಿಗಳು 'ಮುಸಾಫೀರ ಸೋತಾ ಹೈ ಬೆಹೋಷ' ಎಂಬ ತಮ್ಮ ಪದ್ಯದಲ್ಲಿ 'ಪುಂಜೀ ಪಾಸ ಬಹುತ ತು ಲಾಯಾ। ಇಸ್ ನಗರೀ ಮೇ ಜಬ್ ತು ಆಯಾ' ಈ ಪಟ್ಟಣದಲ್ಲಿ ಬರುವ ಕಾಲಕ್ಕೆ ನೀನು ನಿನ್ನ ಸಂಗಡ ಬಹಳ ಸಂಪತ್ತಿಯನ್ನು ತಂದಿರುವಿ' ಎಂದು ಹೇಳುತ್ತ ಮಾನವನಿಗೆ ಆಯುಷ್ಯವೆಂಬುವುದು ಬೆಲೆಯಾಗದ ಸಂಪತ್ತೆಂದು ಹೇಳಿರುವರು. ಮಾನವನ ಆಯುಷ್ಯವು ರತ್ನಪೆಟ್ಟಿಗೆಯಿದ್ದಂತೆ ಎಂದು ಮಹಾರಾಷ್ಟ್ರ ಸಂತರಾದ ಶ್ರೀರಾಮದಾಸರು ಹೇಳಿರುವರು.

ಜೀವನದ ಕಾಲಮರ್ಯಾದೆಯೇ ಮಾನವನ ನಿಜವಾದ ಇಡಗಂಟು. ಅದು ಅವನಿಗೆ ತಿಳಿಯದೆ ವೆಚ್ಚವಾಗುತ್ತಲೇ ಇರುತ್ತದೆ. ಆ ಸಂಪತ್ತಿಯನ್ನು ಕೊಟ್ಟು ಶಿವಸಂಪತ್ತಿಯನ್ನು ಪಡೆದುಕೊಳ್ಳಬೇಕೆಂದು ಶಿವಲಿಂಗವ್ವನವರು ಹೇಳುವರು. ಕೇವಲ ದೇಹಸಂಪತ್ತಿಯನ್ನು ಬೆಳೆಸುವುದಕ್ಕಾಗಲಿ, ದೈಹಿಕ ಸುಖಗಳನ್ನು ಪಡೆಯುವುದಕ್ಕಾಗಲಿ ಆಯುಷ್ಯವನ್ನು ಹಾಳುಮಾಡಬಾರದೆಂದು ಅವರು ಹೇಳಿರುವರು. ಚಿಕ್ಕವಯಸ್ಸಿನಲ್ಲಿಯೇ ಮೂಲಮಂತ್ರವನ್ನು ಪಡೆದು, ಅದರ ಧ್ಯಾಸ ಅವರಿಗೆ ಹತ್ತಿದುದರಿಂದ, ಅವರು ಶಿವಸಂಪತ್ತಿಯನ್ನು ಪಡೆದರು. ಮುಂದಿನ ದಾರಿ ಅಂದರೆ ಇಳಿವಯಸ್ಸಿನಲ್ಲಿ ಅವರ ಸಾಧನವು ಅನಾಯಾಸವಾಗಿ ಸಾಗಿತು. 'ರಾಮ ಹಮಾರಾ ಜಪ ಕರೋ । ಹಮ್ ಬೈಠೆ ಆರಾಮ' 'ನಮ್ಮ ಜಪವನ್ನು ರಾಮನೇ ಮಾಡುವನು, ನಾವು ಹಾಯಾಗಿ ಕುಳಿತುಕೊಳ್ಳುವೆವು' ಎಂದು ಹಿಂದೀ ಸಂತನೋರ್ವನು ಹೇಳಿರುವುದನ್ನು ನಾವು ನೆನಿಸಿಕೊಳ್ಳಬಹುದು. ಮುಪ್ಪು ಬಂದಿತೆಂದರೆ ನಾಮಸ್ಮರಣವನ್ನು ದೀರ್ಘಶ್ವಾಸದಲ್ಲಿ ಮಾಡುವುದು ಸಾಧ್ಯವಾಗದು. ಶರೀರಸಂಪತ್ತಿ ಇರುವಾಗ ನಾಮಸ್ಮರಣವನ್ನು ಮಾಡಿದುದಾದರೆ ಕೊನೆಯ ಕಾಲದಲ್ಲಿ ನಾಮಸ್ಮರಣವು ತಾನಾಗಿಯೇ ಸಾಗುವುದು. ನಾಮಸ್ಮರಣವು ಸುಗಮವಾಗುವುದು. ಮುಪ್ಪಿನ ಕಾಲದಲ್ಲಿ ನಾಮ ಸಾಧನದ ದಾರಿಯು ಹಸನಾಗುವುದು.

ಶಿವಸಂಪತ್ತಿಯನ್ನು ಗಳಿಸಬೇಕಾದರೆ ಈ ಶರೀರದಲ್ಲಿ ಒಳಹೊಕ್ಕು ನೋಡಬೇಕು. ಅಂತರ್ಮುಖಿಗಳಾಗಬೇಕು. ಪ್ರಭುವನ್ನು ಅಂದರೆ ಆತ್ಮನನ್ನು ಒಲಿಸಿಕೊಂಡು ದೊರೆತನವನ್ನು ಪಡೆದು ಸುಖವಾಗಿರಬೇಕಲ್ಲದೆ, ಆತ್ಮಾನುಭವವನ್ನು ಪಡೆಯದೆ ದೇಹಸುಖದ ಬೆನ್ನು ಹತ್ತಿ ದರಿದ್ರತನವನ್ನು ಭೋಗಿಸುತ್ತ ದುಃಖ ಪಡಬಾರದೆಂದು ಹೇಳುವರು ಶಿವಲಿಂಗವ್ವನವರು. ಅದನ್ನೆ ಪುರಂದರದಾಸರು 'ಕ್ಷಣದ ಸಂಸಾರಕ್ಕಾಗಿ ಜಾಣ ನೀ ಕೆಡಬೇಡಾ। ಅಣುಮಾತ್ರ ಸುಖವಿಲ್ಲವೋ' ಎಂದು ಹೇಳಿರುವರು. ಒಳ್ಳೇ ಬೆಲೆಬಾಳುವ ಸಂಪತ್ತಿಯನ್ನು ಕೊಟ್ಟು ದರಿದ್ರತನವನ್ನು, ಬಡತನವನ್ನು, ಪರದಾಸ್ಯವನ್ನು ಪಡೆಯಬಾರದೆಂದು ಶಿವಲಿಂಗವ್ವನವರು ಕೆಳಗಿನ ವಚನದಲ್ಲಿ ಹೇಳುವರು.

"ದೇಹಸುಖವೆಂದರೆ ದರಿದ್ರತನವು. ಅದರಿಂದ ತೃಪ್ತಿಯಾಗಲಾರದು.
ಆ ಸುಖವು ಅಲ್ಪವಾದದ್ದು, ಕ್ಷಣಿಕವಾದದ್ದು"

ಹೀಗೆ ಹೇಳುವಲ್ಲಿ ಶಿವಲಿಂಗವ್ವನವರು 'ಯತ್ ಭೂಮಾ ತತ್ಸುಖಮ್ ಯದಲ್ಪಂ ತದ್'ದುಃಖಮ್' ಎಂದು ಉಪನಿಷತ್ತಿನಲ್ಲಿ ಹೇಳಿದ ತತ್ತ್ವವನ್ನೇ ಮೇಲಿನ ತಮ್ಮ ವಚನದಲ್ಲಿ ಹೇಳಿದುದು ಕಂಡುಬರುತ್ತದೆ. ಆತ್ಮಸುಖವೆ ಚಿರಸುಖವು. ಅದನ್ನು ಪಡೆಯಬೇಕಾದರೆ–

"ನಾನಾ ಜನ್ಮ ತಿರುತಿರುಗಿ ಇದು ಒಂದು ಮಾನವ ಜನ್ಮಕ್ಕೆ ಹುಟ್ಟಿ ಬಂದಿರುತ್ತದೆ. ಆದ್ದರಿಂದ ನಿಮ್ಮ ಪ್ರಪಂಚದಲ್ಲಿದ್ದು ಪರಮಾರ್ಥ ಮಾಡುತ್ತಿರಬೇಕು. ಅದು ಹ್ಯಾಗೆಂದರೆ, ಹರಮಂತ್ರ ಗುರುಬಲ್ಲ. ಆ ಗುರುಮಂತ್ರ ತನ್ನರವಿನಲ್ಲಿ ಮರೆಯದೆ ಮಾಡುತ್ತಿರಬೇಕು ನೋಡಾ"

ಎಂದು ಶಿವಲಿಂಗವ್ವನವರು ಹೇಳಿರುವರು.

ಪ್ರಪಂಚ ಪರಮಾರ್ಥ : "ಈ ದುರ್ಲಭವಾದ ನರಜನ್ಮವು, ಬಹಳ ಜನ್ಮಗಳು ತಿರುಗಿ.... ಈ ನರಜನ್ಮವು ಅವಚಿತ ನಡತೆಯ ಯೋಗದಿಂದ ಸಿಕ್ಕಿರುವುದು. ಆದ್ದರಿಂದ ಈ ಉತ್ತಮ ನರದೇಹವಿರಲಿಕ್ಕೆ ಇದರ ಸಾರ್ಥಕ ಮಾಡಿಕೊಳ್ಳಬೇಕು" ಎಂದು ಶ್ರೀ ನಿಂಬರಗಿ ಮಹಾರಾಜರು ಹೇಳಿರುವರು. "ನಾನಾಜನ್ಮ ತಿರುಗಿ ಇದು (ಜೀವವು) ಮಾನವ ಜನ್ಮಕ್ಕೆ ಹುಟ್ಟಬಂದಿದೆ" ಎಂದು ಶಿವಲಿಂಗವ್ವನವರು ಹೇಳುವರು. ನರಜನ್ಮಕ್ಕೆ ಬಂದ ಮೇಲೆ ಈ ದೇಹವಿರುವವರೆಗೆ ಪ್ರಪಂಚವನ್ನು ಮಾಡಲೇಬೇಕು. ಅದನ್ನು ಅನುಭವದಿಂದ ಅರಿತ ಶಿವಲಿಂಗವ್ವನವರು 'ಪ್ರಪಂಚದಲ್ಲಿದ್ದು ಪರಮಾರ್ಥ ಮಾಡುತ್ತಿರಬೇಕು' ಎಂದು ಹೇಳುವರು. ಇದೇ ಮಾತನ್ನೇ ಉಪನಿಷತ್ಕಾರರು ಹೇಳಿರುವರು. ಉಪನಿಷತ್ತುಗಳಲ್ಲಿ ಪ್ರಸಿದ್ಧವಾದ ಯಾಜ್ಞವಲ್ಕ್ಯರು ಜನಕ ಮಹಾರಾಜನ ಸಭೆಯಲ್ಲಿ ಎಲ್ಲ ಪಂಡಿತರನ್ನು ಗೆದ್ದ ಮೇಲೆ ಜನಕ ಮಹಾರಾಜರು ಅವರನ್ನು ಕೇಳುವರು,

'ಜಯಪತ್ರ ಬೇಕೋ, ಕೋಡಗಳಿಗೆ ಬಂಗಾರದ ಕೊಂಬಣಸುಗಳನ್ನು ಹಾಕಿದ ಗೋವುಗಳು ಬೇಕೋ?' ಆಗ 'ತಮಗೆ ಎರಡೂ ಬೇಕು. ಗೋವುಗಳು ಬೇಕು, ಜಯಪತ್ರವೂ ಬೇಕು' ಎಂದು ಯಾಜ್ಞವಲ್ಕ್ಯರು ಉತ್ತರಕೊಟ್ಟರು. 'ಉಭಯಮೇವ ಸಾಮ್ರಾಟ' ಎಂದು ಎನಿಸಿಕೊಂಡರು. ತಾತ್ಪರ್ಯವೆಂದರೆ, ಮನುಷ್ಯನಾದವನಿಗೆ ಪ್ರಪಂಚವೂ ಬೇಕು ಪರಮಾರ್ಥವೂ ಬೇಕು. 'ನೆಲ್ಲು ಕುಟ್ಟುಣು ಬಾರಮ್ಮಾ' ಎಂಬ ತಮ್ಮ ರೂಪಕಾತ್ಮಕ ಪದ್ಯದಲ್ಲಿ 'ಪ್ರಪಂಚ ಪಾರಮಾರ್ಥ ಒಳಹೊರಗೆ ನೋಡಿ' ಎಂದು ಶ್ರೀ ನಿಂಬರ್ಗಿ ಮಹಾರಾಜರು ಬರೆದುದರ ಮೇಲೆ ಭಾಷ್ಯ ಮಾಡುತ್ತ ತಮ್ಮ P.W.G. in Kan. Lit ಎಂಬ ಗ್ರಂಥದ ಪುಟ ೨೪೬ರಲ್ಲಿ ಗುರುದೇವ ರಾನಡೆಯವರು ಈ ರೀತಿ ಭಾಷ್ಯ ಮಾಡಿರುವರು.

'You should be on the lookout and be alert....... looking to both spiritual and material welfare. The great stress which the Saint of Nimbargi laid on the combination of material and spiritual welfare was significant. Don't follow only spiritual welfare, nor only material welfare for its own sake."

ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಸುಖಗಳನ್ನು ನೋಡುವಲ್ಲಿ ಎಚ್ಚರದಿಂದಿದ್ದು ಜಾಗರೂಕರಾಗಿರಬೇಕು. ಶ್ರೀನಿಂಬರಗಿ ಮಹಾರಾಜರು ಪಾರಮಾರ್ಥಿಕ ಮತ್ತು ಪ್ರಾಪಂಚಿಕ ಸುಖಗಳ ಸಮನ್ವಯವನ್ನು ಮಾಡಿದುದು ಮಹತ್ವದ್ದಿದೆ. "ಪ್ರಾಪಂಚಿಕ ಸುಖ ಇಲ್ಲದೇ ಪಾರಮಾರ್ಥಿಕ ಸುಖವನ್ನಷ್ಟೇ ವರಿಸಲಿಕ್ಕಾಗದು."

ಇದೇ ಮಾತನ್ನು ಶಿವಲಿಂಗವ್ವನವರು ಪ್ರಪಂಚದಲ್ಲಿದ್ದು ಪಾರಮಾರ್ಥವನ್ನು ಮಾಡುತ್ತಿರಬೇಕೆಂದು ಹೇಳುವರು. 'ಅದು ಹ್ಯಾಗೆಂದರೆ-ಹರಮಂತ್ರ ಗುರುಬಲ್ಲ, ಆ ಗುರುಮಂತ್ರ ತನ್ನರವಿನಲ್ಲಿ ಮರೆಯದೆ ಮಾಡುತ್ತಿರಬೇಕು'. ತಮ್ಮ ಈ ವಚನದಲ್ಲಿ ಶಿವಲಿಂಗವ್ವನವರು ಎರಡು ಸಂಗತಿಗಳನ್ನು ಹೇಳಿದಂತಿದೆ. ಒಂದು 'ಹರಮಂತ್ರ ಗುರುಬಲ್ಲ' ಎಂದು, ಎರಡನೆಯದಾಗಿ ಪ್ರಪಂಚದಲ್ಲಿರುತ್ತಲೇ 'ಗುರುಮಂತ್ರ ತನ್ನರವಿನಲ್ಲಿ ಮರೆಯದೆ ಮಾಡುತ್ತಿರಬೇಕು' ಎಂದು.

'ಹರಮಂತ್ರ ಗುರುಬಲ್ಲ' ಎಂದು ಶಿವಲಿಂಗವ್ವನವರು ಆಧ್ಯಾತ್ಮ ಸಾಹಿತ್ಯಕ್ಕೆ ಒಂದು ಹೊಸ ದೃಷ್ಟಿಯನ್ನು ತಂದುಕೊಟ್ಟಿರುವರೆಂದು ಹೇಳಬಹುದಾಗಿದೆ. ಹರಮಂತ್ರವನ್ನಾಗಲಿ, ಹರಿಮಂತ್ರವನ್ನಾಗಲಿ ಮನುಷ್ಯನಾದವನು ಜಪಿಸಬೇಕೆಂದು ಎಲ್ಲ ಕಾಲದಲ್ಲಿ, ಎಲ್ಲ ಪಂಥಗಳಲ್ಲಿ ಹೇಳಲಾಗಿದೆ. ಆದರೆ ಆ ಹರಮಂತ್ರ ಸ್ವರೂಪವನ್ನು ಶಿವಲಿಂಗವ್ವನವರಂಥ ಆತ್ಮವೇತ್ತರೇ ಬಲ್ಲರು. ಹರನಾಮವು ಮಂತ್ರವಾಗಬೇಕಾದರೆ ಅದರಲ್ಲಿ ಅಧ್ಯಾತ್ಮಶಕ್ತಿಯ

ಅಸ್ತಿತ್ವ ಬೇಕಾಗುವುದು. ಹರಮಂತ್ರ ಫಲ ಬಿಡಬೇಕಾದರೆ ಅದು ಸಬೀಜವಾಗಿರಬೇಕು. ಆತ್ಮನಿಂದ ಆತ್ಮನ ಅನುಭವಕ್ಕೆ ಬಂದ ಮಂತ್ರವು ಸಬೀಜವೆನಿಸುವುದು. ಅಂಥ ಅನುಭವ ವನ್ನು ಪಡೆದ ಮಂತ್ರವೇ ಹರಮಂತ್ರವು. ಅವರೇ ಸದ್ಗುರುಗಳೆನಿಸುವರು.

ಈ ಭೂಮಿಯ ಮೇಲೆ ಜನಿಸಿಬಂದ ಪ್ರತಿಯೊಂದು ಜೀವಿಯ ಪ್ರಾರಬ್ಧ ಸಂಚಿತ ಮತ್ತು ಕ್ರಿಯಮಾಣಗಳು ವ್ಯಕ್ತಿವ್ಯಕ್ತಿಗೆ ಭಿನ್ನವಾಗಿರುತ್ತವೆ. ಪ್ರಾರಬ್ಧ ಸಂಚಿತ ಮತ್ತು ಕ್ರಿಯಾಮಾಣಗಳಿಗೂ, ಹರಮಂತ್ರಕ್ಕೂ ನಿಕಟವಾದ ಸಂಬಂಧವಿದ್ದುದು ಮಹಾರಾಷ್ಟ್ರ ಸಂತರಾದ ಏಕನಾಥರ ಕೆಳಗಿನ ವಾಕ್ಯಗಳಿಂದ ಕಂಡುಬರುತ್ತದೆ. 'ಪ್ರಾರಬ್ಧ ಭೋಗವು ಗುರುಕೃಪೆಯಿಂದ ನಾಶವಾಗುವುದು' ಎಂದು ಹೇಳುವುದಲ್ಲದೆ 'ಸಂಚಿತದ ಕೌತುಕವನ್ನು ನೋಡು' ಎಂದೂ ಅವರು ಹೇಳಿರುವರು. ಗುರುಕೃಪೆ ಅಂದರೆ ಹರಮಂತ್ರಕ್ಕೂ ಮಾನವನ ಪ್ರಾರಬ್ಧ ಮತ್ತು ಸಂಚಿತಗಳಿಗೂ ಪರಸ್ಪರ ಸಂಬಂಧವಿದ್ದ ಬಗ್ಗೆ ಏಕನಾಥರ ಮೇಲಿನ ವಚನಗಳಿಂದ ತಿಳಿದುಬರುತ್ತದೆ. ಪ್ರಾರಬ್ಧ ಸಂಚಿತಗಳೇ ಮಾನವನ ಭವರೋಗದ ಕಾರಣಗಳು. ಅವನ ಭವರೋಗ ಗಾಂಭೀರ್ಯವು ಅವನ ಪ್ರಾರಬ್ಧ ಸಂಚಿತಗಳ ಮೇಲೆ ಅವಲಂಬಿಸಿದೆ. ಹರಮಂತ್ರವೇ ಭವರೋಗಕ್ಕೆ ಯೋಗ್ಯವಾದ ಮದ್ದು ಎಂದು ಎಲ್ಲರು ಒಪ್ಪಿದ ಮಾತು. ಮುಮುಕ್ಷುಗಳು ಮಂತ್ರವನ್ನು ಯಾಚಿಸಿ ಬಂದರೆ ಸದ್ಗುರುಗಳು ಆ ವ್ಯಕ್ತಿಯ ಪ್ರಾರಬ್ಧ ಮತ್ತು ಸಂಚಿತಗಳನ್ನರಿತುಕೊಂಡು, ಅವುಗಳನ್ನು ತೊಡೆದು ಹಾಕುವ ಇಲ್ಲವೆ ಮಾರ್ಪಡಿಸುವ ಕುರಿತು ಹರನಾಮದ ಅಕ್ಷರಗಳಲ್ಲಿ ತಮ್ಮ ಅಧ್ಯಾತ್ಮ ಶಕ್ತಿಯನ್ನು ತುಂಬಿ ಅದನ್ನು ತಮ್ಮಿಂದ ಮಂತ್ರಯಾಚನೆ ಮಾಡಿ ಬಂದ ಮುಮುಕ್ಷುವಿಗೆ ದಯಪಾಲಿಸುವರು. ಅಂತೇ ಶಿವಲಿಂಗವ್ವನವರು 'ಹರಮಂತ್ರ ಗುರುಬಲ್ಲ' ಎಂದು ಹೇಳಿರುವರು. ಅದನ್ನೆ ಅವರು ಗುರುಕರುಣೆ, ಗುರುಕೃಪೆ ಎಂದೂ ಕರೆದುದುಂಟು.

ಇನ್ನು ಎರಡನೆಯದೆಂದರೆ ಗುರುಮಂತ್ರ ತನ್ನರವಿನಲ್ಲಿ ಮಾಡುತ್ತಿರಬೇಕು ಎಂಬುದರ ವಿವರಗಳನ್ನು ಮುಂದೆ 'ನಾಮಸ್ಮರಣದ ರೀತಿ' ಎಂಬ ಶೀರ್ಷಿಕೆಯಲ್ಲಿ ಚರ್ಚಿಸಲಾಗಿದೆ.

**ಸದ್ಗುರುಗಳ ಮಹತ್ವ:** ಗುರುವಿನಿಂದ ಬಾರದ ಮಂತ್ರವು ಮಂತ್ರವೆನಿಸಲಾರದು. ಗುರುಮಂತ್ರವಿಲ್ಲದೆ ಮುಕ್ತಿಯಿಲ್ಲವೆಂದು ಸರ್ವಜ್ಞನು 'ಗುರುವಿನುಪದೇಶವಿಲ್ಲದೆ ಎಲ್ಲಿಯದು ಮುಕ್ತಿ' ಎಂದು ಹೇಳುವನು. 'ಗುರುವಿನ ಗುಲಾಮನಾಗುವತನಕಾ ದೊರೆಯದಣ್ಣ ಮುಕುತಿ' ಎಂದು ಪುರಂದರದಾಸರು ಹೇಳುತ್ತಾರೆ. 'ಗುರುಬೀನ ಕೌನ ಬತಾವೆ ವಾಟ' 'ಗುರುವನ್ನುಳಿದು ಯಾರು ದಾರಿಯನ್ನು ಹೇಳುವರು' ಎಂದು ಹಿಂದೀ ಸಂತಶ್ರೇಷ್ಠರೆನಿಸಿದ ಕಬೀರದಾಸರು ಕೇಳುತ್ತಾರೆ.

"ಗುರುವಿನ ಹೊರತು ಈ ನರದೇಹಕ್ಕೆ ಗತಿಯೇ ಇಲ್ಲ. ಅಪರೂಪ ವಾದಂಥಾ ಈ ನರಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕಾದರೆ ಗುರುವಿನ ಕರುಣೆ ಬೇಕು'

ಎಂದು ಶಿವಲಿಂಗವ್ವನವರು ಗುರುವಿನ ಅವಶ್ಯಕತೆಯನ್ನು ಕುರಿತು ಹೇಳುವರು. ಅವರು ಮತ್ತೂ ಹೇಳುವುದೇನೆಂದರೆ–

"ಗುರುವಿರಹಿತನಾಗಿ ಇರಬಾರದು. ಗುರುವಿಲ್ಲದ ನರಜನ್ಮ ಅರಿಷ್ಟವು, ಅಮಂಗಳವು. ಮೈಲಿಗೆ ಮುಡಚೆಟ್ಟಿನಲ್ಲಿ ಹುಟ್ಟಿದ ಈ ಜೀವವು ಮಡಿಯಾಗಬೇಕಾದರೆ ಗುರುವಿನ ಉಪದೇಶದಿಂದ ಅದನ್ನು ಸುಟ್ಟು ತೆಗೆಯಬೇಕು."

ತಮ್ಮ ಒಂದು ಮರಾಠಿ ಪದ್ಯದಲ್ಲಿ 'ಗುರು ಪಾಹೀಜೆ ಆಧೀರೆ' 'ಮೊದಲು ಗುರು ಬೇಕು' ಎಂದು ಅವರು ಹೇಳಿ ಗುರುವಿನ ಮಹತ್ವವನ್ನು ಒತ್ತಿ ಹೇಳಿರುವರು.

ಈ ಜೀವವು ಹುಟ್ಟಿಬಂದದ್ದು ಅಪವಿತ್ರವಾದ, ಮೈಲಿಗೆ ಮುಡಚೆಟ್ಟಿನ ಸ್ಥಳದಲ್ಲಿ. ಈ ಅಪವಿತ್ರವಾದ ಜೀವವನ್ನು ಪವಿತ್ರಗೊಳಿಸಬೇಕಾದರೆ ಗುರುಕರುಣೆ ಬೇಕು. ಅಪವಿತ್ರವಾದ, ಮೈಲಿಗೆ ಮುಡಚೆಟ್ಟಾದ ವಸ್ತುವನ್ನು ಬೆಂಕಿಯಲ್ಲಿ ಸುಟ್ಟು ತೆಗೆದು ಆಮೇಲೆ ಅದು ಶುದ್ಧವಾಯಿತೆಂದು ಬಗೆದು ಅದನ್ನು ಬಳಸುವ ರೂಢಿಯುಂಟು. ಅಪವಿತ್ರವಾದ ಈ ಮಾನವ ಮಡಕೆಯನ್ನು ಶುದ್ಧಗೊಳಿಸಿ ಪವಿತ್ರ ಮಾಡಬೇಕಾದರೆ, ಗುರುಕರುಣವೆಂಬ ಬೆಂಕಿಯಲ್ಲಿ ಹಾಕಿ ಅದನ್ನು ಸುಟ್ಟು ತೆಗೆಯಬೇಕಾಗುವುದು. 'ಅನ್ಯಕ್ಷೇತ್ರೇ ಕೃತಂ ಪಾಪಂ ಪುಣ್ಯಕ್ಷೇತ್ರ ವಿನಶ್ಯತಿ' ಎಂಬ ಸುಭಾಷಿತದ ಅರ್ಥವಿವರಣೆ ಮಾಡುತ್ತ 'ಗುರುಕರುಣೆ ಯಾಗುವ ಮೊದಲು ಈ ಕ್ಷೇತ್ರವು ಅನ್ಯಕ್ಷೇತ್ರವೆನಿಸುವುದು. ಗುರುಕರುಣೆಯಾದ ಮೇಲೆ ಅದು ಪುಣ್ಯಕ್ಷೇತ್ರವಾಗುವುದು. ಗುರು ಕರುಣೆಯಾಯಿತೆಂದರೆ ಪೂರ್ವದಲ್ಲಿ ಮಾಡಿದ ಅದರ ಪಾಪಗಳೆಲ್ಲ ನಾಶವಾಗುವವು' ಎಂದು ಶ್ರೀ ಅಂಬುರಾವ ಮಹಾರಾಜರು ಹೇಳುತ್ತಿದ್ದರು. ಪಾಪಗಳ ನಾಶವೆಂದರೆ ಈ ಜೀವದ ಅಪವಿತ್ರತೆಯನ್ನು ಇಲ್ಲದಂತೆ ಮಾಡಿದ ಹಾಗಾಯಿತು.

ಮರಾಠಿ 'ಭಕ್ತಿವಿಜಯ' ಎಂಬ ಗ್ರಂಥದಲ್ಲಿ ಮಹಾರಾಷ್ಟ್ರ ಸಂತರಾದ ನಾಮದೇವರ ಜೀವನದಲ್ಲಿಯ ಒಂದು ಕತೆಯು ಈ ಸಂದರ್ಭದಲ್ಲಿ ಉಲ್ಲೇಖನೀಯವಾಗಿದೆ.

ಒಂದು ಸಲ ಗೋರಾಕುಂಬಾರನ ಮನೆಯಲ್ಲಿ ಜ್ಞಾನೇಶ್ವರ, ಮುಕ್ತಾಬಾಯಿ, ನಾಮದೇವ ಮೊದಲಾದವರ ಸಂತರ ಸಭೆಯು ಸೇರಿದ್ದಿತು. ಆಗ 'ಗೋರಾ ಮಡಕೆ ಗಳೆಲ್ಲಾ ಚೆನ್ನಾಗಿ ಸುಟ್ಟು ಪಕ್ಕಾ ಆಗಿವೆಯೋ ಇಲ್ಲವೋ ಎಂಬುದನ್ನು ನೋಡಿಬಿಡು'

ಎಂದು ಮುಕ್ತಾಬಾಯಿಯು ಗೋರಾಕುಂಬಾರನನ್ನು ಕೇಳಿದರು. ಆಗ ಗೋರಾ ಕುಂಬಾರನು ಹಸಿ ಮಡಕೆಗಳನ್ನು ಸರಿಪಡಿಸುವ ತಮಟೆಯನ್ನು ತಕ್ಕೊಂಡು ಅಲ್ಲಿ ಕುಳಿತವರ ತಲೆಯ ಮೇಲೆ ಪಟಪಟನೆ ಹೊಡೆಯುತ್ತ ಹೊರಟನು. ಹೀಗೆ ಮಾಡುತ್ತ ನಾಮದೇವರ ಹತ್ತಿರ ಬಂದಕೂಡಲೆ ನಾಮದೇವರು ಆ ಹೊಡೆತವನ್ನು ತಪ್ಪಿಸಿಕೊಳ್ಳಲು ಹಿಂದಕ್ಕೆ ಸರಿದರು. 'ಈ ಮಡಕೆ ಇನ್ನೂ ಹಸಿ ಇದೆ, ಚೆನ್ನಾಗಿ ಸುಟ್ಟಿಲ್ಲ' ಎಂದು ಗೋರಾ ಕುಂಬಾರನು ಆ ಸಭೆಯಲ್ಲಿ ಸಾರಿದನು. ನಂತರ ಸಭೆಯಲ್ಲಿ ತಮಗಾದ ಅವಮಾನವನ್ನು ಸಹಿಸಲಾರದೆ ನಾಮದೇವರು ವಿಠ್ಠಲನ ಕಡೆಗೆ ಹೋಗಿ ತಮಗಾದ ಅವಮಾನದ ಬಗ್ಗೆ ದೂರುಕೊಟ್ಟರು. 'ಅಹುದು ಗೋರಾಕುಂಬಾರನು ಹೇಳಿದ್ದು ಸರಿ. ಗುರುವಿಲ್ಲದೆ ಈ ದೇಹವು ಪವಿತ್ರವೆನಿಸಲಾರದು' ಎಂದು ಹೇಳಿ ವಿಸೋಬಾ ಖೇಚರರಿಂದ ಮಂತ್ರೋಪದೇಶವನ್ನು ಪಡೆಯಲು ಹೇಳಿದನು ಪರಮಾತ್ಮನು. ದೇಹ ಭಾವವು ಅಳಿದು ಶುದ್ಧಾತ್ಮಭಾವವು ಬೆಳೆಯಬೇಕಾದರೆ ಗುರುಕರುಣೆ ಬೇಕು. ಅದಕ್ಕಾಗಿ ದೇಹಭಾವದಿಂದ ಕೂಡಿದ ಜೀವವು ಹಸಿಮಣ್ಣಿನ ಮಡಕೆ, ಅದು ಅಪವಿತ್ರವಾದುದು, ಅದರಲ್ಲಿಯ ದೇಹಭಾವವನ್ನು ಇಲ್ಲದಂತೆ ಮಾಡಬೇಕಾದರೆ ಗುರುಮಂತ್ರವೊಂದೇ ಉಪಾಯವೆಂದು ಶಿವಲಿಂಗವ್ವನವರು ಹೇಳುವರು.

**ಗುರುಮಂತ್ರ ಸಾಧನ :** ಗುರುವಿನಿಂದ ಪಡೆದ ಮೂಲಮಂತ್ರದ ಸಾಧನ ಮಾಡುವ ರೀತಿಯನ್ನು ಕುರಿತು ಶಿವಲಿಂಗವ್ವನವರು ಎರಡೇ ಎರಡು ಪದಗಳಲ್ಲಿ ಪೂರ್ಣ ಅರ್ಥ ಕೊಡುವಂತೆ ಹೇಳಿರುವರು. 'ಗುರುಮಂತ್ರ ತನ್ನರವಿನಲ್ಲಿ ಮರೆಯದೆ ಮಾಡುತ್ತಿರಬೇಕು' ಎಂದು ಅವರು ಹೇಳಿರುವರು. ಮಂತ್ರವನ್ನು ಅರವಿನಲ್ಲಿ ಎಂದು ಹೇಳುತ್ತ, ಮಂತ್ರವನ್ನು ಮನದಲ್ಲಿ ಸ್ಮರಿಸಬೇಕೆಂದು ಅವರು ಹೇಳುವರು. ನಿಂಬರ್ಗಿ ಸಂಪ್ರದಾಯದಲ್ಲಿ ಗುರುಮಂತ್ರವನ್ನು ವೈಖರಿಯಿಂದ ಉಚ್ಚಾರ ಮಾಡಬಾರದೆಂಬ ಕಟ್ಟುನಿಟ್ಟಾದ ನಿಯಮವಿದೆ. ಗುರುಮಂತ್ರವು ಸ್ವಸಂವೇದ್ಯವಾಗಿರಬೇಕು. ಅಂತಃಕರಣದ ಮೂಲವನ್ನು ಅದು ಮುಟ್ಟಬೇಕು. ಕೆಲವರು 'ಶ್ವಾಸ ಶ್ವಾಸಪರ ಹರ ಭಜೆ' ಶ್ವಾಸದಲ್ಲಿ ಸ್ಮರಣೆಯನ್ನು ಸೇರಿಸಿ ಗುರುಮಂತ್ರವನ್ನು ಸ್ಮರಿಸಲು ಹೇಳುವುದುಂಟು. ಅರವಿನಲ್ಲಿ ಮರೆಯದೆ ಮಂತ್ರ ಜಪಿಸಬೇಕಾದರೆ ಪ್ರಾಣದಲ್ಲಿ ಅದನ್ನು ಸೇರಿಸಿ ಮಾಡುವುದು ಸುಲಭವಾಗುವುದು. ಪ್ರಾಣದಲ್ಲಿರುವ ಸ್ಮರಣವು ಒಂದು ಸಾಧನವು.

ಅರವು ಮರವುಗಳು ಮನಸಿನ ಸಹಜ ಗುಣಗಳು. ಒಂದರ ಅರವು ಇನ್ನೊಂದರ ಮರವು. ದೇಹದ ಅರವಾದರೆ ಮಂತ್ರದ ಮರವಾಗುವುದು. ಮಂತ್ರದ ನೆನಪಿನಲ್ಲಿ ದೇಹದ ಮರವಾಗುವುದು.

'ಪಿಯಾ ಚಾಹ್ಯೆ ಪ್ರೇಮರಸ, ರಾಖಾ ಚಾಹ್ಯೆ ಮಾನ । ಏಕ ಮ್ಯಾನ ಮೆ ದೋ

ಖಿಡ್ಗ ದೇಖಾಸುನಾ ನ ಕಾನ' 'ಪ್ರೇಮರಸವನ್ನು ಸೇವಿಸಲು ಬಯಸುವಿರಿ, ಮೇಲಾಗಿ ಮರ್ಯಾದೆಯನ್ನೂ ಬಯಸುವಿರಿ. ಒಂದೇ ಗವಸಣಿಕೆಯಲ್ಲಿ ಎರಡು ಖಿಡ್ಗಗಳಿದ್ದುದನ್ನು ಕಿವಿಯಿಂದ ಕೇಳಿಲ್ಲ, ಕಣ್ಣಿಂದ ನೋಡಿಲ್ಲ' ಎಂದು ಓರ್ವ ಹಿಂದೀ ಸಂತರು ಹೇಳಿದುದರ ಅರ್ಥವಾದರೂ ಅದೇ ಇರುವುದು. 'When the mind if filled with one idea, no other idea dare enters' P.W.G. in H.L. P. 356. 'ಒಂದು ವಿಚಾರವು ಮನಸನ್ನು ಆವರಿಸಿತೆಂದರೆ, ಬೇರೆ ವಿಚಾರಕ್ಕೆ ಅಲ್ಲಿ ಎಡೆಯಿಲ್ಲ' ಎಂದು ಗುರುದೇವ ರಾನಡೆಯವರು ಹೇಳುವರು. ಗುರುಮಂತ್ರವು ಸಂತತವಾಗಿ ಸದಾಕಾಲ ಸಂಪೂರ್ಣವಾಗಿ ಸಾಧಕನ ಮನಸನ್ನು ಆವರಿಸಿತೆಂದರೆ, ಆ ಮನದಲ್ಲಿ, ದೇಹಕ್ಕೆ ಸಂಬಂಧಿಸಿದ ಕಲ್ಪನೆಗಳಿಗೆ, ವಿಚಾರಗಳಿಗೆ ಸ್ಥಾನವೇ ಇಲ್ಲದಂತಾಗುವುದು. 'ಕೈಲಿಂದ ಕೆಲಸ ಮಾಡಿದರೂ ಮನದಲ್ಲಿ ನಾಮದ ನೆನಪಿರಲಿ' ಎಂದು ಶ್ರೀ ಅಂಬುರಾವ ಮಹಾರಾಜರು ಹೇಳುತ್ತಿದ್ದರು. ಹೀಗೆ ಮಾಡುತ್ತ ಹೋದಂತೆ ಗುರುಮಂತ್ರವು ಸ್ವಸಂವೇದನೆಯಲ್ಲಿ ಕೇಂದ್ರೀಕೃತವಾಗುವುದು.

**ಶಬ್ದಜ್ಞಾನ, ಆತ್ಮಜ್ಞಾನ :** ಗುರುಕರುಣೆಯೇ ಶ್ರೇಷ್ಠವಾದದ್ದು. ಗುರು ವಚನವೊಂದನ್ನು ಪಾಲಿಸಿದರೆ ಇನ್ನೇನನ್ನೂ ಮಾಡುವ ಅವಶ್ಯಕತೆಯಿಲ್ಲ. ಆತ್ಮಜ್ಞಾನಕ್ಕೆ ಶಬ್ದಜ್ಞಾನದ ಅವಶ್ಯಕತೆಯಿಲ್ಲ. ಕೇವಲ ಶಬ್ದಜ್ಞಾನದಿಂದ ಅಂದರೆ ಗ್ರಂಥ ಪಠಣದಿಂದ, ಶಾಸ್ತ್ರಾಭ್ಯಾಸ ದಿಂದ ಆತ್ಮಜ್ಞಾನವಾಗಲಾರದೆಂದು ಶಿವಲಿಂಗವ್ವನವರ ಅಭಿಪ್ರಾಯವು. ತಮ್ಮ ಅಭಿಪ್ರಾಯ ವನ್ನು ಅವರು ಗಟ್ಟಿಮುಟ್ಟಾಗಿ ಕೆಳಗಿನ ತಮ್ಮ ವಚನದಲ್ಲಿ ಹೇಳಿರುವರು.

> "ಎಂಥಾ ಶಾಣ್ಯಾನಾದರೂ ಆಗಲಿ, ಎಂಥಾ ವಿದ್ವಾನನಾದರೂ ಆಗಲಿ,
> ಎಂಥಾ ಶಾಸ್ತ್ರಪಠಣ ಮಾಡಿದವನಾದರೂ ಆಗಲಿ, ವೇದಬಲ್ಲವನಾದರೂ
> ಆಗಲಿ ಗುರುವಿನ ಕೃಪಾ ಇಲ್ಲದೆ ಆತ್ಮಜ್ಞಾನ ಆಗದೆ ಏನು ಮಾಡಿದರೂ
> ವ್ಯರ್ಥವೆಂದು ತಿಳಿಯಬೇಕು."

'ಓದು ಬ್ಯಾಡಾ ಶಾಸ್ತ್ರಬ್ಯಾಡಾ' ಎಂದು ದಾಸರು ಹೇಳಿದರೆ, 'ವೇದಗಳು ನಮ್ಮ ಮೇಲೆ ಕೋಪಿಸಿಕೊಂಡು ಹೋದರೂ, ನಾವು ಅವುಗಳ ಜನಕನನ್ನು ನಮ್ಮ ಕಂಠದಲ್ಲಿ ಇಟ್ಟಿರುವೆವು' ಎಂದು ಮಹಾರಾಷ್ಟ್ರದ ಸಂತರಾದ ತುಕರಾಮರು ಹೇಳಿರುವರು. ಅಧ್ಯಾತ್ಮಕ್ಕೆ ವೇದಶಾಸ್ತ್ರ ಪಠಣದ ಅವಶ್ಯಕತೆಯಿಲ್ಲವೆಂದು ಮೇಲಿನ ಮಾತಿನಿಂದ ಕಂಡು ಬರುತ್ತದೆ. 'ಶಬ್ದಜ್ಞಾನಕ್ಕೆ ಮೋಸಹೋಗಬೇಡಿ'ರೆಂದು ಶ್ರೀಉಮದೀ ಮಹಾರಾಜರು ಹೇಳುತ್ತಿದ್ದುದಲ್ಲದೆ, 'ನಾನು 'ಕುರುಬ', ನನಗೆ ಕಾವ್ಯ ವ್ಯಾಕರಣ ಒಂದೂ ಬರುವುದಿಲ್ಲ. ಆದರೆ ನನ್ನ ಸ್ವಾಮಿಯು ನನ್ನ ಹೃದಯದಲ್ಲಿ ವಾಸವಾಗಿರುವನು' ಎಂದು ಅವರು ಹೇಳುತ್ತಿದ್ದರು. ತಾವು ಶಾಸ್ತ್ರಾಧ್ಯಯನ ಮಾಡಿದವರಲ್ಲ. ಆದರೂ ತಮ್ಮ ಹೃದಯದಲ್ಲಿ ಆತ್ಮನನ್ನು ಕಂಡಬಗ್ಗೆ ಅವರೇ ಹೇಳುತ್ತಿದ್ದರು. ಶ್ರೀ ನಿಂಬರಗಿ ಮಹಾರಾಜರ ಶಿಕ್ಷಣವು ಸಹಿ ಹಾಕುವಷ್ಟು ಮಾತ್ರ ಆಗಿದ್ದಿತು. ಆದರೆ ಅವರು ಸ್ವಯಂಸಿದ್ಧ ಆತ್ಮಜ್ಞಾನಿಗಳೆಂದು

ಪ್ರಸಿದ್ಧಿಯನ್ನು ಪಡೆದರಲ್ಲದೆ ಜನರಿಗೆ ಆತ್ಮಸಾಧನದ ಮಾರ್ಗವನ್ನು ತೋರಿಸಿದರು. ಶ್ರೀ ಅಂಬುರಾವ ಮಹಾರಾಜರ ಮತ್ತು ಶಿವಲಿಂಗವ್ವನವರ ಶಿಕ್ಷಣವು ಕೂಡ ಅಕ್ಷರಮಟ್ಟಿಗೆ ಇದ್ದರೂ ಅವರು ಆತ್ಮಜ್ಞಾನವನ್ನು ಪಡೆದು, ಅನ್ಯರಿಗೆ ಉಪದೇಶ ಮಾಡಿ ಆತ್ಮಜ್ಞಾನದ ಮಾರ್ಗವನ್ನು ತೋರಿಸುವ ಯೋಗ್ಯತೆಯನ್ನು ಪಡೆದವರಾಗಿದ್ದರು.

'ಆತ್ಮಜ್ಞಾನಕ್ಕೆ ಶಬ್ದಜ್ಞಾನದ ಸಹಯವಾಗುವುದು. ಆದರೆ ಅದರ ಅವಶ್ಯಕತೆ ಮಾತ್ರ ಇಲ್ಲ' ಎಂದು 'ನಿತ್ಯನೇಮಾವಲಿ'ಯೆಂಬ ನಿಂಬರ್ಗಿ ಸಂಪ್ರದಾಯದ ಭಜನಾವಲೀ ಪುಸ್ತಕದ ಪ್ರಸ್ತಾವನೆಯಲ್ಲಿ ಗುರುದೇವ ರಾನಡೆಯವರು ಬರೆದಿರುವರು. 'ತರ್ಕಶಾಸ್ತ್ರ ವನೋದಿ ತಗರು ತಗರಿನಂತೆ ಮಾರ್ಕೊಂಡು ಹೊಡೆದಾಡಬಹುದು.' ತರ್ಕಶಾಸ್ತ್ರದ ಅಭ್ಯಾಸದಿಂದ ಆತ್ಮಜ್ಞಾನ ಸಾಧ್ಯವಿಲ್ಲವೆಂದು ಜೈನ ಅನುಭಾವಿ ಕವಿಯಾದ ರತ್ನಾಕರನು ಹೇಳುವನು. ಬುದ್ಧಿಗಾಚೆಗಿನ ತತ್ವವನ್ನು ಬುದ್ಧಿಯಿಂದ ತಿಳಿದುಕೊಳ್ಳುವುದು ಸಾಧ್ಯವಿಲ್ಲ. ಅದನ್ನು ಸಾಧಿಸಲು ಗುರುಕರುಣೆ ಅಂದರೆ ಗುರು ಮಂತ್ರದ ಉಪದೇಶ ಬೇಕೆಂದು ಶಿವಲಿಂಗವ್ವನವರು ಹೇಳುವರು.

**ನೈತಿಕ ತಳಪಾಯ**

> 'ಸ್ಮರಣೆ ಸುಸೂತ್ರವಾಗಿ ಸದಾಕಾಲ ತಪ್ಪದೆ ನಡೆಯಬೇಕಾದರೆ ನಡೆನುಡಿ ಕೆಡಗೊಡಬಾರದು, ಯಾವಾಗಲೂ ಜಪ್ಪಿಸುತ್ತಿರಬೇಕು. ಅಂದರೆ ಬಂದದ್ದು ಚನ್ನಾಗಿ ಕಡೆಗೆ ಪಾರಾಗುವುದು'.

ಆತ್ಮಜ್ಞಾನಕ್ಕೆ ನೀತಿಯ ತಳಪಾಯ ಬೇಕೆಂದು ಶಿವಲಿಂಗವ್ವನವರ ಅಭಿಪ್ರಾಯವು. 'ಸಂಕಲ್ಪ ವಿಕಲ್ಪಾತ್ಮಕಂ ಮನಃ' ಮನಸ್ಸು ಸಂಕಲ್ಪ ವಿಕಲ್ಪಗಳ ಸಮೂಹವು. ಮನಸ್ಸು ನಿರ್ವಿಕಲ್ಪವಾದರೆ, ನಿರಾಕಾರವಾದರೆ-ಅಂದರೆ ವಿಕಲ್ಪರಹಿತ ಮತ್ತು ಆಕಾರವಿಲ್ಲ ದಂತಾದರೆ ಗುರುಮಂತ್ರದ ಸ್ಮರಣೆಗೆ ಅಲ್ಲಿ ಎಡೆಯಾಗುವುದು. ಈ ಜಗತ್ತಿನಲ್ಲಿಯ ದೃಶ್ಯ ಪದಾರ್ಥಗಳೆಲ್ಲ ಆಕಾರವೆನಿಸುವವು. 'ನಡತೆಯು ಚಲೋದ ಇದ್ದರೆ ದೇವರು ತನ್ನವನು' ಎಂದು ಶ್ರೀ ನಿಂಬರ್ಗಿ ಮಹಾರಾಜರು ಹೇಳಿರುವರು. 'ನಡತೆಯ ಬಲವು ದೇವರ ಬಲವೆಂದು' ಹೇಳಿ ನಡತೆಯ ಮಹತ್ವವನ್ನು ಅವರು ಒತ್ತಿ ಹೇಳಿರುವರು. ನಡತೆಯು ಒಳ್ಳೇದಿದ್ದರೆ ಅವನಿಗೆ ಯಾವುದೇ ತರದ ಅಂಜಿಕೆಯಿಲ್ಲ. ಅವನ ಮನಸ್ಸಿನಲ್ಲಿ ಹಿಂದಿನ, ಇಂದಿನ ಮತ್ತು ಮುಂದಿನ ಆಗುಹೋಗುಗಳ ಬಗ್ಗೆ ಚಿಂತೆ ಇರುವುದಿಲ್ಲ. ಅವನ ಮನಸ್ಸು ಸ್ಫಟಿಕದಂತೆ ಒಳ ಹೊರಗೆ ಒಂದಾಗಿರುತ್ತದೆ. ಗುರುವಿನ ಮೂಲಮಂತ್ರವು ಒಳಹೊರಗೆ ಹೊಳೆಯುವುದು. ನಿರ್ವಿಕಲ್ಪವಾದ ಗುರುಮಂತ್ರ ವನ್ನುಳಿದು ಇನ್ನಾವುದನ್ನೂ ಆ ಮನಸು ಕಲ್ಪಿಸುವುದಿಲ್ಲ. ಅಂದರೆ ನಾಮಸ್ಮರಣೆಯು ಸುಸೂತ್ರವಾಗಿ ಸಾಗುವುದು.

ಜಗತ್ತಿನಲ್ಲಿಯ ಎಲ್ಲ ಶಿವಶರಣರು, ದಾಸರು, ಸಾಧು ಸತ್ಪುರುಷರು ನೀತಿಯ ಭದ್ರವಾದ ತಳಪಾಯವಿಲ್ಲದೆ ಅಧ್ಯಾತ್ಮದ ಅಸ್ತಿವಾರವು ನಿಲ್ಲಲಾರದೆಂದು ಹೇಳಿರುವರು. ಭಾವಾತ್ಮಕ ಮತ್ತು ಅಭಾವಾತ್ಮಕ ನೀತಿಯ ನಿಯಮಗಳನ್ನು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಬೇಕುಗಳು–ಭಾವಾತ್ಮಕವಾದವುಗಳು, ಬೇಡಗಳು–ಅಭಾವಾತ್ಮಗಳು, 'ಕಳಬೇಡ, ಕೊಲಬೇಡ' ಇತ್ಯಾದಿಯಾಗಿ ಬೇಡಗಳನ್ನು ಅಂದರೆ ಅಭಾವಾತ್ಮಕ. 'ದಯೆ ಇರಬೇಕು ಸಕಲ ಪ್ರಾಣಿಗಳಲ್ಲಿ' ಎಂದು ಬೇಕುಗಳನ್ನು ಅಂದರೆ ಭಾವಾತ್ಮಕವಾದ ಆಚಾರ ನಿಯಮಗಳನ್ನು ಬಸವಣ್ಣನವರು ಹೇಳಿದುದನ್ನು ನಾವು ಕಾಣುತ್ತೇವೆ.

'ನೀತಿಯ ಆಧಾರವಿಲ್ಲದೆ ಅಧ್ಯಾತ್ಮವು ಸಾಧ್ಯವೂ ಇಲ್ಲ ಶಕ್ಯವೂ ಇಲ್ಲ'. 'A mystic without morality is such a one were possible, might only be a hideous creature who is a blot on the spiritual evolution of man. (Con. Sur. P. 288)' 'ನೀತಿಯಿಲ್ಲದ ಸಾಕ್ಷಾತ್ಕಾರಿಯು (ಇರುವುದು ಸಾಧ್ಯವಿಲ್ಲ) ಒಂದು ವೇಳೆ ಇದ್ದುದೇ ಆದರೆ, ಮಾನವನ ಅಧ್ಯಾತ್ಮದ ಉತ್ಕ್ರಾಂತಿಗೆ ಅವನು ಕಲಂಕಪ್ರಾಯನಾದಂಥ ಹೇಸಿ ಜೀವಿಯೆಂದೇ ಹೇಳಬೇಕು'. ನಡಿನುಡಿಯ ಮಹತ್ವವನ್ನು ಗುರುದೇವ ರಾನಡೆಯವರು ಮೇಲಿನ ವಾಕ್ಯದಲ್ಲಿ ಸ್ಪಷ್ಟಪಡಿಸಿರುವರು. ನೀತಿಯು ಅಧ್ಯಾತ್ಮದ ಅಡಿಗಲ್ಲು, ಆತ್ಮಸಾಕ್ಷಾತಾರವು ನೀತಿಯ ಕಳಸವೆಂದು ಗುರುದೇವ ರಾನಡೆಯವರ ಮತವು. ಆದ್ದರಿಂದ ಕೊನೆಯ ಗಳಿಗೆಯವರೆಗೆ ನಡಿನುಡಿಯನ್ನು ಜಪ್ಪಿಸುತ್ತಿರಬೇಕೆಂದು ಶ್ರೀ ಉಮದೀ ಮಹಾರಾಜರು ಹೇಳುವಂತೆ ನಡಿನುಡಿ ಜಪ್ಪಿಸಿ ಶಿವಸ್ಮರಣೆ ಮಾಡಬೇಕೆಂದು ಶಿವಲಿಂಗವ್ವನವರು ಹೇಳುವರು.

'ನಡೆನುಡಿ' ಎಂಬ ಪದವನ್ನು ಹಿಂದುಮುಂದೆ ಮಾಡಿ 'ನುಡಿನಡೆ' ಎಂದು ಶ್ರೀ ಅಂಬುರಾವ ಮಹಾರಾಜರು ಹೇಳುತ್ತಿದ್ದರು. ನುಡಿದಂತೆ ನಡೆಯಬೇಕು ಎಂಬುದೇ ಅವರ ಮಾತಿನ ಇಂಗಿತವು. 'ವಚನದೊಳಗೆಲ್ಲರೂ ಶುಚಿವೀರ ಸಾಧುಗಳು ಆದರೆ ಪ್ರಸಂಗವೊದಗಿದಾಗ್ಗೆ ಅಚಲದವರಾರು' ಎಂದು ಕೇಳುವನು ಸರ್ವಜ್ಞನು. ಕೆಟ್ಟ ನಡತೆಯಿಂದ ನಡೆಯಬೇಕೆಂದು ಯಾರೂ ಹೇಳುವುದಿಲ್ಲ. ಅಂತೇ ನುಡಿದಂತೆ ತಾವು ನಡೆದರೆ ಅದೆ ನಡತೆಯನ್ನು ಜಪ್ಪಿಸಿದಂತಾಯಿತು. ನಡೆನುಡಿ ಒಂದಾಗಿರಬೇಕೆಂಬುದನ್ನೇ ಶ್ರೀ ಅಂಬುರಾವ ಮಹಾರಾಜರು ಮೇಲಿನಂತೆ ಹೇಳುತ್ತಿದ್ದರು.

'ನಡೆನುಡಿಯನ್ನು ಕೆಡಗೊಡಬಾರದು' ಎಂದು ಹೇಳುವಲ್ಲಿ ಶಿವಲಿಂಗವ್ವನವರು ಒಂದು ಮಹತ್ವದ ತತ್ವವನ್ನು ಹೇಳಿರುವರು. ಮಾನವೀ ಪ್ರಯತ್ನ ಮತ್ತು ಮಾನವೀ ಸ್ವಾತಂತ್ರ್ಯದ ತತ್ವಗಳು ಅದರಲ್ಲಿ ಅಡಕವಾದಂತಿದೆ. ನಂದ್ಯಾಳ ಶರಣನೋರ್ವನು 'ಏನಭರಾ ನಟ್ಟೀತಪ್ಪಾ ಎನಗ ಮುಳ್ಳಾ' ಎಂಬ ತನ್ನ ಪದ್ಯದಲ್ಲಿ 'ನೀವು ಬೇಕಾಗಿ ಮುರಿಸಿ

ಕೊಂಡಿರೆಪ್ಪಾ ಮುಳ್ಳಾ! ನಿಮ್ಮ ಕಾಲ ತಾನೇ ಬೇಲ್ಯಾಗ ಹೋಗಿ ಹಾಯಲಿಲ್ಲಾ' ಎಂದು ಹೇಳುವನು. ನೀತಿ ಅನೀತಿ ಎರಡಕ್ಕೂ ಮಾನವನೇ ಹೊಣೆಗಾರನೆಂದು ಅವನು ಹೇಳುವನು. ನಂದ್ಯಾಳ ಶರಣನ ಮೇಲಿನ ನುಡಿಯ ಮೇಲೆ ಭಾಷ್ಯ ಮಾಡುತ್ತ ಗುರುದೇವ ರಾನಡೆಯವರು– 'You cannot shift your own responsibility and justify your conduct. You have to censure yourself. It is the principle of freedom which enables you either to do good or to do bad.' (Pa.W.G. in K.L. p. 83).

'ನಿಮ್ಮ ಹೊಣೆಗಾರಿಕೆಯನ್ನು ಇನ್ನೊಬ್ಬರ ಮೇಲೆ ಹೊರಿಸಿ, ನಿಮ್ಮ ಆಚರಣವನ್ನು ನೀವು ಸಮರ್ಥಿಸಿಕೊಳ್ಳಲಿಕ್ಕಾಗದು. ನಿಮ್ಮನ್ನು ನೀವೇ ದೂರಿಕೊಳ್ಳಬೇಕಾಗುವುದು. ಒಳ್ಳೆಯದನ್ನಾಗಲಿ, ಕೆಡಕನ್ನಾಗಲಿ ಮಾಡಲು ಅಣಿಮಾಡುವ ಸ್ವಾತಂತ್ರ್ಯವೇ ಈ ಜೀವಿಗಿದ್ದ ಸ್ವಾತಂತ್ರ್ಯವು.'

ಪತಿ ವಿರಹದ ನಂತರ ಶಿವಲಿಂಗವ್ವನವರು ಪರಪುರುಷರ ದರ್ಶನವನ್ನು ನಿಲ್ಲಿಸಿ ಬಿಟ್ಟುದು ತಮ್ಮ ಸ್ವಪ್ರಯತ್ನದಿಂದಲೇ. ಮಾಡಿ ಆಡಿದರು ಅವರು.

ನಡಿನುಡಿಯನ್ನು ಕೆಡಗೊಡದೆ ಅದನ್ನು ಜಪ್ಪಿಸುವುದರಿಂದ ಆಗುವ ಲಾಭಗಳನ್ನು ಕುರಿತು ಶಿವಲಿಂಗವ್ವನವರು ಕೆಳಗಿನ ವಚನದಲ್ಲಿ ಹೇಳುವರು.

> 'ಹೀಗೆ ನಡೆನುಡಿ ಜಪ್ಪಿಸುವವರೇ ಬಾಳುವರು, ಭಕ್ತಿಯುಳ್ಳವರು,
> ಅವರೇ ಗುರುಭಕ್ತರು, ಶಿವಭಕ್ತರು, ಹರಭಕ್ತರು, ಆರಾದರಾಗಲಿ ಅವರೇ
> ಸರ್ವ ಭಕ್ತರು.'

ಭಕ್ತಿಯ ಸ್ವರೂಪವನ್ನು ಅರಿತುಕೊಂಡ ಮೇಲೆ ಮೇಲಿನ ವಚನದಲ್ಲಿಯ ಬೇರೆ ಬೇರೆ ವಿಚಾರಗಳನ್ನು ಕುರಿತು ಚರ್ಚಿಸುವುದು ಯೋಗ್ಯವೆನಿಸುವುದು. 'ಸಾತು ಅಸ್ಮಿನ್ ಪರಮ ಪ್ರೇಮರೂಪಾ ಅಮೃತ ಸ್ವರೂಪಾ ಚ' ಆತ್ಮನಲ್ಲಿಯ ಅನನ್ಯ ಪ್ರೇಮವೇ ಭಕ್ತಿ ಎಂದು ನಾರದರು ತಮ್ಮ 'ಭಕ್ತಿಸೂತ್ರ' ಎಂಬ ಗ್ರಂಥದಲ್ಲಿ ಭಕ್ತಿಯ ವ್ಯಾಖ್ಯೆ ಮಾಡಿರುವರು. ಅದಕ್ಕೂ ಮುಂದೆ ಹೋಗಿ 'ತದನುಕಲೇಷು ಅನನ್ಯತಾ ತದ್ವಿರೋಧಿಷು ಉದಾಸೀನತಾ' ಎಂದು ಆ ಭಕ್ತಿಗೆ ಅನುಕೂಲವಾದ ಸಂಗತಿಗಳ ಬಗ್ಗೆ ಅನನ್ಯಭಾವದ ಪ್ರೇಮವಿರಬೇಕು ಮತ್ತು ಭಕ್ತಿಗೆ ಪ್ರತಿಕೂಲವಾದವುಗಳ ಬಗ್ಗೆ ಉದಾಸೀನ ಭಾವವನ್ನು ತಾಳಬೇಕೆಂದು ಅವರು ಹೇಳಿರುವರು. ಗುರುಕೊಟ್ಟ ಮೂಲಮಂತ್ರವನ್ನು ನಿರಂತರದಲ್ಲಿ ಪ್ರೇಮಭಾವ ದಿಂದ ಸಂತತ ಸ್ಮರಿಸುವುದು ಭಕ್ತಿಯೆನಿಸುವುದು. ಅದನ್ನುಳಿದು ಅನ್ಯವನ್ನು ಸ್ಮರಿಸುವುದು ಅದಕ್ಕೆ ವಿರೋಧವಾದದ್ದು. ಅನ್ಯ ವಿಚಾರಗಳು ಮನಸಿನಲ್ಲಿ ಬಂದರೂ ನಾಮಸ್ಮರಣವು ಕೇಂದ್ರದಲ್ಲಿದ್ದು ಉಳಿದ ವಿಚಾರಗಳ ಬಗ್ಗೆ ಉದಾಸೀನರಾಗಿರಬೇಕು. ಅಂದರೆ ಅವುಗಳಲ್ಲಿ

ಪ್ರೇಮವನ್ನಿಟ್ಟು ಮನಸ್ಸನ್ನು ಅಲ್ಲಿ ತೊಡಕಿಸಬಾರದು.

ಗುರುಮಂತ್ರವನ್ನು ಅನನ್ಯಭಾವದಿಂದ ಪ್ರೇಮವಿಟ್ಟು ಸ್ಮರಿಸುವುದೇ ಭಕ್ತಿಯೆನಿಸುವುದು. ಈ ರೀತಿ ಅನನ್ಯಪ್ರೇಮದಿಂದ ಶಿವಸ್ಮರಣೆ ಮಾಡಿದರೆ ಈ ಭವಕ್ಕೆ ಬಂದದ್ದು ಫಲವಾಯಿತು. ಅಂಥ ಫಲವನ್ನು ಪಡೆಯುವ ಬಾಳ್ವೆಯೇ ಬಾಳ್ವೆಯೆನಿಸುವುದು. ಅಂಥವರೇ ಬಾಳುವರು ಎಂದು ಶಿವಲಿಂಗವ್ವನವರು ಹೇಳುವರು. ಗುರುಮಂತ್ರದಲ್ಲಿ, ಗುರುಪಾದದಲ್ಲಿ ಅನನ್ಯರಾದವರು ಗುರುಭಕ್ತರು. ಗುರುವು ಹೇಳಿದಂತೆ ನಡೆದು ಅವನು ಹೇಳಿದುದನ್ನು ನುಡಿದರೆ, ನಡೆನುಡಿ ಜಪ್ಪಿಸಿದಂತಾಗುವುದು; ಅದುವೇ ಗುರುಭಕ್ತಿ ಎನಿಸುವುದು. ಗುರುವು ಹೇಳಿದ ಮಂತ್ರವು ಶಿವಸ್ವರೂಪವು. ಆ ಮಂತ್ರದ ಮೇಲೆ ಪ್ರೇಮವನ್ನಿಟ್ಟು, ಆನಂದದಿಂದ ಅದನ್ನು ಅಂತರಂಗದಲ್ಲಿಟ್ಟು ಸದಾಕಾಲ ಸ್ಮರಿಸುತ್ತಿರುವುದೇ ಶಿವಭಕ್ತಿಯು. ಶಿವಭಕ್ತಿಯಿಂದ ಆತ್ಮನ ಮೇಲಿನ ಪ್ರೇಮವು ಬೆಳೆಯುತ್ತ ಹೋಗುವುದು. ಆತ್ಮನು ಸರ್ವರಲ್ಲಿ ಗೋಚರನಾಗುವನು. ಅದರಿಂದ ಅಂತರಂಗದಲ್ಲಿ ಸರ್ವಾತ್ಮಭಾವವು ಹುಟ್ಟುವುದು. ಹೀಗೆ ಗುರುಭಕ್ತಿಯಿಂದ ಶಿವಭಕ್ತಿಯನ್ನು ಸಾಧಿಸಿ ಸರ್ವಭಕ್ತರ ಪದವಿಯನ್ನು ಅಂದರೆ ಜಂಗಮ ಸ್ಥಿತಿಯನ್ನು ಪಡೆಯಬೇಕಾದರೆ ನಡೆನುಡಿಯೇ ಮೂಲವೆಂದು, ಶಿವಲಿಂಗವ್ವನವರು ನೀತಿಯ ಮಹತ್ವವನ್ನು ಕುರಿತು ಹೇಳಿರುವರು.

ಶಿವಸೂತ್ರದ ಅನುಷ್ಠಾನ : ನಡಿನುಡಿಯನ್ನು ಜಪ್ಪಿಸಿ ಮಾಡಬೇಕಾದದ್ದು ಶಿವಸೂತ್ರದ ಅನುಷ್ಠಾನವನ್ನು,

> 'ನಡೆನುಡಿಯನ್ನು ಜಪ್ಪಿಸಿ ಶ್ರೇಷ್ಠವಾದಂಥಾ ಶಿವಸೂತ್ರದ ಅನುಷ್ಠಾನ
> ನಿರ್ಧಾರದಿಂದ ಮಾಡುತ್ತಿರಬೇಕು. ಅನುಷ್ಠಾನದ ಹೊರ್ತು ಮತ್ತೊಂದು
> ಯಾವುದೂ ಶ್ರೇಷ್ಠವಿಲ್ಲ'.

ಶಿವಲಿಂಗವ್ವನವರ ಮೇಲಿನ ಈ ವಚನವು ನಾಮಸಾಧನದ ಮಾನಸಶಾಸ್ತ್ರದ ದೃಷ್ಟಿಯಿಂದ ಬಹಳ ಮಹತ್ವದ್ದಿದೆ. ಯಾವುದೇ ಕರ್ಮವನ್ನು ನಿತ್ಯವಾಗಿ, ನೇಮದಿಂದ, ಕಾಲದ ಕಟ್ಟನ್ನಿಟ್ಟು ಮಾಡುವುದೆ ಅನುಷ್ಠಾನವೆನಿಸುವುದು. 'ಶಿವಸೂತ್ರವೆಂದರೆ ಗುರುಗಳಿಂದ ಪಡೆದ ಮೂಲಮಂತ್ರವು. ಅದನ್ನೇ 'ನಾಮ' ಎಂದು ನಿಂಬರಗಿ ಸಂಪ್ರದಾಯದಲ್ಲಿ ಕರೆಯುವರು. ಹಿಂದೆ ಹೇಳಿದ ಹಾಗೆ ಪ್ರೇಮದಿಂದ ನಿತ್ಯದಲ್ಲಿ, ಅಂದರೆ ದಿನಾಲು ಒಂದೂ ದಿವಸ ಬಿಡದೆ ನೇಮದಿಂದ ಅಂದರೆ ಗೊತ್ತು ಮಾಡಿದ ವೇಳೆಗೆ ಸರಿಯಾಗಿ ಕಾಲದ ಕಟ್ಟನ್ನು ಹಾಕಿಕೊಂಡು ಆ ನಾಮದ ಧ್ಯಾನ ಮಾಡುವುದೇ ಅನುಷ್ಠಾನವೆನಿಸುವುದು. ಅದೇ ಶಿವಸೂತ್ರದ ಅನುಷ್ಠಾನವು. ಶ್ರೀ ನಿಂಬರಗಿ ಮಹಾರಾಜರ ಸಂಪ್ರದಾಯದಲ್ಲಿ ಮೇಲೆ ಹೇಳಿದ ಶಿವಸೂತ್ರದ ಅನುಷ್ಠಾನಕ್ಕೆ ಬಹಳ ಮಹತ್ವವಿದೆ. ಅದಕ್ಕೆ 'ಕಟ್ಟಾಚಾ ನೇಮ' 'ಕಟ್ಟದ ನೇಮ' ಎಂದು ಕರೆಯಲಾಗುವುದು. ಶ್ರೀ ಉಮದೀ

ಮಹಾರಾಜರು, ಶ್ರೀ ಅಂಬುರಾವ ಮಹಾರಾಜರು, ಶ್ರೀ ಶಿವಲಿಂಗವ್ವನವರು ಮತ್ತು ಗುರುದೇವ ರಾನಡೆಯವರು ಈ ಮಾದರಿಯ ಅನುಷ್ಠಾನವನ್ನು ತಮ್ಮ ಜೀವನದ ಕೊನೆಯ ಘಳಿಗೆಯವರೆಗೆ ಸಾಧಿಸಿದರು.

ಶ್ರೀ ಉಮದೀ ಮಹಾರಾಜರ ಶಿಷ್ಯರಲ್ಲಿ ಕೆಲವರು ತಮ್ಮ ಕೈಲಾದ ಮಟ್ಟಿಗೆ ಕಟ್ಟದ ಅನುಷ್ಠಾನವನ್ನು ಮಾಡುತ್ತಿದ್ದರು. ಅವರಲ್ಲಿ ಶ್ರೀಗಿರಮಲ್ಲೇಶ್ವರ ಮಹಾರಾಜ, ಶಂಕರೆಪ್ಪ ಕಕಮರಿ, ಶೆಟ್ಟೆಪ್ಪಾ ಚಡಚಣ ಇವರ ಹೆಸರುಗಳನ್ನು ಹೇಳಬಹುದು. ಇವರಲ್ಲದೆ ಇನ್ನೂ ಕೆಲವರು ಇರಬಹುದು, ಅವರ ಹೆಸರುಗಳು ನಮಗೆ ಪರಿಚಿತವಿಲ್ಲದಿರುವುದರಿಂದ ಇಲ್ಲಿ ಹೇಳಿಲ್ಲ.

ಈ ಅನುಷ್ಠಾನವು ಸದಾಕಾಲ ತಪ್ಪದೆ ಕೊನೆಯವರೆಗೆ ನಡೆಯಬೇಕಾದರೆ ಮನಸ್ಸಿನ ನಿರ್ಧಾರ ಬೇಕು. ನಿಶ್ಚಯದ ಮನೋವೃತ್ತಿ ಬೇಕು. ಅದಕ್ಕೆ ಇಚ್ಛಾಶಕ್ತಿಯು ಪ್ರಬಲವಾಗಿರ ಬೇಕು. ಅದನ್ನೇ ಶಿವಲಿಂಗವ್ವನವರು 'ಶಕ್ತಿಯುಕ್ತರಿಗೆ ಒಲಿದಾತಾಗೆ ಮಂಗಳ' ಎಂದು ತಮ್ಮ ಒಂದು ಆರತಿಯಲ್ಲಿ ಹೇಳಿರುವರು. ಇಚ್ಛಾಶಕ್ತಿಯು ದೇಹಶಕ್ತಿಯನ್ನು ಕೂಡ ಹತೋಟಿಯಲ್ಲಿ ಇಡಬಹುದೆಂಬುದಕ್ಕೆ ಗುರುದೇವ ರಾನಡೆಯವರ ಉದಹರಣೆಯು ಸಾಕು. ಅವರು ದೇಹದಿಂದ ತೀರ ಕೃಶರಾಗಿದ್ದಗ್ಯೂ ಅವರಲ್ಲಿ ಕಾಣುತ್ತಿದ್ದ ಚಾಪಲ್ಯ ಮತ್ತು ಅನುಷ್ಠಾನವನ್ನು ನೋಡಿದರೆ ಅವರು ತಮ್ಮ ಇಚ್ಛಾಶಕ್ತಿಯಿಂದ ತಮ್ಮ ದೇಹವನ್ನು ದುಡಿಸುತ್ತಿದ್ದರೆಂಬುದು ಕಂಡುಬರುವುದು. ಶಿವಲಿಂಗವ್ವನವರ ಸಾಧನವು ಕೂಡ ಇಚ್ಛಾಶಕ್ತಿಯ ಬಲದಿಂದಲೇ ಸಾಗುತ್ತಿದ್ದಿತು.

ಕೇವಲ ಇಚ್ಛಾಶಕ್ತಿಯಿಂದ ದೇಹವನ್ನು ಮಾತ್ರ ದುಡಿಸಿದರೆ ಸಾಲದು. ಕೇವಲ ದೇಹದಂಡನೆಯಿಂದ ಸಾಕ್ಷಾತ್ಕಾರವು ಸಾಧ್ಯವಿಲ್ಲ. ನಾಮಸ್ಮರಣವು ಯಾಂತ್ರಿಕವಾಗ ಬಹುದು. 'ಮಾಲಾ ತೋ ಕೆರಮೇ ಫಿರೆ। ಜಾಹಫಿರೇ ಮುಖಮಾಹೀ। ಮನುವಾತೋ ದಸದೀಸ ಫಿರೇ। ಯಹ ತೋ ಸುಮಿರನ ನಾಹೀ' 'ಕರದಲ್ಲಿ ಮಾಲೆ, ಮುಖದಲ್ಲಿ ನಾಲಿಗೆ ತಿರುಗುವವು. ಮನಸು ಹತ್ತೂ ದಿಕ್ಕುಗಳಲ್ಲಿ ತಿರುಗಿದರೆ ಅದು ಸ್ಮರಣೆ ಎನಿಸಲಾರದು' ಎಂದು ಓರ್ವ ಹಿಂದೀ ದೋಹಾಕಾರನು ಯಂತ್ರದಂತೆ ಮಾಡಿದ ನಾಮಸ್ಮರಣವನ್ನು ಕುರಿತು ಹೇಳುವನು. ನಾಮಸ್ಮರಣೆಯನ್ನು ನಿಶ್ಚಯದಿಂದ ಮಾಡುವುದರ ಜತೆಗೆ ನಿಷ್ಠೆಯಿಂದ ಮಾಡಬೇಕೆಂದು ಶಿವಲಿಂಗವ್ವನವರು ಹೇಳುವರು. ಯಾವುದೇ ಕಾರ್ಯದಲ್ಲಿ ನಿಷ್ಠೆಯು ನೆಲಿಸಬೇಕಾದರೆ, ಆ ಕಾರ್ಯದಲ್ಲಿ ಅಂದರೆ ಅದರ ಕಾರಣ, ಪರಿಣಾಮಗಳಲ್ಲಿ ದೃಢನಂಬಿಕೆಯಿರಬೇಕಾಗುವುದು. ನಂಬಿಗೆಯು ನಿಷ್ಠೆಯ ಮೂಲವು. 'ಅಂಬಿಗಾ ನಿನ್ನ ನಾನಂಬಿದೆ' ಎಂದೂ, 'ನಿನ್ನ ನಂಬಿ ಕೆಟ್ಟವರಿಲ್ಲ ಹರಿಯೆ' ಎಂದೂ ಪುರಂದರದಾಸರು ತಮ್ಮ ನಿಷ್ಠೆಯನ್ನು ಕುರಿತು ಬರೆಯುವರು.

ನಿಷ್ಠೆಯು ಭಾವವನ್ನು ಬೆಳೆಸುವುದು, ಬಲಿಸುವುದು ಭಾವಶಕ್ತಿಯನ್ನೆ ಶಿವಲಿಂಗವ್ವನವರು 'ನಿಷ್ಠೆ' ಎಂದು ಕರೆದಂತೆ ತೋರುವುದು.

ಸದ್ಗುರುವಿನಲ್ಲಿ, ಅವರ ವಚನದಲ್ಲಿ, ಅವರ ಆಚಾರದಲ್ಲಿ ನಂಬಿಗೆಯನ್ನಿಟ್ಟಿರುವುದೇ ನಿಷ್ಠೆಯೆನಿಸುವುದು. ಶ್ರದ್ಧೆ ಇಲ್ಲದ ಸಾಧನ ಫಲಬಿಡಲಾರದು' 'ಶ್ರದ್ಧಾ ವಿರಹಿತಂ ಯಜ್ಞಂ ತಾಮಸಂ ಪರೀಚಕ್ಷತೇ' ಶ್ರದ್ಧಾರಹಿತವಾದ ಯಜ್ಞವು ತಾಮಸವೆಂದು ಭಗವದ್ಗೀತೆಯಲ್ಲಿ ಶ್ರದ್ಧೆಯ ಮಹತ್ವವನ್ನು ಕುರಿತು ಹೇಳಲಾಗಿದೆ. ಶಿವಲಿಂಗವ್ವನವರ ಶ್ರದ್ಧಾಭಕ್ತಿಗಳು ಅವರು ರಚಿಸಿರುವ ಪದ್ಯಗಳಲ್ಲಿ, ವಚನಗಳಲ್ಲಿ ಮತ್ತು ಪತ್ರಗಳಲ್ಲಿ ತುಂಬಿ ಹೊರಸೂಸುತ್ತವೆ. ಅವರ ಪದ್ಯಗಳಲ್ಲಿ ಮತ್ತು ವಚನಗಳಲ್ಲಿಯಂತು ಅವರ ಗುರುನಿಷ್ಠೆಯು ಮೈದಳೆದು ನಿಂತಂತಾಗಿದೆ. ಗುರುವೇ ಹರ ಹರನೇ ಗುರು ಎಂದು ಅವರು ನಂಬಿದ್ದರು. ಸಂಸಾರದಲ್ಲಿಯ ತ್ರಿವಿಧ ತಾಪಗಳನ್ನು ನಿವಾರಿಸುವ ಛತ್ತರಿಗೆ ತಮ್ಮ ಗುರು ಎಂದು ಅವರು ಹೇಳುವರು. 'ಗುರು ತಾರಿ, ಗುರು ಶಿರಿ, ಗುರು ಎನಗೆ ಐಸಿರಿ' ಎಂದು ಗುರುವಿನ ಹೊರ್ತು ಬೇರೆ ಆಸರವೇ ತಮಗಿಲ್ಲವೆಂದು ಶಿವಲಿಂಗವ್ವನವರು ನಂಬಿದ್ದರು.

**ಮನಸ್ಸಿನ ಸಂಶಯ ಬಿಡಬೇಕು :** ಗುರುವಿನಲ್ಲಿ ಅಚಲವಾದ ನಂಬಿಗೆಯು ನೆಲೆಸುವುದು ಸುಲಭ ಸಾಧ್ಯವಲ್ಲ. ಒಂದು ವೇಳೆ ಬುದ್ಧಿಗೊಪ್ಪಿತವಾಗಬಹುದು. ಆದರೆ ಬುದ್ಧಿಗೊಪ್ಪಿದ ತತ್ವ ಹೃದಯುವನ್ನು ಮುಟ್ಟಲು ಕಾಲಕಳೆಯಲುಬೇಕು. ಕಾಲ ಕಳೆದರೂ ಒಪ್ಪಿತವಾಗುವದೆಂದು ಖಂಡಿತವಾಗಿ ಹೇಳಲಿಕ್ಕೆ ಬಾರದು. ಮೊದಲು ಬುದ್ಧಿಯೊಪ್ಪುವುದೇ ಕಡುಕಷ್ಟವು. ವಿಚಾರಶಕ್ತಿ ಬಂದಂತೆ ಒಂದಿಲ್ಲೊಂದು ಶಂಕೆಯು ತಲೆದೋರುವುದು. ಬುದ್ಧಿ ನಿಶ್ಚಯಿಸಿದರೂ ಮನಸ್ಸು ಒಪ್ಪುವುದಿಲ್ಲ. ಹೀಗೆ ಬುದ್ಧಿ ಮತ್ತು ಮನಸ್ಸು ಈ ಎರಡರಲ್ಲಿ ದ್ವಂದ್ವದ ಪ್ರಸಂಗಗಳು ಬರುವ ಸಂಭವವೂ ಇದೆ. ಅದಕ್ಕಾಗಿ ಶಿವಲಿಂಗವ್ವನವರು 'ಮನಸ್ಸಿನ ಸಂಶಯ ಬಿಡಬೇಕು' ಎಂದು ಹೇಳುವರು. 'ಮೊದಲು ಭಕ್ತಿಗೆ ಬದಲವಾಗದೆ, ಝುಳಝುಳಾದ' ಮನಸ್ಸಿನಿಂದ ಶಿವಸ್ಮರಣೆ ಮಾಡಬೇಕೆಂದು ಭವತಾರಕನೆಂಬ ಶರಣನು ಹೇಳುವನು. ಭಕ್ತನ ಮನದಲ್ಲಿ ಹುಟ್ಟುವ ಅನೇಕ ಬಗೆಯ ಶಂಕೆಗಳ ಮೂಲಕ ಮೊದಲ ಭಕ್ತಿಯಲ್ಲಿ ಬದಲಾಗುತ್ತ ಹೋಗುವುದು. ಸಂಶಯದ ಸುಳಿಯಲ್ಲಿಯೇ ಸಿಲುಕಿ ಭಕ್ತಿಯನ್ನೇ ಬಿಟ್ಟುಬಿಟ್ಟ ಉದಾಹರಣೆಗಳು ಇಲ್ಲದೆ ಇಲ್ಲ.

ದೇಹಸ್ವಭಾವಕ್ಕೆ ಅಂಟಿಕೊಂಡ ಈ ಜೀವನದಲ್ಲಿ ಅನೇಕ ಬಗೆಯ ಸಂಶಯಗಳಿರುವ ಸಂಭವವಿದೆ. ಸಂಶಯ ಸಹಿತವಾದ ಭಾವಕ್ಕೆ ದ್ವೈತಭಾವವೆಂದು ಶ್ರೀ ಅಂಬುರಾವ ಮಹಾರಾಜರು ಹೇಳುತ್ತಿದ್ದರು. ಭಕ್ತನ ಪ್ರಥಮಾವಸ್ಥೆಯ ಸಾಧನದಲ್ಲಿ ಒಂದಿಲ್ಲೊಂದು ಸಂಶಯವು ಅವನನ್ನು ಪೀಡಿಸುತ್ತಲೇ ಇರುವುದು. ಆಗ ಅವನ ಭಾವವು ಅನನ್ಯವಾಗಿರದೆ

ದ್ವೈತಮಯವಾಗಿರುವುದು. ತನ್ನ ಗುರುವಿನ ಬಗ್ಗೆ, ಗುರುವಚನದ ಬಗ್ಗೆ, ಗುರುಮಂತ್ರದ ಬಗ್ಗೆ, ಗುರು ಅನುಗ್ರಹದಿಂದ ದೊರೆಯ ಗುಪ್ತರೂಪದ ಬಗ್ಗೆ, ಪರಮಾತ್ಮನು ಸಗುಣನೋ ನಿರ್ಗುಣನೋ ಎಂಬ ಬಗ್ಗೆ ಶಿಷ್ಯನ ಮನದಲ್ಲಿ ಸಂಶಯವು ಮೂಡುವ ಸಂಭವವಿದೆ. ಇದನ್ನರಿತ ಶಿವಲಿಂಗವ್ವನವರು ಸಂಶಯ ರಹಿತ ನಿಷ್ಠೆ ಇರಬೇಕೆಂದು ಹೇಳುವರು.

ಶ್ರೀ ಉಮದೀ ಮಹಾರಾಜರು ತಮ್ಮ ಇಬ್ಬರು ಮಕ್ಕಳಾದ ಕೃಷ್ಣಾಜಿಪಂತ ಮತ್ತು ಭೀಮರಾಯರ ನಿಷ್ಠೆಯ ಬಗ್ಗೆ ಹೇಳುತ್ತಿರುವಾಗ, 'ಕೃಷ್ಣಾ, ನನ್ನ ತನ್ನ ಗುರು ಅಂತ ತಿಳಿದಾನ ನಾನು ಅವನಿಗೆ ಗುರು ಆಗಿರುವೆ, ಭೀಮಾ ನನ್ನ ತನ್ನ ತಂದಿ ಅಂತ ತಿಳಿದಾನ ಅವನಿಗೆ ನಾನು ತಂದಿ ಆಗೇನಿ' ಎಂದು ಹೇಳುತ್ತಿದ್ದರು. ಭೀಮರಾಯರ ಮನದಲ್ಲಿ ತಂದಿಯಾದವನನ್ನು ಗುರುವೆಂದು ಹೇಗೆ ತಿಳಿಯುವುದು ಎಂಬ ಸಂಶಯವಿದ್ದಿತು. 'ಮಹಾರಾಜರು ದೇವರೆಂದು. ನಾನು ನಂಬಿರುವೆ. ಆ ರೀತಿ ನನಗೆ ನೂರಾರು ಅನುಭವಗಳು ಬಂದಿವೆ. ನೀವು ಅವರನ್ನು ಮನುಷ್ಯರೆಂದು ತಿಳಿದಿರುವಿರಿ, ಅದಕ್ಕಾಗಿ ನಿಮಗೆ ಆತ್ಮಾನುಭವವಿಲ್ಲ' ಎಂದು ಶ್ರೀ ಅಂಬುರಾವ ಮಹಾರಾಜರು ತಮ್ಮ ಗುರುನಿಷ್ಠೆಯ ಬಗ್ಗೆ ಹೇಳುತ್ತಿದ್ದುದನ್ನು ವಾಚಕರ ಗಮನಕ್ಕೆ ತರಬಯಸುತ್ತೇವೆ.

ಎರಡನೆಯ ಸಂಶಯವೆಂದರೆ ಗುರುಕರುಣೆಯ ಬಗ್ಗೆ, ಗುರುಕೊಟ್ಟ ಮಂತ್ರದ ಬಗ್ಗೆ. ಗುರುಮಂತ್ರಕ್ಕೂ ಸಾಕ್ಷಾತ್ಕಾರಕ್ಕೂ ಸಂಬಂಧವೇನು ಎಂಬ ಒಂದು ಬಗೆಯ ಸಂಶಯವು ಬುದ್ಧಿಪ್ರಧಾನರಾದ ಆಧುನಿಕ ಭಕ್ತರಲ್ಲಿ ಬಂದ ಕೆಲವು ಉದಾಹರಣೆಗಳಿವೆ. ನಿಜವಾಗಿ ನೋಡಿದರೆ, ನಾಮ ಮತ್ತು ವಸ್ತು ಅಂದರೆ ಬ್ರಹ್ಮ ಇವುಗಳ ಸಂಬಂಧವನ್ನು ಅನುಭವದಿಂದ ತಿಳಿದುಕೊಳ್ಳಬೇಕಾಗುವುದು. 'ಬೆಲ್ಲದ ರುಚಿ ತಿಳಿಯಬೇಕಾದರೆ ತಿಂದು ನೋಡು' ಎಂದು ಮಹಾರಾಷ್ಟ್ರ ಸಂತರಾದ ಶ್ರೀರಾಮದಾಸರು ಹೇಳಿರುವುದನ್ನು ವಾಚಕರ ಅವಗಾಹನೆಗೆ ತರಬಯಸುತ್ತೇವೆ. ಗುರುಗಳಿಂದ ಮಂತ್ರವನ್ನೇನೋ ಪಡೆದುದಾಯಿತು. ಆದರೆ ಆ ಮಂತ್ರದಲ್ಲಿ ಪರಮಾತ್ಮನ ದರ್ಶನ ಮಾಡಿಸುವ ಶಕ್ತಿ ಇರಬಹುದೇ ಎಂಬ ಸಂಶಯವು ಕೆಲವರಿಗೆ ಇರುವ ಸಂಭವವಿದೆ. ಇನ್ನೊಂದು ಅರ್ಥದಲ್ಲಿ ಈ ಶಂಕೆಯೆಂದರೆ ಗುರುಗಳ ಆಧ್ಯಾತ್ಮಿಕ ಯೋಗ್ಯತೆಯ ಬಗ್ಗೆಯೇ ಸರಿ. ಈ ಶಂಕೆಯು ಅತ್ಯಂತ ಘಾತುಕವಾದದ್ದೆಂದು ಹೇಳಬಹುದು. ಈ ಬಗೆಯ ಸಂಶಯದಿಂದ ಮಾಡಿದ ಸಾಧನವೆಂದರೆ 'ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆಯೇ' ಸರಿ. ಅಂಥವರ ಸಾಧನವು ಫಲಬಿಡಲಾರದು. ಇದರಿಂದ ಅನನ್ಯ ನಿಷ್ಠೆಯು ಸಾಧ್ಯವಿಲ್ಲ. ನಾಮವು ಸ್ವಸಂವೇದನೆಯನ್ನು ಮುಟ್ಟುವುದೇ ಶಕ್ಯವಿಲ್ಲ.

ಇನ್ನೂ ಕೆಲವರಿಗೆ ಗುರುಮಂತ್ರದಲ್ಲಿಯ ಅಕ್ಷರ ಜೋಡಣೆಯ ಬಗ್ಗೆ ಸಂಶಯ ಯುಂಟಾಗುವ ಸಂಭವವಿದೆ. ಗುರುಕೊಟ್ಟ ಮಂತ್ರವು ತನ್ನ ಉಪಾಸ್ಯ ದೇವತೆಯ

ಹೆಸರಿನಿಂದ ಭಿನ್ನವಾಗಿದ್ದರೆ, ಉಪಾಸ್ಯ ದೇವತೆಯ ನಾಮವನ್ನು ಬಿಟ್ಟು ಅನ್ಯದೇವತೆಯ ನಾಮವನ್ನು ಜಪಿಸಬಹುದೋ ಹೇಗೆ ಎಂಬ ಸಂಶಯ ಬರುವ ಸಂಭವವಿಲ್ಲದೆ ಇಲ್ಲ. 'ಹರನ ಭಕ್ತರಿಗೆ ಹರಿಯೆಂದು ನುಡಿಸುವರು । ಹರಿದಾಸರಿಗೆ ಹರನೆಂದು ನುಡಿಸುವರು' ಎಂದು ಶ್ರೀಉಮದೀ ಮಹಾರಾಜರ ಶಿಷ್ಯಣಿಯರಾದ ಗಂಗಾಬಾಯಿ ತಿಕೋಟಿಕರ ಅವರು, ಹರಿಭಕ್ತರಿಗೆ ಹರನೆಂದೂ, ಹರಭಕ್ತರಿಗೆ ಹರಿಯೆಂದೂ ಶ್ರೀ ಉಮದೀ ಮಹಾರಾಜರು ನುಡಿಸುವರೆಂದು ಹೇಳುವರು. ತನ್ನ ಉಪಾಸ್ಯ ದೇವತೆಯಿಂದ ಭಿನ್ನವಾದ ಗುರುನಾಮವೇ ಶ್ರೇಷ್ಠವೆಂದು ಬಗೆದು ತನ್ನ ಉಪಾಸ್ಯ ದೇವತೆಯ ಹೆಸರನ್ನು ಬಿಟ್ಟು ಗುರುಕೊಟ್ಟ ಮಂತ್ರವನ್ನು ಜಪಿಸುವುದೇ ಶಿಷ್ಯನ ಕರ್ತವ್ಯವು. ಗುರುಕೊಟ್ಟ ನಾಮವನ್ನುಳಿದು ಬೇರೆ ನಾಮುಗಳು ಮಂತ್ರವೆನಿಸಲಾರವು. ಗುರುಮಂತ್ರದಲ್ಲಿಯೇ ಬ್ರಹ್ಮಶಕ್ತಿಯಿರುವುದು. ಅದುವೇ ಬ್ರಹ್ಮಬೀಜವೆನಿಸುವುದು.

ಗುರುಮಂತ್ರದ ಅಕ್ಷರಗಳ ಜೋಡಣೆಯು ವ್ಯಾಕರಣಕ್ಕೆ ಸರಿಯಾಗುವುದೋ ಹೇಗೆ, ಒಂದು ವೇಳೆ ಅದು ಸರಿಯಾಗಿರದ ಪಕ್ಷದಲ್ಲಿ ವ್ಯಾಕರಣಶುದ್ಧವಾದ ಮಂತ್ರವನ್ನು ಕೊಡಲು ಗುರುಗಳು ಮರೆತಿರುವರೋ ಹೇಗೆ ಎಂಬ ಸಂಶಯವು ಬಂದು ಆ ಶಿಷ್ಯನು ಆ ಮಂತ್ರವನ್ನು ತಿದ್ದಿ ಜಪಿಸಬಯಸುವನು. ಆದರೆ ಅದು ಗುರುಮಂತ್ರವಾಗ ಲಾರದು. ಕೆಲವು ಸಲ ಗುರುಗಳು ಮಹಾಮಂತ್ರಗಳೆನಿಸಿದ ನಾಮಗಳಲ್ಲಿಯ ಕೆಲವೊಂದು ಅಕ್ಷರಗಳನ್ನಾಗಲಿ, ಕೆಲವೊಂದು ಭಾಗವನ್ನಾಗಲೀ ಬಿಟ್ಟು ತಮ್ಮ ಶಿಷ್ಯರನ್ನು ಕುರಿತು ಉಪದೇಶಿಸುವರು. ತನಗೆ ಪೂರ್ಣಮಂತ್ರವನ್ನು ಉಪದೇಶಿಸದೆ ಅದರ ಖಂಡ ಭಾಗವನ್ನೇಕೆ ಗುರುಗಳು ಉಪದೇಶಿಸಿರಬಹುದೆಂದು ಬಗ್ಗೆ ಕೆಲವರು ಸಂಶಯ ತಾಳುವರು. ತಮ್ಮ ಗುರುಮಂತ್ರಕ್ಕೆ ಅರ್ಥಹಚ್ಚಿ ನೋಡುವರು ಕೆಲವರು. ಅದು ಸರಿಯಾದ ಅರ್ಥವನ್ನು ಕೊಡದಿದ್ದರೆ ಅದರ ಬಗ್ಗೆ ಸಂಶಯ ತಾಳುವರು.

ಈ ಎಲ್ಲ ಸಂಶಯಗಳಿಗೆ ಶಿವಲಿಂಗವ್ವನವರು 'ಗುರುಕೊಟ್ಟ ವಾಕ್ಯವೇ ಮಹಾವಾಕ್ಯ ಶಿವಮಂತ್ರ' ಎಂದು ಉತ್ತರ ಹೇಳುವರು. ಗುರು ಹೇಳಿದ ಅಕ್ಷರಗಳೇ ಶಿವಮಂತ್ರವಲ್ಲದೆ 'ಶಿವ' ಎಂಬ ಪದವು ತನ್ನಷ್ಟಕ್ಕೆ ತಾನೇ ಮಂತ್ರವೆನಿಸಲಾರದು. ಗುರುಗಳಿಂದ ದೊರೆಯುವುದು ಅಕ್ಷರಗಳು; ಅವು ಎಷ್ಟಿರಬೇಕು, ಯಾವವಿರಬೇಕು, ಅವುಗಳ ಜೋಡಣೆ ಹೇಗಿರಬೇಕು ಇತ್ಯಾದಿ ವಿಷಯಗಳು ಗುರುಗಳಿಗೆ ಸೇರಿದವುಗಳು. ಯಾಕೆಂದರೆ 'ಹರಮಂತ್ರ ಗುರುಬಲ್ಲ'.

ಗುರುಮಂತ್ರವು ಸಗುಣವೋ ನಿರ್ಗುಣವೋ ಎಂಬ ಶಂಕೆಯು ತಾತ್ವಿಕ ವಿಚಾರ ಮಾಡುವ ಮನೋವೃತ್ತಿಯುಳ್ಳ ಕೆಲವರಲ್ಲಿ ಹುಟ್ಟುವುದು ಸಹಜವು. ಗುರುವಿನಿಂದ ಪಡೆದ ಮಂತ್ರಕ್ಕೆ ನಾಮವೆಂದೂ ಸಂಬೋಧಿಸಲಾಗುವುದು. ನಾಮವೆಂದ ಕೂಡಲೆ

ನಾಮಿಯ ಕಲ್ಪನೆ ಮೂಡುವುದು ನಾಮಧಾರಕರ ಮನದಲ್ಲಿ, ಕೇಳಿಕೆಯಲ್ಲಿ, ಇಲ್ಲವೆ ನೋಡುವಲ್ಲಿ ಬಂದ ಆ ನಾಮಕ್ಕೆ ಸಂಬಂಧಿಸಿದ ರೂಪು ಭಕ್ತನ ಮನದೆದುರು ಬಂದು ನಿಲ್ಲುವುದು. ಅಂಥ ರೂಪವನ್ನೇ ಆ ಸಾಧಕನು ಪರಮಾತ್ಮನ ರೂಪು ಎಂದು ಭ್ರಮಿಸಿ, ತನಗೆ ಸಾಕ್ಷಾತ್ಕಾರವಾಯಿತೆಂದು ತಿಳಿಯುವನು. 'ವಿಠ್ಠಲ' ಎಂಬ ಗುರುಮಂತ್ರವು ಪಂಢರಪುರದ ವಿಠ್ಠಲನ ಹೆಸರೆಂದು ತಿಳಿದು, ವಿಠ್ಠಲನ ಶಿಲಾಮೂರ್ತಿಯನ್ನು ನೆನೆಯುತ್ತ ಗುರುಮಂತ್ರ ಸ್ಮರಣೆ ಮಾಡುತ್ತಿರುವಂತೆ ಆ ಶಿಲಾಮೂರ್ತಿಯು ಆ ಧ್ಯಾನಿಯ ಮನದೆದುರು ರೂಪು ತಾಳಿ ನಿಲ್ಲಬಹುದು. ಅದುವೇ ಪರಮಾತ್ಮನ ಸಾಕ್ಷಾತ್ಕಾರವೆಂದು ತಿಳಿದು ಒಂದು ಬಗೆಯ ಭ್ರಮೆಯಲ್ಲಿರುವವರು ಕೆಲವರು.

ಗುರುಕೊಟ್ಟ ನಾಮವು ನಿರ್ಗುಣವು, ಅದೊಂದು ಮಂತ್ರಾಕ್ಷರಗಳ ಸಮುಚ್ಚಯವು. ಆ ನಾಮವು ನಿರ್ಗುಣ ಪರಮಾತ್ಮನೇ ಸರಿ. ಅದನ್ನು ಬ್ರಹ್ಮಶಕ್ತಿಯೆಂದು ಕರೆಯುವರು. ಬ್ರಹ್ಮಬೀಜವೆಂದು ಕರೆಯುವರು ಕೆಲವರು. ಸಬೀಜಮಂತ್ರವೆಂದೂ ಕರೆಯಬಹುದು. ಆ ನಾಮದ ಪ್ರತಿಯೊಂದು ಅಕ್ಷರವೂ ಅಷ್ಟೇ ಮಹತ್ವದ್ದಿದೆ. ಅದರ ಪ್ರತಿಯೊಂದು ಅಕ್ಷರದಲ್ಲಿ ಸದ್ಗುರುಗಳು ತಮ್ಮ ಆತ್ಮಶಕ್ತಿಯನ್ನು ತುಂಬಿ ಶಿಷ್ಯನ ಕರ್ಣದ್ವಾರದಿಂದ ಹೃದಯದ ಹೊಲದಲ್ಲಿ ಬಿತ್ತುವರು.

ತಾನು ಮಾಡಿದ ಸಾಧನದ ಫಲವಾಗಿ ಮತ್ತು ಗುರುಕರುಣೆಯಿಂದ ನಿರಾಕಾರ ಪರಬ್ರಹ್ಮವಸ್ತು ಆಕಾರ ತಾಳಿ ಭಕ್ತನಿಗೆ ಅನುಭವ ಬಂದರೂ ತನ್ನ ಅನುಭವಕ್ಕೆ ಬಂದ ವಸ್ತು ಪರಮಾತ್ಮನ ರೂಪು ಎಂಬ ನಂಬಿಕೆಯು ಸಾಧಕನಲ್ಲಿ ಒಮ್ಮಿಂದೊಮ್ಮೆ ಉಂಟಾಗುವುದಿಲ್ಲ. ಒಂದು ವೇಳೆ ಬುದ್ಧಿಯೊಪ್ಪಿದರೂ, ಅವನ ಮನಸು ಒಪ್ಪುವುದಿಲ್ಲ. ತನ್ನ ಅನುಭವಕ್ಕೆ ಬಂದ ರೂಪ, ರಸ, ಗಂಧ, ನಾದ, ಸ್ಪರ್ಶಾದಿ ಅನುಭವಗಳು ಪರಮಾತ್ಮನ ಆವಿಷ್ಕಾರಗಳೆಂದು ಮನದಟ್ಟಾಗಬೇಕಾದರೆ ಸಾಧಕನು ಕಾಲಕಳೆಯಬೇಕು. ಆದರೆ ಸದ್ಗುರುಗಳು ಅವು ಪರಮಾತ್ಮನ ಅನುಭವಗಳೆಂದು ಹೇಳಿದ ಮೇಲೆ ಆ ಮಾತಿನಲ್ಲಿ ಸಂಪೂರ್ಣ ನಂಬಿಗೆಯನ್ನಿಟ್ಟು ಸಾಧನ ಮಾಡುವುದೇ ಶಿಷ್ಯನಾದವನ ಕರ್ತವ್ಯವು. ಶ್ರೀ ಉಮದೀ ಮಹಾರಾಜರು, 'ನಿನಗೆ ಕಾಣುವುದು ಪರಮಾತ್ಮನ ರೂಪು. ಅದನ್ನು ಗಟ್ಟಿಯಾಗಿ ನಂಬು' ಎಂದು ಶ್ರೀ ಅಂಬುರಾವ ಮಹಾರಾಜರಿಗೆ ಹೇಳಿದ ತಕ್ಷಣವೇ ಅವರು ನಂಬಿದರು. ಮುಂದೆ ಅವರ ಮನದಲ್ಲಿ ಆ ಬಗೆಯ ಸಂಶಯವೇ ಬರಲಿಲ್ಲ. ಸಾಧಕನ ಸಂಶಯಯುಕ್ತ ಮನಸ್ಸನ್ನರಿತ ಶಿವಲಿಂಗವ್ವನವರು 'ಮನಸ್ಸಿನ ಸಂಶಯ ಬಿಡಬೇಕು' ಎಂದು ಹೇಳಿದರು.

ಶ್ರದ್ಧೆಯಲ್ಲಿ ಪ್ರೇಮವು. ಪ್ರೇಮದಲ್ಲಿ ಆನಂದವು ಅಡಕವಾಗಿರುತ್ತದೆ. ಗುರುವಿನಲ್ಲಿ, ಗುರುಮಂತ್ರದಲ್ಲಿ ನಂಬಿಗೆಯನ್ನಿಡುವುದರಿಂದ ಅವರಲ್ಲಿ ಪ್ರೇಮಭಾವವು ಬೆಳೆಯುವುದು. ಎಲ್ಲಿ ಪ್ರೇಮವೋ ಅಲ್ಲಿ ಆನಂದವಿರುವುದರಿಂದ, ಶ್ರದ್ಧಾಪ್ರೇಮಗಳು ಬೆಳೆದಂತೆ, ಗುರು

ಆಜ್ಞೆಯನ್ನು ಪಾಲಿಸುವಲ್ಲಿ ಆನಂದವೆನಿಸುವುದು. 'ಶಿವಧ್ಯಾನ ಆನಂದದಿಂದ ಮಾಡುತ್ತಿರಬೇಕೆಂದು' ಶಿವಲಿಂಗವ್ವನವರು ಹೇಳುವರು. ಶಿವಧ್ಯಾನ ಮಾಡಲು ಸಾಮಾನ್ಯ ಸಾಧಕರ ದೇಹ–ಮನಗಳು ಬೇಸರಪಟ್ಟುಕೊಳ್ಳುವುದುಂಟು. ಆದರೆ ಬುದ್ಧಿ ಮತ್ತು ಕ್ರಿಯಾಶಕ್ತಿಗಳು ಒಂದಾಗಿ ಕೆಲಸ ಮಾಡಿದರೆ ಮನಸ್ಸು ಅವುಗಳ ಅಂಕಿತದಲ್ಲಿ ಬರುವುದು. ಆದ್ದರಿಂದ ಅಂತರ್ನಿರೀಕ್ಷಣ ಮಾಡುತ್ತ ಸಾಧನ ಮಾಡಿದರೆ ಮನಸ್ಸಿನ ಸ್ವರೂಪ ತಿಳಿಯುವುದು. ಆಗ ಅದಕ್ಕೆ ಛೀ ಹಾಕಿ ಅದನ್ನು ನಾಮದ ಕಡೆಗೆ ಎಳೆಯಲು ಬರುವುದು. ಹೀಗೆ ಪ್ರಯತ್ನ ಮಾಡುತ್ತ ದೇಹ, ಮನ, ಬುದ್ಧಿಗಳು ಒಂದಾಗಿ ಗುರುಮಂತ್ರವನ್ನು ಜಪಿಸಹತ್ತಿದರೆ 'ಸತ್ಕಾರಯುಕ್ತ ಸಾಧನ ಮಾಡಿದಂತಾಗುವುದು. ತನು–ಮನಗಳು ಗುರುಮಂತ್ರದಲ್ಲಿ ವಿರಮಿಸುವವು. ಶಿವಮಂತ್ರವನ್ನು ಆನಂದದಿಂದ ಸ್ಮರಿಸಿ'ದಂತಾಗುವುದು. ಆದರೆ ಇದು ಒಂದೇ ದಿವಸಕ್ಕಾಗಲೀ ಇಂತಿಷ್ಟೇ ಕಾಲದಲ್ಲಿಯಾಗಲೀ ಆಗುವುದೆಂದು ಹೇಳಲಿಕ್ಕೆ ಬಾರದು. ಅದನ್ನು ನಿಧಾನವಾಗಿ ಸಾಧಿಸಬೇಕಾಗುತ್ತದೆ.

**ಲಿಂಗಾಂಗ ಭೇಟಿ :** ಹೀಗೆ ಸಾಧನವನ್ನು ಬೆಳೆಸುತ್ತ, ಬಲಿಸುತ್ತ ಹೋದಂತೆ ಪುಣ್ಯದ ಸಂಚಯವಾಗುತ್ತ ಹೋಗುವುದು. ಆ ಪುಣ್ಯವೇ ರೂಪು ತಾಳಿ ಒಂದಿಲ್ಲೊಂದು ರೀತಿಯಲ್ಲಿ– ರೂಪ, ರಸ, ಗಂಧ, ನಾದ, ಸ್ಪರ್ಶ–ಸಾಧಕನ ಅನುಭವಕ್ಕೆ ಬರುವುದು. ಇಲ್ಲಿಯ ವರೆಗೆ ಸಾಧನವು ಅಂದರೆ ಶಿವಸ್ಮರಣೆಯು ಬುದ್ಧಿಯ ಮತ್ತು ಭಾವನೆಯ ಬಲದಿಂದ ನಡೆಯುತ್ತಿದ್ದುದು, ಈಗ ಅದು ವಸ್ತುನಿಷ್ಠವಾಗುವುದು. ಅದರ ಆನಂದದಲ್ಲಿ ಶಿವಸ್ಮರಣೆ ಮಾಡುವ ಸಾಧಕನು ಭೌತಿಕ ದುಃಖಗಳನ್ನು ಲೆಕ್ಕಿಸನು. 'ಬಂದದ್ದೆಲ್ಲಾ ಬರಲಿ ಗೋವಿಂದನ ದಯವೊಂದಿರಲಿ' ಎಂದು ಆನಂದದಲ್ಲಿಯೇ ಅವನು ಇರುವನು. ಅದನ್ನೆ ಶಿವಲಿಂಗವ್ವನವರು 'ಎಷ್ಟೋ ಧಕ್ಕೆ ಚಪೇಟೆಗಳನ್ನು ಸೋಸಬೇಕಾಗುತ್ತದೆ' ಎಂದು ಹೇಳುವರು. ಎಂಥ ದುಃಖದ ಪ್ರಸಂಗ ಬಂದರೂ ಎದುರಿಸಬೇಕಾಗುವುದೆಂದು ಹೇಳವರು ಅವರು.

> 'ಶಿವಧ್ಯಾನವನ್ನು ಬಿಡಬಾರದು ಅಂದರೆ ದುರಿತಗಳು ದೂರಾಗುವವು. ಶಿವಮಂತ್ರ ಮರೆಯಬಾರದು; ಮಾಡುತ್ತಿರಬೇಕು. ಹಲವು ದಿವಸಗಳೆಲ್ಲಾ ಹರರೂಪ ಶಿವಯೆಂದು ಪರಿಣಮಿಸುತ್ತಿರಬೇಕು. ಆತ್ಮಲಿಂಗನ ನೋಡುತ್ತಿರಬೇಕು.'

ಈ ಮೇಲಿನ ವಚನವು ಶಿವಲಿಂಗವ್ವನವರ ಜೀವನವನ್ನೇ ಪ್ರತಿಬಿಂಬಿಸುವಂತಿದೆ. ಎಂಥ ಪ್ರಸಂಗ ಬಂದರೂ ಅವರು ಶಿವಧ್ಯಾನವನ್ನು ಬಿಡಲಿಲ್ಲ. ಅಂತೇ ಬಿಡಬಾರದೆಂದು, ತಾವು ಮಾಡಿ ಆಡಿದರು. ಶಿವಮಂತ್ರವನ್ನು ಮರೆಯಬಾರದು. ಈ ವಚನದಲ್ಲಿ ಶಿವಲಿಂಗವ್ವನವರು ಆತ್ಮಲಿಂಗನ ನೋಡುತ್ತ ನಾಮಸ್ಮರಣೆಯನ್ನು ಮಾಡಬೇಕೆಂದು ಹೇಳುವರು. ಇಲ್ಲಿಯ ವರೆಗೆ ಶಿವಸೂತ್ರದ ಆನಂದವು ಶ್ರದ್ಧೆಯ ಬಲದ ಮೇಲೆ ಆಧಾರ

ಭೂತವಾಗಿದ್ದಿತು. ಗುರುವಿನ ಮೇಲಿನ ಮತ್ತು ಗುರುವಚನದ ಮೇಲಿನ ಪ್ರೇಮವು ಭಾವನಾಪ್ರಧಾನವಾಗಿದ್ದಿತು. 'ಆತ್ಮಲಿಂಗನ ನೋಡುತ್ತಿರಬೇಕು' ಎಂದು ಹೇಳುತ್ತ ಸಾಧನವು ವಸ್ತುನಿಷ್ಠವಾಗಿರಬೇಕೆಂದು ಹೇಳುವವರು ಅವರು. ಭಾವನಾಪ್ರಧಾನವಾದ ನಾಮಸಾಧನವು, ಭಾವನೆಗೆ ಧಕ್ಕೆ ತಗುಲಿದರೆ, ಚಲಿಸುವ ಸಂಭವವಿದೆ. ಅದಕ್ಕಾಗಿ ಅವರು ಎಂಥ ಪ್ರಸಂಗಬಂದರೂ ನಾಮವನ್ನು ಬಿಡಬಾರದೆಂದು ಎಚ್ಚರಿಕೆ ನೀಡಿರುವರು. 'ಆತ್ಮಲಿಂಗವನ್ನು ನೋಡುತ್ತ' ಮಾಡಿದ ನಾಮಸ್ಮರಣೆಯು ವಸ್ತುನಿಷ್ಠವಾಗಿರುವುದರಿಂದಲೂ, ಅದರಿಂದುಂಟಾದ ಆನಂದವು ಆತ್ಮಲಿಂಗನ ನೋಡುವುದರಲ್ಲಿದ್ದು ವಸ್ತುನಿಷ್ಠವಾಗಿರುವುದರಿಂದಲೂ ಸಾಧಕನ ಮನಸ್ಸು ಎಂಥ ಪ್ರಸಂಗಬಂದರೂ ಚಲಿಸುವ ಸಂಭವವು ತೀರ ಕಡಿಮೆ.

> 'ಶಿವಮಂತ್ರವನ್ನು ಹೆಜ್ಜೆ ಹೆಜ್ಜೆಗೆ ಅರವಿನಲ್ಲಿ ಮರೆಯದೆ ಆದರದಿಂದ ಮಾಡುತ್ತಿರಬೇಕು'.

ಪತಂಜಲಿ ಋಷಿಗಳು ತಮ್ಮ 'ಯೋಗಸೂತ್ರ' ಗ್ರಂಥದಲ್ಲಿ ಯೋಗವು ಹ್ಯಾಗೆ ನಡೆಯಬೇಕೆಂಬ ಬಗ್ಗೆ 'ಸತು ದೀರ್ಘಕಾಲ ನೈರಂತರ್ಯ ಸತ್ಕಾರ ಸೇವಿತಾ ದೃಢಭೂಮಿಃ' ಎಂದು ಹೇಳಿರುವರು. ಆ ಮಾತುಗಳನ್ನೆ ಶಿವಲಿಂಗವ್ವನವರು ಮೇಲಿನ ವಚನದಲ್ಲಿ ಹೇಳಿದುದು ಕಂಡು ಬರುತ್ತದೆ. ಇನ್ನೂ ಮುಂದೆ ಹೋಗಿ ಶಿವಲಿಂಗವ್ವನವರು 'ಆತ್ಮಲಿಂಗನನ್ನು ನೋಡುತ್ತ' ಎಂದು ಹೇಳಿದುದು ವಿಶೇಷವಾಗಿದೆ. ನಿರಂತರ ಮತ್ತು ಸತ್ಕಾರ ಸೇವಿತದರ ಜತೆ ಆತ್ಮಲಿಂಗನ ಸಾಕ್ಷಾತ್ಕಾರವನ್ನು ಅವರು ಹೇಳಿರುವರು.

ಹೆಜ್ಜೆ ಹೆಜ್ಜೆಗೆ ಶಿವಮಂತ್ರವನ್ನು ಸ್ಮರಿಸುತ್ತ 'ಅಂಗಲಿಂಗ ಸಂಗ ಮಾಡಿ ಲಿಂಗಪೂಜೆ ಮಾಡುತ್ತಿರಬೇಕು. ಆ ಲಿಂಗಕ್ಕೆ ಮೂರು ದಳದ ಪತ್ರಿ ಏರಿಸುತ್ತಿರಬೇಕು. ವರವು ಅಂದರೆ ಆ ಲಿಂಗದ ಸ್ಮರಣೆ ಅರವಿನಲ್ಲಿ ಮರೆಯದೆ ನಡೆದಿರಬೇಕು, ನಡೆಯಬೇಕು. ವರವು ಅಂದರೆ ಆ ಲಿಂಗವು ನೇತ್ರದಲ್ಲಿ ನಟ್ಟಿರಬೇಕು ಮತ್ತು ಸುಳಿದಾಡುತ್ತಿರಬೇಕು. ತನ್ನ ದೃಷ್ಟಿಯಲ್ಲಿ ಅಂದರೆ ಗುರುಗಳ ಅನುಗ್ರಹದಿಂದ ತೋರುವ ಆತ್ಮನ ರೂಪವನ್ನು ನೋಡುತ್ತ ಶಿವಸ್ಮರಣೆ ಮಾಡುವುದೇ ಅಂಗಲಿಂಗ ಸಂಗವು'.

ಶಿವಲಿಂಗವ್ವನವರ ಈ ವಚನವು ಅನೇಕ ದೃಷ್ಟಿಯಿಂದ ಮಹತ್ವದ್ದಿದೆ. ವೀರಶೈವ ತತ್ವಜ್ಞಾನದಲ್ಲಿ ಅಂಗಲಿಂಗ ಪದಗಳು ವಿಶೇಷವಾಗಿ ಬಳಸಲ್ಪಡುವುದಲ್ಲದೆ, 'ಅಂಗಲಿಂಗ ಸಂಗ' ಎಂಬ ಸಂಯುಕ್ತ ಪದವು ವಿಶೇಷ ರೂಢಿಯಲ್ಲಿದೆ. 'ಅಂಗಾ ಲಿಂಗದ ಸಂಗ ಸಂಯೋಗ ಹೇಳಿದನು' ಎಂದು ಗುರುಲಿಂಗಜಂಗಮವೆಂಬ ಮುದ್ರಿಕೆಯುಳ್ಳ ಅನುಭಾವಿಯು, ಗುರುಕರುಣೆಯಿಂದ ಅಂಗಲಿಂಗದ ಸಂಗವಾಯಿತೆಂದು ಹೇಳುವನು. ಈ ಪದವು ಶಿವಲಿಂಗವ್ವನವರದೇ ಇರಬಹುದೇ ಎಂಬ ಸಂಶಯ ಬರುವಂತಿದೆ.

ಅದರ ಬಗ್ಗೆ ಚರ್ಚೆಯು ಇಲ್ಲಿ ಅಪ್ರಸ್ತುತವು. 'ಅಂಗಲಿಂಗಸಂಗದ' ವಿವರವಾದ ಮತ್ತು ಸ್ಪಷ್ಟವಾದ ಭಾಷ್ಯವನ್ನು ಮಾಡಿ, ವೀರಶೈವ ತತ್ವಜ್ಞಾನದ ಮೇಲೆ ತಮ್ಮ ಅನುಭವದ ಬೆಳಕನ್ನು ಶಿವಲಿಂಗವ್ವನವರು ಬೀರುವರೆಂದು ಹೇಳಬಹುದು. ನಿಷ್ಠೆಯಿಂದ ಶಿವಸ್ಮರಣೆ ಮಾಡಿದರೆ ಅಂಗಲಿಂಗ ಸಂಗವಾಗುವುದು, ಎಂದು ಅವರು ಹೇಳುವರು. ಅಂಗಲಿಂಗಸಂಗದ ವಿವರವಾದ ಚರ್ಚೆಯನ್ನು ಮುಂದೆ ಮಾಡಲಗಿದೆ.

'ಆ ಲಿಂಗಕ್ಕೆ ಬಿಲ್ವಪತ್ರಿ ಏರಿಸುತ್ತಿರಬೇಕು' ಎಂದು ಅವರು ಹೇಳುವರು. ಇಲ್ಲಿ ಆತ್ಮಲಿಂಗದ ಬಗ್ಗೆ ಅವರು ಹೇಳುವರೆಂಬುದನ್ನು ನಾವು ಗಮನಿಸಬೇಕಾಗಿದೆ. ಆ ಆತ್ಮಲಿಂಗನಿಗೆ ಸ್ಥೂಲವಾದ ಬಿಲ್ವಪತ್ರಿಯನ್ನು ಏರಿಸುವುದೆಂತು? ಮೇಲಾಗಿ ಯಾವಾಗಲು ಬಿಲ್ವಪತ್ರಿಯನ್ನು ಸಂತತವಾಗಿ ಏರಿಸುವುದು ಸಾಧ್ಯವಿಲ್ಲ. ಶಿವಲಿಂಗವ್ವನವರು ಹೇಳುವ ಬಿಲ್ವಪತ್ರಿಯ ವಿವರವನ್ನು ಉರಗಗಿರಿಯ ಶಿವಶರಣರ ಪದ್ಯವಾದ 'ಬಿಲ್ವಪತ್ರಿ ಧರಿಸಬೇಕಣ್ಣಾ' ಎಂಬ ಪದ್ಯದಲ್ಲಿ ಕಾಣಬಹುದು. ಈ ಪದ್ಯದ ಮೇಲೆ ಭಾಷ್ಯ ಮಾಡುತ್ತ, 'The two eyes and the nose constitute the Bilvapatra, involving the fixing of the gaze upon the tip of the nose' (P.W.G. in K.L. p. 194) ಎಂದು ಗುರುದೇವ ರಾನಡೆಯವರು ಬರೆಯುವರು. 'ಕಂಗಳೆರಡು ಮತ್ತು ಮೂಗು ಇವೇ ಬಿಲ್ವಪತ್ರಿಯ ಮೂರು ದಳಗಳು. ಅಂದರೆ ನಾಸಾಗ್ರದಮೇಲೆ ದೃಷ್ಟಿಯನ್ನಿಡುವುದು' ಎಂದು ಗುರುದೇವ ರಾನಡೆಯವರ ಅಭಿಪ್ರಾಯವು. ಎರಡೂ ಕಂಗಳ ದೃಷ್ಟಿಯನ್ನು ಒಂದುಗೂಡಿಸಿ ನಾಸಿಕದ ಕೊನೆಯಲ್ಲಿ ಆತ್ಮಲಿಂಗಸ್ವರೂಪವನ್ನು ನೋಡುತ್ತಿರುವುದೇ ಲಿಂಗಪೂಜೆಯು ಬಿಲ್ವಪತ್ರಿಯನ್ನು ಏರಿಸುವುದು. ಇದರಲ್ಲಿ ಧ್ಯಾನದ ಪ್ರತಿಕ್ರಿಯೆಯು ಅಡಕವಾಗಿದೆ. ಅದನ್ನೆ 'ಮುದ್ರೆ ಬಲಿದು ಜ್ಞಾನಜ್ಯೋತಿಯೊಳಗೆ ನಲಿದು' ಎಂದು ಶ್ರೀ ನಿಂಬರಗಿ ಮಹಾರಾಜರು ತಮ್ಮ ಒಂದು ಪದ್ಯದಲ್ಲಿ (ಗುರುಚರಣಕಮಲದಲ್ಲಿ ಭೃಂಗನಾಗೋ ನೀ) ಹೇಳಿದುದು ಕಂಡುಬರುವುದು. ಲಿಂಗಸ್ವರೂಪದ ಬದಲು ಅವರು ಜ್ಯೋತಿ ಸ್ವರೂಪದ ಬಗ್ಗೆ ಹೇಳಿರುವರು.

ಬಿಲ್ವಪತ್ರಿಯನ್ನು ಏರಿಸುತ್ತ ಪೂಜೆ ಮಾಡುತ್ತಿದ್ದರೆ ಆ ಆತ್ಮಲಿಂಗನು ವರವನ್ನು ದಯಪಾಲಿಸುವನು. ಅವನಿಂದ ವರ ಪಡೆಯುತ್ತಿರಬೇಕೆಂದು ಶಿವಲಿಂಗವ್ವನವರು ಹೇಳಿರುವರು. ಅವರ 'ವರದ' ಎಂಬ ಪದದ ಅರ್ಥವು ಲೌಕಿಕವಾಗಿರದೆ ಆಧ್ಯಾತ್ಮಿಕ ವಾಗಿದೆ. ಅಂತರಂಗದಲ್ಲಿ ಲಿಂಗದ ಸ್ಮರಣೆಯು ಸಂತತ ನಡೆಯಬೇಕು ನಡೆದಿರಬೇಕು ಎಂಬ ವರವನ್ನು ಪಡೆಯಬೇಕೆಂದು ಅವರು ಹೇಳಿರುವರು. 'ನಿನ್ನ ಮರವಾಗದಂತೆ ವರಕೊಡು ದೇವಾ... ನನಗೆ ಮುಕ್ತಿಯಾಗಲಿ, ಧನಸಂಪತ್ತಾಗಲಿ ಬೇಕಿಲ್ಲ' ಎಂದು ಮಹಾರಾಷ್ಟ್ರದ ಸಂತಶ್ರೇಷ್ಠರೆನಿಸಿದ ತುಕಾರಾಮರು ಹೇಳುವರು. ಸಂತತ ಸ್ಮರಣೆಯಾಗ

ಬೇಕು; ಅದು ನಡೆಯಬೇಕಾದರೆ ಪರಮಾತ್ಮನ ಕರುಣೆಯೇ ಬೇಕು. ಅಂತೇ ಅವನ ವರವು ಬೇಕು. ಅದು ಮಾನವ ಪ್ರಯತ್ನಕ್ಕೆ ಮೀರಿದುದೆಂದು ಶಿವಲಿಂಗವ್ವನವರ ಅಭಿಪ್ರಾಯ.

ಪರಮಾತ್ಮನ ಸಾಕ್ಷಾತ್ಕಾರವು ಮನುಷ್ಯ ಪ್ರಯತ್ನದಿಂದ ಸಾಧ್ಯವೆಂದು ಹೇಳಲಿಕ್ಕಾಗದು. ಭಗವಂತನ ಸಾಕ್ಷಾತ್ಕಾರವಾಗಬೇಕಾದರೆ ಅವನ ವರವು ಬೇಕು. ಅವನ ಕರುಣೆ ಬೇಕು. 'ಯಮೇವ ಏಷವೃಣುತೇ ತೇನಲಭ್ಯಃ' ಎಂದು ಉಪನಿಷತ್ಕಾರರು ಹೇಳಿರುವುದನ್ನು ಶಿವಲಿಂಗವ್ವನವರು ತಮ್ಮ ಮೇಲಿನ ವಚನದಲ್ಲಿ ಹೇಳಿದುದು ಕಂಡು ಬರುತ್ತದೆ. ಸಾಧಕನು ಎಷ್ಟೇ ಪ್ರಯತ್ನಪಟ್ಟರೂ ಪರಮಾತ್ಮನ ಸಾಕ್ಷಾತ್ಕಾರವಾಗುವುದು, ಆತನ ಅಂದರೆ ದೇವರ ಇಚ್ಛೆಯ ಮೇಲೆ ಅವಲಂಬಿಸಿದೆ. ಅದುದರಿಂದ ಅವನ ಕರುಣೆಯನ್ನು ಪಡೆಯದ ಹೊರತು ಅವನು ತನ್ನ ದರ್ಶನದ ವರವನ್ನು ದಯಪಾಲಿಸನು. ಆತ್ಮನ ರೂಪು ತಮ್ಮ ಅನುಭವದಲ್ಲಿ ಸುಳಿದು ಹೋಗುವುದರಿಂದ ಶಿವಲಿಂಗವ್ವನವರಿಗೆ ಸಮಾಧಾನವಿಲ್ಲ. ಅವನ ರೂಪು ನಿತ್ಯಕಾಲದಲ್ಲಿ, ತಮ್ಮ ಸುತ್ತು ಅವನು ಸುಳಿಯುತ್ತಿರಬೇಕೆಂದು ಅವರು ಬಯಸುವರು. ಆದರೆ ಅದು ಆತನ ಕರುಣೆಯ ಮೇಲೆಯೇ ಅವಲಂಬಿಸಿದೆ ಎಂಬುದನ್ನರಿತ ಅವರು ಆತ್ಮದರ್ಶನ ಮತ್ತು ಆತನ ನಿರಂತರ ಅನುಭವ ಎರಡನ್ನೂ ಪಡೆಯಬೇಕಾದರೆ ಆತನು ಪ್ರೀತನಾಗಿ ವರವನ್ನು ದಯಪಾಲಿಸಿದರೆ ಸಾಧ್ಯವೆಂದು ಅವರು ಹೇಳುವರು. ಆ ವರವನ್ನು ಪಡೆಯುವುದೇ ಸಾಧಕನ ಒಂದೇ ಒಂದು ಕರ್ತವ್ಯವು, ಒಂದೇ ಒಂದು ಗುರಿಯು.

> **ಅಂಗಲಿಂಗ ಸಂಗ :** 'ತನ್ನ ದೃಷ್ಟಿಯಲ್ಲಿ ಲಿಂಗವನ್ನು ಅಂದರೆ ಗುರುಗಳ
> ಅನುಗ್ರಹದಿಂದ ತನಗೆ ತೋರುವ ಆತ್ಮನ ರೂಪವನ್ನು ನೋಡುತ್ತ
> ಶಿವಸ್ಮರಣೆ ಮಾಡುವುದೇ ಅಂಗಲಿಂಗ ಸಂಗವು'

ಎಂದು ಅಂಗಲಿಂಗ ಸಂಗವನ್ನು ಕುರಿತು ಶಿವಲಿಂಗವ್ವನವರು ಹೇಳುವರು. ವೀರಶೈವ ತತ್ವಜ್ಞಾನದಲ್ಲಿ 'ಲಿಂಗಾಂಗ ಸಾಮರಸ್ಯ'ಕ್ಕೆ ಬಹಳ ಮಹತ್ವವಿದೆ. ಅಂಗದ ಗುಣಗಳನ್ನು ಮರೆತು ಲಿಂಗನಲ್ಲಿ ದೇಹ, ಬುದ್ಧಿ, ಮನಗಳನ್ನು ಒಂದಾಗಿಸುವುದೆ ಲಿಂಗಾಂಗ ಸಾಮರಸ್ಯವೆನಿಸುವುದು. ಈ ಬಗೆಯ ಸಾಮರಸ್ಯವೇ ಭಕ್ತನು. ಸಾಧಿಸಬೇಕಾದ ಗುರಿಯು. ಅದನ್ನು ಸಾಧಿಸಲು ಮೊದಲು ಅಂಗಲಿಂಗಸಂಗವಾಗ ಬೇಕು. ಅಂಗಲಿಂಗರಲ್ಲಿ ಸಖ್ಯವಾಗಬೇಕು. ಲಿಂಗವನ್ನು ಬಿಟ್ಟು ಅಂಗವು ಬೇರೆ ಏನನ್ನೂ ನೆನೆಯಕೂಡದು. ಅಂಗನನ್ನು ಬಿಟ್ಟು ಲಿಂಗವು ಇರಕೂಡದು. ಗುರುಗಳಿಂದ ದೊರೆತ ಶಿವಸ್ಮರಣವು ಅಂಗದಲ್ಲಿ ನಿರಂತರವಾಗಿದ್ದು, ಕಂಗಳಲ್ಲಿ ಆ ಲಿಂಗವು ಸದಾಕಾಲ ಸುಳಿಯುತ್ತಿರಬೇಕು. ಭಕ್ತನ ದೃಷ್ಟಿಯಲ್ಲಿ ಲಿಂಗವು ನೆಟ್ಟಿರಬೇಕು. ಅಂದರೆ ಎತ್ತ ನೋಡಿದಡತ್ತ ಮೊತ್ತದ ಪ್ರಭೆಯಾಗಿ, ಚಿದಾತ್ಮನು ತೋರುತ್ತಿರಬೇಕು. 'ಆತ್ಮನ ರೂಪವನ್ನು

ನೋಡುತ್ತ' ಎಂದು ಹೇಳಿ ಶಿವಲಿಂಗವ್ವನವರು ಲಿಂಗದ ವ್ಯಾಖ್ಯೆಯನ್ನು ಸ್ಪಷ್ಟಪಡಿಸಿದಂತೆ ತೋರುವುದು. ಲಿಂಗವೆಂದರೆ ಇಷ್ಟಲಿಂಗದ ಆಕಾರದ ರೂಪವೆಂದಲ್ಲ. 'ಲಿಂಗವೆಂದರೆ ಭಕ್ತನ ಅನುಭವಕ್ಕೆ ಬರುವ ಪರಮಾತ್ಮನ ಯಾವುದೇ ರೂಪವು' ಎಂದು ಲಿಂಗದ ಅರ್ಥವನ್ನು ಅವರು ಸ್ಪಷ್ಟವಾಗಿ ಹೇಳಿದುದು ಕಂಡುಬರುವುದು. ಪರಮಾತ್ಮನು ಅನಂತ ರೂಪಿಯು, ಆತನು ತನಗೆ ಬೇಕಾದ ಯಾವುದೇ ರೂಪದಿಂದ ಭಕ್ತನಿಗೆ ಗೋಚರವಾಗಬಹುದು; 'ಅನಂತರೂಪೇ ಅನಂತ ವೇಷೇ ದೇಖಿಲಾಗೆ ಮಾಯೇ.' 'ಅನಂತ ರೂಪದಲ್ಲಿ ಅನಂತ ವೇಷಗಳಲ್ಲಿ ನೋಡಿದೆ' ಎಂದು ಮಹಾರಾಷ್ಟ್ರ ಸಂತರಾದ ಜ್ಞಾನೇಶ್ವರರು ಹೇಳುವ ಹಾಗೆ ಭಕ್ತನಿಗೆ ಭಿನ್ನ ಭಿನ್ನ ಅನೇಕ ರೂಪುಗಳಿಂದ ಅವನು ಗೋಚರನಾಗಬಹುದು. 'ನಾಮ ತೇಚಿ ರೂಪ ರೂಪ ತೇಚಿ ನಾಮ' 'ನಾಮವೇ ರೂಪವು ರೂಪವೇ ನಾಮವು' ಎಂದು ಹೇಳಿದಂತೆ ಅಂತರದಲ್ಲಿ ನಾಮ ಹೊರಗೆ ರೂಪ ಹೀಗಾಗುವುದೇ ಅಂಗಲಿಂಗ ಸಂಗವೆಂದು ಶಿವಲಿಂಗವ್ವನವರ ಅಭಿಪ್ರಾಯವು. 'ಹೃದಯದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿನ್ನ ಮೂರುತಿ ತುಂಬಿ' ಎಂದು ಬಸವಣ್ಣನವರು ಹೇಳಿದುದನ್ನೆ ಶಿವಲಿಂಗವ್ವನವರು ಬೇರೆ ಶಬ್ದಗಳಲ್ಲಿ ಹೇಳಿರುವರು. ಹೀಗೆ ಲಿಂಗಾಂಗ ಸಂಗವಾಗಬೇಕಾದರೆ ಗುರುಕರುಣೆ ಬೇಕು, ಆತ್ಮಲಿಂಗನ ವರವು ಬೇಕು.

'ಗುರುವಿನ ಸೂತ್ರ ದೊಡ್ಡದು, ಮಹಾದೊಡ್ಡದು. ಆ ಸೂತ್ರದಿಂದ ಸತ್‌ಪಾತ್ರವಾದಂಥಾ ಆತ್ಮಲಿಂಗವು ಕರದಾಗೆ ಕಾಣಿಸುವುದು. ಕಂಡು ಲಿಂಗಕ್ಕೆ ಕರಮುಗಿದು, ವರವ ಪಡೆಯುತ್ತಿರಬೇಕು. ಅಂದರೆ ಗತಿಗೊಂಬುವುದು ಮತ್ತು ಫಲಬರುವುದು. ಶಿವಶಿವಾ ಎಂಬುವ ಶಿವಮಂತ್ರ ಶಿವಸೂತ್ರದ ಬೆಳೆಯ ಕಳೆತುಂಬಿ ಕಣ್ಣುಮುಂದೆ ಇರುವುದು'.

ಮೇಲಿನ ವಚನದಲ್ಲಿ ಆತ್ಮಲಿಂಗವು ಸಹಜವಾಗಿ ತೋರುವ ಬಗೆಯನ್ನು ಶಿವಲಿಂಗವ್ವನವರು ಬಣ್ಣಿಸಿರುವರು. ಆತ್ಮಲಿಂಗವು ಕೈನೆಲ್ಲಿಯಾಗಬೇಕಾದರೆ, ಶಿವಸೂತ್ರದ ಧ್ಯಾಸ ಹತ್ತಬೇಕು. ಗುರುವಿನ ಸೂತ್ರವಿಲ್ಲದೆ ಅಂದರೆ ಗುರುಕೃಪೆಯಿಂದಲೇ ಆತ್ಮಲಿಂಗವು ಕರದಲ್ಲಿ ಕಾಣಿಸುವದು. 'ಪರತತ್ವವನ್ನು ನೀನು ತಂದೆನ್ನ ಕರಕೆ ಕೊಟ್ಟುದರಿಂದೆ' ಎಂದು ಸರ್ಪಭೂಷಣ ಶಿವಯೋಗಿಗಳು ತಮ್ಮ ಗುರುಗಳ ಉಪಕಾರವನ್ನು ಸ್ಮರಿಸುತ್ತ ಹೇಳುವರು. ಲಿಂಗವನ್ನು ಕರದಲ್ಲಿ ಕಂಡಮೇಲೆ ಭಕ್ತನಲ್ಲಿ ಸರ್ವಾರ್ಪಣ ಭಾವವು ಬೆಳೆಯಬೇಕೆಂದು ಹೇಳುವರು ಶಿವಲಿಂಗವ್ವನವರು. 'ಕರಮುಗಿಯುವುದು' ಅಂದರೆ ಶರಣು ಹೋಗುವುದು, ಅಂದರೆ ಸರ್ವಾರ್ಪಣೆ ಮಾಡಿದ ಸೂಚನೆಯು ಸರ್ವಾರ್ಪಣ ಭಾವವು ಬೆಳೆಯಿತೆಂದರೆ, ವರವು ತಾನೇ ಅವತರಿಸುವದೆಂದು ಅವರು ಹೇಳುವರು. ಇಲ್ಲಿ ವರವ ಪಡೆಯುತ್ತಿರಬೇಕೆಂದು ಅವರು ಹೇಳುವರು. We must make an humble

obeisance at the feet of God after having attained to their vision' (P.W.G. in H.L. p. 200). 'ಅವನ ರೂಪು ಕಂಡು ಅವನಿಗೆ ಕರಮುಗಿದು ಶಿರಬಾಗಬೇಕು' ಎಂದು ಗುರುದೇವ ರಾನಡೆಯವರು ಹೇಳುವರು. ಹೀಗೆ ಸಹಜ ಸಾಕ್ಷಾತ್ಕಾರದಿಂದ ಮೋಕ್ಷಗತಿಯು ಪ್ರಾಪ್ತವಾಗುವುದು. ಸಂಸಾರದ ದುಃಖದಿಂದ ಬಿಡುಗಡೆಯಾಗುವುದು ಅಂತರಂಗದಲ್ಲಿ ಬಿತ್ತಿದ ಶಿವಸೂತ್ರವು ಕಳೆತುಂಬಿ ಬೆಳಕಾಗಿ ಹೊರಹೊಮ್ಮುವುದು; ಚಿತ್‌ಪ್ರಕಾಶವು ಎಲ್ಲೆಡೆಯಲ್ಲಿ ತೋರುವುದು. 'ಹಗಲು ರಾತ್ರಿಗಳ ಅರಿವು ಅಳಿಯುವುದು' ಎಂದು ಮಹಾರಾಷ್ಟ್ರ ಸಂತರಾಜ ಜ್ಞಾನೇಶ್ವರರು ಹೇಳಿದಂತೆ ಆಗುವುದು.

ಲಿಂಗಾಂಗ-ಸಂಗವನ್ನು ಸಾಧಿಸಿ ಶಿವಸೂತ್ರದ ಬೆಳೆಯ ಕಳೆ ಕಣ್ಣುಮುಂದೆ ಕಂಡು ಆತ್ಮರೂಪ, ಗುರುರೂಪವನ್ನು ಕಂಡು ಭವನೀಗಲು ಶಿವಲಿಂಗವ್ವನವರು ಮಾಡಿದ ಸಾಧನದ ರೀತಿ ಹೇಗಿದ್ದಿರಬೇಕೆಂಬುದನ್ನರಿಯುವ ಕುತೂಹಲವು ವಾಚಕರ ಮನದಲ್ಲಿ ಹುಟ್ಟಿರಬಹುದು. ತಾವು ಮಾಡಿದ ಯೋಗವು ರಾಜಯೋಗವೆಂದು ಅವರು ಹೇಳಿಕೊಂಡಿರುವರು. 'ರಾಜ ಯೋಗ ಕರೂರೆ। ರಾಮರೂಪ ಪಾಹೂರೆ' 'ರಾಜ ಯೋಗ ಮಾಡುವಾ। ರಾಮ ರೂಪ ನೋಡುವಾ' ಎಂದು ಅವರು ಮರಾಠಿ ಭಾಷೆಯಲ್ಲಿ ಒಂದು ಪದ್ಯರಚನೆ ಮಾಡಿರುವರು. ತಮ್ಮ ಮಾರ್ಗವು ರಾಜಯೋಗವೆಂದು ಶ್ರೀ ಉಮದೀ ಮಹಾರಾಜರು ಹೇಳುತ್ತಿದ್ದರು. ಆದ್ಯ ಶಂಕರಾಚಾರ್ಯರು ಕೆಳಗಿನ ಶ್ಲೋಕದಲ್ಲಿ ರಾಜಯೋಗದ ವ್ಯಾಖ್ಯೆಯನ್ನು ಮಾಡುವರು.

ನ ದೃಷ್ಟೀ ಲಕ್ಷಾಣೀ ನ ಚಿತ್ ಬಂಧೋ । ನ ದೇಶಕಾಲೋ ನಚ ವಾಯುರೋಧಃ॥
ನ ಧಾರಣಾ ಧ್ಯಾನ ಪರಿಶ್ರಮೋವಾ । ಸಮೇಧಮಾನೆ ಸತಿರಾಜ ಯೇಗೆ॥

'ರಾಜಯೋಗದಲ್ಲಿ ವಿಶಿಷ್ಟ ರೀತಿಯಲ್ಲಿ ದೃಷ್ಟಿಯನ್ನಿಡುವುದು, ಸ್ಥಲಕಾಲಗಳ ವೈಶಿಷ್ಟ್ಯ, ವಾಯು ಬಂಧನ ಧ್ಯಾನಧಾರಣಾದಿ ಪರಿಶ್ರಮಗಳ ಅವಶ್ಯಕತೆಯಿಲ್ಲ' ಎಂದು ಆಚಾರ್ಯರು ರಾಜಯೋಗದ ಪ್ರಕ್ರಿಯೆಗಳ ಬಗ್ಗೆ ಹೇಳಿರುವರು. ಗುರುದೇವ ರಾನಡೆ ಅವರು ಸಹಜಾಸನದಲ್ಲಿ ಕುಳಿತು ಸಾಧನ ಮಾಡಬೇಕೆಂದು ಹೇಳುತ್ತಿದ್ದರು. ಹಠಯೋಗವು ನಾಮಸಾಧನದ ಒಂದು ಉಪಾಂಗವೆಂದು ಹೇಳಬಹುದು. ಸಾಕ್ಷಾತ್ಕಾರ ಪಡೆಯಲು ಹಠಯೋಗದ ಅವಶ್ಯಕತೆಯಿಲ್ಲ. ಆದರೂ ಶಿವಲಿಂಗವ್ವನವರ ಮೇಲೆ ವೀರಶೈವ ಅನುಭಾವಿಗಳ ಸಾಹಿತ್ಯದ ಪ್ರಭಾವವು ಕೆಲಮಟ್ಟಿಗೆ ಬಿದ್ದಂತೆ ತೋರುತ್ತದೆ. 'ಇದು ಏನು ಅನುಭಾವ ಮಂಟಪವೊ ಶಿವಾ' ಎಂದು ಪದ್ಯದಲ್ಲಿ 'ಆಸನ ಹಾಕುವ ಮಂಟಪವೊ' ಎಂದು ಆಸನದ ಬಗ್ಗೆ ಹೇಳಿದುದು ಕಂಡು ಬರುತ್ತದೆ. 'ಗುಪ್ತಗಡೀ ಸೇರ' ಎಂಬ ತಮ್ಮ ಪದ್ಯದಲ್ಲಿ 'ಆರು ಸೋಪಾನಾ ಏರಿ। ಮೂರು ಸೋಪಾನಾ ದಾಟಿ। ಮೀರಿದ ಸ್ಥಳದಲ್ಲಿ ಗುರುಪಾದ ನೋಡ॥' ಎಂದು ಅವರು ಷಟ್ಚಕ್ರ, ಮೂರು

ನಾಡಿಗಳು ಮತ್ತು ಸಹಸ್ರಾರ ಇಲ್ಲವೆ ಬ್ರಹ್ಮರಂಧ್ರ, ಇತ್ಯಾದಿ ಯೋಗಿಕ ಪದಗಳನ್ನು ವರ್ಣಿಸಿದುದು ಕಂಡು ಬರುವುದು. ಆದರೆ ತಮಗೆ ಬಂದ ಆಧ್ಯಾತ್ಮಿಕ ಅನುಭವಗಳು ರಾಜಯೋಗ ಮಾಡುತ್ತಿರುವಾಗಲೇ ಬಂದವು ಎಂದು ಅವರು 'ರಾಜಯೋಗದೊಳಗ ಮೋಜಿನ ರೂಪಾ ನೋಡ' ಎಂದು ಹೇಳುವರು.

ಆತ್ಮಾನುಭವಗಳು : ತಮ್ಮ P.W.G in K.L ಎಂಬ ಗ್ರಂಥದಲ್ಲಿ ಪು. ೨೨೨ರ ಮೇಲೆ ಸಾಧಕನಿಗೆ ಬರುವ ಪ್ರಾಥಮಿಕ ಇಲ್ಲವೆ ಪ್ರಾರಂಭದ ಅನುಭವಗಳನ್ನು ವಿವರಿಸುತ್ತ ಪುರಂದರದಾಸರ 'ಮುತ್ತು ಕೊಳ್ಳಿರೊ ಜನರು' ಎಂಬ ಪದ್ಯವನ್ನು ಮತ್ತು ಅದೇ ಮಾದರಿಯ ರೇವಣಸಿದ್ಧ ಮತ್ತು ಚಿದಾನಂದರ ಪದ್ಯಗಳ ಆಧಾರವನ್ನು ಕೊಟ್ಟು ಮುತ್ತಿನಾಕಾರದ ಬಿಂದು ರೂಪದಿಂದ ಆಧ್ಯಾತ್ಮಿಕ ಅನುಭವಗಳ ಪ್ರಾರಂಭವಾಗುವದೆಂದು ಗುರುದೇವ ರಾನಡೆಯವರು ಸೂಚಿಸಿರುವರು. ಹಿಂದೀ ಸಂತಶ್ರೇಷ್ಠರೆನಿಸಿದ ಕಬೀರದಾಸರು ಕೂಡ 'ನಜರನ ಆವೋ ಆತ್ಮ ಜ್ಯೋತಿ ಜೈಸಾ ನಿರ್ಮಲ ಮೋತಿ' 'ಶುದ್ಧ ಸ್ವಚ್ಛವಾದ ಮುತ್ತಿನಂತೆ ಆತ್ಮಜ್ಯೋತಿ ನನ್ನ ಕಣ್ಣು ಮುಂದೆ ಕಾಣಿಸಿಕೊಂಡಿತು' ಎಂದು ಹೇಳಿರುವರು. ಆದರೆ ಆತ್ಮನ ಆವಿಷ್ಕಾರಕ್ಕೆ ಯಾವುದೇ ಒಂದು ಕ್ರಮವನ್ನು ಹಚ್ಚಿ ಹೇಳಲಿಕ್ಕೆ ಬಾರದು. ಭಕ್ತನ ಭಾವವು ಎಷ್ಟು ಬಲವಾದುದೋ ಆ ಪ್ರಮಾಣದಲ್ಲಿ ಆತ್ಮನು ಅವನ ಅನುಭವಕ್ಕೆ ಬರುವನು. 'ಭಾವತೋಚೀ ದೇವ' 'ಭಾವವೇ ದೇವರು' ಎಂದು ಮಹಾರಾಷ್ಟ್ರ ಸಂತರು ಹೇಳಿದುದನ್ನು ವಾಚಕರು ಗಮನಿಸಬೇಕು. ಭಕ್ತನಲ್ಲಿರುವ ಭಾವವು ಯಾವಾಗ ಮತ್ತು ಎಷ್ಟರಮಟ್ಟಿಗೆ ಆಗಿದೆ ಇಲ್ಲವೆ ಆಗುವದೆಂಬುದನ್ನು ಹೇಳಲಿಕ್ಕೆ ಬಾರದು ಅದನ್ನು ಆತ್ಮನೇ ಬಲ್ಲನು. ಅದನ್ನರಿತ ಆತ್ಮನು ತನ್ನ ಭಕ್ತನಿಗೆ ಯಾವಕಾಲಕ್ಕೆ ಯಾವ ರೀತಿಯಾಗಿ ಅವನ ಅನುಭವಕ್ಕೆ ಬರಬೇಕೆಂಬುದನ್ನು, ಅವನ ಜ್ಞಾನದೃಷ್ಟಿಗೆ ಗೋಚರವಾಗಬೇಕೆಂಬುದನ್ನು ಆತ್ಮನೆ ನಿರ್ಣಯಿಸಬಲ್ಲನು. ಆದರೂ ಮೇಲೆ ವಿವರಿಸಿದಂತೆ ಜಗತ್ತಿನಲ್ಲಿಯು ಎಲ್ಲ ಶರಣರು, ಸಾಧುಗಳು, ದಾಸರು ಮತ್ತು ಸಂತರು ಆತ್ಮನ ಬಿಂದುರೂಪದ ಅನುಭವದ ಬಗ್ಗೆ ಹೇಳಿದುದು ಕಂಡುಬರುತ್ತದೆ. ಆದುದರಿಂದ ಗುರುದೇವ ರಾನಡೆಯವರು ಬಿಂದುರೂಪವೇ ಆತ್ಮನ ಪ್ರಾಥಮಿಕ ಅನುಭವವೆಂದು ಸೂಚಿಸಿರುವರು.

ತಮಗೆ ಬಂದ ಬಿಂದುರೂಪದ ಮುತ್ತಿನ ಆಕಾರದ ಪರಮಾತ್ಮನ ಅನುಭವವನ್ನು ಕುರಿತು ಶಿವಲಿಂಗವ್ವನವರು ಅನೇಕ ಕಡೆಯಲ್ಲಿ ಹೇಳಿದುದು ಕಂಡು ಬರುತ್ತದೆ. 'ಎದ್ದ ಘಳಗಿ ಮೊದಲ ಗುರುವಿನ ನೆನಿಸಿ' ಎಂಬ ತಮ್ಮ ಜೋಗುಳ ಪದ್ಯದಲ್ಲಿ 'ಮುತ್ತಿನ ಮೂಗುತಿ ಮೂಗಿನ ಮೇಲಿಟ್ಟು' ಎಂದು ನಾಸಾಗ್ರದಲ್ಲಿ ತೇಜಃಪುಂಜವಾದ ಬಿಂದುರೂಪದಲ್ಲಿ ಆತ್ಮನ ಅನುಭವ ಪಡೆದ ಬಗ್ಗೆ ಹೇಳಿರುವರು. ಮುತ್ತಿನ ಮೂಗುತಿಯ

ತಮ್ಮ ಅನುಭವದ ವರ್ಣನೆಯನ್ನು 'ಹತ್ತರ ಒಳಗೊಂದು ಮುತ್ತಿನ ಮೂಗುತಿ ಛಂದ' ಎಂದು, ಮುತ್ತುಗಳ ಗೊಂಚಲವನ್ನು ತಾವು ಕಂಡ ಬಗ್ಗೆ 'ಮುತ್ತಿನ ಗೊಂಚಲಾ ಸುತ್ತೆಲ್ಲಾ ಕಟ್ಯಾರ' ಎಂದು 'ಒಂಬತ್ತು ಖಿಡಕಿಯ ಫಡಕಿನ ತೊಟ್ಟಿಲಾ' ಎಂಬ ತಮ್ಮ ಜೋಗುಳ ಪದ್ಯದಲ್ಲಿ ಹೇಳಿರುವರು. 'ಸಿಂಹಾಸನ ನೋಡ' ಎಂಬ ತಮ್ಮ ಪದ್ಯದಲ್ಲಿ 'ಮುತ್ತಿನ ಗೋಪಾ' ಎಂದು ಮುತ್ತಿನ ಎಳೆಯ ಅನುಭವವನ್ನು ಪಡೆದ ಬಗ್ಗೆ ಹೇಳುವರು. 'ಎಳೆಯಾದ ಮುತ್ತಿನಂತೆ' ಎಂದು ಸರ್ಪಭೂಷಣ ಶಿವಯೋಗಿಗಳು ಹೇಳಿದುದನ್ನು ನಾವಿಲ್ಲ ಹೇಳಬಯಸುತ್ತೇವೆ.

ಶಿವಲಿಂಗವ್ವನವರ ದೃಶ್ಯಾನುಭವಗಳು ವೈವಿಧ್ಯಪೂರ್ಣವಿವೆ. 'ಸೈಸೈಸೈ ಕುಂತಿದೆನೆ' 'ಜಯ ಜಯ ಜಯ ಜಯ ಆರತಿ ಬೆಳಗುವೆ' ಮತ್ತು 'ಸಿಂಹಾಸನ ನೋಡ' ಎಂಬ ಅವರ ಪದ್ಯಗಳಲ್ಲಿ ಬರುವ ವೈವಿಧ್ಯಪೂರ್ಣವಾದ ಅನುಭವಗಳು ಅಧ್ಯಾತ್ಮ ಸಾಹಿತ್ಯದಲ್ಲಿ ಕ್ವಚಿತ್ತಾಗಿಯೆ ದೊರೆಯುವವೆಂದು ನಮಗೆನಿಸುವುದು. 'ಸೈಸೈ ಕುಂತಿದೆನೆ' ಎಂಬ ಪದದಲ್ಲಿ ಮುಕ್ತಜೀವಿಗಳ ಸಭೆಯನ್ನು ಕಂಡ ಬಗ್ಗೆ, ಅಲ್ಲಿ ಇರುವ ಯೋಗಿಜೋಗಿಗಳನ್ನು ನೋಡಿದ ಬಗ್ಗೆ ಅವರು ಬರೆಯುವರು. 'ಸಾಗರದೊಡೆಯ ಸಾಂಬನ ಕಂಡೆ' ಎಂದು ಹೇಳಿ 'ತಿಳಿದವರಿಗೆ ಅದು ವೈಕುಂಠ'ವೆಂದು ಅವರು ಬರೆಯುವರು. ಆಧ್ಯಾತ್ಮಿಕ ಸಂತ ಸಭೆಯನ್ನು ವರ್ಣಿಸುತ್ತ 'ಗುಲಾಲ ಝುಮ್ಮರ ಹಾರಿತರಿ' ಎಂದು ತಮಗೆ ಬಂದ ಕೆಂಪುವರ್ಣದ ಅನುಭವವನ್ನು ಸೂಚಿಸಿರುವರು. ಅಲ್ಲಿ ಹೊಳೆಯುವ ತಾರಕೆಗಳಿರುವದನ್ನು ಕಂಡರು ಅವರು. ಹಸಿರು, ಹಳದಿ ಇತ್ಯಾದಿ ಸುಂದರವಾದ ವಿವಿಧ ವರ್ಣಗಳ ಶೇಷನ ರೂಪವನ್ನು, ಈಶನ ವಿವಿಧ ರೂಪಗಳನ್ನು ಕಂಡು ಆನಂದಪಟ್ಟ ಬಗ್ಗೆ ಹೇಳುವರು ಅವರು. ನಲಿನಲಿದಾಡುವ ನಾಗರ ಹೆಡೆಯನ್ನು, ಪರಮಾತ್ಮನ ಅನೇಕ ರೂಪಗಳನ್ನು ಕಂಡ ಬಗ್ಗೆ 'ಜಯಜಯ ಆರತಿ ಬೆಳಗುವೆ' ಎಂಬ ತಮ್ಮ ಆರತಿಯಲ್ಲಿ ಹೇಳಿರುವರು. ಎಲ್ಲಕ್ಕೂ ಮೇಲಾದ ಅನುಭವಗಳನ್ನು ನಾವು ಅವರ 'ಸಿಂಹಾಸನ ನೋಡ' ಎಂಬ ಪದ್ಯದಲ್ಲಿ ಕಾಣುತ್ತೇವೆ. 'ವಜ್ರದ ಲೇಪಾ ಮುತ್ತಿನ ಗೋಪ'ಗಳಿಂದ ಅಲಂಕೃತವಾದ ಸಿಂಹಾಸನದ ಮೇಲೆ 'ಚಿನ್ಮಯರೂಪ'ವನ್ನು ಕಂಡ ಬಗ್ಗೆ ಅವರು ಬರೆಯುವರು. ಸುವರ್ಣ ಕೇಶದ, ಸುವರ್ಣ ಸ್ಮಶ್ರುವುಳ್ಳ ಸುವರ್ಣದಂತೆ ತೇಜಃಪುಂಜವಾದ ರೂಪವನ್ನು ಕಂಡ ಬಗ್ಗೆ ಉಪನಿಷತ್ಕಾರರು ಹೇಳುವಂತೆ, 'ಪಂಜಿನ ಬೆಳಕಿಲಿ ರಂಜಿಸುವ ಮುಖವನ್ನು' ತಾವು ಕಂಡ ಬಗ್ಗೆ ಶಿವಲಿಂಗವ್ವನವರು ಹೇಳಿದುದು ವಿಶೇಷವಾಗಿದೆ. ಕೆಂಜೆಡೆಯ ರೂಪವನ್ನು ತಾವು ಕಂಡ ಬಗ್ಗೆ ಅಕ್ಕಮಹಾದೇವಿಯವರ ಅಧ್ಯಾತ್ಮಾನುಭವವನ್ನು ವಾಚಕರು ನೆನೆದು ಕೊಳ್ಳಬಹುದು.

ಅಧ್ಯಾತ್ಮ ಸಾಹಿತ್ಯದಲ್ಲಿ ಅಸಮಾನ್ಯವೆಂದೆನಿಸಿದ ವೈಶಿಷ್ಟ್ಯ ಪೂರ್ಣವಾದ ಅನುಭವವು ತಮಗೆ ಬಂದ ಬಗ್ಗೆ ಶಿವಲಿಂಗವ್ವನವರು ಹೇಳಿರುವರು. ತಮ್ಮ ಮಂತ್ರಧ್ಯಾಸದಲ್ಲಿ ಹೂಮಳೆಗರೆಯವುದನ್ನು ಅವರು ಕಂಡರು. ಮುತ್ತಿನ ಮಳೆಗರೆಯುವದನ್ನು ಕಂಡ ಬಗ್ಗೆ ಕಬೀರದಾಸರು ಹೇಳಿರುವರು. 'ರೀಮಝೀಮ ರೀಮಝೀಮ ಮೋತಿ ಬರಸೆ' ಆ ಹೂಗುಗಳು ಭೂಲೋಕದವುಗಳಲ್ಲ, ಅವು ದೇವಲೋಕದವುಗಳೆಂದು ಅವರು ಹೇಳುವರು. ಅವರು ತಮ್ಮ ಈ ಅನುಭವವನ್ನು 'ಆವ ದೇಶದ ಹೂವಿದ್ದವ' ಎಂಬ ಪದ್ಯದಲ್ಲಿ ವರ್ಣಿಸಿರುವರು. 'ಸೂರ್ಯವರ್ಣದ ಹೂಗಳು ಸೂರಿಸೂರಿ ಆಗತಾವ' ಎಂದು ಹೇಳುತ್ತ ಅನೇಕ ವರ್ಣದ ಹೂಗಳು ತಮ್ಮ ಜ್ಞಾನದೃಷ್ಟಿಗೆ ಗೋಚರವಾದ ಬಗ್ಗೆ ಬರೆಯುವರು. 'ಇದು ಏನು ಅನುಭಾವ ಮಂಟಪವೊ' ಎಂಬ ತಮ್ಮ ಪದ್ಯದಲ್ಲಿ 'ಮಲ್ಲಿಗೆ ಹೂಗಳ ಮಳೆಗರೆಯುವ'ದನ್ನು ಕಂಡ ಅನುಭವದ ಬಗ್ಗೆ ಅವರು ಬರೆಯುವರು. ಆತ್ಮಿಕ ಅನುಭವಗಳು ಹುಟ್ಟುವುದು ಗುರುಮಂತ್ರದಲ್ಲಿ. ಅಂತೇ ಗುರುಮಂತ್ರಕ್ಕೆ ಬ್ರಹ್ಮಬೀಜವೆಂದು ಕರೆಯುವರು. ಅದನ್ನೆ ಶಿವಲಿಂಗವ್ವನವರು 'ವಾಸ ಉಮದಿ ಗುರುದೇವ। ಈಶನ ಮುಖದಲಿ ಪುಟ್ಟಿದ ಗಿಡದ ಹೂವ॥' ಎಂದು ತಮ್ಮ ಆಧ್ಯಾತ್ಮಿಕ ಅನುಭವಗಳೆಲ್ಲವೂ ಗುರುಮಂತ್ರದಿಂದ ಪುಟ್ಟಿದುವೆಂದು ಅವರು ಹೇಳುವರು.

ಶಿವಲಿಂಗವ್ವನವರ ಅಧ್ಯಾತ್ಮ ಸಾಹಿತ್ಯದಲ್ಲಿ ದೃಶ್ಯಾನುಭವಗಳಲ್ಲಿ ಕಂಡು ಬರುವಷ್ಟು ವೈವಿಧ್ಯವು ಶ್ರಾವ್ಯಾನುಭವಗಳಲ್ಲಿ ಬರುವುದಿಲ್ಲ. ಆದರೂ ನಾದಾನುಭವಗಳ ಬಗ್ಗೆ ಅಲ್ಲಲ್ಲಿ ಗುರುತುಗಳು ಕಂಡುಬರುತ್ತವೆ. 'ಇದೇ ಅನುಭಾವ ಮಂಟಪವೋ' ಎಂಬ ಪದ್ಯದಲ್ಲಿ 'ಭಂಗಾರ ಗುಡಿಮೇಲೆ ಘಂಟಿ ಘಳಲೆಂದು' ಎಂದು ಅವರು ತಮಗೆ ಬಂದ ಘಂಟಾನಾದದ ಅನುಭವವನ್ನು ಕುರಿತು ಹೇಳುವರು. 'ಮೂಲಕೋಣೆಯ ದ್ವಾರವನ್ನು ತೆರೆದು ನೋಡಲಾಗಿ 'ಪರನಾದ ದಿಮ್ಮದೊಳು ಮುಳುಗುವೆನಾ' ಎಂದು ಶಿವಲಿಂಗವ್ವನವರು ಧಿಮಿಗುಡುವ ನಾದಾನುಭವವು ತಮಗೆ ಬಂದ ಬಗ್ಗೆ ಹೇಳುವರು. ಮಹಿಪತಿದಾಸರು ತಮ್ಮ ನಾದಾನುಭವದ ಬಗ್ಗೆ ಹೇಳುತ್ತ 'ಧಿಮಿ ಧಿಮಿ ಧಿಮಿ ಧಿಮಿ ಗುಡುತದೆ ಆನಂದದ ಘೋಷಾ' ಎಂದು ಹೇಳಿರುವರು.

'ರಸೋ ವೈಸಃ' 'ಆತ್ಮನು ರಸರೂಪನು' ಎಂದು ಉಪನಿಷತ್ತುಗಳು ಸಾರುವವು. ಹಿಂದೀ ಸಂತರು 'ರಸಗಗನ ಗುಫಾಮೇ ಅಝರ ಝರೇ' ಎಂದು ಅಮೃತರಸವು ಬ್ರಹ್ಮರಂಧ್ರದಿಂದ ಸುರಿಯುವದೆಂದು ಹೇಳಿದರೆ 'ನಾಮಾಮೃತ ಗೋಡಿ ವೈಷ್ಣವ ಲಾಧಲೀ' 'ನಾಮಾಮೃತದ ಸ್ವಾದವನ್ನು ವಿಷ್ಣುಭಕ್ತರು ಬಲ್ಲರು' ಎಂದು ಮಹಾರಾಷ್ಟ್ರ ಸಂತರು ಹೇಳುವರು. ಕನ್ನಡ ಶರಣನಾದ ನಾಗಲಿಂಗನು 'ಅಖಂಡವನದೊಳು ಅಮೃತ ಕೊಡ ಉಕ್ಕಿ' ಎಂದು ಹೇಳುವನು. ತಮಗೆ ಆತ್ಮರಸದ ಅನುಭವ ಬಂದ ಬಗ್ಗೆ

'ರಾಜಯೋಗ ಕರೂರೆ' ಎಂಬ ತಮ್ಮ ಪದ್ಯದಲ್ಲಿ 'ಅಮೃತ ಸೆಜನ ಹೋಯೀ ರೆ' ಅಮೃತ ಸೇವನವಾಗುವದೆಂದು ಹೇಳುವುದರಲ್ಲದೆ ತಮ್ಮ ಇನ್ನೊಂದು ಮರಾಠಿ ಪದ್ಯವಾದ 'ತೆ ಬಘ ಬಾಯೆ' ಎಂಬಲ್ಲಿ 'ನಾಮಾಚೇ ರಸತೆ ಗಟ ಗಟ ಗೀಳೀತೆ' 'ನಾಮಾಮೃತ ರಸವನ್ನು ಗಟಗಟನೆ ಕುಡಿಯುವೆನು' ಎಂದು ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿರುವರು.

ಶಿವಲಿಂಗವ್ವನವರ ರೂಪ, ನಾದ, ರಸಾನುಭವಗಳಾದ ಮೇಲೆ ಗಂಧ ಮತ್ತು ಸ್ಪರ್ಶಾನುಭವಗಳನ್ನು ಕುರಿತು ವಿಚಾರ ಮಾಡಬೇಕಾಗಿದೆ. ಅಧ್ಯಾತ್ಮ ಸಾಹಿತ್ಯದಲ್ಲಿ ಗಂಧಾನುಭವದ ಉದಾಹರಣೆಗಳು ತೀರ ದುರ್ಲಭವಾದವುಗಳು; ಅದರಂತೆ ಸ್ಪರ್ಶಾನುಭವವು ಕೂಡ. ಮಹಾರಾಷ್ಟ್ರ ಸಂತಶ್ರೇಷ್ಠರೆನಿಸಿದ ಜ್ಞಾನೇಶ್ವರರ ಗುರುಗಳಾದ ನಿವೃತ್ತಿನಾಥರಿಗೆ ಗಂಧಾನುಭವವಿದ್ದ ಬಗ್ಗೆ ಅವರ ಕೆಳಗಿನ ಅಭಂಗದಿಂದ ಕಂಡು ಬರುವದು. 'ಪರಿಮಳ ಸುಮನೀ ಜಾಯೀಜೂಯೀ ಮೋಗರೆ। ತ್ಯಾಹೂನೀ ಸಾಜಿರೇ ಹರಿ ಆತ್ಮಾ' 'ಹೂಗಳಲ್ಲಿ ಸೂಜಿಜಾಜಿಗಳ ಸುವಾಸನೆಯು ಮೇಲು. ಆದರೆ ಅದಕ್ಕಿಂತ ಮೇಲು ಹರಿಯ ವಾಸನೆಯು'. ನಿವೃತ್ತಿನಾಥರ ಈ ಸುವಾಸನೆಯ ಅನುಭವವನ್ನು ಶಿವಲಿಂಗವ್ವನವರ ಅನುಭವಕ್ಕೆ ಹೋಲಿಸಬಹುದಾಗಿದೆ. 'ಆವ ದೇಶದ ಹೂವಿದ್ದಾವ' ಎಂಬ ತಮ್ಮ ಪದ್ಯದಲ್ಲಿ 'ಎಸಳ ಮಲ್ಲಿಗಿ ವಾಸನೋಡ' ಎಂದು ವರ್ಣಿಸಿರುವರು. ಅಲ್ಲದೆ ಕ್ರಿ.ಶ. ೧೯೨೫ರಲ್ಲಿ ಗುರುದೇವ ರಾನಡೆಯವರ ಟಂಕಲೇಖಕರಾದ ಧರ್ಮಾಧಿಕಾರಿಯವರ ಹೆಸರಿನಿಂದ ಬರೆದ ಪತ್ರದಲ್ಲಿ ಹೀಗೆ ಬರೆಯುತ್ತಾರೆ. 'ಅನುಭವಾಚಾ ಆರಾಸ ಜಾಯೀಜೂಯೀಚಾ ಸುವಾಸ' 'ಅನುಭವದ ಆರಾಸವು ಸುಜಿಜಾಜಿ ಮಲ್ಲಿಗೆಗಳ ಸುವಾಸವು' ಗುರುದೇವ ರಾನಡೆಯವರ ಆಶ್ರಮದಲ್ಲಿ ತಮಗೆ ಬಂದ ಬಗ್ಗೆ ಅವರು ಬರೆಯುವರು.

ಇನ್ನು ಶಿವಲಿಂಗವ್ವನವರ ಸ್ಪರ್ಶಾನುಭವವನ್ನು ಕುರಿತು ವಿಚಾರ ಮಾಡುವಾ. 'ಪ್ರಾರಂಭಾವಸ್ಥೆಯ ಸಾಧನದಲ್ಲಿ ದೇವರು ಭಕ್ತನನ್ನು ಸ್ಪರ್ಶ ಮಾಡುವನು. ಮುಂದೆ ಭಕ್ತನು ದೇವರನ್ನು ಸ್ಪರ್ಶಮಾಡುವನು' ಎಂದು ಶ್ರೀ ಅಂಬುರಾವ ಮಹಾರಾಜರು ಹೇಳುತ್ತಿದ್ದರು. ಶಿವಲಿಂಗವ್ವನವರ ಸ್ಪರ್ಶಾನುಭವವನ್ನು ಕುರಿತು ವಿಚಾರಮಾಡುವ ಮೊದಲು, ಅವರು ಸ್ಪರ್ಶ ಮಾಡಿದ ಪರಮಾತ್ಮನ ರೂಪದ ವಿವರವಾದ ವಿವೇಚನೆ ಮಾಡುವುದು ಅವಶ್ಯವಿದೆ. ಶ್ರೀಮದ್ಭಾಗವತದಲ್ಲಿ ವಸುದೇವ-ದೇವಕಿ, ಯಶೋಧಾ ನಂದರಿಗೆ ಪರಮಾತ್ಮನ ಬಾಲರೂಪದ ದರ್ಶನ ಸ್ಪರ್ಶನ ಮತ್ತು ಸಂಭಾಷಣದ ಅನುಭವ ಬಂದಿರಬಹುದೆಂದು ಊಹಿಸಲು ಅವಕಾಶವಿದೆ. ಅದರಂತೆ ಶಿವಲಿಂಗವ್ವನವರಿಗೆ ಪರಮಾತ್ಮನ ಬಾಲರೂಪದ ದರ್ಶನವಾದ ಬಗ್ಗೆ ಅವರು ಬರೆಯುವರು. ತಮ್ಮ ಪ್ರಸಿದ್ಧ

ಜೋಗುಳ ಪದ್ಯವಾದ 'ಎದ್ದ ಘಳಿಗಿ ಮೊದಲ ಗುರುವಿನ ನೆನಿಸಿ' ಎಂಬಲ್ಲಿ 'ಬಾಲ ಹುಟ್ಟಿದಾ ಬಾಲೆಯ ಉದರಲ್ಲಿ' ಎಂದು ಹೇಳುವರು. ತಮ್ಮ ಇನ್ನೊಂದು ಜೋಗುಳ ಪದ್ಯವಾದ 'ಒಂಬತ್ತು ಖಿಡಕಿಯ ಫಡಕಿನ ತೊಟ್ಟಿಲಾ' ಎಂಬಲ್ಲಿ 'ಜಠರಾಗ್ನಿ ತೊಟ್ಟಿಲದೊಳು ಜನಿಸಿದ ಶಿವಯೋಗಿ' ಎಂದು ಬರೆಯುವರು. ಸಾಕು ಹುಟ್ಟಿದ ಉದರದಲಿ ಒಬ್ಬ ಪುತ್ರ' ಎಂದು ಇನ್ನೊಂದು ಪದ್ಯದ ಪ್ರಾರಂಭವಿದೆ. ಅವರ ಪ್ರಸಿದ್ಧ ಪದ್ಯವಾದ 'ಮಗಾ ಹುಟ್ಟಿದವ್ವಾ' ಎಂಬ ಪದ್ಯದಲ್ಲಿ ಮಗಾ ಹುಟ್ಟಿ ಎನ್ನ ಮಾಯವ ಕಡಿಸಿದ ಜಗಾ ಬಿಡಿಸಿ ಎನ್ನ ಜನ್ಮವನಳಿಸಿದ' ಎಂದು ತಮ್ಮ ಬಾಲರೂಪದ ಅನುಭವದ ಫಲವಾಗಿ ಸಂಸಾರದಿಂದ ತಾವು ಮುಕ್ತರಾದ ಬಗ್ಗೆ ಹೇಳಿರುವರು. ಆ ಬಾಲನು ಹುಟ್ಟುವುದರಿಂದ ಭೋಗದ ಗುಣಗಳು ನೀಗಿದವು. 'ರಾಮರಸದಿಂದ ಕಾಮಹುಟ್ಟಿದ' ನೆಂದು ಅವರು ಬಾಲರೂಪದ ಆನಂದಮಯ ಅನುಭವಕ್ಕೆ ರಾಮರಸವೇ ಅಂದರೆ ಗುರುಮಂತ್ರವೇ ಕಾರಣವೆಂದು ಹೇಳಿದುದು ಮಹತ್ವದ್ದಿದೆ. ಗುರುಮಂತ್ರದಲ್ಲಿ ಎಷ್ಟು ಶಕ್ತಿ ಅಡಗಿದೆ ಎಂಬುವುದರ ಕಲ್ಪನೆ ವಾಚಕರಿಗೆ ಬರದೆ ಇರಲಾರದು. 'ನಿರಾಕಾರ ಸೆ ಆಕಾರ ಹುವಾ' ಎಂದು ಮಡಿವಾಳಯೋಗಿ ಎಂಬ ಶಿವಶರಣನು ಹೇಳುವನು. 'ಆಕಾರವಿದ್ದು ನಿರಾಕಾರ ಕೂಸು' ಎಂದು ಪುರಂದರದಾಸರು ತಮ್ಮ ಬಾಲರೂಪದ ಅನುಭವದ ಬಗ್ಗೆ ಹೇಳುವರು. 'ದೇಹಕ್ಕೆ ಹತ್ತದ ಮಾಯಕ್ಕೆ ನಿಲುಕದ ಮೋಸಗಾರನೆಂದು ಆ ಕೂಸಿನ ಬಗ್ಗೆ ಶಿವಲಿಂಗವ್ವನವರು ಹೇಳುವರು. 'ಬಟ್ಟಬಯಲ ತೊಟ್ಟಿಲ'ದೊಳಗ ಬಾಲರೂಪವನ್ನು ಕಂಡರು ಶಿವಲಿಂಗವ್ವನವರು. 'ಶ್ರೀಗಿರಿಮಲ್ಲಪ್ಪ ಮಹಾರಾಜರಿಗೆ ಬಾಲರೂಪದ ಅನುಭವ ಬಂದ ಮೇಲೆ ಅವರು ತಮ್ಮ ಅನುಭವವನ್ನು ತಮ್ಮ ಗುರುಗಳಾದ ಶ್ರೀ ಉಮದೀ ಮಹಾರಾಜರಿಗೆ ಹೇಳಿದರು. ಆಗ ಅವರು 'ಅಪ್ಪನ ತ್ವಡಿಮ್ಯಾಲ ಮಗಾ ಆಡಿಧಂಗ ಆಡಬೇಕ ನೋಡಪಾ' ಎಂದು ಹೇಳಿದರು. ಈ ಸಂಗತಿಯನ್ನು ಗುರುದೇವ ರಾನಡೆಯವರು ಹೇಳುತ್ತಿದ್ದರು.

ನಿರಾಕಾರದಲ್ಲಿಯೆ ಆಕಾರ ತಾಳಿ, ನಿರಾಕಾರದಲ್ಲಿಯೆ ಬೆಳೆದು, ನಿರಾಕಾರದಲ್ಲಿಯೇ ಅವನು ಆಡುವನೆಂದು ಶಿವಲಿಂಗವ್ವನವರು ಹೇಳಿರುವುದು ಮಹತ್ವದ್ದಿದೆ. 'ತೊಟ್ಟಿಲದಾಗ ಹುಟ್ಯಾನ, ತೊಟ್ಟಿಲದಾಗ ಬೆಳದಾನ, ತೊಟ್ಟಿಲದಾಗಾಡವನ ತೂಗಿರೆವ್ವಾ' ಎಂದು ಅವರು ಹಾಡಿದರು. 'ಬಟ್ಟಬಯಲ ತೊಟ್ಟಿಲ ಎಷ್ಟ ಛಂದ ಐತೆವಾ' ಎಂದು ಆ ತೊಟ್ಟಿಲದ ವರ್ಣನೆಯನ್ನು ಮಾಡಿ, 'ತೊಟ್ಟಿಲದೊಳಗ ಧಿಟ್ಟನ ಮಲಗಿಸಿ ಮುಟ್ಟಿ ತೂಗಿನವ್ವಾ' ಎಂದು ನಿರಾಕಾರ ತೊಟ್ಟಿಲವನ್ನು ಸ್ಪರ್ಶ ಮಾಡಿದ ಬಗ್ಗೆ ಹೇಳಿ ತಮ್ಮ ಸ್ಪರ್ಶಾನುಭವವನ್ನು ಸೂಚಿಸಿರುವರು ಶಿವಲಿಂಗವ್ವನವರು. ನಿರಾಕಾರ ಬ್ರಹ್ಮನ ಸ್ಪರ್ಶಾನುಭವವನ್ನು ಅವರು ಪಡೆದಿರಲಿಕ್ಕೆ ಸಾಕು.

ರೂಪ, ರಸ, ನಾದ, ಗಂಧ, ಸ್ಪರ್ಶಾದಿ ಆಧ್ಯಾತ್ಮಿಕ ಅನುಭವಗಳನ್ನು ಪಡೆಯುತ್ತ, ಅವುಗಳ ಆನಂದದಲ್ಲಿ ಓಲಾಡುತ್ತ, ಗುರುಘೋಷದೊಳಗೆ ಲಯವಾಗುತ್ತ ಶಿವಲಿಂಗವ್ವನವರು ತಮ್ಮ ಸಾಧನವನ್ನು ಬಲಿಸುತ್ತಿರುವಂತೆ ಅವರಿಗೆ ಸ್ವರೂಪ ಸಾಕ್ಷಾತ್ಕಾರ ವಾಯಿತು. ಸಾಕ್ಷಾತ್ಕಾರ ಶಾಸ್ತ್ರದಲ್ಲಿ ಸ್ವರೂಪಾನುಭವವು ಉಚ್ಚಮಟ್ಟದ ಅನುಭವವೆಂದು ತಿಳಿಯಲಾಗುತ್ತದೆ. ಅದರ ಲಕ್ಷಣಗಳ ಬಗ್ಗೆ 'ಪರಂಜ್ಯೋತಿರೂಪ ಸಂಪದ್ಯ ಸ್ವೇನರೂಪೇಣ ಅಭಿನಿಷ್ಪದ್ಯತೇ ಸೋಯಮಾತ್ಮಾ' ಎಂದು ಉಪನಿಷತ್ಕಾರರು ಸ್ವರೂಪಾನುಭವದ ಬಗ್ಗೆ ಹೇಳುವರು. ಶಿವಲಿಂಗವ್ವನವರಿಗೆ ಸ್ವರೂಪಾನುಭವವಿದ್ದಿತೆಂದು ಹೇಳಲು ಅವರು ರಚಿಸಿದ ಪದಗಳೇ ಆಧಾರಗಳು. 'ನೋಡಿರ್‍ಯಾ ಬ್ರಹ್ಮನಾಟವಾ' ಎಂಬ ತಮ್ಮ ಪದ್ಯದಲ್ಲಿ 'ತನ್ನ ಸಾಕ್ಷಿ ತಾನೆ ಅಗಿ' ಎಂದು ಅವರು ಬರೆಯುವರು. ತಮಗೆ ಬಂದ ಆತ್ಮಸ್ವರೂಪದ ಅನುಭವವನ್ನು ಕುರಿತು 'ಹೇ ಬಘ ಬಾಯೆ ಪಹಾಗೆ ನಿರ್ಮಾಣಯ' ಎಂಬ ತಾವು ಬರೆದ ಮರಾಠಿ ಪದ್ಯದಲ್ಲಿ 'ಮಾಝ್ಯೇ ರೂಪಾಲಾ ತೇಹೀರೂಪಾಲಾ ಭಿನ್ನ ನಾಹಿಗೇ ಬಾಯೀ' 'ನನ್ನ ರೂಪಕ್ಕೂ ಆ ರೂಪಕ್ಕೂ ಭಿನ್ನವಿಲ್ಲ' ಎಂದು ಸ್ಪಷ್ಟವಾದ ಶಬ್ದಗಳಲ್ಲಿ ಬರೆದುದು ಕಂಡುಬರುತ್ತದೆ. 'ಎಂಥಾದ್ದು ತೋರಿಸಿದಾ ಸದ್ಗುರುನಾಥಾ' ಎಂಬ ತಮ್ಮ ಪದ್ಯದಲ್ಲಿ 'ರೂಪಕ್ಕೆ ರೂಪೆನಿಸಿದಾ' ಎಂದು ಹೇಳಿರುವುದರಿಂದ ಸ್ವರೂಪ ಸಾಕ್ಷಾತ್ಕಾರದ ಅನುಭವದ ಆನಂದದಲ್ಲಿ ಓಲಾಡುತ್ತಿರುವಂತೆ, ಶಬ್ದಗಳಲ್ಲಿ ಅವರ ಮನವು ಉಬ್ಧವಾಯಿತು. ಮೂಲಮಂತ್ರಗಳು ಅವರ ಜ್ಞಾನದೃಷ್ಟಿಯಲ್ಲಿ ಪ್ರಕಟವಾಗಹತ್ತಿದವು.

ಆತ್ಮವೇತ್ತರಾದವರ ಅತ್ಮನು ಆತ್ಮನಿಂದಲೇ ಶಬ್ದಗಳಾಗುವುದನ್ನು ಕೇಳುವರು. ಹೇಳುವವನು ತಾನೆ, ಕೇಳುವವನು ತಾನೆ ಎಂದು ಶ್ರೀ ಅಂಬುರಾವ್ ಮಹಾರಾಜರು ಹೇಳುತ್ತಿದ್ದುದನ್ನು ನಾವು ಹೇಳದೆ ಇರಲಾರೆವು. ಇದಕ್ಕೂ ಮುಂದೆ ಹೋಗಿ ಹೇಳಬೇಕಾದರೆ ಹೇಳಿದ ಮತ್ತು ಕೇಳಿದ ಶಬ್ದವೂ ತಾನೆ. ಈ ರೀತಿ ಆತ್ಮನ ಮುಖದಿಂದ ಕೇಳಿದ ನಾಮಮಂತ್ರಗಳು ಸಬೀಜವೆನಿಸುವವು. ಅಂಥ ಮಂತ್ರಗಳನ್ನು ಕೇಳಿದ ವ್ಯಕ್ತಿಯೆ ಗುರುಪದಕ್ಕೆ ಯೋಗ್ಯನೆನಿಸುವನು. 'ಗುಪ್ತದಲ್ಲಿದ್ದ ಇಡಿಗಂಟನ್ನು ಸ್ಪಷ್ಟವಾಗಿ ತೋರಿಸಬಲ್ಲವನೇ ಸದ್ಗುರು ಎನಿಸುವನು' 'ಗುಪ್ತ ಠೇವಾ ಸ್ಪಷ್ಟಪಣೇ ದಾಖವಣಾರೆ ತೇಚ ಸದ್ಗುರು' ಎಂದು ಶಿವಲಿಂಗವ್ವನವರು ಹೇಳುವರು. ನಾಮಮಂತ್ರದ ಘೋಷವು ತಮ್ಮ ಅಂತರಂಗದಲ್ಲಿ ಆದುದರ ಬಗ್ಗೆ 'ಐಕೆಗೆ ಗಗನೀ ಮಧುರವಾಣಿ। ಆತಲೇಚ ಹೆ ನಿರ್ವಾಣಿ। ಭೂತಲಿ ಉಮಟೂನಿ ಚಡತೆಗ ತ್ಯಾನಿ' 'ಸುಮಧುರ ಶಬ್ದಗಳನ್ನು ಕಿವಿಯಲ್ಲಿ ಕೇಳುವೆನು. ಅಂತರಂಗದಲ್ಲಿಯ ನಿಃಶಬ್ದವಾದ ಶಬ್ದವದು. ಮೂಲಾಧಾರದಲ್ಲಿ ಹುಟ್ಟಿ ಮೇಲೇರುವುದು' ಎಂದು ಅವರು ತಮ್ಮ ಒಂದು ಮರಾಠಿ ಪದ್ಯದಲ್ಲಿ ಹೇಳಿರುವರು. ಈ ರೀತಿ ಮೂಲಮಂತ್ರಗಳ ಅನುಭವ ಪಡೆದ ಶಿವಲಿಂಗವ್ವನವರು ಗುರುಪದವನ್ನು ಮುಟ್ಟಿದರು.

ನಿರಾಕಾರ, ನಿರ್ಬೈಲದ ಅನುಭವವು ತಮಗೆ ಬಂದ ಬಗ್ಗೆ ಪುರಂದರದಾಸರು ಮತ್ತು ಕಬೀರದಾಸರು ಹೇಳಿರುವುದು ಕಂಡುಬರುವುದಲ್ಲದೆ, ಶಿವಶರಣರಲ್ಲಿ ಕೆಲವರು ಆ ಮೆಟ್ಟಿಲದ ಅನುಭವವನ್ನು ಪಡೆದ ಬಗ್ಗೆ ಹೇಳಿರುವರು. ಅಂಥ ನಿರ್ಬೈಲ ವಸ್ತುವಿನ ಅನಂದವನ್ನು ಸವಿದ ಬಗ್ಗೆ, ಅದರ ಅನುಭವವು ತಮಗೆ ಬಂದ ಬಗ್ಗೆ ಶಿವಲಿಂಗವ್ವನವರು ಕೆಳಗಿನಂತೆ ಹೇಳುವರು. 'ಬಟ್ಟಬಯಲ ತೊಟ್ಟಿಲ ಎಷ್ಟ ಛಂದೈತೆವ್ವಾ' 'ಎದ್ದು ನೋಡಲು ನಿರ್ಬೈಲಯೋಗಿ' ಎಂದು ಹೇಳಿರುವರು. 'ಕಂಡೆಲ್ಲ ಹರರೂಪ ತಿಳಿದವನೆ ಜಗಭರಿತ' ಎಂದು ತಾವು ಪಡೆದ ಜಂಗಮ ಸ್ಥಿತಿಯನ್ನೆ ಮೇಲಿನ ವಾಕ್ಯದಲ್ಲಿ ಹೇಳಿದಂತಿದೆ.

**ಜೀವನ್ಮುಕ್ತಿ :** ಸಾಕಾರ ಮತ್ತು ನಿರಾಕಾರ ಬ್ರಹ್ಮನ ಅನುಭವವನ್ನು ಪಡೆದ ಶಿವಲಿಂಗವ್ವನವರು ಸಹಜ ಸಮಾಧಿ ಸ್ಥಿತಿಯನ್ನು ಪಡೆದರು. ಮಾನವ ಜೀವನದ ಗುರಿಯಾದ ಜೀವನ್ಮುಕ್ತಿಯನ್ನು ಪಡೆದರು. 'ಸತ್ತು ಹುಟ್ಟಿ ಬರುವ ಜನ್ಮ ಕಡಿದರು' 'ಗುರು ಮೋಹದೊಳಗೆ ಮುಕ್ತ ಆಗಿದ್ದೇನೆ' ಎಂದು ಹೇಳಿಕೊಂಡರು. 'ತಿರುಗಿ ಬಾರದಂತೆ ಎನಗೆ ತೋರಿಸಿದ ಆಸರವೂ' ಎಂಬ ಸ್ಪಷ್ಟ ಶಬ್ದಗಳಲ್ಲಿ ತಮಗೆ ಇನ್ನು ಜನ್ಮವಿಲ್ಲವೆಂದು ಹೇಳುವರು. 'ಗುಪ್ತ ಗುಡಿಸೇರ' ಎಂಬ ಪದ್ಯದಲ್ಲಿ 'ಅಜನ್ಮ ಆದೆನು ನೋಡ' ಎಂದು ಹೇಳುವರು.

**ಗುರುಪಾದಪೂಜೆ :** ಆತ್ಮಾನಂದದ ಆನಂದದಲ್ಲಿ ಓಲಾಡುತ್ತಿರುವಂತೆ, ಆತ್ಮರೂಪದ ಜತೆ ಗುರುರೂಪದ ಅನುಭವ ಬಂದಿತು ಅವರಿಗೆ. 'ಸದ್ಗುರುಚೆನಿ ಸಂಗೆ ಐಸೀ ಆರತಿ ಕೇಲಿ' 'ಸದ್ಗುರುಗಳ ಸಂಗದಲ್ಲಿ ಇಂಥ ಆರತಿಯನ್ನು ಮಾಡಿದೆ' ಎಂದು ಮಹಾರಾಷ್ಟ್ರದ ಸಂತರಾದ ಜ್ಞಾನೇಶ್ವರರು ಹೇಳಿರುವರು. ಅದೇ ಬಗೆಯ ಗುರುಪಾದ ಪೂಜೆಯ ಅನುಭವವು ಶಿವಲಿಂಗವ್ವನವರಿಗೆ ಬಂದಿರಲಿಕ್ಕೆಬೇಕೆಂದು ಅವರ ಕೆಳಗಿನ ವಚನಗಳಿಂದ ಕಂಡು ಬರುವಂತಿದೆ.

> 'ಗುರುವೆ ನಿಮ್ಮ ಪಾದಪೂಜೆಯು ಆನಂದದಿಂದ ಮಾಡುವೆ. ಅದು ಹ್ಯಾಗೆಂದರೆ ಮಮ (ಮನ)ವೆಂಬ ಬಾವಿಗೆ ಹೋಗಿ ಸಪ್ರೇಮವೆಂಬುವ ತೀರ್ಥವ ತಂದು ನಿಮ್ಮ ಪಾದಕ್ಕೆ ಹೊಂದಿ ಸರ್ವ ಎಲ್ಲಾ ಅರ್ಪಿಸಿ ಕರ್ಪುರಾ, ದೀಪ, ಧೂಪಗಳು ಅರ್ತಿಯಿಂದ ಬೆಳಗಿತು ನೋಡಾ'.

> 'ಇಂಥಾ ಸುಗಂಧ ಸುವಾಸಿಕ ಪೂಜೆ ಯೋಗದೊಳಗ ಆಗಿ, ನೋಡಿ ಅಗಾಧ ವಾದೆನು ನೋಡಾ. ಏನೂ ಇಲ್ಲದ ಪೂಜೆ, ಏನು ಬೇಕಾದ್ದು ಪೂಜೆ, ತನ್ನೊಳಗ ತಾನಾಗಿ, ಮನತುಂಬಿ ಮರವಾಗಿ, ಕಿವಿ ತುಂಬಿ ನಾದಾಗಿ, ಕಣ್ಣು ತುಂಬಿ ಬೆಳಕಾಗಿ ಇಂತು ಅಪ್ಪಯ್ಯನ ಪೂಜೆ ಸಂತೋಷದಿಂದ ಆಗುವುದು ನೋಡಾ'.

೩

ಶ್ರೀಸದ್ಗುರು ಸಮರ್ಥ

# ಗುರು ಅನುಗ್ರಹ ವಚನ (ಮಹಾತ್ಮ್ಯ)

**ನರಜನ್ಮಗತಿಯ ಸಾರ್ಥಕವು :**

ಶ್ರೀ ಗಣೇಶಾಯ ನಮಃ। ಗುರುವಿನ ಹೊರತು ಈ ನರದೇಹಕ್ಕೆ ಗತಿಯೆ ಇಲ್ಲ। ಆದ್ದರಿಂದ ಗುರುಕೃಪಾ ಮಾಡಿಕೊಂಡು ಈ ಅಪರೂಪವಾದಂಥ ನರಜನ್ಮ ಸಾರ್ಥಕ ಮಾಡಬೇಕಲ್ಲಾ ಹೊರ್ತು ಹಾಗೇ ಇರಬಾರದು ॥೧॥

ಶಿವಶಿವಾ ಎಂದು ಶಿವಮಂತ್ರದಲ್ಲಿ ಮುಳಗ್ಯಾಡಬೇಕು। ಅಂದರೆ ಬಂದದ್ದು ಫಲವಾಯಿತು। ಯಾಕಂದರೆ ಈ ಶಿವಮಂತ್ರ ಮಹಿಮಾ ಹೇಳಲಾಗದು। ಈ ಮಂತ್ರದ ಬೆಳೆಯ ಬೆಳಿಸಿ ತಕ್ಕೊಂಡವರಿಗೆ ಕಾಳಕತ್ತಲೆ ದೂರವಾಯಿತು। ಆತ್ಮಪ್ರಕಾಶದಲ್ಲಿ ಆನಂದವಾಯಿತು। ಜನನ ಮರಣದ ಭಯವು ಇಲ್ಲವಾಯಿತು॥೨॥

ಶಿವಸ್ಮರಣೆ ಮಾಡುವಂಥಾ ಭಾವಿಕರಿಗೆ ನಿರಂತರದಲ್ಲಿ ನಿಜವಾಯಿತು। ಗುರುವಿನ ಸಂತತಿ ಗುರುವಿನ ಸಂಪತ್ತಿ ಇದ್ದವರು ಅವರೆ ಭಾಗ್ಯವಂತರು। ಗುರು ಅನುಗ್ರಹಿತವಾದ ಪ್ರಾಣಿಗಳಿಗೆ ಪರಮಾತ್ಮನು ಪ್ರಿಯ ಆಗಿ ರಕ್ಷಣ ಮಾಡುತ್ತಾನೆ। ಇದಕ್ಕೆ ಎಳ್ಳಷ್ಟೂ ಸಂದೇಹವಿಲ್ಲ, ನೋಡಾ ॥೩॥

ಆದ್ದರಿಂದ ಗುರು ವಿರಹಿತನಾಗಿ ಇರಬಾರದು। ಈ ಅಪರೂಪವಾದಂಥಾ ನರಜನ್ಮ ಸಾರ್ಥಕ ಮಾಡಬೇಕಲ್ಲಾ ಹೊರ್ತು ಹಾಗೇ ಇರಬಾರದು। ವ್ಯರ್ಥಕಾಲ ಕಳಿಯಬಾರದು ॥೪॥

ಆದ್ದರಿಂದ ಗುರುವಿನ ಕೃಪಾ ಮಾಡಿಕೊಂಡು ಶಿವಧ್ಯಾನ ಆನಂದದಿಂದ ಮಾಡುತ್ತಿರಬೇಕು। ಗುರುವಿನ ಸ್ಮರಣೆ ಎಂದೆಂದಿಗೂ ಮರಿಯಬಾರದು। ಮರೆತರೆ ನರಕಕ್ಕೆ ಬೀಳುವುದು ತಪ್ಪುವುದಿಲ್ಲ ॥೫॥

ಆದ್ದರಿಂದ ಪರಮಾತ್ಮನ ಧ್ಯಾನ ಹಗಲಿರುಳು ಮಾಡುತ್ತಿರಬೇಕು। ಶಿವಶಿವಾ ಎನ್ನುತ್ತಿರಬೇಕು। ಶಿವಧ್ಯಾನದಿಂದ ಭವಬಂಧನ ಬಿಡುವುದು। ಮುಕ್ತಿಗೆ ಹಾದಿಯು ದೊರಕುವುದು। ಮುಕ್ತಿಗೆ ಸಾಧನವು ಯಾವುದೆಂದರೆ ಗುರುವಿನ ಕೃಪಾ। ಅದರ ಹೊರತು ಮತ್ತೊಂದು ಯಾವುದೂ ಶ್ರೇಷ್ಠವಲ್ಲ ॥೬॥

ಗುರುವಿನ ಕೃಪಾ ಆತ್ಮಜ್ಞಾನಕ್ಕೆ ಸರಿಯಾಗಿ ಇರುತ್ತದೆ। ಆದ್ದರಿಂದ ಗುರು ಕೃಪಾ ಮಾಡಿಕೊಳ್ಳಬೇಕಲ್ಲಾ ಹೊರತು ಹಾಗೇ ಇರಬಾರದು । ಗುರುವಿಲ್ಲದೆ ಜನ್ಮ ಅರಿಷ್ಟ, ಅಮಂಗಳ, ಮುಡಚಟ್ಟಿನ ಮಡಕಿ, ಸುಟ್ಟರೆ ಶುದ್ಧವು ನೋಡಾ ॥೭॥

ಅದು ಹ್ಯಾಂಗಂದರೆ ಗುರುವಿನ ಕೃಪಾ ಆಗದ ಹೊರತು ಈ ನರದೇಹಕ್ಕೆ ಅರುವು ಇರುವುದಿಲ್ಲಾ । ಆದ್ದರಿಂದ ಗುರುವಿನ ಕೃಪಾ ಮಾಡಿಕೊಂಡರೆ ಅರವಿನ ಕಪನಿ ದೊರೆಯುವುದು । ಇಲ್ಲದಿದ್ದರೆ ಈ ನರಜನ್ಮ ಹುಟ್ಟಿ ಬಂದದ್ದು ನಿಷ್ಫಲವಾಯಿತು॥೮॥

ಎಂಥಾ ಶಾಣ್ಯಾನಾದರೂ ಆಗಲಿ, ಎಂಥಾ ವಿದ್ವಾನನಾದರೂ ಆಗಲಿ, ಎಂಥಾ ಶಾಸ್ತ್ರ ಪಠಣ ವೇದಬಲ್ಲವನಾದರೂ ಆಗಲಿ, ಗುರುವಿನ ಕೃಪಾ ಇಲ್ಲದೆ, ಆತ್ಮಜ್ಞಾನ ಆಗದೆ ಏನು ಮಾಡಿದರೂ ವ್ಯರ್ಥವೆಂದು ತಿಳಿಯಬೇಕಲ್ಲಾ ಹೊರತು ಗತಿಯು ಇಲ್ಲ ॥೯॥

ಆದ್ದರಿಂದ ಗುರುಕೃಪಾ ಮಾಡಿಕೊಂಡು ಚನ್ನಾಗಿ ಶಿವಶಿವಾ ಎನ್ನುತ್ತಿರಬೇಕಲ್ಲಾ ಹೊರತು ಹಾಗೇ ಇರಬಾರದು । ಶಿವಶಿವಾ ಎನ್ನುತ್ತಿದ್ದರೆ ಹುಟ್ಟಿಬಂದದ್ದು ಫಲವಾಯಿತು। ಆದ್ದರಿಂದ ಈ ಪ್ರಾಣನಾಥ ಪರಮೇಶ್ವರನ ಸ್ಮರಣೆ ಮರೆಯದೆ ಮಾಡುತ್ತಿದ್ದರೆ ಅವರಿಗೆ ಜನನ ಮರಣದ ಭಯವಿಲ್ಲ ॥೧೦॥

ತನ್ನ ನಡೆನುಡಿ ಕೆಡಗೊಡಬಾರದು । ಜಪ್ಪಿಸುತ್ತಿರಬೇಕು ಅಂದರೆ ಬಂದದ್ದು ಚನ್ನಾಗಿ ಕಡೆಗೆ ಪಾರಾಗುವುದು । ನಡೆನುಡಿ ಜಪ್ಪಿಸುತ್ತಿದ್ದವರೆ ಅವರೆ ಬಲವಂತರು, ಭಕ್ತಿಯುಳ್ಳವರು । ಅವರೆ ಗುರುಭಕ್ತರು, ಶಿವಭಕ್ತರು, ಹರಭಕ್ತರು । ಆರಾದರಾಗಲಿ ಅವರೇ ಸರ್ವಭಕ್ತರು । ಇದಕ್ಕೆ ಎಳ್ಳಷ್ಟೂ ಸಂದೇಹವಿಲ್ಲ ॥೧೧॥

ಈ ಶ್ರೇಷ್ಠವಾದಂಥಾ ಶಿವಸೂತ್ರದ ಅನುಷ್ಠಾನ ನಿರ್ಧಾರದಿಂದ ಮಾಡುತ್ತಿರಬೇಕು. ಅನುಷ್ಠಾನದ ಹೊರತು ಮತ್ತೊಂದು ಯಾವುದೂ ಶ್ರೇಷ್ಠತ್ವವಿಲ್ಲ । ಶಿವಬೋಧ ರುದ್ರ ಅನುಷ್ಠಾನ ಧನ್ಯಧನ್ಯ, ಮಾಡಿದವರು ಈ ಲೋಕದಲ್ಲಿ, ತಪದೊಳಗೆ ಶ್ರೇಷ್ಠ ತಪವು, ಗುರುಮಂತ್ರ ಶಿವಸೂತ್ರದ ತಪವು ಶ್ರೇಷ್ಠವು ॥೧೨॥

ಇದರ ಹೊರತು ಮತ್ತೊಂದು ಯಾವುದೂ ತಪವಿಲ್ಲ । ಶಿವಶಿವಾ ನಿನ್ನ ಹೊರತು ಎನಗೆ ಗತಿಯು ಇಲ್ಲ । ಬರಬಾರದು ಹುಟ್ಟಿ ಬಂದೀವಿ । ಬಂದ ಮೇಲೆ ಛಂದಾಗಿ ತಂದಿ ಗುರುವಿನ ಸ್ಮರಣೆ ಮಾಡಿ ಮುಕ್ತರಾಗಿರಬೇಕಲ್ಲಾ ಹೊರತು ಹಾಗೇ ಇರಬಾರದು। ಬಂದದ್ದು ಕಾರಣವೇನು, ಇದನ್ನು ತಿಳಿದುಕೊಂಡು, ಶಿವಶಿವಾ ಎನ್ನತ್ತಿದ್ದರೆ, ಹುಟ್ಟಿ ಬಂದದ್ದು ಫಲವಾಯಿತು ಮತ್ತು ಸಾರ್ಥಕವಾಯಿತು ॥೧೩॥

ಇಲ್ಲದಿದ್ದರೆ ಒಂದೊಂದು ಯೋನಿಯಲ್ಲಿ ಪರಪರತ (ಮತ್ತೆ ತಿರುತಿರುಗಿ) ಭೋಗಿಸಬೇಕಾಗುತ್ತದೆ ತಪ್ಪುವುದಿಲ್ಲ। ಆದ್ದರಿಂದ ಇದು ಒಂದು ಸಾರೆ ಛಾತಿಕೊಟ್ಟು ಪ್ರಮಾಣದಿಂದ ಪರಮೇಶ್ವರನ ಪಾದಸ್ಮರಣೆ ಆನಂದದಿಂದ ಮಾಡುತ್ತಿರಬೇಕು। ಅಂದರೆ ಬಂದದ್ದು ಫಲವಾಯಿತು, ಉತ್ತಮ ಪದವಿಗೆ ಮುಟ್ಟೀತು ॥೧೪॥

ಆದ್ದರಿಂದ ಏನಾದರೂ ಶಿವಮಂತ್ರ ಮರಿಯಬಾರದು, ಮಾಡುತ್ತಿರಬೇಕು। ಹಲವು ದಿವಸಗಳೆಲ್ಲಾ ಹರರೂಪ ಶಿವಯೆಂದು ಪರಿಣಮಿಸುತ್ತಿರಬೇಕು। ಶಿವ ಮಂತ್ರದಿಂದ ಕಾಯಾವ್ಯಕ್ಷದಲ್ಲಿರುವಂಥಾ ಆತ್ಮಲಿಂಗನ ನೋಡುತ್ತಿರಬೇಕು। ಅಂದರೆ ತಮಗೆ ಕಲ್ಯಾಣವಾಗುವುದು ॥೧೫॥

ಆದ್ದರಿಂದ ಆತ್ಮನ ಧ್ಯಾನ ಹಗಲಿರುಳು ಮಾಡುತ್ತಿರಬೇಕು ಮರಿಯಬಾರದು। ಇಂಥಾ ಅಪರೂಪವಾದಂಥಾ ಜ್ಞಾನಮಾರ್ಗ ಸಿಗಬೇಕಾದರೆ ಆ ಗುರುವಿನ ಕೃಪಾ ಆಗದ ಹೊರತು ಈ ಮಾರ್ಗವು ಸಿಗುವುದಿಲ್ಲ। ಆದ್ದರಿಂದ ತಮ್ಮ ಗುಣಗಳು ದೂರಮಾಡಿ, ಗುರುವಿನ ಕೃಪಾ ಮಾಡಿಕೊಂಡು ಶಿವಶಿವಾ ಎನ್ನುತ್ತಿರಬೇಕು। ಇದೆ ತನ್ನ ಸಂಗಡ ಬರುವುದು। ಮತ್ತೆ ಯಾವುದೂ ಬರುವುದಿಲ್ಲ ॥೧೬॥

ಆದ್ದರಿಂದ ಗುರು ಮುಖ್ಯ ಕಾರಣವು, ಸರ್ವಕ್ಕೆ ಶ್ರೇಷ್ಠತ್ವವು। ಪಡಕೊಂಡವರಿಗೆ ಸುಖದಾಯಕ ಫಲವಿದು। ಇಂಥ ಸುಖವು ಯಾವುದರಲ್ಲಿಲ್ಲ। ಆದ್ದರಿಂದ ಶಿವಶಿವಾ ಎನ್ನುತ್ತಿರಬೇಕು। ಅಂದರೆ ತಮಗೆ ಹಿತವಾಗುವುದು। ತಮ್ಮ ಸ್ವಧರ್ಮ ಬಿಡಬಾರದು। ಆಚಾರದಿಂದ ನಡೆಯಬೇಕು ॥೧೭॥

'ಸ್ವಧರ್ಮ' ಅಂದರೆ ಶಿವಶಿವಾ ಅನ್ನುತ್ತಿರಬೇಕು। ಆಚಾರವೆಂದರೆ ಆತ್ಮಲಿಂಗನ ನೋಡುತ್ತಿರಬೇಕು। ಕೆಟ್ಟದರ ಕಡೆಗೆ ಲಕ್ಷ ಕೊಡಬಾರದು। ಕೊಟ್ಟರೆ ಕೆಟ್ಟು ಹೋಗುವುದು ಸುಖವಿಲ್ಲ। ಇದನ್ನು ತಿಳಕೊಂಡು ಶಿವಧ್ಯಾನ ಹಗಲಿರುಳು ಮಾಡುತ್ತಿರಬೇಕು ಮರಿಯಬಾರದು ॥೧೮॥

ಈ ಅಂಗಲಿಂಗ ಸಂಗ ಮಾಡಿ ಲಿಂಗಪೂಜೆ ಮಾಡುತ್ತಿರಬೇಕು। ಆ ಲಿಂಗಕ್ಕೆ ವರವು ಪಡೆಯುತ್ತಿರಬೇಕು। ಆ ಲಿಂಗಕ್ಕೆ ಮೂರು ದಳದ ಪತ್ರಿ ಏರಿಸಬೇಕು। ವರವು ಅಂದರೆ ಆ ಲಿಂಗದ ಸ್ಮರಣೆ ಅರಿವಿನಲ್ಲಿ ಮರಿಯದೆ ನಡೆದಿರಬೇಕು ಮತ್ತು ಸುಳಿದಾಡುತ್ತಿರಬೇಕು ॥೧೯॥

ಇಂಥಾ ವರವ ಆ ಲಿಂಗಪೂಜೆ ಮಾಡಿ ಬೇಡುತ್ತಿರಬೇಕು ಗುರುವಿನ ವರದಿಂದೆ ಸರ್ವ ದೊರೆಯುವುದು। ಗುರುವಿನ ಸೂತ್ರವು ಮಹಾ ದೊಡ್ಡದು। ಆ ಸೂತ್ರದಿಂದ ಸತ್ಪಾತ್ರನಾದಂಥಾ ಆತ್ಮಲಿಂಗನು ಕರದಾಗೆ ಕಾಣಿಸುವನು ॥೨೦॥

ಕಂಡು ಲಿಂಗಕ್ಕೆ ಕರಮುಗಿದು, ಶಿರಬಾಗಿ, ಮಂಡಲಪತಿ ರಾಜ ನೀನೆಂದು ವರವ ಪಡೆಯುತ್ತಿರಬೇಕು । ಅಂದರೆ ಗತಿಗೊಂಬುವುದು ಮತ್ತು ಫಲವಾಗುವುದು। ಶಿವಶಿವಾ ಎಂಬುವ ಗುರುಮಂತ್ರ ಶಿವಸೂತ್ರದ ಬೆಳೆಯ ಕಳೆ ತುಂಬಿ ಕಣ್ಣು ಮುಂದೆ ಇರುವುದು ॥೨೧॥

ಆದ್ದರಿಂದ ಗುರುವಿನ ವರವು ಪಡೆದವರು ಈ ಲೋಕದಲ್ಲಿ ಧನ್ಯಧನ್ಯ । ಮತ್ತು ಪರಲೋಕದಲ್ಲಿ ಧನ್ಯಧನ್ಯ । ಗುರುಕೊಟ್ಟ ಹರನಾಮ ಜಪಿಸಿದವರಿಗೆ ಮರಣದ ಭಯವಿಲ್ಲ। ಧನ್ಯ ಧನ್ಯ ಗುರುಕೊಟ್ಟ ಶಿವಮಂತ್ರ ವರ್ಣಿಸಲಾಗದು । ಶಿವಶಿವಾ ನಿನ್ನ ಉಪಕಾರ ಏನ ಮಾಡಿದರೂ ತೀರದು ॥೨೨॥

ಶ್ರೀಗುರು ದಯದಿಂದೆ ಪರವಸ್ತು ನಾ ಕಂಡೆ । ಶ್ರೀಗುರು ದಯದಿಂದೆ ಪರಲೋಕವನು ಕಂಡೆ । ಥಂದ ಥಂದ ಬೆಳಕಿನಲ್ಲಿ ಹೊಂದಿಕೊಂಡಿರುವಂಥ ತಂದಿ ಗುರುವಿನ ಪಾದ ಕಂಡು ಶರಣು ಎನ್ನುವೆ ॥೨೩॥

ಇಂಥಾ ಸೊಬಗ ತೋರಿದ ಗುರುವಿನ ಎಂದೆಂದಿಗೂ ಮರೆಯಲಾರೆನು (ಮರಿಯಬಾರದು) । ಮರೆತರೆ ಈ ಸೊಬಗು ದೊರೆಯುವುದಿಲ್ಲ । ಆದ್ದರಿಂದ ಗುರುವಿನ ಸ್ಮರಣೆ ಅರವಿನಲ್ಲಿ ಮರೆಯದೆ ಮಾಡುತ್ತಿರಬೇಕು ॥೨೪॥

ಗುರುವಿನ ಕೃಪಾ ತನಗೆ ಭೂಷಣವು । ಗುರುವಿನ ಕೃಪಾ ತನಗೆ ಲಕ್ಷಣವು । ಗುರುವಿನ ಕೃಪಾ ತನಗೆ ಸರ್ವಸೌಭಾಗ್ಯವು । ಗುರುವಿನ ಕೃಪಾ ತನಗೆ ಆನಂದ ಅಮರವಾಗಿ ಇರುವುದು । ಗುರುವಿನ ಕೃಪಾ ತನಗೆ ಸಾಕ್ಷವಾಗಿ ಇರುವುದು । ಗುರುವಿನ ಕೃಪಾ ತನಗೆ ಸತ್ಯಸಾಕ್ಷವು ॥೨೫॥

ಶಿವಶಿವಾ ಗುರುಮಂತ್ರ ಮೂಲವು । ಶಿವಶಿವಾ ಶಿವಮಂತ್ರ ಮೂಲವು । ಆದ್ದರಿಂದ ಗುರುಕೊಟ್ಟ ಶಿವಮಂತ್ರ ಒಪ್ಪಿ ಜಪಿಸಬೇಕು । ಇದೇ ಗುರುಮಂತ್ರ ಮೂಲವು । ಚೌರ್‍ಯಾಂಶಿ ಲಕ್ಷ ಯೋನಿಗಳಲ್ಲಿ ಹುಟ್ಟಿ ಬರುವಂಥಾ ಕೆಟ್ಟ ಬಾಧೆಗಳು ತಪ್ಪಿಸುವುದು ಈ ಮಂತ್ರ। ಆದ್ದರಿಂದ ಶಿವಮಂತ್ರ ಒಪ್ಪಿ ಜಪಿಸುತ್ತಿರಬೇಕು ॥೨೬॥

ಆದ್ದರಿಂದ ರತ್ನ ಪೆಟ್ಟಿಗೆಯಲ್ಲಿರುವಂಥಾ ಮೇಲಿಲ್ಲದ ಮುತ್ತು ಮೂಗಿನಲ್ಲಿಟ್ಟು ಆತ್ಮಲಿಂಗವ ನೋಡುತ್ತಿರಬೇಕು । ಆದ್ದರಿಂದ ಗುರುಕೊಟ್ಟ ಶಿವಮಂತ್ರ ಮೂರುಲೋಕದ ಬೆಳಕ ತೋರಿಸುವುದು ಈ ಮಂತ್ರ ॥೨೭॥

ವೇದಶಾಸ್ತ್ರಕ್ಕೆ ನಿಲುಕದ ಈ ಮಂತ್ರ । ಮಹಾಮಂತ್ರ ಶಿವ ಮಂತ್ರ । ಸಾಧಿಸಿದ ವರಿಗೆ ಸದ್ವಸ್ತು ತೋರಿಸಿದಂಥಾ ಮೇಲಾದ ಮಂತ್ರವಿದು । ಶಿವಶಿವಾ ಎಂಬುವ ಶಿವಮಂತ್ರ ಬಲದಿಂದೆ ಭವದ ಅಂಜಿಕೆ ನಮಗಿಲ್ಲಾ । ಆದ್ದರಿಂದ ಯಾರಾದರಾಗಲಿ

ಗುರುಕೊಟ್ಟ ಶಿವಮಂತ್ರ ಜಪ್ಪಿಸುತ್ತಿರಬೇಕು । ಇದರ ಹೊರತು ಮತ್ತೊಂದು ಯಾವುದೂ ಸಂಗಡ ಬರುವುದಿಲ್ಲ ॥೨೮॥

ಈ ನರದೇಹದೊಳಗೆ ಗುರುಕೊಟ್ಟ ಶಿವಮಂತ್ರ ಹೇಳಿಸುತ್ತಿದ್ದರೆ ಇದು ಒಂದು ಆಯುಷ್ಯ ರತ್ನಪೇಟಿ(ಪೆಟ್ಟಿಗೆ) ಮುತ್ತು ಮಾಣಿಕ ತುಂಬಿಕೊಂಡು ಇರುವಂಥಾ ತಂದಿ ಗುರುವಿನ ವರಧನದ ಮೂಳ ಪೇಟಿಯು ॥೨೯॥

ಈ ಪೇಟಿಯಲ್ಲಿ ಇರುವಂಥಾ ಮಂಗಳ ಸೂತ್ರ। ಗುರುಮಂತ್ರ। ಲಿಂಗಕ್ಕೆ ಧರಿಸಿ ಜಂಗಮಯ್ಯಾ ಲಿಂಗ ನೀನೆಂದು ಕರ ಮುಗಿದು ಶಿರಬಾಗಿ ಶರಣು ಮಾಡುತ್ತಿರಬೇಕು। ಅಂದರೆ ಆ ಲಿಂಗ ತನಗೆ ಸುಖಕೊಡುವುದು ॥೩೦॥

ಆದ್ದರಿಂದ ಆ ಲಿಂಗಕ್ಕೆ ಅಂಗದ ಗುಣಗಳು ಎಲ್ಲಾ ಅರ್ಪಣ ಮಾಡಿ, ಸಂಗತಿ ಸದಾ ಲಿಂಗ ನೀನೆಂದು, ಗುರುಕೊಟ್ಟ ಪ್ರಸಾದ ಶಿವಮಂತ್ರ ಸಲ್ಲಿಸುತ್ತಿರಬೇಕು। ಅಂದರೆ ತನಗೆ ಸುಖವಾಗುವುದು । ಆ ಸುಖವು ಹೇಳಲಾಗದು ॥೩೧॥

ಇತಿ ಶ್ರೀಮತ್ ಶ್ರೀ ಸದ್ಗುರು ವಚನ ಸಮಾಸ ಒಂದು

ಶ್ರೀ ಸದ್ಗುರು ಸಮರ್ಥ

**ಅನುಭವ ನಿರೂಪಣ :**

ಶ್ರೀ ಗಣೇಶಾಯ ನಮಃ। ಅನುಭವ ನಿರುಪಮ ಬಹುದೊಡ್ಡದೀ ಜನ್ಮ। ಶೋಧಿಸಿ ನೋಡಿದರೆ ವೇದಕ್ಕೆ ತಿಳಿಯುವುದಿಲ್ಲ, ಶಾಸ್ತ್ರಕ್ಕೆ ನೆಲಕುವುದಿಲ್ಲ। ಗುರುವಿನ ಪ್ರಸಾದದಿಂದ ಈ ಮರವಿನ ದೇಹಕ್ಕೆ ಅರಿವು ಆಗುವುದು । ಇದು ಸತ್ಯವು ॥೧॥

ಗುರುವಿನ ಉಪಕಾರ ಶರಣರಿಗೆ ಸವಿ ಎನಿಸುವುದು । ಗುರುವೆ ನೀ ಮಾಡಿದ ಉಪಕಾರ ನಾದಾರಿಗೆ ಹೇಳಲಿ। ನಿನ್ನ ಎನ್ನನಿ ಸುಖ ಉಂಡು ಉಂಡು ತನ್ಮಯನಾದೆನು ದೇವಾ। ಇಂಥಾ ಅಮರ ಗುರುವಿನ ಪ್ರಸಾದ ಪರಲೋಕ ತೋರುವುದು । ಶಿವಶಿವಾ ಪರಮಾತ್ಮನ ಲೋಕದೊಳಗೆ ಕೂಡಿಸುವುದು ॥೨॥

ಆದ್ದರಿಂದ ಗುರುಪ್ರಸಾದ ಶಿವಸೂತ್ರ ಮಹಾದೊಡ್ಡದು। ಕಷ್ಟಬಟ್ಟು ದುಡಕೊಂಡರೆ ಕೈಲಾಸದಲ್ಲಿ ಪದವಿಗೆ ಹೋಗಿ ಮುಟ್ಟುವುದು । ಆದ್ದರಿಂದ ಈ ಶರೀರವನ್ನು ಶಿವನ ಕಾರಣಕ್ಕೆ ಹಚ್ಚಿ ಬಿಡಬೇಕು। ಹ್ಯಾಗೆ ಪ್ರಪಂಚದಲ್ಲಿ ಕಷ್ಟ ಬಡುವೆ ಹಾಗೆ ಪರಮಾರ್ಥದಲ್ಲಿ ಕಷ್ಟಬಟ್ಟರೆ ಶಿವನು ದೂರಲ್ಲ ॥೩॥

ಆದ್ದರಿಂದ ಈ ಲೋಕದಲ್ಲಿ ಪರಲೋಕ ಸಾಧಿಸುತ್ತಿರಬೇಕು । ಅಂದರೆ ಆತನು ದೇವರ ವಂಶಿಕನು। ಜಾತಿಯೊಳಗೆ ಪುಟ್ಟ ಅಜಾತನಾದವನು। ಆತನೇ ಆತ್ಮ ಸ್ವರೂಪದಲ್ಲಿ

ಆನಂದನಾಗಿ ಇರುತಿಹನು ॥೪॥

ಶ್ರೀಗುರುವಿನ ಪ್ರಸಾದ ಕೈಕೊಂಡು ಆದಷ್ಟು ಮಟ್ಟಿಗೆ ಶಿವಸ್ಮರಣೆ ಮಾಡುತ್ತಿರಬೇಕು ಆತ್ಮನ ನೋಡುತ್ತಿರಬೇಕು । ಅಂದರೆ ಆತನು ಅಜಾತ ವಸ್ತು ಉತ್ತಮನು ಎಂಬೆನಯ್ಯಾ॥೫॥

ಇದೇ ನರಜನ್ಮ ಹುಟ್ಟಿಬಂದದ್ದು ಅಪರೂಪವೆಂದು ತಿಳಿಯಬೇಕು । ಇದರಲ್ಲಿ ಪಾಪಪುಣ್ಯಗಳು ತಿಳಿಯುವುದು । ಇದರಲ್ಲಿ ಧರ್ಮಕರ್ಮಗಳು ತಿಳಿಯುವುದು । ಇದರಲ್ಲಿ ಆಚಾರ ವಿಚಾರಗಳು ತಿಳಿಯುವುದು ॥೬॥

ಆದ್ದರಿಂದ ಈ ನರಜನ್ಮ ಬಹುದೊಡ್ಡದೆಂದು ತಿಳಿಯಬೇಕು । ಈಶ್ವರನ ಸಾಕ್ಷಿಯಿಂದ ನಡೆಯಬೇಕು । ಶಿವನ ಕಂಡು ಭವ ನೀಗಬೇಕು । ಹುಟ್ಟುವುದು ಸಾಯುವುದು ತಪ್ಪಿಸಬೇಕು। ಅದು ಎಂತೆಂದೆಡೆ । ಮೊದಲು ಗುರುವಿನ ವಚನ ಬದಲಾಗದೆ ನಡೆದರೆ ಆತಗೆ ಪಾತಕದ ಖಾಣಿಗಳು ಲೋಪಾಗಿ ಹೋಗುವವು ಇದು ಸತ್ಯವು ॥೭॥

ಭಾವದಿಂದ ಭಕ್ತಿ ಮಾಡಿದರೆ ಯಾವುದೂ ತನಗೆ ಕೊರತೆಯಿಲ್ಲವು । ಆದ್ದರಿಂದ ಏನಾದರೂ ಶಿವಗೆ ಒಪ್ಪಿಸಿ, ಶಿವಶಿವಾ ಎನ್ನುತ್ತಿದ್ದವನು ಆತಗೆ ಸಕಲ ಸಂತತಿ, ಸಂಪತ್ತಿ, ಆನಂದ, ಐಶ್ವರ್ಯ ದೇವರು ಕೊಟ್ಟಾನು ॥೮॥

ಶಿವನಾಮದ ಬೀಜ ಬಿತ್ತಿದವರಿಗೆ ಮುತ್ತಿನ ಬೆಳೆ ಬರುವುದು ತಪ್ಪುವುದಿಲ್ಲ। ಸತ್ಯವಂತರ ಮಾತು ಸಾಕ್ಷಿಯಿದು ಸುಳ್ಳಲ್ಲ ನೋಡಾ । ಹುಟ್ಟಿಸಿದಾತನ ಖೂನ (ಗುರುತು) ಹಿಡಿದು ಅಡಿಗಡಿಗೆ ನೆನೆಸುತ್ತಿರಬೇಕು । ಅಂದರೆ ತನಗೆ ಕಲ್ಯಾಣವಾಗುವುದು ಇದು ಸತ್ಯವು ॥೯॥

ಈ ಶರೀರಕ್ಕೆ ಸುಖ ಬೇಕಾದರೆ ಕೀರ್ತಿ ಇಲ್ಲ, ಕೀರ್ತಿ ಬೇಕಾದರೆ ಸುಖವಿಲ್ಲ। ಆದ್ದರಿಂದ ಗುರುಪ್ರಸಾದ ಕೈಕೊಂಡು ಪರಮೇಶ್ವರನ ಆದರದಿಂದ ಸ್ಮರಣೆ ಮಾಡಿ ಈ ಲೋಕದಲ್ಲಿ ಶಿವನ ಕೀರ್ತಿ ನಿಲ್ಲಿಸಬೇಕು ॥೧೦॥

ಅದೆಂತೆಂದಡೆ । ಕಾಯಾ ಪಟ್ಟಣಕ್ಕೆ ಬಂದು ಪರಮಾತ್ಮನ ಖೂನ ಹಿಡಿಯದೆ ಹೋದರೆ, ಆ ಪಟ್ಟಣವು ಹಾಳುಬಿದ್ದಂತೆ ನೋಡಾ । ಪಟ್ಟಣಕ್ಕೆ ಬಂದು ಆ ಪಟ್ಟಣ ದಲ್ಲಿರುವಂಥಾ ಪರಮಾತ್ಮನ ಪಾದದಲ್ಲಿ ಕಷ್ಟಪಟ್ಟು ನಿಷ್ಠೆಯಿಂದ ಸ್ಮರಣೆ ಮಾಡಿ, ನಿಜರೂಪವನ್ನು ನೋಡಿ, ಗುರುವೆ, ನೀ ಗತಿಯೆಂದು ಕರಮುಗಿದು, ಶಿರಬಾಗಿ, ಶರಣು ಮಾಡಿ, ಶಿವನಕೂಡಿ, ಮರಣನೀಗಿ ಹೋದರೆ ಈ ಪಟ್ಟಣಕ್ಕೆ ಬಂದದ್ದು ಫಲವಾಯಿತು ನೋಡಾ ॥೧೧॥

ಪಟ್ಟಣದೊಳಗೆ ಪೊಕ್ಕು ಪ್ರಭೂನ ಒಲಿಸಿಕೊಂಡು ದೊರೆತನ ಪಡೆಯಬೇಕಲ್ಲ ಹೊರತು ದರಿದ್ರತನ ಪಡಿಯಬಾರದು । ಅವಲಕ್ಷಣ ಆಗಬಾರದು । ಹೀಗೆಂದು ಗುರುಗಳ

ವಚನ। ಶಿವಮಂತ್ರ ನುಡಿಯ ನುಡಿವುತ ಐಶ್ವರ್ಯ ಪಡಿಯುತ್ತ ಇರಬೇಕಲ್ಲಾ ಹೊರತು ಹಾಗೇ ಇರಬಾರದು ॥೧೨॥

ಗುರುಮಂತ್ರ ಬಲದಿಂದ ಹರ ತಾನು ಒಲಿದಾನು । ಗುರುಮಂತ್ರ ಬಲದಿಂದ ಶಿವನು ತಾನು ಒಲಿಯುವನು। ಗುರುಮಂತ್ರ ಬಲದಿಂದ ಸುರವರೆಲ್ಲ ಒಲಿಯುವರು। ಗುರುಮಂತ್ರ ಬಲದಿಂದ ಸ್ಥಿರ ಮುಕ್ತಿ ಪಡೆಯುವರು । ಗುರುಮಂತ್ರ ಬಲದಿಂದೆ ಶಿವಪದಕ್ಕೆ ಮುಟ್ಟುವರು ॥೧೩॥

ಆದ್ದರಿಂದ ಆತ್ಮನ ಸ್ಮರಣೆ ಮಾಡಿ, ಆನಂದದಿಂದ ಐಶ್ವರ್ಯ ಪಡಿಯಬೇಕಲ್ಲಾ ಹೊರ್ತು ವ್ಯರ್ಥಕಾಲ ಕಳಿಯಬಾರದು । ಶಿವಮಂತ್ರ ಘೋಷ ತನ್ನ ಅಂತರದಲ್ಲಿ ಅಖಂಡ ನಡೆದಿರಬೇಕು। ಅಂದರೆ ದೇವರು ತನ್ನಲ್ಲಿ ವಾಸಮಾಡಿಕೊಂಡು ಇರುತಿಹನು। ಇದಕ್ಕೆ ಎಳ್ಳಷ್ಟೂ ಸಂದೇಹವಿಲ್ಲ ॥೧೪॥

ಸೊಲ್ಲಿನ ಒಳಗಿನ ಸ್ಮರಣೆ ಎಲ್ಲಕ್ಕೂ ಹೆಚ್ಚಿನದು। ಬಲ್ಲವರೆ ಬಲ್ಲರು। ಅದೆಂತೆದೆಡೆ ಗುಪ್ತ ಸ್ಮರಣೆ ಮಾಡಿ, ವಸ್ತು ರೂಪವನು ನೋಡಿ, ಉನ್ಮನಿ ಒಳಗಿನ ಗಹನ (ಘನ) ಸುಖದ ಫಲವಿದು, ಹೇಳಲಿಕ್ಕೆ ಅಳವಿಲ್ಲ । ಹೇಳದಿದ್ದರೆ ತಿಳಿಯುವ ಮಾತಲ್ಲ । ಹೇಳೀನೆಂದರೆ ಅಳವಿಲ್ಲ। ಹೇಳುವ ಮಾತಲ್ಲ ॥೧೫॥

ಅದು ಹ್ಯಾಂಗಂದರೆ। ಗುರುಕೊಟ್ಟ ಶಿವಮಂತ್ರ ಮುಚ್ಚು ಬಾಗಿಣವು। ಹೆಚ್ಚೆಚ್ಚು ಬೆಳಿಸುತ್ತಿರಬೇಕು । ಅಂದರೆ ಮುಚ್ಚು ಬಾಗಿಣದ ಫಲವಾಯಿತು ॥೧೬॥

ಗುರುಕೊಟ್ಟ ಮುಚ್ಚು ಬಾಗಿಣವು ಹೆಚ್ಚಿನ ಫಲವೀವುದು । ಗುರುಕೊಟ್ಟ ಮುಚ್ಚು ಬಾಗಿಣವು ಮುತ್ತೈದಿತನವೀವುದು। ಗುರುಕೊಟ್ಟ ಮುಚ್ಚು ಬಾಗಿಣವು ಅಷ್ಟ ಐಶ್ವರ್ಯ ಪದವೀವುದು। ಗುರುಕೊಟ್ಟ ಮುಚ್ಚು ಬಾಗಿಣವು ಆನಂದ ಅಮೃತ ಸುರಿಸುವುದು॥೧೭॥

ಗುರುಕೊಟ್ಟ ಮುಚ್ಚು ಬಾಗಿಣವು ಮೋಲಿಲ್ಲದ ಸುಖವೀವುದು । ಗುರುಕೊಟ್ಟ ಮುಚ್ಚು ಬಾಗಿಣವು ಕೈಲಾಸದಲ್ಲಿ ಬೆಳಕಾಗುವುದು। ಗುರುಕೊಟ್ಟ ಮುಚ್ಚು ಬಾಗಿಣವು ಶಿವರೂಪದಲ್ಲಿ ಕೂಡಿಸುವುದು ॥೧೮॥

ಆದ್ದರಿಂದ ಗುರುಕೊಟ್ಟ ಮೊದಲ ಭಕ್ತಿಗೆ ಬದಲವಾಗದೆ ಬಗೆ ಬಗೆಯಿಂದ ಭಜಿಸುತ್ತಿರಬೇಕು। ಗುರುಕೊಟ್ಟ ಮುಚ್ಚು ಬಾಗಿಣದ ನೆನಪು ಹಿಡಿದು ತಪ್ಪಗೊಡದೆ ನಡಿಯಬೇಕು। ಅಂದರೆ ತನಗೆ ಮುಚ್ಚು ಬಾಗಿಣದ ಸುಖ ತೋರುವುದು। ಇದಕ್ಕೆ ಎಳ್ಳಷ್ಟು ಸಂದೇಹವಿಲ್ಲ ॥೧೯॥

ಗುರುಕೊಟ್ಟ ಮುಚ್ಚು ಬಾಗಿಣವು ಸತ್ಯಪುರುಷರಿಗೆ ಸುಖವೀವುದು। ಗುರುಕೊಟ್ಟ ಮುಚ್ಚು ಬಾಗಿಣದಿಂದ ಎನಗೆ ಬಹುಭಾಗ್ಯ ದೊರಕಿತು ನೋಡಾ । ಗುರುಕೊಟ್ಟ

ಮುಚ್ಚು ಬಾಗಿಣವು ಎನಗೆ ಸಕಲ ಐಶ್ವರ್ಯ ನೋಡಾ ॥೨೦॥

ಜನನ ಮರಣ ಭಯ ನೀಗಬೇಕಾದರೆ ಗುರುವಿನ ಸ್ಮರಣೆ ಪರಿಪೂರ್ಣ ಅರವಿನೊಳಗೆ ಮರೆಯದೆ ಮನಸ ಇಟ್ಟು ಮಾಡುತ್ತಿರಬೇಕು । ಅಂದರೆ ದೇವರು ತನಗೆ ಒಲಿಯುವನು। ಇದಕ್ಕೆ ಎಳ್ಳಷ್ಟೂ ಸಂದೇಹವಿಲ್ಲ ನೋಡಾ ॥೨೧॥

ಆದ್ದರಿಂದ ಮನಸ್ಸು ಸೈಲ ಬಿಡಬಾರದು । ಮನಸ್ಸಿಗೆ ಬೋಧಮಾಡಿ ಕಟ್ಟಿಹಾಕಿ ಸ್ಮರಣೆಗೆ ಹಚ್ಚಿಬಿಡಬೇಕು ಅಂದರೆ ಈ ಮನಸ್ಸು ಆತ್ಮನ ಕೈವಾಸ ಆಗುವುದು । ಮನ ಘಟ್ಟಿ ಮಾಡಿ ತನು ನೀಗಬೇಕು ನೋಡಾ ॥೨೨॥

ಆದ್ದರಿಂದ ಶಿವಶಿವಾ ಎಂಬುವ ಬಳ್ಳಿ ಹಬ್ಬಿಸುತ್ತಿರಬೇಕು ಅಂದರೆ ಆ ಬಳ್ಳಿ ತನಗೆ ಫಲಕೊಡುವದು । ಆದ್ದರಿಂದ ಶಿವಶಿವಾ ಎಂಬುವ ಬಳ್ಳಿ ಮೀರಿದ ಫಲವೀವುದು ಬಲ್ಲವರೆ ಬಲ್ಲರು ನೋಡಾ ॥೨೩॥

ನಾನಾ ಜನ್ಮ ತಿರುಗಿ ಇದು ಒಂದು ಮಾನವ ಜನ್ಮಕ್ಕೆ ಹುಟ್ಟಿ ಬರುತ್ತದೆ । ಆದ್ದರಿಂದ ಪ್ರಪಂಚದಲ್ಲಿದ್ದು ಪರಮಾರ್ಥ ಮಾಡುತ್ತಿರಬೇಕು. ಅದು ಹ್ಯಾಗಂದರೆ ಹರಮಂತ್ರ ಗುರುಬಲ್ಲ. ಆ ಗುರುಮಂತ್ರ ತನ್ನರವಿನಲ್ಲಿ ಮರಿಯದೆ ಮಾಡುತ್ತಿರಬೇಕು ॥೨೪॥

ಅದು ಹ್ಯಾಗಂದರೆ ಶಿವಶಿವಾ ಎಂಬುವ ಶಿವಮಂತ್ರ ಗುರು ಮನಿಯ ಕೀಲವು। ಆ ಕೀಲವನ್ನು ತಿಳಿದು ಗುಪ್ತದಿಂದ ತನ್ನ ಅಂತರಂಗದಲ್ಲಿ ಮರಿಯದೆ (ಗುಪ್ತದಿಂದ) ಮಾಡುತ್ತಿರಬೇಕು । ಅಂದರೆ ಅದೆ ಗುರು ಮನಿಯ ಕೀಲವು. ಈ ಕೀಲವು ತಿಳಿಯದೆ ಮೇಲಿನ ಶೀಲಕ್ಕೆ ಶಿವನು ಸಿಕ್ಕಲ್ಲ (ಸಿಕ್ಕುವುದಿಲ್ಲ) ನೋಡಾ ॥೨೫॥

ಆದ್ದರಿಂದ ಆ ಕೀಲವು ತಿಳಿದು ಶಿವಶಿವಾ ಎಂದು ಶಿವನ ಭಜಿಸಿದರೆ ಶಿವನ ಬಿಟ್ಟು ತಾನಿಲ್ಲ, ತನ್ನ ಬಿಟ್ಟು ಶಿವನಿಲ್ಲ ನೋಡಾ । ಅದು ಹ್ಯಾಗಂದರೆ, ಶಿವನ ಭಕ್ತಿಯ ಮಾಡಿ ಸಜ್ಜನರೆಲ್ಲರು ಕೂಡಿ ಶಿವನ ಭಜನೆಯ ಮಾಡಿ ಭವನೀಗಬೇಕು ನೋಡಾ॥೨೬॥

ಇತಿ ಶ್ರೀಮತ್ ಶಿವಸೂತ್ರ ಗುರುಚರಿತ್ರ ಪಂಚಸಮಾಸ

ಶ್ರೀ ಸದ್ಗುರು ಸಮರ್ಥ

**ಶಿವಸೂತ್ರ ಪಠಣ :**

ಶ್ರೀ ಗಣೇಶಾಯ ನಮಃ ಆದರದಿಂದ ಮನಸಿಗೆ ಬೋಧ ಮಾಡಿ ಶಿವಶಿವಾ ಎಂದು ಶಿವನ ಸಾಧಿಸುತ್ತಿರಬೇಕು । ಪಾಪ, ಕೋಪ ಲೋಪ ಮಾಡಿ ಸಾಕ್ಷಿದಿಂದೆ ಶಿವನ ಒಲಿಸಿಕೊಂಡವನೆ ಆತ್ಮನು ನೋಡಾ । ಆತನೆ ಗುರುಭಕ್ತ ನೋಡಾ ॥೧॥

ಅಪರೂಪ ನರಜನ್ಮಕ್ಕೆ ಹುಟ್ಟಿ ಬಂದು ಶಿವನ ಅರವು ಹಿಡಿಯದೆ ಹೋದರೆ

ಅದು ಒಂದು ಕತ್ತೆಯೆಂದು ತಿಳಿಯಬೇಕು, ಕೆಟ್ಟ ಹೀನನೆಂದು ತಿಳಿಯಬೇಕು ನೋಡಾ। ಹಮ್ಮು ಮಾಡಿ ತಮ್ಮ ಕುತ್ತಿಗೆಯ ತಾವು ಕೊಯ್ದುಕೊಳ್ಳುವರು । ಆತ್ಮಘಾತಕರ ನೆರಳು ಸಹ ಬೀಳಬಾರದು । ಶಿವನ ಬಿಟ್ಟು ಮಾತಾಡುವ ನಷ್ಟ ಜನರ ದುಷ್ಟರ ಸಂಗತಿ ದೂರ ಮಾಡಿ ಇರಬೇಕು ನೋಡಾ ॥೨॥

ಶಿವಶಿವಾ ಎಂಬುವ ಸ್ವಸ್ಮರಣೆ ಅದೇ ನಮ್ಮ ಗುರುಕೊಟ್ಟ ಮುತ್ತಿನ ಭರಣಿ । ಶಿವಶಿವಾ ಎಂಬುವ ಧ್ಯಾನ ಅದೇ ನಮ್ಮ ಗುರು ಕೊಟ್ಟ ಮಾನ । ಆದ್ದರಿಂದ ಗುರು ಕೊಟ್ಟ ಧ್ಯಾನದಲ್ಲಿ ಇದ್ದರೆ ಭವ ಮಾನವು ॥೩॥

ಅದು ಹ್ಯಾಗಂದರೆ, ಈ ಭವದೊಳಗೆ ಹುಟ್ಟಿಬಂದ ಬಳಿಕ ಅಂದಿಗೆ ಇಂದಿಗೆ ಇದ್ದಂಥಾ ಆತ್ಮನು ಆತನೆ ನಮ್ಮ ಕುಲದೈವತ ದೇವನು । ಗುರು ಅನುಗ್ರಹದಿಂದ (ಹಸ್ತದಿಂದ) ದೈವತ ದೇವರನ ನೋಡುತ್ತ ಧ್ಯಾನ ಮಾಡುತ್ತ ಈ ಭವದೊಳಗೆ ಇದ್ದರೆ ಅದೆ ಒಂದು ಮಾನವು ॥೪॥

ಇಲ್ಲದಿದ್ದರೆ ದೈವತ ದೇವರನ ಸಾಧಿಸಿಕೊಳ್ಳದೆ ಇದ್ದರೆ ಅವರಿಗೆ ಮಾನಗೇಡಿ ಎಂಬೆನಯ್ಯಾ । ಯಾಕೆಂದರೆ ಈ ನರಜನ್ಮಕ್ಕೆ ಹುಟ್ಟಿ ಯಾಕೆ ಬಂದಿರುತ್ತದೆ ಇದನ್ನು ತಿಳಿದುಕೊಂಡು ಉತ್ತಮವಾದಂಥಾ ಶಿವಸ್ಮರಣೆ ಹಗಲಿರುಳು ಮಾಡುತ್ತಿರಬೇಕು ಆತ್ಮನ ನೋಡುತ್ತಿರಬೇಕು । ಅಂದರೆ ಅವರೆ ಮಾನವುಳ್ಳವರು ॥೫॥

ಯಾಕೆಂದರೆ ಜಾತಿಯೊಳಗೆ ಹುಟ್ಟಿ ಅಜಾತನಾದವನೆ, ಆತನೆ ದೇವರ ವಂಶಿಕನು ಎಂಬೆನಯ್ಯಾ । ಆದ್ದರಿಂದ ಶಿವಧ್ಯಾನದಲ್ಲಿ ಬಹುಮಾನವದೆ । ಈ ಘೋರ ಭವಸಾಗರ ದಾಟಿಸುವುದು ಶಿವಸ್ಮರಣೆ । ದೊಡ್ಡ ದೊಡ್ಡ ಪ್ಯಾಣ (ಪ್ರಯಾಣ) ದಾಟಿಸಿ ಮಹಾಲಿಂಗನ ರೂಪದಲ್ಲಿ ಕೂಡಿಸಿಬಿಡುವುದು ಶಿವಸ್ಮರಣೆ ॥೬॥

ಆದ್ದರಿಂದ ಆದಷ್ಟು ಮಟ್ಟಿಗೆ ಗುರು ಅನುಗ್ರಹ ಹಸ್ತದಿಂದ ಶಿವಸ್ಮರಣೆ ಮನದಲ್ಲಿ ಮರೆಯದೆ ಮಾಡುತ್ತಿರಬೇಕಲ್ಲಾ ಹೊರತು ವ್ಯರ್ಥಕಾಲ ಕಳಿಯಬಾರದು। ಆದ್ದರಿಂದ ಶಿವನ ಸಾಧಿಸಿಕೊಂಡು ತಿರುಗಿ ಬಾರದೆ ಝುಳಿಝುಳಿತನಾಗಿ ಹೋಗಬೇಕು ನೋಡಾ ॥೭॥

ಅಂದರೆ ನರಜನ್ಮ ಹುಟ್ಟಿ ಬಂದದ್ದು ಫಲವಾಯಿತು । ಆದ್ದರಿಂದ ಶರೀರ ಸಂಪತ್ತಿ ಇರುವುದರಲ್ಲಿ ಶಿವಸಂಪತ್ತಿ ಮಾಡಿಕೊಳ್ಳಬೇಕು । ಅಂದರೆ ತನಗೆ ಮುಂದಿನ ಮಾರ್ಗವು ಹಸನಾಗಿ ಇರುತ್ತದೆ । ಈ ಮಾತುಗಳ ಅವಹೇಳನ ಮಾಡಿದರೆ ನಿಮ್ಮ ಕುತ್ತಿಗೆ ನೀವೇ ಕೊಯ್ದುಕೊಂಡಂತೆ ಆಯಿತು ॥೮॥

ಎಷ್ಟೋ ಧಕ್ಕೆಪೆಟ್ಟುಗಳು ಸೋಸಬೇಕಾಗುತ್ತದೆ । ಶಿವಶಿವಾ ಎಂದು ಸ್ಥಿರ

ಮುಕ್ತರಾಗಿರಿ । ಅದರಿಂದ ನಿಮಗೆ ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಸುಖವಾಯಿತು । ಮಹಾಘೋರ ದೂರವಾಯಿತು । ಶಿವಶಿವಾ ಎಂಬ ಸಂಪತ್ತಿನ ತೊಟ್ಟಿಲವು ತೂಗುತ್ತಿರಬೇಕು । ಅಂದರೆ ಪ್ರಪಂಚದಲ್ಲಿ ಮತ್ತು ಪರಮಾರ್ಥದಲ್ಲಿ ಆನಂದವಾಗಿ ಇರುತ್ತದೆ । ಇದಕ್ಕೆ ಎಳ್ಳಷ್ಟೂ ಸಂದೇಹವಿಲ್ಲ । ಶಿವಮಂತ್ರ ಜಪಿಸಿರಿ । ಮೋಲವಿಲ್ಲದ ವಾಕ್ಯವಿದು । ಶಿವಶಿವಾ ಎಂಬುವ ಮಂತ್ರ ॥೯॥

ಗುರುಕೊಟ್ಟ ವಾಕ್ಯ ಮಹಾವಾಕ್ಯ ಶಿವಮಂತ್ರ ಆದರದಿಂದ ಹೆಜ್ಜೆಹೆಜ್ಜೆಗೆ ಅರಿವಿನಲ್ಲಿ ಮರೆಯದೆ ಮಾಡುತ್ತಿರಬೇಕು ಅಂದರೆ ಆತ್ಮನ ಆಜ್ಞೆಯಂತೆ ಆಯಿತು ನೋಡಾ। ಆದ್ದರಿಂದ ಆತ್ಮನ ಕಾಯಿದೆ ಹ್ಯಾಂಗದೆ ಹಾಗೆ ನಡಿಯಬೇಕಲ್ಲಾ ಹೊರತು ಅನ್ಯಾಯದಿಂದ ನಡೆಯಬಾರದು । ಅದು ಹ್ಯಾಗಂದರೆ ತನ್ನ ಅಂತರಂಗದಲ್ಲಿಯ ಸೂಕ್ಷ್ಮನಾಮ ಮತ್ತು ತನ್ನ ನೇತ್ರದಲ್ಲಿ ಇರುವಂಥಾ ಅಕ್ಷಯ ಠೇವಣಿಯು ತನ್ನ ಬಿಟ್ಟು ಹೋಗದಂಥಾ ವಸ್ತು ॥೧೦॥

ಆದ್ದರಿಂದ ಈ ವಿಷಯದ ಗುಣಗಳು ಬಿಟ್ಟು ನಿರ್ವಿಷಯದಿಂದೆ ಝಳಝಳಿತ ನಿರ್ಮಳವಾದಂಥಾ ಶಿವಶಿವಾ ಎಂದು ಶಿವಮಂತ್ರದಿಂದೆ ಸಾಧಿಸಿಕೊಂಡು ಇದ್ದರೆ ನ್ಯಾಯವಾಯಿತು । ಇಲ್ಲದಿದ್ದರೆ ಅನ್ಯಾಯವು ಆಯಿತು ॥೧೧॥

ತೋರಬಾರದಂಥಾ ವಸ್ತು ತೋರಿದ ಗುರುವಿನ ಮರೆಯಬಾರದು। ಶಿವನ ಮರೆಯಲಾರೆನು ಹರನ ಮರೆಯಲಾರೆನು । ಈ ಹಂದರದ ಮನೆಗೆ ಬಂದ ಬಳಿಕ ಈ ಮನೆಯಲ್ಲಿ ಇರುವ ಮಾಲೀಕನ ಖೂನ ಹಿಡಿಯದೆ ಹೋದರೆ ಬಹಳ ಅನ್ಯಾಯವು, ಹೇಳಲಾಗದು । ಶಿವಶಿವಾ ನಿನ್ನ ನಗರಕ್ಕೆ ಬಂದು ನಿನ್ನ ಸ್ಮರಣೆಯ ಮಾಡಿ ನಿನ್ನ ರೂಪದೊಳು ಕೂಡಿಕೊಂಡು ಹೋದರೆ ನಿನ್ನ ನಗರಕ್ಕೆ ಬಂದದ್ದು ಫಲವಾಯಿತು ॥೧೨॥

ಈ ಔಟಕೋಟಿ ನಗರಕ್ಕೆ ಬಂದು ನಾನಾತರದ ಪದಾರ್ಥಗಳನ್ನು ತಿಳಿದು, ಅವುಗಳನ್ನು ಆತ್ಮನ ಕಾರ್ಯಕ್ಕೆ ಹಚ್ಚಿ ಇಡಬೇಕು । ಅಂದರೆ ಅವು ಉತ್ತಮವಾದಂಥ ಬಂಧನದಲ್ಲಿರುತ್ತವೆ ॥೧೩॥

ಆದ್ದರಿಂದ ಗುರು ಅನುಗ್ರಹದಿಂದ ಪಂಚೀಕರಣ ಶಿವಮಂತ್ರ ತನ್ನ ಅಂತರದಲ್ಲಿ ಸಹಜವಾಗಿ ನಡಿಯಬೇಕು । ಅಂದರೆ ಮತ್ತೊಂದು ಯಾವುದೂ ಬಯಸುವದಿಲ್ಲ । ಆದ್ದರಿಂದ ಆತ್ಮನ ಅನುಕೂಲದಿಂದೆ ದೇಹವು ನಡೆದರೆ ಈ ಔಟಕೋಟಿ ನಗರಕ್ಕೆ ಧಕ್ಕೆ ಇಲ್ಲ ನೋಡಾ ॥೧೪॥

ಆದ್ದರಿಂದ ಗುರುವಿನ ವರದಿಂದ ವರದೀ ಪುರುಷನ ನೋಡಿ ಆನಂದದಿಂದ ಆತನ ಕೂಡಿ ಭವನೀಗಬೇಕು ನೋಡಾ । ಆದರದಿಂದ ಆತ್ಮನ ನೋಡಿರಿ । ಈ

ನರಜನ್ಮ ನಮ್ಮ ಗುರುನಾಥನು ಪರಿಹರಿಸಿದಾ। ಪರಮಾತ್ಮನ ಪಾದತೋರಿಸಿ ಪರಿಪರಿ ರೂಪದೊಳಗ ಕೂಡಿಸಿ ಬಿಟ್ಟಾ ॥೧೫॥

ಆದ್ದರಿಂದ ಹರಬಲದಕಿಂತಲೂ ಗುರುಬಲವು ದೊಡ್ಡದು । ಸಕಲ ಸಂಪತ್ತು ಕೊಟ್ಟು ಆನಂದದಿಂದ ತಮ್ಮ ಐಶ್ವರ್ಯದೊಳಗೆ ಇಡುವುದು । ಮೂಲಮಂತ್ರವು ಜಪಿಸಿ ನೇಮದಿಂದ ಸಾಧನ ಮಾಡುತ್ತಿರಬೇಕು ನೋಡಾ ॥೧೬॥

ಈ ವಚನದ ಅನುಭವ ಮಾಡಿಕೊಂಡು ಸಚ್ಚೈಲ ಜಳಕವ ಮಾಡಿ ಸುಚಿತ್ತವಾದಂಥಾ ವಸ್ತುವ ನೋಡುತ್ತಿರಬೇಕು। ಅಂದರೆ ಈ ಮನಸು ಮಡಿ ಆಗಿ ಇರುತ್ತದೆ ನೋಡಾ॥೧೭॥

ಮನಸಿನ ಮನಿಯು ಕಣ್ಣು। ಆ ಕಣ್ಣಿನೊಳಗೆ ಆತ್ಮನ ರೂಪ ನೋಡುತ್ತಿರಬೇಕು। ಅಂದರೆ ಆ ಕಣ್ಣು ಮಡಿಯು ಆಗಿ ಇರುತ್ತದೆ । ಮನದಲ್ಲಿ ಮನ ಇಟ್ಟು, ಮನದ ಬೆಂಕಿಯ ಸುಟ್ಟು, ಮಹಾವಾಕ್ಯ ನಮ್ಮ ಗುರುಕೊಟ್ಟ ಶಿವಮಂತ್ರ ಮನದಲ್ಲಿ ಶಿವಶಿವಾ ಎನ್ನುತ್ತಿರಬೇಕು । ಅಂದರೆ ಈ ಮನಸು ಮಡಿ ಆಗಿ ಇರುತ್ತದೆ ನೋಡಾ ॥೮॥

ಗುರುವಚನ ನವರತ್ನ ಶಿರೋಮಣಿ । ಅಂದರೆ ಗುರು ಅನುಗ್ರಹ ಹಸ್ತದಿಂದ ಶಿವಮಂತ್ರ ಶರೀರದಲ್ಲಿ ಬೆರೆಸಿ, ಸರ್ವಾಂಗದೊಳು ಹೊಕ್ಕು ಅಡ್ಯಾಡಿ ಪಕ್ಕಾ ಆದ ಬಳಿಕ ಭವದಂಜಿಕೆ ಆತಗೇನು । ಶಿವಶಿವಾ ಎಂದು ಶಿವರೂಪದಲ್ಲಿ ಕೂಡಿದಾತನೆ ಶಿರೋಮಣಿ ನೋಡಾ ॥೧೯॥

ಒಂಭತ್ತು ಸೋಪಾನಗಳ ಏರಿ ಎರಡು ಶಿಖರದಲ್ಲಿ ನಿಲ್ಲಿಸಿ ನೋಡಿದರೆ ಅಲ್ಲೆ ಆಹಾರಗಳು । ಆನಂದ ಆತ್ಮನ ಕಂಡು ಬೆರಗಾದೆನು ನೋಡಾ । ರಾಜಯೋಗವ ಮಾಡಿ, ಸುಖ ಭೋಗದೊಳಗೆ ಆಡಿ ನೀಗಿದೆ ಭವಧಾಡಿ ನೋಡಾ ॥೨೦॥

ಶಿವಶಿವಾ ನಿಮ್ಮನ್ನು ಹೊರತು ಅನ್ಯವ ಬಯಸಿದರೆ ಇನ್ನು ಯಾವ ಜನ್ಮಕ್ಕೆ ಪೋಗುವೆನು ನೋಡಾ। ನರಜನ್ಮದಲ್ಲಿ ಹುಟ್ಟಿಬಂದು, ಪರಮಾತ್ಮನ ಅರವು ಹಿಡಿಯದೆ ಹೋದರೆ ಈ ನರಜನ್ಮ ಘಾತವಾಯಿತು ನೋಡಾ ॥೨೧॥

ಆದ್ದರಿಂದ ಬಲು ಜಾಣನಾಗಿ ಹುಶಾರಿಯಿಂದ ಬಾಳುವೆ ಮಾಡುತ್ತಿರಬೇಕು ನೋಡಾ। ಅಂದರೆ ಪರಮಾತ್ಮನು ತನ್ನ ಬಿಟ್ಟು ಅವನಿಲ್ಲ ಅವನ ಬಿಟ್ಟು ತಾನಿಲ್ಲ ನೋಡಾ । ಜೀವಾ ಶಿವಾ ಎರಡು ಒಂದಾದ ಬಳಿಕ ನಂದ ಜ್ಯೋತಿಗೆ ಕರ್ಪುರ ಬೆಳಕಿನ ಬೆಳಕ ನೋಡದಂತೆ ನೋಡಾ ॥೨೨॥

ನಮ್ಮ ಗುರುವಿನ ನಾಮದ ಮಹಿಮಾ ವರ್ಣಿಸಲಾಗದು । ಶಿವಶಿವಾ ನಿನ್ನ ನಾಮವು ಎನಗೆ ತ್ರಿಕಾಲ ನೇಮವು ನೋಡಾ। ನಿನ್ನ ಅಂಶಕ ನಾನು ಎನ್ನ ರಕ್ಷಕ ನೀನು ನೋಡಾ ॥೨೩॥

ಗುರುವೆ ನಿನ್ನ ಆಶ್ರಯವು ಎನಗೆ ಛತ್ತರಗಿ ನೆರಳು । ಗುರುವೆ ನೀ ಕೊಟ್ಟ ಛತ್ತರಗಿ ನೆರಳಿನಲ್ಲಿ ಪರಿಪರಿಯ ಐಶ್ವರ್ಯ ಪಡಿಯುತ್ತಿದ್ದೆನು ನೋಡಾ ॥೨೪॥

ನಿರಾಕಾರ ನೀನು ಆಕಾರ ನಾನು । ಅಂತಪಾರ ನಿಮಗೆ ಇಲ್ಲಾ । ಚಿಂತಿ ಘೋರ ಎನಗಿಲ್ಲ ನೋಡಾ । ಅದು ಹ್ಯಾಗೆಂದರೆ, ಅಂತ ಪಾರವಿಲ್ಲದೆ ಇಂಥಾ ಆತ್ಮನ ಸಾಧಿಸಿ ಕೊಂಡದ್ದರಿಂದ ಹುಟ್ಟುವುದು ಸಾಯುವುದು ಹುಟ್ಟು ಮುರಿದು ಬಿಟ್ಟ ನೋಡಾ ನಮ್ಮ ಗುರುವು ॥೨೫॥

ಇತಿ ಶ್ರೀಮತ್ ಪರಮಾನಂದ ಪವಿತ್ರವಾದ
ನಮ್ಮ ಗುರುವಿನ ಶಿವಸೂತ್ರ ಪಠಣ ಮಾಡಿದ ಫಲವು ನೋಡಾ॥

ಶ್ರೀ ಸದ್ಗುರು ಸಮರ್ಥ

**ಶ್ರೀಗುರು ಉಪಕೃತಿ :**

ಶ್ರೀ ಗಣೇಶಾಯ ನಮಃ । ಆದುದರಿಂದ ಶ್ರೀಗುರು ಮಾಡಿದ ಉಪಕೃತಿಯನ್ನು ಏನು ಮಾಡಿದರೂ ತೀರದು ನೋಡಾ । ಎನ್ನ ಶಿರಕೊಯ್ದು ಅದು ಗುರುವೆ ನಿಮ್ಮ ಪಾದಕ್ಕೆ ಇಟ್ಟು ಶರಣು ಮಾಡಿದರೆ ನಿಮ್ಮ ಉಪಕಾರ ತೀರದು ನೋಡಾ ॥೧॥

ನಿನ್ನ ಉಪಕಾರಕ್ಕೆ ಯಾವುದು ಸರಿಯಲ್ಲಾ । ಗುರುವೆ ನೀ ನನ್ನ ತಂದೆ, ನೀ ನನ್ನ ತಾಯಿ, ನೀ ನನ್ನ ಬಂಧು ಬಳಗ, ನೀ ನನ್ನ ಸಕಲ ಸಂಪತ್ತು ನೋಡಾ । ನೀ ಎನಗೆ ಮೇರುಗಿರಿಯ ಪರ್ವತ ಶ್ರೀಶೈಲ ಮಲ್ಲಿಕಾರ್ಜುನ ನೋಡಾ ॥೨॥

ನೀ ಎನಗೆ ಕಾಶೀ ಈಶ್ವರನು । ನೀ ಎನಗೆ ರಾಮೇಶ್ವರ ರಾಮಲಿಂಗನು । ನೀ ಎನಗೆ ಸರ್ವ ಕ್ಷೇತ್ರಯಾತ್ರೆಗಳು ನೋಡಾ ಗುರುವೆ ॥೩॥

ನಿನ್ನ ಪಾದದಲ್ಲಿ ದೇವದೇವತೆಗಳು ಜಪತಪವು ಮಾಡುತಿರ್ಪರು ನೋಡಾ। ನಿನ್ನ ದರ್ಶನದಿಂದ ಇನ್ನು ಎಷ್ಟು ಲಾಭವು । ಸರ್ವಕ್ಷೇತ್ರಗಳ ಪವಿತ್ರ ಮಾಡಿದ ಪಾದವು ನೋಡಾ ॥೪॥

ನಿನ್ನನ್ನು ಒಲಿಸಿಕೊಂಡರೆ ಇನ್ನು ಎಷ್ಟು ಸುಖವು । ನಿನ್ನನ್ನು ಅರಿಯದಿದ್ದರೆ ಇನ್ನು ಎಷ್ಟು ದುಃಖವು । ನೀನು ಒಲಿದರೆ ಮೂರು ಲೋಕೆಲ್ಲಾ ಮುಕ್ತವಾಗಿ ಒಲಿಯುವವು ನೋಡಾ ಗುರುವೆ ॥೫॥

ಆದ್ದರಿಂದ ನಾ ಹೋಗಿ ನಿನ್ನ ಕೀರ್ತಿ, ಭಕ್ತಿ ದಿಗಂತದಲ್ಲಿ ಸುತ್ತಿ ಸಾರಲಿ । ಗುರುವೆ ನಿನ್ನ ನಾಮಾಮೃತ ಬಳ್ಳಿ ಪೃಥ್ವಿಗೆಲ್ಲಾ ಹಬ್ಬಲಿ, ಹೆಚ್ಚಾಗಿ ಉಳಿಯಲಿ ನೋಡಾ ಗುರುವೆ॥೬॥

ಗುರು ಐಶ್ವರ್ಯ ಬಳ್ಳಿ ನರರೇನು ಬಲ್ಲರು । ನಿಮ್ಮ ಪಾದದಲ್ಲಿ ಚನ್ನಾಗಿ ಅನನ್ಯ

ಭಾವದಿಂದ ಶರಣು ಮಾಡಿ, ಕರಣ ಪ್ರಸಾದ ಕೈಕೊಂಡು ನರ ನೀಗಿದಾತನೆ ಬಲ್ಲ ನೋಡಾ ॥೭॥

ಆತ ನರನಲ್ಲ ನಾರಾಯಣ ಸ್ವರೂಪನು । ಜಾತಿಯೊಳಗೆ ಪುಟ್ಟಿ ಅಜಾತನಾದವನು। ಆತನೇ ಜಗದುದ್ಧಾರಕ ಸದ್ವಸ್ತು ನೋಡಾ ॥೮॥

ಆದುದರಿಂದ ಗುರುನಾಥನ ಆಧಾರಕ್ಕೆ ಅಂತಪಾರವಿಲ್ಲ ಅದು ಹ್ಯಾಗೆಂದರೆ, ನಾನು ಯಾರಾಗಿ ಹೋಗುವೆನು, ಯಾರಾಗಿ ಇರುವೆನು ಯಾರಾಗಿ ಬರುವೆನು । ಇಂಥಾ ದುಃಖದ ಸಾಗರ ಎಲ್ಲಾ ಕಿತ್ತಿ ಈಡ್ಯಾಡಿ ಝಳಝಳಿತ ಮಾಡಿ ಅಳಕಿಸಿ ಬಿಟ್ಟ ನೋಡಾ ॥೯॥

ಮನವ ಝಳಝಳಿತ ಮಾಡಿ, ತನ್ನ ಬೆಳಕಿನಲ್ಲಿ ಎನ್ನ ಬೆರಿಸಿಕೊಂಡಾ ಗುರುವೆ, ತನ್ನ ರೂಪದೊಳಗೆ ಎನ್ನ ಕೂಡಿಸಿಕೊಂಡಾ ಗುರುವೆ, ತನ್ನ ನೇಮ ನಾಮದೊಳಗೆ ಎನ್ನ ಲುಬ್ಧ ಮಾಡಿದಾ ಗುರುವೆ, ಸಾಕ್ಷಾತ್ ಸರ್ವೇಶ್ವರನ ತೋರಿ, ಆ ಕ್ಷಣಕ್ಕೆ ಬಯಲಾಗಿ, ಕೈಲಾಸದಲ್ಲಿ ನಿಲಿಸಿಬಿಟ್ಟ ನೋಡಾ ॥೧೦॥

ನಮ್ಮ ಗುರುದೇವರ ಸೇವಾ ಎನಗೆ ನಿರಂತರದಲ್ಲಿ ನಿಜವಾಗಿ ಘಡಸಲಿ । ನಿಮ್ಮ ಪಾದದ ನ್ಯಾಸ ಧ್ಯಾಸದ ಎನಗೆ ಸುಖಫಲವು ನೋಡಾ ॥೧೧॥

ಗುರುವೆ ನಿಮ್ಮ ಪಾದಪೂಜೆಯು ಆನಂದದಿಂದ ಮಾಡುವೆ । ಅದು ಹ್ಯಾಂಗಂದರೆ ಮಮ (ಮನ)ವೆಂಬು ಬಾವಿಗೆ ಹೋಗಿ ಸಪ್ರೇಮವೆಂಬುವ ತೀರ್ಥವ ತಂದು ನಿಮ್ಮ ಪಾದಕ್ಕೆ ಪೊಂದಿ ಸರ್ವ ಎಲ್ಲಾ ಅರ್ಪಿಸಿ ಕರ್ಪುರಾ, ದೀಪ ಧೂಪಗಳು ಅರ್ತಿಯಿಂದ ಬೆಳಗಿತು ನೋಡಾ ॥೧೨॥

ಇಂಥಾ ಸುಗಂಧ ಸುವಾಸಿಕ ಪೂಜೆ ಯೋಗದೊಳಗೆ ಆಗಿ (ಮಾಡಿ) ನೋಡಿ ಅಗಾಧವಾದೆನು ನೋಡಾ । ಏನೂ ಇಲ್ಲದ ಪೂಜೆ, ಏನು ಬೇಕಾದ್ದು ಪೂಜಿ ತನ್ನೊಳಗೆ ತಾನಾಗಿ ಮನತುಂಬಿ ಮರವಾಗಿ, ಕಿವಿತುಂಬಿ ನಾದಾಗಿ, ಕಣ್ಣು ತುಂಬಿ ಬೆಳಕಾಗಿ, ಇಂತು ಅಪ್ಪಯ್ಯನ ಪೂಜಿ ಸಂತೋಷದಿಂದ ಆಗುವುದು ನೋಡಾ ॥೧೩–೧೪॥

ವಚನ

ಶ್ರೀ ಸಮರ್ಥ ಸದ್ಗುರುನಾಥ ಮಹಾರಾಜ ನಿಮ್ಮ ಪಾದಕ್ಕೆ ತ್ರಿಕಾಲ ದಂಡವತ ನಮಸ್ಕಾರವನು ಮಾಡುತ ಇದ್ದೇನೆ. ಅಯ್ಯಾ ಗುರುವೆ ನಿಮ್ಮ ಪಾದಕ್ಕೆ ಸಾಷ್ಟಾಂಗ ಭಾವದಲ್ಲಿ ಸತ್ಯ ಸ್ವರೂಪದಲ್ಲಿ ನಿತ್ಯಕಾಲದಲ್ಲಿ ತಪ್ಪದೆ ನಿಮ್ಮ ಪಾದಕ್ಕೆ ಶರಣವಯ್ಯಾ। ಗುರುವೆ । ನಿಮ್ಮ ಆಶ್ರಯವು ಛತ್ತರಗಿ ನೆರಳಯ್ಯಾ ಗುರುವೆ । ನಿಮ್ಮ ಆಶ್ರಮವು ಅಮೃತ, ಕೊಡವಯ್ಯಾ ಗುರುವೆ; ನಿಮ್ಮ ಆಶ್ರಯವು ಆನೆಯ ಮೇಲಿನ ಥಾಲವಯ್ಯಾ.

## ೪
## ಪದಗಳು

### ೧. ಎಂಥಾ ಲೀಲಾ ಮಾಡಿದರಯ್ಯಾ

ಎಂಥಾ ಲೀಲಾ ಮಾಡಿದರೈಯ್ಯಾ।
ಆ ರಾಜಯೋಗಿನ ಹ್ಯಾಂಗ ಮರೆತು ಇರಲಿ ಹೇಳಯ್ಯಾ ॥ಪ॥

ಹ್ಯಾಂಗ ಮರೆತು ಇರಲಿ ಹೇಳೋ। ಮರತ (ಮೂಲ) ಮಂತ್ರಾ ಕರದ ಕೊಟ್ಟಾ
ಮೋಲವಿಲ್ಲದ ಮಾತ ಹೇಳಿ। ಮೃತ್ಯುಲೋಕಾ ಗೆಲಿಸಿದನಯ್ಯಾ ॥೧॥

ವೇದಶಾಸ್ತ್ರ ಸಾಧ್ಯವಿಲ್ಲಯ್ಯಾ। ಆ ವಸ್ತು
ಗುರುವಿನ ಹೃದಯದಲ್ಲಿ ವಸ್ತಿ ಅದಯ್ಯಾ।
ಹಸ್ತ (ಹಸಿದು) ಹೋದರ ಹಸ್ತ ಇಟ್ಟಾ। ಜತ್ತನಾಗಿ ಜ್ವಾಕಿ ಅಂದಾ
ಸಾಕ್ಷಿರೂಪಾ ತೋರಿ ಎನಗೆ। ಮೋಕ್ಷ ಕೊಟ್ಟು ಪೋದರಯ್ಯಾ ॥೨॥

ಮೂಡು ದಿಕ್ಕ ಹೊಕ್ಕು ನೋಡಯ್ಯಾ।
ಆ ದಿಕ್ಕಿನಲಿ ಹೊಕ್ಕು। ಪಕ್ವ ಫಲವ ಕಾಣಬೇಕಯ್ಯಾ।
ಹಣ್ಣಾದ ಬಣ್ಣ ಬ್ಯಾರೆ ಅಣ್ಣಗಳಿರಾ ಕೇಳಿರಯ್ಯಾ
ಗುರು ಮಾಡಿದ ಗುಪ್ತಲೀಲಾ। ಸಪ್ತ ಜನರು ತಿಳಿಯಿರಯ್ಯಾ ॥೩॥

ಎಂಥ ಕಳಸಾ ಇಟ್ಟ ನೋಡಯ್ಯಾ। ಯಾರ ಯಾರಿಗೂ
ತಿಳಿಯಗೊಡದೆ ಬೆಳೆಸಿ ಬಿಟ್ಟಯ್ಯಾ। ಗುಡಿಯ
ನೋಡಿ ಗುಡಿಯ ಕಟ್ಟಿ। ಗುಡಿಯ ಒಳಗಿನ ಲಿಂಗ ಮುಟ್ಟಿ
ಲಿಂಗದೊಳಗ ಐಕ್ಯನಾಗಿ। ಜಂಗಮನೆನಿಸಿಕೊಂಡನಯ್ಯಾ ॥೪॥

ಏನು ಅನುಭವದಾಟ ನೋಡಯ್ಯಾ। ಆಧಾರದೊಳು।
ಬಲಿಸಿ ನಾಮ ಗೆಲಿಸಿ ಬಿಟ್ಟರಯ್ಯಾ।
ಆಗ ಮಾಡಿದ ಯೋಗದೈಶಿರಿ। ಈಗ ಇಲ್ಲೇ ನೋಡಿರಯ್ಯಾ।
ಏನು ಹೇಳಲಿ ಗುರುಕೀಲಾ (ಲೀಲಾ) ದೇವರೂಪನೆ ಆದರಲ್ಲಾ ॥೫॥

ತನ್ನ ತಾನೇ ಸಾಕ್ಷಿ ನೋಡಯ್ಯಾ। ತನ್ನಲ್ಲಿ ತಿಳಿದು।
ಭಿನ್ನ ಭೇದವ ಅಳಿಸಿ ಬಿಟ್ಟಯ್ಯಾ।

ಹುಟ್ಟಿ ಬಂದೆ ಇಲ್ಲ ದೇವಾ । ಬಂದು ಸತ್ತೆ ಇಲ್ಲ ದೇವಾ ।
ನಿತ್ಯ ನಿತ್ಯ ತಪ್ಪಗೊಡದೆ । ಒಪ್ಪಿ ಆತನ ಭಜಿಸಿರಯ್ಯಾ ॥೬॥

ಗುರುನಾಥನ ಬಿರುದು ನೋಡಯ್ಯಾ । ಈ ಕಾಲದಲ್ಲಿ
ಇಂಚಗೇರಿ ಪುಣ್ಯ ಜೋರಯ್ಯಾ । ಲೆಕ್ಕವಿಲ್ಲದ ಲಕ್ಷ ಜ್ಯೋತಿ
ಎತ್ತ ನೋಡಲು ಅತ್ತ ಬೆಳಗಿ । ಮತ್ತ ಉಮದೀ
ಸತ್ಯಗುರು ಮಾಡಿದಾಟಾ ನೋಡಿರಯ್ಯಾ ॥೭॥

**೨. ಏನೇನು ತಿಳಿಯುವುದಿಲ್ಲ**

ಏನೇನು ತಿಳಿಯುವುದಿಲ್ಲಾ । ಈ ಸಕಲ ಲೋಕಕ್ಕೆಲ್ಲಾ ।
ಗುರುವೆ ನೀನೆ ಅನುಕೂಲಾ ॥ಪ॥

ಸಂಸಾರ ಅಘಟಿತ ಮಾಯಾ ।
ಇದರೊಳು ಹಿಡಿಯಬೇಕು ನೀ ಎನ್ನ ಕೈಯಾ ॥೧॥

ಭಕ್ತಿ ನೀತಿ ಎರಡೂ ಇಲ್ಲಾ ।
ಶುದ್ಧ ಶ್ವಾನನಂತೆ ತಿಂದು ತಿರುಗುವೆನಲ್ಲಾ ॥೨॥

ಆಶೆ ಅಂಬೋದು ಅಳಿದೇ ಇಲ್ಲಾ ।
ನಾಮ ಘೋಷ ಎನ್ನಲ್ಲಿ ಒಂದು ನಿಜವಾಗಿಲ್ಲಾ ॥೩॥

ಚಿಂತೆ ಅಂಬೋದು ಅಳದೇ ಇಲ್ಲಾ ।
ನಿನ್ನ ಸಂತೋಷ ಎನ್ನಲ್ಲಿ ಒಂದು ಘನವಾಗಿಲ್ಲಾ ॥೪॥

ಭಕ್ತಿ ಭಾವ ಎರಡೂ ಇಲ್ಲಾ ।
ಒಣ ಸಂತಾಪಿಲಿ ಬಿದ್ದು ಬಳಲುವೆನಲ್ಲಾ ॥೫॥

ಇಂಚಗೇರಿ ಪುಣ್ಯಭೂಮಿ । ಗುರುಲಿಂಗ ಜಂಗಮ ಉಮದೀ
ಸದ್ಗುರು ಎನ್ನ ಕುಲಸ್ವಾಮಿ ॥೬॥

**೩. ಬಾ ಗುರುರಾಯಾ ಭಕ್ತರ ನಿರ್ಮಾಯಾ**

ಬಾ ಗುರುರಾಯಾ ಭಕ್ತರ ನಿರ್ಮಾಯಾ । ಭಕ್ತರ ನಿರ್ಮಾಯಾ
ಗುರು ಪಾದಕ ಈ ಕಾಯಾ ॥ಪ॥

ದೀನ ನಾನು ಕರುಣಾ ನೀನು । ಕೃಪಾ ಮಾಡು ಎನಗ
ಸರ್ವಸಂಗ ತ್ಯಾಗ ಮಾಡಿ । ಶರಣ ಬಂದೆ ನಿನಗ ॥೧॥

ಪಾಪಗೇಡಿ ದೋಷಗೇಡಿ । ಧ್ಯಾನ ಮಾಡುವೆ ನಿನ್ನ ॥
ದೋಷಗುಣಗಳು ನೋಡದೆ । ಎನ್ನ ಮಾಡೊ ಪಾವನ ॥೨॥

ಕೂಡಿ ಹೋದಮೇಲೆ ಪುನಃ । ಕೂಡಬಲ್ಲದೇನೊ ॥
ಮಾಡಿ ನೋಡಿದಂಥ ವಸ್ತು । ಬಿಟ್ಟು ಹೋಗುವದೇನೊ ॥೩॥

ಭಾವ ನೋಡಿ ಬಂದು ನಿಂತಿ । ಭಕ್ತರ ಕೈವಾರಿ ನೀ ॥
ಸಕಲ (ಸಂಪತ) ಕೊಟ್ಟು ಸಂತೋಷ ಮಾಡಿದಂಥ ಗುರು ನೀ ॥೪॥

ಗುರು ತಾರಿ ಗುರು ಶಿರಿ ಗುರು ಎನಗೆ ಐಶಿರಿ। ಭಾವುರಾಯರ
ಭಾಗ್ಯ ನಮಗ ನಿರಂತರ ಇರಲಿರಿ ॥೫॥

### ೪. ನಿನ್ನ ಸ್ಮರಣೆ ಮಾಡೇನು ಮರಿಯದೆ

ನಿನ್ನ ಸ್ಮರಣಿ ಮಾಡೇನು ಮರೆಯದೆ ।
ನಿನ್ನ ರೂಪ ನೋಡೇನು ಯೋಗ ಮಾಡಿ ॥
ನಿನ್ನ ನಾಮ ಅಂತರದೊಳಗ ಪ್ರೇಮದಿಂದ ಆದೇನು ಆರಾಮ ॥೧॥

ಎಲ್ಲಿ ನೋಡಿದಲ್ಲೆ ನಿನ್ನ ಮೂರ್ತಿ ।
ತುಂಬಿ ತುಳುಕತದ ಜಗತ್ಪತಿ ॥೨॥

ಸಣ್ಣ ದೊಡ್ಡವರನ ಸಲಹುವಂಥ ದಾತಾ ।
ಮೂಲ ಪೀಠದೊಳಗಿನ ಖೂನ ಹಿಡದ ಮುಕ್ತಾ ॥೩॥

ನೀನೆ ಬಂಧು ಬಳಗ ತಾಯಿ ತಂದಿ ।
ನಿನ್ನ ಹೊರತು ಇಲ್ಲಾ ಯಾರು ಮಂದಿ ॥೪॥

ಬೇಡಿದ ವರವ ಕೊಟ್ಟಿ ಗುರುನಾಥಾ ।
ನಿನ್ನ ಕೃಪಾ ಎನಗ ಅಗಣಿತಾ ॥೫॥

ದೇಶದೊಳಗ ಉಮದೀ ಗುರುನಾಥಾ ।
ಭಕ್ತಿ ಮಾಡಿ ಆದರು ಪ್ರಖ್ಯಾತಾ ॥೬॥

### ೫. ಗುರುವಿನ ಪಾದಕ ಹೊಂದೇನ

ಗುರುವಿನ ಪಾದಕ ಹೊಂದೇನ ಹೋಗಿ ।
ಜನ್ಮ ಮುಕ್ತಾ ಮಾಡಿದಾನ ಯೋಗಿ ॥೧॥

ಎಷ್ಟೋ ಜನ್ಮದ ಪುಣ್ಯಾ ಎನಗ ಒದಗಿ ।
ಇಂಥಾ ಸದ್ಗುರು ಸಿಕ್ಕಾ ಶಿವಯೋಗಿ ॥೨॥

ಗುರು ಕಾಶೀಕ್ಷೇತ್ರವಾಸಿ ।
ರಾಮಲಿಂಗ ಸಮ ತೋರಿಸಿ ॥೩॥

ನರರಿಗೆ ನರಕಾಂತಿ ಪೋಷಿ ।
ಬಂದು ನಿಂತಾ ಭಕ್ತರ ವಾಸಿ ॥೪॥

ಸರ್ವ ಸಂಗಮವವರಿಗೆ ದಾಸಿ ।
ಪ್ರಾರ್ಥನಾ ಮಾಡಿರಿ ಕೈಯ ಜೋಡಿಸಿ ॥೫॥

ಗುರು ಭಾಗ್ಯರತ್ನಮಣಿ ।
ಅವರ ಪಾದದ ಸೇವಕ ಜಾಣಿ ॥೬॥

ಗುರು ದೇವ ಎನಗ ಆಭರಣ ।
ಮುತ್ತಿನ ಮೂಗುತಿ ರತ್ನದ ಕಿರಣ ॥೭॥

ಗುರು ಆನಂದ ಮೂರುತಿ ಆಗರ ।
ಪಾರ ಮಾಡಿದ ಭವಸಾಗರ ॥೮॥

ಕ್ಷೇತ್ರದೊಳಗ ದೊಡ್ಡ ಕ್ಷೇತ್ರ ।
ಇಂಚಗೇರಿ ಆದೀತು ಸತ್ಪಾತ್ರಾ ॥೯॥

ಉಮದೀ ಗುರುದೇವರ ಯಾತ್ರಾ ।
ನಾ ಹೋಗಿ (ನಾ ನೋಡಿ) ಅದೇನ ಪವಿತ್ರ ॥೧೦॥

೬. ಸದ್ಗುರು ಸಮಾನ ನನಗ ಇಲ್ಲ

ಸದ್ಗುರು ಸಮಾನ ನನಗ ಇಲ್ಲ ಏನ (ಇನ್ನೂ) ।
ಈ ಭವ ಬಾಧಿಯ ಕಡಿಸಿ ಬಿಟ್ಟಾ ॥ಪ॥

ತನ್ನ ಸುಖವ ಎನಗ ತೋರಿಸಿದಾನ ಈಗ ।
ಜ್ಞಾನದಿಂದ ನೋಡ ನಾಮರೂಪಾನ ॥೧॥

ಕಣ್ಣಿನೊಳಗ ಕಣ್ಣ ತೋರಿದ ನೋಡ । ಅಣ್ಣಾ
ಸೂಕ್ಷ್ಮ ರೂಪ ಎಂಥಾ ಸಣ್ಣ ॥೨॥

ಎಂಥಾ ಅಪರೂಪ ಗುರುವಿನ ಕೃಪಾ ।
ತೋರಬಾರದಂಥಾ ವಸ್ತು ತೋರಿಸಿದಾ ॥೩॥

ಭಾವುರಾವ ಹೇಳಿದ ನಾಮ ಮಂತ್ರ ವೇದ ।
ಸ್ವಾಮಿನ ಎಂದೆಂದಿಗೂ ಮರೆಯಲಾಗದ ॥೪॥

೭. ಮರತ ಹ್ಯಾಂಗ ಇರಲಿ ಹೇಳೊ

ಮರತ ಹ್ಯಾಂಗ ಇರಲಿ ಹೇಳೊ । ಮಹಾಹರ ಗುರು ನಿನ್ನ ।
ಹರುಷ ತೋರಿಸಿದಂಥಾ ಆನಂದ ಮೂರುತಿ ॥ ನಿನ್ನ ॥ ॥ಪ॥

ಅಂತಪಾರಿಲ್ಲದ ಆನಂದದೊಳಗಾದ । ಆರಾಸ ಪಡೆದು ನಾ ।
ಘೋರ ಹಿಂಗಿದೆ । ಆರು ಅರಿಯದೆ ದೇವಾ ಮೂರೂ ಮೆಟ್ಟಿದೆ ಶಿವಾ।
ಮೂಲ ಮಂತ್ರದೊಳಾಡಿ ಜನಮಾ ಹಿಂಗಿದೆ ದೇವಾ ॥೧॥

ನಿನ್ನ ಹಾಡಿ ನಿನ್ನ ನೋಡಿ ನಿನ್ನೊಳು ಬೆಳಗಿ ।
ಇನ್ನೊಂದು ಬಯಸದೆ ನಿಮ್ಮೊಳು ಬೆರೆತು ಹೋದೆ ॥೨॥

ನಿನ್ನ ಸರಿ ಯಾರಿಲ್ಲ ನರರ ಸಂಗತಿ ವಲ್ಲಾ ।
ನರಜನ್ಮಾ ಕಡಿಸಿದ ಪರಮಾತ್ಮ ದೋರಿ ನನ್ನ ॥೩॥

ಸಗುಣ ಮೂರ್ತಿ ನೀ ಸರ್ವ ಎಲ್ಲಾ ಮರಿಸೀದಿ ।
ನಿರ್ಗುಣದೊಳಗ ಆಡಿ ನಿಜರೂಪವೆನಗಾದಿ ॥೪॥

ಶ್ರೇಷ್ಠ ಮಾಡಿದ ಮಾತಾ । ಎಷ್ಟ ಹೇಳಲಿ ಸುಖಾ ।
ಅಷ್ಟು ಇಷ್ಟು ಅಲ್ಲಾ ಅದು ಎಷ್ಟು ಆದರು ತೀರದು ॥೫॥

ಅಗಣಿತ ನಿಮ್ಮ ಲೀಲಾ ಗಣಿತ ಮಾಡಾವರಿಲ್ಲಾ ।
ಉಮದೀ ಗುರುಶೀಲಾ ಆತಗಿಲ್ಲಾ ಮೇಲಾ ॥೬॥

೮. ನಿರ್ದಯಾ ಯಾಕೆ ಇನ್ನ

ನಿರ್ದಯಾ ಯಾಕೆ ಇನ್ನ । ಮಾಡಿದಿ ಗುರುವೆ ।
ನಿರ್ದಯಾ ಯಾಕೆ ಇನ್ನ ॥ಪ॥

ಪೂರ್ಣಕೃಪಾ ನೀ ಮಾಡಿದಿ ಸ್ವಾಮಿ । ಅಮೃತ ಸುಖ ಸುರಿಸಿದಿ ।
ಶ್ರೀಗುರು ನೀನೆ ॥೧॥

ಭಕ್ತರಿಗಾಗಿ ನೀ ಅವತಾರ ತಾಳಿದಿ । ಕೌತುಕ ತೋರಿಸಿದಿ ।
ಶ್ರೀಗುರುವೆ ನೀನೆ ॥೨॥

ಅಂತರಂಗದ ಸಾಕ್ಷಿ ಚಿಂತಿಯಾಕ ಅಂತಿ । ಎಂಥೆಂಥ ವಚನ ಹೇಳಿದಿ ।
ಶ್ರೀಗುರು ನೀನೆ ॥೩॥

ಭಕ್ತರ ಮನೋರಥ ಪೂರೈಸಿದಿ ಗುರುನಾಥಾ ।
ಕೊಂದ ಕಂದನ ಕೊಟ್ಟಿ ನೀ ಗುರುನಾಥಾ ॥೪॥

ನಿನ್ನ ಕಪಟ ರೂಪಾ ತಿಳಿಯದು ಎನ್ನ ಶ್ರೇಷ್ಠಾ ।
ನಿಜರೂಪಾ ಎನ್ನ ತೋರಿದಿ ಶ್ರೀಗುರು ನೀನೆ ॥೫॥

ನಿನ್ನ ಉಪಕಾರಾ ಎಷ್ಟಂತ ಹೇಳಲಯ್ಯಾ ।
ಮರೆತು ಹ್ಯಾಂಗ ಇರಲಿ ಹೇಳಯ್ಯಾ ಶ್ರೀಗುರು ನಿನ್ನ ॥೬॥

ಉಮದೀ ಪತಿ ನಮ್ಮ ಭಾವುರಾವ ನಿನ್ನ ।
ಚರಣ ಕಮಲದೊಳಗ ಆಡಿದೆ ಶ್ರೀಗುರು ನಿನ್ನ ॥೭॥

**೯. ನಡಿರ್ಯಯಾ ನೋಡಲಿಕೆ**

ನಡಿರಯ್ಯಾ ನೋಡಲಿಕೆ।
ವರಹರ ಗುರುಪಾದಕ ॥ಪ॥

ಪಾದಕಂಡು ಅಮೃತ ಉಂಡು ।
ಆನಂದವಾದೆ ನಾ ಜನ್ಮಕೆ ಬಂದು ॥೧॥

ಯೋಗ ಮಾಡಿದ ಆಗರ ಸ್ಥಾನಾ ।
[1]ಹೋಗಿ ನೋಡುಣು ಬ್ಯಾಗ ಹರನಾ ॥೨॥

ಸಾಧುರ ಭೇಟಿ ಆನಂದ ವೃಷ್ಟಿ ।
ಪ್ರೇಮದಿಂದ ಮಾಡೋಣ ಭಕ್ತಿ ॥೩॥

ಕ್ಷೇತ್ರನೋಡಿ ಸತ್ಪಾತ್ರವಾಗುಣು ।
ಸಾಕ್ಷಗುರುವಿನ ಮೋಕ್ಷ ಪಾಡುಣು ॥೪॥

ಹುಟ್ಟಿ ಬರುವುದು ತಪ್ಪಿತು ಜನಮಾ ।
ಭಾವುರಾಯರ ಮಂತ್ರ ಮಹಿಮಾ ॥೫॥

---

೧. ಹೋಗಿ ಮಾಡೂಣು ಸದ್ಗುರು ಧ್ಯಾನಾ

೧೦. ಕುಡು ಮಂತ್ರ ಮತಿ ನನಗೆ

ಕುಡು ಮಂತ್ರ ಮತಿ ನನಗ। ಶ್ರೀಗುರುನಾಥಾ।
ಆತ್ಮ ಆರತದಿ ಮನ ಲೀನ ಮಾಡಿದಿ। ನಡೆಸಿದಿ ಭಕ್ತಿ ಥಾಟಾ ॥೧॥

ನೇಮದಿಂದ ನಡೀರಿ। ನಾಮಸ್ಮರಣೆ ಮಾಡಿರಿ। ಅಂದಿ
ಶ್ರೀಗುರು ನಾಥಾ ॥೨॥

ಯಶವಾಗಲಿ ಭಕ್ತಿ ಮಾಡಿದವರಿಗೆ। ಮುಕ್ತಿಜ್ಞಾನ ಶೂರ ಶಕ್ತಿ।
ಶ್ರೀಗುರು ನಾಥಾ ॥೩॥

ತೆತ್ತೀಸ್ ಕೋಟಿ ದೇವತಾರ। ನಿನ್ನ ಧಾವಾ ಮಾಡತಾರ।
ಶ್ರೀ ಗುರು ನಾಥಾ ॥೪॥

ಮತಿಕೊಟ್ಟ ಮಹಾಗುರು। ಯತಿ ಪುರುಷ ನೆನಿಸಲು।
ಭಾವುರಾವ ಕರಣಿ। ನಿರಂತರ ಇರಲಿ। ಶ್ರೀಗುರು ನಾಥಾ ॥೫॥

೧೧. ಕುಣೀತಾರ ಭಕ್ತರ ಸಂಗ

ಕುಣೀತಾರ ಭಕ್ತರ ಸಂಗ। ಗುರು ಹಾರ ಭಕ್ತರ ಸಂಗ।
ಗಂಧ ಕರ್ಪುರದಾ ಗರ್ಜನಾ ಗರ್ದಿ।
ಪುಷ್ಪವರ್ಷಾವ ಸುರಿಶಾರ ಶಂಕರ ಹರ ॥ಪ॥

ಗುಲಾಲ ಝುಂಬರದೊಳಗ ಕುಣಿತಾರ ಶಿವಶಿವಾ।
ಮೋಕ್ಷ ಫಲ ಬೀರುವರ ಶಂಕರ ಹರ। ಕು। ॥೧॥

ಸೂರ್ಯ ಪ್ರಭಂಜನ ಶುಭ್ರದೊಳಗ।
ಶಿವನ ಲುಬ್ಧವಾಗಿ ಕುಣಿತಾರ ಶಂಕರಹರ। ಕು। ॥೨॥

ಮಂಜುಳ ಸ್ವರ ಧನಿ। ಮಹೋತ್ಸಾವ ಭಜನಿ।
ಸಾಕ್ಷಿದಿಂದ ಕುಣಿತಾರ ಶಂಕರಹರ। ಕು। ॥೩॥

ಭಕ್ತರಿಗಾದ ಪ್ರಭು। ಭಕ್ತರಿಗೆ ತತ್ಪರ ಗುರು।
ಛತ್ರಚಾಮರ ಹಿಡಿದಾರ ಆತನ ಮೇಲೆ।
ಛತ್ರಚಾಮರ ಹಿಡದಾರ ಶಂಕರ ಹರ। ಕು। ॥೪॥

೧೨. ಸೃಷ್ಟಿಯೊಳಗ ಶ್ರೇಷ್ಠ ಸಾಧುರು

ಸೃಷ್ಟೀ ಒಳಗ ಶ್ರೇಷ್ಠ ಸಾಧುರು ।
ಉಮದೀ ಗುರುಮಹಾರಾಜ ಭಾವುರಾಯರು ॥
ರಾಜಯೋಗ ಮಾಡಿ ಗೆದ್ದರು ।
ಸಾಕ್ಷಿರೂಪ ಸರ್ವಜನಕ ತೋರಿಬಿಟ್ಟರು ॥೧॥

ಇಂಚಗೇರಿ ಕ್ಷೇತ್ರದಲ್ಲಿ ಕುರುಹು ಇಟ್ಟು ಮೆರೆವರಲ್ಲಿ ।
ಪರಮ ಪವಿತ್ರ ಸ್ಥಾನ ॥
ಪರವಸ್ತು ಗುರುಲಿಂಗ ಜಂಗಮ ।
ಹರುಷ ಆತ್ಮಾನಂದ ರೂಪದಲ್ಲೆ ಪ್ರೇಮದಿಂದೆ ॥೨॥

೧೩. ಏನು ಬೇಡಲಿ ನಾನು ದೇವ ನಿಮಗ

ಏನು ಬೇಡಲಿ ನಾನು ದೇವಾ ನಿಮಗ । ಏನು ಬೇಡಲಿ ನಾನು ।
ಏನು ಬೇಡಲಿ ನಾನು ಭಕ್ತರಲ್ಲಿರು ಭಾವ ।
ಬೇಡದೆ ಮೊದಲು ನೀಡುವೆ ದೇವಾ ನೀ ॥ಪ॥

ದಾರಿಯ ನಡೆಯುತ ಶ್ವಾಸದೊಳ್, ಸ್ಮರಣೆಯ ಬಲಿಸುತ ।
ಎತ್ತ ನೋಡಲು ಅತ್ತ ಚಿತ್ತದೊಳು ಹೊಳೆಯುತ ।
ಅಕ್ಷಯ ಪಾತ್ರೆಯೊಳ್ ಅಸರಂತ ಇರುದೇವಾ ॥೧॥

ಮಜ್ಜಿಗಿ ಕಡಿಯುತ ಅಹಂಸೋಹಂ ಹಗ್ಗವ ತಿರುವುತ ।
ಮಜ್ಜಿಗಿಯೊಳ್ ಮುಳುಗೆದ್ದು ಹೆದರುತ ಬೆದರುತ ।
ಝುಲ್ಲಿಸಿ ಬೆಣ್ಣಿ ತೆಗೆವಲ್ಲಿರು ದೇವಾ ॥೨॥

ಶಯನವ ಮಾಡುತ ಗುಪ್ತದೊಳು ನಾಮವ ಬಲಿಸುತ ।
ಚಕಚಕ ಏಳುತ ಝುಗಝುಗ ಹೊಳೆಯುತ ।
ದ್ವಾರ ಮಧ್ಯದಲ್ಲಿ ತೋರುವ ದೇವಾ ನೀ ॥೩॥

ಇಷ್ಟು ಧ್ಯಾನೆನ್ನಲ್ಲಿಲ್ಲಾ ನೀವು ಕೊಟ್ಟಂಥಾ ಭಾವಕ್ಕೆ ದೊರಕೀತಲ್ಲಾ ।
ನಿಮ್ಮ ಶಬ್ದವ ಕೇಳಿ ಕಟು ಅನ್ಯಾಯ ।
ಕ್ಷಮಿಸು ಉಮದೀ ದೇವಾ ॥೪॥

### ೧೪. ಸಾಧುರ ಸಂಗತಿ ಸದಾನಂದಾ

ಸಾಧುರ ಸಂಗತಿ ಸದಾನಂದಾ । ಸದ್ಗುರು ವಸ್ತು ನಿಜಾನಂದಾ ॥
ಆಯಿತು ಪಾಪದ ಖಂಡನಾ । ಗುರುವಿನ ಪಾದ ಹೊಂದಿನ ॥ಪ॥

ಕಾಮದ ಗುಣಗಳ ಅಳಿಯಬೇಕು । ಮನಸಿನ ಸಂಶಯ ಬಿಡಬೇಕು ॥
ಆತ್ಮನ ಸಂಗತಿ ಹಿಡಿಯಬೇಕು । ಆನಂದ ಮುಕ್ತಿ ಪಡಿಯಬೇಕು ॥೧॥

ಬಂದದ್ದು ಆದೀತ ಸಾರ್ಥಕಾ । ಸದ್ಗುರು ಹೇಳಿದ ಗುಪ್ತಾರ್ಥಾ ॥
ಇದ ಒಂದ ಜನ್ಮ ಕಡಿ ಮುಕ್ತಾ । ತಿಳಿದು ನೋಡ ಏಕಾಂತಾ ॥೨॥

ಗುರುವಿನ ಆಜ್ಞಾಧಾರಕನಾ । ಹೇಳಿದ ವಚನ ಪಾಲಕನಾ ॥
ಭಾವುರಾಯನ ದಾಸನಾ । ಅವರ ಧ್ಯಾಸದೊಳಗಿರು ಕೂಸನಾ ॥೩॥

### ೧೫. ಗುಪ್ತ ಗುಡಿ ಸೇರ

ಗುಪ್ತ ಗುಡಿ ಸೇರ । ಗುರುವಿನ ರೂಪಾ ನೋಡ ।
ರೂಪದೊಳಗ ಅಪರೂಪ ನೋಡ । ಗುರು ಕೃಪಾ ಇದು ॥ಪ॥

ಆರು ಸೋಪಾನಾ ಏರಿ । ಮೂರು ಸೋಪಾನಾ ದಾಟಿ।
ಮೀರಿದ ಸ್ಥಳದಲಿ ಗುರುಪಾದ ನೋಡ । ಗುರು ॥೧॥

ಸಾಧನ ಬಲಿಸಿ ಸರ್ವವೆಲ್ಲ ಮರೆಸಿ ।
ಸಾಧಿಸಿಕೊಂಡ ಸಮರೂಪಾ ನೋಡ । ಗುರು ॥೨॥

ರಾಜಯೋಗದೊಳಗ ಮೋಜಿನ ರೂಪಾ ನೋಡ ।
ಚೋಜಿಗ(ಸೋಜಿಗ)ಎಂದೆನು (ಎಂಥಾ ವಸ್ತುವ) ನೋಡ । ಗುರು ॥೩॥

ಉತ್ತಮ ನಾಮಾ ಉನ್ಮನಿ ಪ್ರೇಮ ।
ಚಿನ್ಮಯ ಘನವಾದ ವಸ್ತುವ ನೋಡ । ಗುರು ॥೪॥

ಒಪ್ಪಿ ಕುಂತಾಗ ಅಲ್ಲೆ ಧ್ಯಾನಸ್ಥ ಶಿವನಲ್ಲೆ ।
ಏನು ಏನಾಗುವುದು ತಾನೆ ತಾನೆ ನೋಡ । ಗುರು ॥೫॥

ತದಾಕಾರ ವಸ್ತು ನೋಡ ಅಜನ್ಮ ಆದೆನು ನೋಡ ।
ಸದೋದಿತ ಸದ್ಗುರುವಿನ ಘೋಷ ನೋಡ । ಗುರು ॥೬॥

ಅಂದಿನ ವಸ್ತು ನೋಡ ತಂದಿ ತೋರಿದ ಜೋಡ ।
ಕೂಡಿ ಹೋದಿನ ಆತ್ಮನ ಪಾದ ನೋಡ । ಗುರು ॥೭॥

ದೇವ ಗುರುನಾಥಾ (ಉಮದೀ ಪರಮಾತ್ಮನ) ।
ಪಾದಕ ನೀ ಹೊಂದಿ ಪರಲೋಕಾ ನೋಡ । ಗುರು ॥೮॥

೧೬. ಯಾವ ದೇಶದ ಹೂವಿದ್ದಾವ

ಯಾವ ದೇಶದ ಹೂವಿದ್ದಾವ । ಇವು ನಮ್ಮ ॥ಪ॥

ಹೂವು ಅಂದರೆ ಹೂವು ಅಲ್ಲಾ । ಈ ದೇಶದ ಹೂವು ಅಲ್ಲಾ ॥
ಸೂರ್ಯ ವರ್ಣದ ಶುದ್ಧ ಹೂವ । ಸೂರಿ ಸೂರಿ ಆಗತಾವ ॥೧॥

ಚಿಕ್ಕಿ ವರ್ಣದ ಹೂವ ನೋಡ । ಕೆಂಪು ವರ್ಣದ ಹೂವ ನೋಡ ॥
ಬಿಳಿಯ ಹೂವು ಕಳೆಯ ತುಂಬಿ । ಕಣ್ಣ ಮುಂದೆ ಸುರಿಯತಾವ ॥೨॥

ಕುಶಲ ಕುಂದಲ ಹೂವ ನೋಡ । ಎಸಳ ಮಲ್ಲಿಗಿ ವಾಸ ನೋಡ ॥
ಹರುಷ ಆತ್ಮನ ಪಾದದಲ್ಲಿ । ಸುರಿಸಿ ಸುರಿಸಿ ಬೀಳತಾವ ॥೩॥

ಥಂದಥಂದ ಬೆಳಕ ನೋಡ । ಚಂದ್ರ ಜ್ಯೋತಿ ಹೂವ ನೋಡ ॥
ಸುಂದರಾತ್ಮನ ಪಾದದಲ್ಲಿ । ತುಂಬಿ ತುಂಬಿ ಸುರೀತಾವ ॥೪॥

ದೇವೇಂದ್ರನ್ನ ಸಭೆಯ ನೋಡ । ದೇವಲೋಕದ ಹೂವ ನೋಡ ॥
ಭಾವ ಬಲಿಸಿದ ಪ್ರಾಣಿಗಳಿಗೆ । ಬದಿಯಲಾಗು ಐಸಿರಿ ನೋಡ ॥೫॥

ದೇಶದೊಳಗ ಅಧಿಕವಾದ । ವಾಸ ಉಮದಿ ಗುರುದೇವ ॥
ಈಶನ ಮುಖದಲಿ ಪುಟ್ಟಿದ ಗಿಡದ ಹೂವ ನೋಡ ॥೬॥

೧೭. ಇದು ಅನುಭವ ಮಂಟಪವೊ

ಇದು ಅನುಭವ ಮಂಟಪವೊ । ಶಿವ ।
ಆತ್ಮನಿರುವುದಿದು ಐಶ್ವರ್ಯತಾವೊ ॥ಪ॥

ಆಸನ ಹಾಕುವ ಮಂಟಪವೊ । ಗುರು ।
ಘೋಷದೊಳಗ ಶ್ವಾಸ ಆಡು ಮಂಟಪವೊ ॥
ತಿಳಿಯಲಲ್ಲೀ ಮನಿ ಕೀಲೋ । ಇದು ।
ತಿಳಿಯದಿದ್ದರದು ದೊರಕದ ಪೂರೊ ॥೧॥

ಒಂಬತ್ತು ಬಾಗಿಲ ಮಾಡಿ ಮೋಹರಾ । ಅಲ್ಲಿ ।
ತುಂಬಿ ತುಳುಕತಾನೊ ಗುರು ಮಹಾಧೀರಾ ।
ಮಂಟಪ ಮನಿ ಭಾರಾ । ಸಾಂಬ ।
ಇರುವುದು ಕೈಲಾಸ ಪೂರಾ ॥೨॥

ಮಂಟಪದ ಮನಿ ಮುಂದೆ । ಅಲ್ಲಿ ।
ಆಗುವುದೇನೇನು ಗುರುರಾಯನಿಂದೆ ॥
ಮೈ ಮರೆದು ಮನಸೇರಿತಲ್ಲೆ । ದೇವ ।
ಸುಲಭವಾದ ಪಾದ ಕಂಡು ಶರಣೆಂದೆ ॥೩॥

ಅಂತರ ತೂಗು ಮಂಟಪವೊ । ಗುರು ।
ಮಂತ್ರದ ಬಲದಿಂದ ಮೇಲಕ್ಕೇರುವುದೊ ॥
ಏನು ಹೇಳಲಿ ಅಲ್ಲಿಯ ಸೊಬಗು । ತಿರುಗಿ ।
ಬಾರದಂತೆ ಎನಗೆ ತೋರಿದಾಸರವೊ ॥೪॥

ಗಂಗಾ ದ್ವಾರವು ತುಂಬಿ ನಡೆದ । ರಂದು ।
ಹೃದಯದೊಳಿರುವಂಥಾ ಲಿಂಗ ಪೂಜೆಯಿದು ॥
ಸಂಭ್ರಮ ಸಾಂಬಗೆ ಬೆರೆದು । ಈ ।
ಬಂಗಾರ ಗುಡಿಮೇಲೆ ಘಂಟಿ ಘಳಲೆಂದು ॥೫॥

ಎಳೆಯ ಸಣ್ಣ ಸುಳಿ ಬೆಳಕೂ । ಅದರ ।
ಒಳಗೆ ಕಂಡೆನೊ ಸಂಭ್ರಮ ರೂಪೊ ॥
ಮಲ್ಲಿಗೆ ಹೂವಿನ ಮಳೆಗರಿತು । ತಂದೆ ।
ತಿಳಿಯಲಿಲ್ಲ ಯಾರಿಗೆ ನಿನ್ನ ಮನೆಯಾಟೊ ॥೬॥

ದೇಶದೊಳಧಿಕವಾದ । ವಾಸ ಉಮದಿ ।
ಗುರುವಿನ ಮಂಟಪದ ಮೋಜ ॥
ತಿಳಿದವನೆ ಗಳಿಸಿಕೊಂಡು ಹೋದ । ನಮ್ಮ
ಸತ್ಯಸಾಧುರಿಗೆ ತಿಳಿಯುವುದೀ ಭೇದ ॥೭॥

### ೧೮. ಮಗಾ ಹುಟ್ಟಿದವ್ವಾ

ಮಗಾ ಹುಟ್ಟಿದವ್ವಾ । ಎನಗೊಬ್ಬ । ಮಗಾ ಹುಟ್ಟಿದವ್ವಾ ॥ಪ॥

ಮಗಾ ಹುಟ್ಟಿ ಎನ್ನ ಮಾಯವನಳಿಸಿದ ।
ಜಗಾ ಬಿಡಿಸಿ ಎನ್ನ ಜನ್ಮವ ಕಡಿಸಿದ ॥ಅ.ಪ॥

ನವ್ವ ತಿಂಗಳವ್ವಾ। ಮೈಯೆಲ್ಲ। ನೋವ ತಿಂದೆನವ್ವಾ
ದೇಹಕೆ ಹತ್ತದೆ ಮಾಯಕೆ ನಿಲಕದೆ। ಮೋಸಗಾರನವ್ವಾ ॥೧॥

ಮಗಾ ಹುಟ್ಟಿದಾಗ। ಮನೆಯೆಲ್ಲ। ಬೆಳಕ ಕಂಡೆನವ್ವಾ
ರಾಳ ಜ್ಯೋತಿಗಳು ಹೂವ ಬಾಣಗಳು ಬಹಳ ಕಂಡೆನವ್ವಾ ॥೨॥

ಆಸೆ ಅಳಿಸಿದವ್ವಾ। ಆರು। ಮೂರು ಕೆಡಿಸಿದವ್ವಾ
ಘೋರ ಬಿಟ್ಟು ಎನ್ನ ಪೂರದ ಒಳಗೆ ಸೂರ್ಯ ಹುಟ್ಟಿದವ್ವಾ ॥೩॥

ಘಟ್ಟಿ ತೊಟ್ಟಿಲವ್ವಾ। ಆತ। ಗಾಗಿ ಕಟ್ಟಿನವ್ವಾ
ಪಂಚ ವರ್ಣದವ್ವಾ। ಪ್ರಭುವಿನ। ತೂಗು ತೊಟ್ಟಿಲವ್ವಾ॥
ತೊಟ್ಟಿಲದೊಳಗ ಧಿಟ್ಟನ ಮಲಗಿಸಿ ಮುಟ್ಟಿ ತೂಗಿನವ್ವಾ ॥೪॥

ಹೆಸರ ಇಟ್ಟಿನವ್ವಾ। ಕುಶಲದ। ವಸ್ತು ರಂಗನವ್ವಾ
ಅಗಾಧ ಗುರುವಿನ ತೂಗುತ ನಾನು ಜೋಗುಳ ಹಾಡಿದೆನವ್ವಾ ॥೫॥

ಯಾರ ಪುಣ್ಯನವ್ವಾ। ನಿಂಬರಗಿ। ಗುರುವ ತಂದಿದವ್ವಾ
ಚಂದಾಗಿ ಆತನ ಪಾದಕ ಹೊಂದಿ ಕಂದನ ಹಡೆದನವ್ವಾ ॥೬॥

## ೧೯. ಸಾಕು ಹುಟ್ಟಿದ ಉದರದಲಿ ಒಬ್ಬ ಪುತ್ರ

ಸಾಕು ಹುಟ್ಟಿದ ಉದರದಲಿ ಒಬ್ಬ ಪುತ್ರಾ।
ಆತನ ನೋಡಿ ಅದೇನು ಪವಿತ್ರಾ ॥
ಗುರು ಹೇಳಿದ ನಾಮದ ವೃತಾ
ಅವರ ಜಪತಪ ಮಾಡಿದ ಪುತ್ರಾ ॥೧॥

ಜನನ ಮರಣ ಇಲ್ಲದಂತಾ ಪುತ್ರಾ।
ಗುರು ಕೊಟ್ಟ ಎನಗ ಶಿವಮಂತ್ರಾ (ಶಿವರೂಪಾ) ॥
ಪುತ್ರನ ಸುಖ ಹೇಳಲಿ ಎಷ್ಟಂತ
ಗುರು ಸ್ಮರಣಿ ಅಂಬುದು ಮಹಾಶ್ರೇಷ್ಠ ॥೨॥

ಧನ್ಯ ದೇವರ ವಂಶ ಪುತ್ರ ನೋಡ ।
ಹುಟ್ಟಿ ಮಾಡಿದ ದೇಹದ ಉದ್ಧಾರ॥
ಭಾವುರಾವ ಕೈಲಾಸಪತಿ ದೇವ।
ಕೊಟ್ಟ ಪುತ್ರ ನೋಡ ಶಿವಶಿವ ॥೩॥

## ೨೦. ನೋಡಿರ್ರ್ಯಾ ಬ್ರಹ್ಮನಾಟವಾ

ನೋಡಿರ್ರ್ಯಾ ಬ್ರಹ್ಮನಾಟವಾ । ನೀವು ನೋಡಬೇಕಾದರೆ
ಮಾಡಿ ಗುರುವಿನ ಸೇವಾ ॥ಪ॥

ತುಂಬಿ ಸೋಹಂ ಸೋಹಮೊಳಗೆ
ಮೈ ರೋಮ ರೋಮವೆಲ್ಲ ರವಿ ಚಿತ್ರವಾಗಿ ।
ಸರ್ವ ಇಂದ್ರಿಯಗಳ ತಲಿಬಾಗಿ
ಬಂದು ನೀರ ತುಂಬಿದಲ್ಲೆ ಬ್ರಹ್ಮ ತಾನಾಗಿ ॥೧॥

ಎರಡು ದೃಷ್ಟಿ ಒಂದೇ ಆಗಿ ।
ದುದುಃಕಾರದೊಳಗೆ ಶಿವರೂಪ (ತಾ) ಬೆಳಗಿ ।
ನಾ ಹೋಗಿ ಆತನೊಳ್ ಅಡಗಿ ।
ಏನ ಹೇಳಲಿ ಶಿವನ ಆಟಾ ಸುಖಸವಿದಾಗ ॥೨॥

ತನ್ನ ಸಾಕ್ಷಿ ತನಗಾಗಿ । ತನ್ನ ನಿಜದೊಳಗೆ ನಿರ್ಮಲಯೋಗಿ ।
ಬರುವಂಥಾ ಬಾಧೆಗಳ ನೀಗಿ । ಅಲ್ಲಿ ಆಗಬಾರದಂಥಾ ಆರಾಸವಾಗಿ ॥೩॥

ಅಪರೂಪ ವಿಪರೀತ ನುಡಿಗಿ ।
ಅಂತರಂಗದೊಳಗ ಶಬ್ದ ಲುಬ್ಧದೊಳಗಾಗಿ
ಎದ್ದು ನೋಡಲು ನಿರ್ಬೈಲ ಯೋಗಿ
ಸುನಾಮದೊಳಗ ಎಂಥಾ ವಿಚಿತ್ರವಾಗಿ ॥೪॥

ದೇಶದೊಳಧಿಕವಾದ ವಾಸ ಉಮದೀ ಗುರುನಾಥ ಮಾಡಿದ ಬೋಧ
ಏನ ಹೇಳಲಿ ಆ ಸುಖದ ಯೋಗಾ
ಯೋಗಿ ಗುರುನಾಥ ತಾ ಬಲ್ಲ ಬ್ರಹ್ಮ ಭೋಗಾ ॥೫॥

## ೨೧. ಸಿಂಹಾಸನ ನೋಡ ಗುರುವಿನ ಸಿಂಹಾಸನ

ಸಿಂಹಾಸನ ನೋಡ । ಗುರುವಿನ । ಸಿಂಹಾಸನ ನೋಡ ॥
ಸಿಂಹಾಸನ ನೋಡ । ಶಿವನ ಗದ್ದಿಗಿ ನೋಡ ।
ಅವನೊಳಗ ಆಡಿ ಆ ಗಾದಿಗೆ ಆಡಿದಂಥಾ ಸಿಂಹಾ ॥ಪ॥

ಎಡ ಬಲಾ ಹಚ್ಚಿಟ್ಟ । ಮುತ್ತು ರತ್ನದ ಜ್ಯೋತಿ ನೋಡ ।
ಜ್ಯೋತಿಯೊಳಗ ಜ್ಯೋತಿ ವಿಚಿತ್ರ ಇದು ನೋಡ ।
ಚದರ ಸಿಂಹಾಸನ ನದರಿಟ್ಟ ನೋಡ ॥೧॥

ದೃಷ್ಟಿ ಕೊಟ್ಟ ನೋಡ । ಶ್ರೇಷ್ಠನ ಸಿಂಹಾಸನ ಮೇಲೆ ।
ಸ್ಥಿರವಾಗಿ ನಿಂತ ಸದ್ಗುರುನಾಥಾ । ಕೈಲಾಸ ಇಲ್ಲೆ ನಿಲಿಸಿ ಬಿಟ್ಟ ।
ಅನುಮಾನ ಅಂದರ ಆದೀರಿ ಭ್ರಷ್ಟಾ । ಸಿಂ । ॥೨॥

ಸಿಂಹಾಸನ ಅಂದರ । ಶಿವನ ಸ್ಮರಣೆ ಒಳಗ ನೋಡ ।
ವಜ್ರದಲೇಪಾ ಮುತ್ತಿನ ಗೋಪಾ । ಸಿಂಹಾಸನ ಮೇಲಾಚಿನ್ಮಯ ರೂಪಾ ।
ಘನವಾಯಿತಪ್ಪಾ ಸ್ವರ್ಗ ಸ್ವರೂಪಾ । ಸಿಂ । ॥೩॥

ಚವರಿ ಬೀಸುದು ನೋಡ । ಎಡಬಲ ದೇವನ ಪಾದದ ಮೇಲೆ ।
ವಜ್ರದ ಹಸ್ತಾ ಸದ್ಗುರು ನಾಥಾ । ಸದ್ಭಕ್ತರಿಗೆ ವರದ ಹಸ್ತ ಇಟ್ಟಾ ।
ವರದೀ ಪುರುಷ ತಾ ವರವ ಕೊಟ್ಟಂಥಾ । ಸಿಂ । ॥೪॥

ಪೂರ್ವ ಪುಣ್ಯ ಎನಗ ಒದಗೀತ ಸಿಂಹಾಸನ ಈಗ ।
ಹರ ಮಂತ್ರದೊಳು ಹವಣಿಸಿ ನಾ ।
ಅರಳ ಮಲ್ಲಗಿ ಸುರಿಸ್ಯಾಡುವುದು ।
ಪ್ರೇಮದಿಂದ ಗುರುಹರ ನಿಮ್ಮ ಚರಣಕ್ಕ । ಸಿಂ । ॥೫॥

ನಮಸ್ಕಾರ ಮಾಡಿ ಸಿಂಹಾಸನಕ್ಕೆ ಶಿರಬಾಗಿ ।
ಹರ ನಿನ್ನ ಮಹಿಮಾ ನರರಿಗೆ ತಿಳಿಯದು ।
ತಿಳಿದ ಪ್ರಾಣಿಗೆ ನಿರಾಕಾರ ಇದು ।
ಆಕಾರ ಅಲ್ಲ ಗುರು ಅನಾದಿ ವಸ್ತು । ಸಿಂ ॥೬॥

ಆತ್ಮಾ ಸಾಧಿಸಿದವರಿಗೆ ಸಾಧ್ಯವಾಯಿತು ।
ಶ್ರೀ ಉಮದೀ ಯೋಗಿಗೆ ಒಪ್ಪಾಯಿತು ।
ಇಹಲೋಕ ಪರಲೋಕ ಬೆಳಕಾಯಿತು । ಸಿಂ. ॥೭॥

### ೨೧. ಸ್ಯೆ. ಸ್ಯೆ. ಸ್ಯೆ ಕುಂತಿದೆನೆ

ಸ್ಯೆ ಸ್ಯೆ ಸ್ಯೆ ಕುಂತಿದೆನೆ । ಕುಂತ ಜಾಗದಾಗ ಎಲ್ಲರನೆ ॥ಪ॥

ಎಲ್ಲರ ಮುಖವನು ಕಂಡೆನೆ । ಅಲ್ಲಿ ।
ಸಭಾದೊಳಗ ಶಿವನ ನೋಡಿದೆನೆ ॥ಅ.ಪ॥

ಸಾಧು ಸಂತರ ಸಭಾ ಕಂಡೆನೆ ।
ಯೋಗಿ ಜೋಗಿಯಿರುವುದು ನೋಡಿದೆನೆ
ಸಾಗರದಲ್ಲಿ ಸಾಂಬನ ಕಂಡೆ । ಈ ।
ಯೋಗ ಮಾಡಿಕೊಂಡವ ಧನ್ಯ ॥೧॥

ಸಭಾದೊಳಗಿನ ಅರ್ಥನ ಹೇಳಲಿ । ಗುಲಾಲ ಝುಮ್ಮರ ಹಾರಿತರಿ ।
ಸುತ್ತೆಲ್ಲ ತಾರಕ ವರ್ಣದರಿ । ಇದು । ತಿಳಿದವರಿಗೆ ವೈಕುಂಠದರಿ ॥೨॥

ಹಸಿರು ಹಳದಿ ಕುಶಲದೊಂದು । ಶೇಷನ ವರ್ಣಾ ತೋರುವುದು
ಈಶನ ರೂಪಾ ಒಂದೊಂದು । ಏನು । ಹೇಳಲಿ ಆ ಛಂದು ॥೩॥

ಎಂಥ ಸುಲಭ ಇದ್ದಾನೊ ದೇವಾ । ಅಲ್ಲಿ । ಮಾಡಿರಿ ಆತನ ಧಾವಾ।
ದ್ವಾರ ತೆರೆದು ನೋಡುವೆ ಅವನ । ಪರ । ನಾದದಿಮ್ಮದೊಳು ಮುಳಗುವೆನಾ ॥೪॥

ಇಷ್ಟ ಅರ್ಥ ತಾನೆಲ್ಲಽದ । ಫಣಿ । ನೇತ್ರಮಧ್ಯದ ನಡುವದ ।
ಮೂರು ಮೀರಿದವಗೆ ತೋರೇದ । ಗುರು । ಸಾರಿ ಹೇಳಿದಗೆ ತಿಳಿದದ ॥೫॥

ಆತ್ಮನ ಅನುಭವ ಬಲ್ಲವರು । ಗುರು । ನಿಂಬರ್ಗಿ ಮಹಾರಾಜ ಸಾಧುರು।
ಯೋಗದ ಮಾರ್ಗ ತಿಳಿದವರು । ಗುರು । ಲಿಂಗಜಂಗಮನ ಕೂಡಿದರು ॥೬॥

**೨೩. ಎಂಥಾದು ತೋರಿಸಿದಾ ಸದ್ಗುರುನಾಥಾ**

ಎಂಥಾದು ತೋರಿಸಿದಾ ಸದ್ಗುರುನಾಥಾ ।
ಸಂತೋಷ ಎನ್ನ ಮಾಡಿದಾ ॥ಪ॥

ಸಾಗರ ದಾಟಿಸಿ ಯೋಗದ ಮಾರ್ಗ ಹೇಳಿ ।
ಸಾಂಬನ ತೋರಿಸಿದಾ ॥ಅ.ಪ॥

ಮಲಕಿನ ಮನ ತೊಳಿದಾ । ಸಂ । ಕಲಕಿನ ಗುಣ ಕಳಿದಾ ।
ನರದೇಹ ದೊರಿತನ ಹರನೊಳು ಘಳಿಸಿದ ।
ಪರಲೋಕಕೆನ್ನ ಹಾಕಿದಾ ॥೧॥

ಅಖಂಡ ನಾಮ ಹೇಳಿದಾ । ಸಂ । ಕ್ಷಣಕ ಅಲ್ಲೆ ನಿಲಿಸಿದಾ ।
ಕಾಮಾದಿ ಗುಣ ಅಳಿದು । ನೇಮಾದಿ ಮೂರು ಹೇಳಿ ।
ಸ್ವಾಮಿ ಒಳಗ ಮಾಡಿದಾ ॥೨॥

ನಾನಾ ನಾದವ ನುಡಿಸಿದಾ । ಸಂ । ಏನೆನ್ನೈಶ್ವರ್ಯ ತೋರಿಸಿದಾ ।
ಮೂಲಿಯ ಮನಿ ಸೇರಿ ಲೋಲ್ಯಾಡುತದಲ್ಲೆ ।
ಮೋಲ ವಿಲ್ಲದಕೆನಿಸಿದಾ ॥೩॥

ರೂಪಕ್ಕೆ ರೂಪೆನಿಸಿದಾ । ಸಂ । ಸರ್ವರಲಿ ವ್ಯಾಪಿಸಿದಾ ।
ಭಾವ ಬಲಿತವರಿಗೆ ಸೂಕ್ಷ್ಮದೃಷ್ಟಿಗೆ ।
ಸುತ್ತೆಲ್ಲ ಹೊಳೆಯುತಿದ್ದಾ ॥೪॥

ಕತ್ತಲೆ ಬೆಳಕೆನಿಸಿದಾ । ಸಂ । ಬೆಳಕಿನ ಕಳೆ ತುಂಬಿದಾ ।
ನಾಭಿ ಕಮಲಾ ಪೂರಾ ನಾಲ್ಕು ಬೆರಳಿನ ಶೇರಾ ।
ಏನು ಬೇಕಾದ್ದು ತೋರಿದಾ ॥೫॥

ಮರುಳು ಮನಕೆ ತಿಳಿಸಿದಾ । ಸಂ । ಹದಿನೆಂಟು ಸುಳ್ಳೆನಿಸಿದಾ ।
ಕಂಡಲ್ಲೆ ಹರರೂಪ ಕಂಡವನೆ ಜಗಭರತ ।
ಗುರುರಾಯಾ ನಿನ್ನಾಟಾ ದೇಶದೊಳಗ ತುಂಬಿದಾ ।
ಉಮದೀ ದೇವಾ ರತ್ನದ ಬೆಳಕೆಲ್ಲ ॥೬॥

೨೪. ನಿರಾಲಂಬ ನಿರಾಕಾರಾಗೆ ಮಂಗಳ

ನಿರಾಲಂಬ ನಿರಾಕಾರಾಗೆ ಮಂಗಳ ।
ಸಾರ ಸದ್ಗುರು ಭವತಾರಾಗೆ ಮಂಗಳ ॥
ಶರಣು ಶರಣು ಪೂರ್ಣಾನಂದಾಗೆ ಮಂ. ।
ಮರಣ ರಹಿತ ಮಹಾ ಗುರುವಿಗೆ ಮಂಗಳ ॥೧॥

ಸುಂದರಾಂಗಲಿಂಗಸಂಗಾಗೆ ಮಂಗಳ ।
ಮಂದಾರ ಗಿರಿ ಮಹಾಹರಾಗೆ ಮಂಗಳ ।
ಅಷ್ಟಾಂಗ ಯೋಗ ತಪಾಗೆ ಮಂಗಳ ।
ಸೃಷ್ಟಿವಳಗ ಹರ ಧಿಟ್ಟಾಗ ಮಂಗಳ ॥೨॥

ಘೋರ ಸಂಸಾರ ಸಾರಹರಾಗೆ ಮಂಗಳ ।
ಸಾರ ಸದ್ಗುಣರಸ ಭರಿತಾಗೆ ಮಂ. ।
ವರದೀ ಪುರುಷ ಪರಮಾತ್ಮಾಗೆ ಮಂ. ।
ವರಕೊಟ್ಟಂಥಾ ಗುರುನಾಥಾಗೆ ಮಂಗಳ ॥೩॥

ವೇದಕೆ ನಿಲುಕದ ಆದಿನಾಥಾಗೆ ಮಂಗಳ ।
ಸಾಧು ಸಜ್ಜನ ಪ್ರಿಯವಾದಾಗೆ ಮಂ. ।
ಆದಿ ಅನಾದಿ ಗುರುಬೋಧಾಗೆ ಮಂ.।
ಬಾಧಿ ಬಿಡಿಸಿದ ಭವಹರಾಗೆ ಮಂ. ॥೪॥

ಮುಕ್ತಿ ಕೊಡುವಂಥಾ ಶಕ್ತಾಗೆ ಮಂ.।
ಶಕ್ತಿಯುಕ್ತರಿಗೆ ಒಲಿದಾತಾಂಗೆ ಮಂ.।
ಉನ್ಮನಿ ಒಳಗೆ ಇರುಹಂತಾಗೆ ಮಂ.।

ಚಿನ್ಮಯ ಗಹನ ಗುರುಲಿಂಗಾಗೆ ಮಂ.।
ಭಾಸಿ ಪಾಲಿಪ ಭವ ನಾಶಾಗೆ ಮಂ.।
ಭಾಸುರ ಉಮದೀ ಪತಿ ಈಶಾಗೆ ಮಂಗಳ ॥೫॥

೨೫. ಕರ್ಪೂರದಾರತಿ ಕರದೊಳಗಿಟಕೊಂಡ

ಕರ್ಪೂರ ದಾರತಿಕರದೊಳಗಿಟಕೊಂಡ ।
ಗುರುವೀಗೆ ಬೆಳಗೂಣು ಬಾ ॥ಪ॥

ಮುತ್ತಿನ ಆರತಿ ಚಿತ್ತದಲ್ಲಿಟಕೊಂಡ ।
ನಿತ್ಯದಿ ಬೆಳಗೂಣ ಬಾ ॥
ಶ್ರೀಗುರುವೀಗೆ ಬೆಳಗೂಣು ಬಾ ।
ಅವರ ಚರಣಕ ಎರಗೂಣು ಬಾ ॥೧॥

ಪೂಜೆಯ ಮಾಡುವ ಪುಸ್ತಕ ಓದುವ ।
ಪುರುಷರ ನೋಡುಣ ಬಾ ॥
ಪುರುಷರ ನೋಡುಣು ಬಾ ।
ಅವರ ದರ್ಶನಕ ಹೋಗುಣು ಬಾ ॥೨॥

ಶ್ರಾವಣ ಮಾಸಾ ನಾಮದ ಘೊಷಾ ।
ಸ್ಮರಣಿಯ ಮಾಡೋಣು ಬಾ ॥
ಸ್ಮರಣೀಯ ಮಾಡುಣು ಬಾ ।
ಮರಣರಹಿತಾಗೆ ಬೆಳಗುಣು ಬಾ ॥೩॥

ಒಂಬತ್ತು ಬಾಗಿಲ ಇಂಬಾಗಿ ತೆರದಾವ ।
ಸಾಂಬನ ನೋಡುಣು ಬಾ ॥
ಸಾಂಬನ ನೋಡುಣು ಬಾ ।
ಸಾಕ್ಷಾತ್ ಗುರುವಿಗೆ ಬೆಳಗುಣು ಬಾ ॥೪॥

ಕರ್ಪೂರ ಊದಬತ್ತಿ ಸುಗಂಧ ಹಿಡದೈತಿ ।
ಬೇಗನೆ ಹೋಗುಣು ಬಾ ॥
ಬ್ಯಾಗನೆ ಹೋಗುಣು ಬಾ ।
ಯೋಗದ ಆರತಿ ಬೆಳಗುಣು ಬಾ ॥೫॥

ಹಿಂಚಗೇರಿ ಸ್ಥಳದಲ್ಲಿ ಉಮದೀ ಗುರುಯೋಗಿ ।
ಉತ್ಸಾವ ನೋಡುಣು ಬಾ ॥
ಉತ್ಸಾವ ನೋಡುಣು ಬಾ ।
ಅಲ್ಲಿ ಮುಕ್ತಿಯ ಪಡೆಯೋಣು ಬಾ ॥೬॥

**೨೬. ಜಯ ಜಯ ಜಯ ಜಯ ಆರತಿ ಮಾಡುವೆ**

ಜಯ ಜಯ ಜಯ ಜಯ ಆರತಿ ಮಾಡುವೆ ।
ಜಯ ಜಯ ಜಯ ಜಯ ಆರತಿ ತುಂಬುವೆ ॥
ಜಯ ಜಯ ಜಯ ಜಯ ಆರತಿ ಬೆಳಗುವೆ ।
ಅಂಗದಾಯಕ ಸ್ವಾಮಿಗೆ । ಜಯ ಜಯ ಅಂಗದಾಯಕ ಸ್ವಾಮಿಗೆ ॥ಪ॥

ಸೂರ್ಯವರ್ಣಗೆ ಸುಂದರರೂಪಗೆ ।
ಮಂದಿರದೊಳು ಕುಣಿವ ಮಾಯಕಾರಗೆ ॥
ಚವರಿ ಚಾಮರ ಛತ್ರದೊಡೆಯಗೆ ।
ಮುಪ್ಪಿನ ಶಿವಗೆ ಒಪ್ಪಿದ ರೂಪಗೆ ।
ಬೆಳಗುವೆ ಆರತಿಯ । ಜಯ ಜಯ ॥೧॥

ಚಂದ್ರವರ್ಣಗೆ ಚಿನ್ನರೂಪಗೆ ।
ನಲಿನಲಿದಾಡುವ ನಾಗರಹೆಡಿಗೆ ॥
ಅಗಮಕಾರಗೆ ಅನೇಕ ರೂಪಗೆ ।
ಜಗದ ಈಶಗೇ ಜನ್ಮ ವಿನಾಶಿಗೆ । ಬೆಳ ॥೨॥

ಲಿಂಗವರ್ಣಗೆ ನಿರಾಕಾರಗೆ (ನಿಝುಂಕಾರಗೆ) ।
ಝುಣಾ ಝುಣಾ ಬಹುನಾದ ಘೋರಗೆ ॥
ಅಂಗದೊಳಗಿರು ಸಂಗಮೇಶಗೆ ।
ಗಂಗಾಧರಗೇ ಗೌರೀ ಹರಗೆ । ಬೆಳ ॥೩॥

ಎನ್ನವರ್ಣಗೆ ಚನ್ನರೂಪಿಗೆ ।
ಭಿನ್ನವಿಲ್ಲದೆ ಪಾದ ತೋರುವಗೆ ॥
ಮತ್ತೆ ಬಾರದ ಮುಕ್ತಿ ಕೊಟ್ಟವಗೆ ।
ನಂಬಿದ ಭಕ್ತರಿಗೆ ತುಂಬಿ ತುಳಕು ಶಿವಗೆ । ಬೆಳ. ॥೪॥

ದೇಶಕಧಿಕವಾದ ವಾಸ ಉಮದಿ ।
ಗುರುವಿನ ಪಾದದೊಳಾನಂದ ಶಿವಾ ॥
ಆತನ ಬೋಧದೊಳು ನಿಮಗ್ನ ಹರಾ ।
ನಡ ಮಧ್ಯದಲ್ಲಿ ಕಂಡೇವು ಘನಾ ।
ಪರಿಪರಿಯಿಂದಲಿ ಪರಮಾತ್ಮನಿಗೆ । ಬೆಳ ॥೫॥

೨೭. ತೊಟ್ಟಿಲ ತೂಗೀರೆ

ತೊಟ್ಟಿಲ ತೂಗೀರೆ ಗುರುವಿನ ತೊಟ್ಟಿಲ ತೂಗೀರೆ ।
ತೊಟ್ಟಿಲದೊಳಗಿನ ಇಷ್ಟಲಿಂಗನ ಮುಟ್ಟಿ ತೂಗೀರೆ ॥೧॥

ಒಂಭತ್ತ ಖಿಡಕಿಯ ಬಣ್ಣದ ತೊಟ್ಟಲ ಚನ್ನಾಗಿ ತೂಗೀರೆ ।
ಸಖಿಯರೆ ಚನ್ನಾಗಿ ತೂಗೀರೆ ।
ಭಕ್ತಿಯಿಂದ ಸಖಿಯರೆ ನೀವು ಶಿಶುವಿನ ತೂಗೀರೆ ॥೨॥

ಪ್ರೇಮದಿಂದ ಶಿವನಾಮವ ನುಡಿಯುತ ಸ್ವಾಮಿನ ತೂಗೀರೆ ।
ನೀವು ಸ್ವಾಮಿನ ತೂಗೀರೆ ।
ಸರಸವಾಡುತ ಹರುಷದಿ ಆತ್ಮನ ಸ್ಮರಿಸಿ ತೂಗೀರೆ ॥೩॥

ಸೃಷ್ಟಿಯೊಳಗ ನಮ್ಮ ಶ್ರೇಷ್ಠ ಉಮದೀ ಗುರುವಿನ ತೂಗೀರೆ ।
ಗುರು ಬಾಲಕರೆಲ್ಲರು ತೂಗೀರೆ ॥೪॥

೨೮. ತೊಟ್ಟಿಲ ತೂಗೀದೇನೆ

ತೊಟ್ಟಿಲಾ ತೂಗೀದೆ ಮುಟ್ಟಿ ಮುದ್ರಿಕೆ ಶಿವಾ ।
ಪಟ್ಟಗಟ್ಟಿದ ಸ್ಥಾನ ಹೊಕ್ಕಿದೆ ನಮ್ಮಮ್ಮಾ ।
ತೊಟ್ಟಿಲ ತೂಗಿದೆನೆ । ಆತನ ರೂಪದೊಳ್ ಆಡಿದೆನೆ ॥ಪ॥

ನಾ ಕಾಲ ತೊಟ್ಟಿಲಾ ತೂಗೀದೇನೆ ।
ಮನ ಪಾಕಮಾಡಿ ಮಹಾದೇವನ ಮಲಗಿಸಿದೇನೆ ॥
ಯೋಗ ನಿದ್ರೆಯೊಳು ಪಡೆದ ಶಿವಾ ।
ಭೋಗೇಶನೊಳ್ಬೆರದು ತೂಗೀರೆ ನಮ್ಮಮ್ಮಾ ॥೧॥

ವಿಚಿತ್ರ ತೊಟ್ಟಿಲಾ ತೂಗೀದೇನೆ ।
ಅಚ್ಯುತ ಕಂದನ ಮಲಗಿಸೀದೇನೇ ॥
ಖಚಿತ ಕಣ್ಣೊಳು ಕಂಡು ಬೆರಗಾದ ಶಿವಾ ।
ಇತ್ತ ಬರದೆ ಅತ್ತ ಆಗಿ ಹೋದೆ ನಮ್ಮಮ್ಮಾ ॥೨॥

ಸೂತ್ರದಿ ತೊಟ್ಟಿಲಾ ತೂಗೀದೇನೆ ।
ನಾ ಸೂಕ್ಷ್ಮ ಸುಂದರನ ಮಲಗಿಸಿದೇನೆ ॥
ಮೂರ್ಛಾ ಆಗಿ ಮುದ್ರೆಯೊಳ್ ಮರೆದು ಕೂತೇನೆ ಶಿವಾ ।
ಸರ್ವೇಶ ನಿಜವೆಂದು ತೂಗೀದೆ ನಮ್ಮಮ್ಮಾ ॥೩॥

ಬಿಂಬಿಸಿ ತೊಟ್ಟಿಲಾ ತೂಗೀದೇನೆ ।
ಮನರಂಜಿಸುವ ರಾಜನ ಮಲಗಿಸಿದ್ದೇನೆ ॥
ಮನ ಇಟ್ಟು ಚಣದೊಳು ಸ್ಥಳಕ್ಕೆ ಕೂಡಿದೆ ಶಿವಾ ।
ತನ್ಮಯದೊಳ್ ಶಿವನ ತೂಗೀದೆ ನಮ್ಮಮ್ಮಾ ॥೪॥

ಗುರುಧ್ಯಾಸದೊಳಗೆ ಮೋಸಾಗಿದೇನೆ ।
ಗುರು ಮೋಸದೊಳಗೆ ಮುಕ್ತ ಆಗಿದೇನೆ ॥
ಧೀರ ಉಮದಿ ಗುರುವಿನ ತೊಟ್ಟಿಲಾ ಮರಿಯದೆ ।
ಮನದೊಳು ತೂಗಿದೆ ನಮ್ಮಮ್ಮಾ ॥೫॥

## ೨೯. ಒಂಬತ್ತು ಖಿಡಕಿಯ ಓಡಕಿನ ತೊಟ್ಟಿಲ

ಒಂಬತ್ತು ಖಿಡಕಿಯ ಫಡಕಿನ ತೊಟ್ಟಿಲ ।
ಸಡಗರದಿಂದಾತ್ಮನ ತೂಗೀರೆವ್ವಾ ॥
ನೀವು ಪಡಕೊಂಡು ಪರಶಿವನ ತೂಗೀರವ್ವಾ ॥೧॥

ಭಂಗಾರದ ತೊಟ್ಟಿಲ ಬಹು ಚಂದ ಮಾಡ್ಯಾರ ।
ಭಾವಿಕರು ಬಂದೊಮ್ಮೆ ತೂಗೀರೆವ್ವಾ ॥
ಮುಕ್ತಿದಾಯಕನ ತೊಟ್ಟಿಲ ತೂಗೀರೆವ್ವಾ ॥೨॥

ಛಾಯಾಗಾರಕಿ ತೊಟ್ಟಿಲ ಛಂದಾಗಿ ಮಾಡ್ಯಾರ ।
ಕುಂದಣ ಇಟ್ಟು ಕಂದನ ತೂಗೀರೆವ್ವಾ ॥
ನಿಮ್ಮ ನಿರ್ಮಾಯ ನಿಜ ವಸ್ತುವ ತೂಗೀರೆವ್ವಾ ॥೩॥

ಆರು ಮೂರು ಬಿಟ್ಟು ಮೋಲಿಲ್ಲದ ವಸ್ತಿಟ್ಟು ।
ಬಾಲಾ ಜೋ ಎಂದು ತೂಗೀರೆವ್ವಾ ॥
ಮೇಲ ನೋಟದ ಕೀಲ ಹಿಡಿದು ತೂಗೀರೆವ್ವಾ ॥೪॥

ಹತ್ತರ ಒಳಗೊಂದು ಮುತ್ತಿನ ಮೂಗುತಿ ಛಂದ ।
ಗೊತ್ತಿನಲ್ಲಿಟಗೊಂಡು ತೂಗೀರೆವ್ವಾ ॥
ಸತ್ಯ ಶರಣರ ತೊಟ್ಟಿಲ ತೂಗೀರೆವ್ವಾ ॥೫॥

ತೊಟ್ಟಿಲ ಶೃಂಗಾರ ಮಾಡ್ಯಾರ ಭಿಂಗೆರಡು ಹಚ್ಯಾರ ।
ರಂಗಮಂಟಪ ಪೊಕ್ಕು ತೂಗೀರೆವ್ವಾ ॥
ನೀವು ಶೃಂಗಾರಕಾತನ ತೂಗೀರೆವ್ವಾ ॥೬॥

ಮುತ್ತಿನ ಗೊಂಚಲಾ ಸುತ್ತೆಲ್ಲಾ ಕಟ್ಯಾರ ।
ಮುತ್ತೈದೆಯರು ಬಂದೊಮ್ಮೆ ತೂಗೀರೆವ್ವಾ ॥
ನೀವು ಚಿತ್ತಿಟ್ಟು ಚಿನ್ಮಯನ ತೂಗೀರೆವ್ವಾ ॥೭॥

ಬಟ್ಟಬಯಲ ತೊಟ್ಟಿಲ ಎಷ್ಟ ಛಂದ್ಯೆತೆವ್ವಾ ।
ನಿಷ್ಠೆಯಿಂದಲೆ ನೀವು ತೂಗೀರೆವ್ವಾ ॥
ಸೃಷ್ಟಿಕರ್ತನ ತೊಟ್ಟಿಲ ತೂಗೀರೆವ್ವಾ ॥೮॥

ಘಟವೆಂಬು ತೊಟ್ಟಿಲಾ ಪಟಸಿ ಮಾಡಿದದೇವಾ ।
ನಿಟಲದಿ ನೋಡುತ ತೂಗೀರೆವ್ವಾ ॥
ನಮ್ಮ ಪಟುತರ ಶ್ರೀಧರನ ತೂಗೀರೆವ್ವಾ ॥೯॥

ಜಠರಾಗ್ನಿ ತೊಟ್ಟಿಲದೊಳು ಜನಿಸಿದ ಶಿವಯೋಗಿ ।
ಹರಯೆಂದು ಗಿರಿಯೇರಿ ತೂಗೀರೆವ್ವಾ ॥
ನೀವು ಶಿವಯೆಂದು ಶಿಖರೇರಿ ತೂಗೀರೆವ್ವಾ ॥೧೦॥

ತೊಟ್ಟಿಲದಾಘುಟ್ಯಾನ ತೊಟ್ಟಲದಾಗ ಬೆಳದಾನ ।
ತೊಟ್ಟಿಲದಾಗಾದಾವನ ತೂಗೀರೆವ್ವಾ ॥
ಮಧುರ ಮುಕ್ತಾಂಗನ ತೂಗೀರೆವ್ವಾ ॥೧೧॥

ಹೆಸರೇನು ಇಡವೂನು ಖುಷಿ ಮೋಜಿನ ಕೂಸಿನ ।
ಶಿವಯೆಂದು ಶಿಶುವಿನ ತೂಗೀರೆವ್ವಾ ॥
ಜಗದೋದ್ಧಾರ ಮಾಡವನ ತೂಗೀರೆವ್ವಾ ॥೧೨॥

ಪಡದೊಮ್ಮೆ ಮಡಿವುಟ್ಟು ದಡಿಯ ಕುಪ್ಪಸ ತೊಟ್ಟು ।
ಬಿಡದೊಮ್ಮೆ ತೊಟ್ಟಿಲ ತೂಗೀರೆವ್ವಾ ॥
ನೀವು ನುಡಿಯುತ ನೋಡುತ ತೂಗೀರೆವ್ವಾ ॥೧೩॥

ಓಂಚಗೇರಿ ಸ್ಥಳದಲ್ಲಿ ಕುರುಹಿಟ್ಟ ಗುರುವಿನ ।
ದಯದಿಂದ ತೊಟ್ಟಿಲ ತೂಗೀರೆವ್ವಾ ॥
ಆತನ ಮರಿಯದೆ ಮನದೊಳು ತೂಗೀರೆವ್ವಾ ॥೧೪॥

೩೦. ಎದ್ದ ಘಳಿಗಿ ಮೊದಲ ಗುರುವಿನ ನೆನಸಿ

ಎದ್ದ ಘಳಿಗಿ ಮೊದಲ ಗುರುವಿನ ನೆನಿಸಿ
ಅರವಿನೊಳಗ ನಾಮಸ್ಮರಣಿಯ ಹಿಡಸಿ
ಮರವಿನ ದೇಹಕ್ಕೆ ಬೋಧವ ಮಾಡಿಸಿ ।
ಹೀಂಗ ದಿನದಿನಕ ಆತ್ಮನ ಕೈಯ ಸೇರಿಸಿ । ಜೋ ॥೧॥

ಮೂರು ಮಾಡಬೇಕೊ ಚಿತ್ತಪಾಲಟಾ ।
ಆರು ಮಾಡಬೇಕೊ ಅವನ ಕೈವಾಸ ।
ಆಗ ತಿಳಿಯೋದು ಯೋಗಿ ಮನಿಯಾಟಾ ।
ಇದರ ಖೂನ ತಿಳಿಯಬೇಕೊ ಗುರುವಿನ ಗುರತಾ । ಜೋ ॥೨॥

ಪಾಪದ ಮನಿಯೊಂದು ತೊಳಿಯಿಸಿದವನು ।
ಪುಣ್ಯದ ಮನಿಯೆಂದು ತಿಳಿಸಿದವನು ।
ನಾಮಾಮೃತಸಾರ ಉಣ್ಣಿಸಿದವನು ।
ನಿತ್ಯನೇಮದೊಳಗ ನಿರಾಕಾರ ತೋರಿದನು। ಜೋ ॥೩॥

ಮನಸಿನ ಓಢಿ ಕಡಿಯಿಸಿದವನು ।
ಕನಸಿನ ಪ್ರಕಾರ ಎನ್ನಿಸಿದವನು ।
ಮಾಸಮಾಸಕೆ ತಾನೆ ಪಾಲಟಾದವನು ।
ನಮ್ಮ ಗುರುವಿನ ಮಗ ಗುರಿಯಾಗಿ ತೋರಿದನು। ಜೋ ॥೪॥

ವಸ್ತು ತಾನೆ ಆದ ಮಸ್ತಕದಲ್ಲಿ ।
ಮಸ್ತಕ ಮಧ್ಯದ ಮೂಲ ಕೊನೆಯಲ್ಲಿ ।
ಸತ್ಯಪೂರಂಬೊ ಶಿವಮಂತ್ರದಲ್ಲಿ ।
ಅಲ್ಲಿ ಚಿತ್ತ ಕೂಡಿತು ನಮ್ಮ ಶಿವನ ಭೆಟ್ಯಾಗಿ । ಜೋ ॥೫॥

ಬಾಲ ಹುಟ್ಟಿದ ಬಾಲೆ ಉದರಲ್ಲಿ ।
ಜೋಗುಳ ಆಡೆವು ಅವನ ಹೆಸರಲ್ಲಿ ।
ಭೋಗದ ಗುಣಗಳು ನೀಗೀದವಿಲ್ಲಿ ।
ನಮ್ಮ ಯೋಗಿಯ ತೊಟ್ಟಿಲ ತೂಗಿರಿ ಬ್ಯಾಗದಲಿ । ಜೋ ॥೬॥

ಮುತ್ತಿನ ಮೂಗುತಿ ಮೂಗಿನಲ್ಲಿಟ್ಟು ।
ವಸ್ತುಬಾಲನ ತೊಟ್ಟಿಲ ತೂಗುದಕ ।
ಅನುಭವಿಕರೆಲ್ಲರು ಕೂಡಿರಿ ಬಾಗಿಣಕ ।
ಇಂಥ ಸೃಷ್ಟಿಯೊಳಗ ಶಿವನ ತೊಟ್ಟಿ ತೂಗೂದಕ। ಜೋ ॥೭॥

ಅಪ್ಪ ಕೊಟ್ಟನು ಎನಗ ಒಪ್ಪುವ ಮಗನ ।
ತಪ್ಪಗೊಡದೆ ನಿಮ್ಮ ಜೋಗುಳ ಹಾಡುವೆನು ।
ಸತ್ತು ಹುಟ್ಟಿಬರುವ ಜನ್ಮ ಕಡಿದವನು ।
ನಿತ್ಯ ನಿತ್ಯ ಕಾಲದಲ್ಲಿ ನಿಮ್ಮಗೆ ಭಜಿಸುವೆನು । ಜೋ ॥೮॥

ಜೋಗುಳ ಹಾಡೆವು ನೋಡುತ ಅವನ ।
ಕಂಡೇವೀಗ ನಮ್ಮ ವಸ್ತು ಬಾಲನ್ನ ।
ಮೈಲಿಗಿ ಮುಡಚೆಟ್ಟು ಇಲದಲೆ ಹುಟ್ಯಾನ ।
ಇಂಥ ರಾಮರಸದಿಂದ ಕಾಮ ಹುಟ್ಟಿದನು । ಜೋ ॥೯॥

ಗುರುವಿನ ದಯದಿಂದ ಮಾಡಿದ ಪದವು ।
ಅರವಿಟ್ಟು ತಿಳಿದವರಿಗೆ ಆದೀತು ವರವು ।
ಅರವಿಲ್ಲದವರಿಗೆ ಮಾಯಾದ ಮಲವು ।
ಇಂಥ ಕಾಯದೊಳಿರುವವನ ತಿಳಿದು ಪಾರಾಗು । ಜೋ ॥೧೦॥

ಜೋ ಜೋ ನಮ್ಮ ಗುರುವಿನ ಹಾಡಿ ।
ಜೋ ಜೋ ಸತ್ಯ ಸಾಧುರನ ಪಾಡಿ ।
ಜೋ ಜೋ ದೇವ ಸಾಂಬನ್ನ ನೋಡಿ ।
ನಮ್ಮ ಉಮದೀ ಗುರುವಿನ ನೆನಿಸಿ ಕೊಂಡಾಡಿ ।
ನಮ್ಮ ಉಮದಿಯೋಗಿನ ನೆನಿಸಿ ಕೊಂಡಾಡಿ । ಜೋ ॥೧೧॥

## ೩೧. ನಾಮಾಮೃತ ಬೀಜ

ನಾಮ ಅಮೃತ ಬೀಜಾ ನೇಮದಿ ಬಿತ್ತೊ । ಸ್ವಾಮಿ ಗುರುವಿನ ॥ ಕೋಲು ಕೋಲ ॥
ಸ್ವಾಮಿ ಗುರುವಿನ ಸ್ಮರಣೆಯೊಳಾಡಿದರೆ । ನೇಮದೊಳಗ ನಿಜ ಫಲವಾಗೊ ಕೊ
ಛಂದ ಬಿತ್ತಿದ ಬೀಜ ಚಿತ್ರಕಾಲಲಿ ಮಾಡಿ । ಸತ್ಯಗುರುವಿನ ನಿಜ ನಿಲಯ ಕೋ
ಸತ್ಯ ಗುರುವಿನ ನಿಜ ನಿಲಯ ಬೆಳಿಕಂಡು । ಚಿತ್ತಕ ಇದು ಫಲ ನಮಗಿಂದು ಕೋ
ಭಂಗವಿಲ್ಲದ ಬೀಜ ಲಿಂಗ ಪಾದಕ ಬಿತ್ತಿ । ಸುವಾಳಿವಳಗ ಸುಳಿವಡದ ಕೋ
ಸುವಳಿವಳಗ ಸುಳಿವಡದು ಹೊಡಿಹೊರಗ । ಮುತ್ತಿನ ಚಂಡಾ ತೆನಿತೂಗೆ ಕೋ
ಮುತ್ತಿನ ಚಂಡಾ ತೆನಿತೂಗೆ ಮೂಲದ । ಮಂತ್ರಾ ಗುರುವಿನ ಬೆಳಿನೋಡ ಕೋ
ನೋಡಿದರ ಸಣ್ಣಿಲ್ಲ ನೋಡಿದರ ಧಮ್ಮಿಲ್ಲ । ಹೇಳಿನಂದರ ಅದಕ ಅಳವಿಲ್ಲ ಕೋ
ಹೇಳಿನಂದರ ಅದಕ ಅಳವಿಲ್ಲ ಬೆಳಿಕಂಡು । ಈ ಬೆಳಿಗೆ ಬರುವ ಭೀತಿ ಎನಗಿಲ್ಲ ಕೋ
ಐದ ಬೀಜದ ಬೆಳಿಗೆ ಐಸಿರಿ ಭಾಳದ । ಐದಕ ಐದ ಅಗಣಿತ । ಕೋ

ಐದಕ ಐದ ಅಗಣಿತ ಬೆಳಬಂದು । ಐಸಿರಿ ಗುರುದಯಾ ನಮಗಿಂದು ಕೋ
ಮುತ್ತಿನಂಥಾ ಬೆಳಿ ಮೂಲಿಗೆ ನಿಂತನೋಡ । ಲೋಲ್ಯಾಡತದೀ ಜಗವೆಲ್ಲಾ ಕೋ
ಲೋಲ್ಯಾಡತದೀ ಜಗವೆಲ್ಲಾ ಗುರುವಿನ । ಮೂಲಮಂತ್ರದ ಬೆಳಿ ಬೆಳಿಲಿಲ್ಲ । ಕೋ
ದಿಕ್ಕಿನೊಳಗ ಬಂದು ಹೊಕ್ಕು ನೋಡಿದರಲ್ಲಿ । ಮಿಕ್ಕ ಪ್ರಸಾದ ಬೆಳಿಭಾರ । ಕೋ
ಮಿಕ್ಕಿನ ಪ್ರಸಾದ ಬೆಳಿಭಾರ ಒಳಹೊಕ್ಕು । ದಿಕ್ಕ ತೆಪ್ಪ್ಯಾವ ಮನ ದಿಂಗಾಗೆ । ಕೋ
ದೇಶಕಧಿಕವಾದ ವಾಸ ಉಮದೀ ದೇವ । ಈಶಾ ನಿನ್ನ ಪಾದ ಹಿಡಿದೀನ । ಕೋ
ಈಶಾ ನಿನ್ನ ಪಾದ ಹಿಡಿದಲೆ ಪಡೆದೆವೊ । ದೃಢ ಮುಕ್ತಿ ಗುರುವಿನ ನಡಿಮನಿಗೆ ಕೋ

## ೩೨. राजयोग करूरे

राजयोग करूरे । रामरूप पाहूरे ।
पाहुनी मुक्त हेऊरे । जन्म दुःख हरूरे ।।प०।।

मूत्र देह पात्र रे । गुरू पाहिजे आधीरे ।
सत्य वचनी साधू रे । नामस्मरणी पाळु रे ।।१।।

आत्मधन आहे रे । अंतरंग शोधू रे ।
शोधुनि प्रकाश पाहु रे । पाहुनी मन रमवी रे ।।२।।

फार अपरूप रे । नरदेह भक्ती रे ।
गुरू आश्रम थोर रे । गुप्त चरणी वंदू रे ।।३।।

सावधान असावे रे । आत्म साधु जोव रे ।
अत्मानंद हाचिरे । गुरुमंत्र श्रेष्ठ रे ।।४।।

धन्य धन्य धन्य रे । धन्यगुरुराय रे ।
धन्य उमदीप्रभू रे । महिमा त्याची थोर रे ।।५।।

## ೩೩. हे बघ बाये पहागे निर्माय

हे बघ बाये । पहागे निर्माय ।।
दाखवले मज ते गुरूमाय ।।प०।।

माझे रूपाला तुहिरूपाला भिन्न नाहीगे ।बाई।
आत्म्याला पाहुनी करितो नमन त्याला ।।१।।

डोळेग त्याचे तेज प्रकाशे ।
नामाचे रसते गटगट गिळिते ।
लल्लाटा वरते ग काय डुल्लते ।।२।।

ऐकेग गगनी मधुरवाणी ।
आतले आत चाले निर्वाणी ।
भूतळी उमटूनी चढते ग त्यानी ।।३।।

चढते उतरते ते चक्रावरते ।
वकृत्वा पहाते ते कशी चक्रें फिरती ।
शिवमंत्र घोषीते फार उल्हासिते ।।४।।

रोमरोम अंगी रोविले लिंग ।
निडारले नयन निरखुनि पहाति सुख सूत्र संग ।
सु ऐक नामाचे भरले ग रंग ।।५।।

अजब ते बघ सहज समाधि ग ।
सहजीचि घणी बाइ झाली ग ।
सर्वांत भरून परिपूर्ण त्यागीग ।।६।।

सदा सर्वकाळ गुप्त गुंफले
माळ देवा घातले गळा ।
नाचत गोपाळ त्याचेग हा खेळ ।
उमदी गुरूबाळ ।।७।।

उमदी महाराज तपकेले वन ।
पुण्य पवित्र हिंचगेरी स्थान ।
तेथे आरास आनंद घन गहन ।
पाहुनि झाला ग आत्मा तल्लीन ।।८।।

೩೪.

राम रूप पाहत बैसले मी आत
सुखविले बहुत मी कायसांगु कायसांगु ।।पल्ल।।

कांही आठवेना कांही आठवेना ।।
भुलविले मी तुझे रुप पाहता रुप ।।१।।

सेऊनी अमृत झाले सुख प्राप्त ।।
विसरले दुख मी सहस्त्रवेळा ।।

मूळ पेठ येत साठविले जप
उघडुनि मी महोत्सवता ।।३।।

देवा तुझे रूप चौहुकडे पाहात
दृष्टी आत दृष्टी मी घट्ट धरिता ।।४।।

हिंचगेरी क्षेत्रा देवगुरुनाथा झाले मी पवित्र
गुरुचरण धरिता रामरुप पाहात ।।५।।

## ೩೫. पद (उपदेशपर)

स्मरणमाडरी गुरुवीन स्मरण माडरी ।
स्मरणी माडरी मारण बिगरी ।

भावदोळगे भाव निल्लीसी ।
निवू स्मरणी माडरी ।।गु।।१।।

श्रिष्टी वळगे श्रेष्ठ ।
उमदी गुरुव आडिद आटा

येनु हेळलि थाटा उणसी अमृतद उटा
पूर द्वोळगी सुख

## २६. गोकुळीत गुज गुज उठली आज तुज मज संगतीला

रुप तुझे पाहुनि मला नवल वाटले ।
नवल वाटले नयनि रुप देखिले

एका ठाई बसुनि पाहि चक्रगरी मी ।
चक्रगरी मी । रामरुप बिंबुनी ।।२।।

स्फटिक सफेत जाळी मोत्याची झगझगती ।
झगझगती । योगमंदिर पाहाती ।।३।।

फूल माळ घालुनि गळा । डूलडूलती ।
डूलडूलती । रंग रंग उडविती ।।४।।

झोप सोंब येति जाति पुढे मागुते ।
पुढे मागुते । पाहुनि कर जोडिते । देवा चरण वंदिते ।।५।।

ऐसे नवल दाविले मला राजगुरुने । राजगुरुने ।।
राजगुरुने । उमदी भाऊतारीले ।। रूप तुझे पाहुनि
मला नवल वाटले ................

२८.

अजब ते बघ सहज समाधी ग ।।
सहजची धनी बाई ते झाली ग ।
सर्वात भरुनी परीपूर्ण राही ते ।।२।।

एके गे गगनी मधुरवाणी आतलेचे आत चाले नींवाणी ।
भूतळी उमटुनी चढते ग त्यानी ।।३।।

पाह चढते उतरते ग सहा चक्रवर हे गवकृत्व
पाते ते चक्र कसे फिरते ग तोंडी ।
शिवमंत्र घोष ते फार उल्हासी ग ।।४।।

रोम रोम आंगाग निडारले नेत्र ग
सोहं सूत्र सुख फार उमदी म्हाराज

तप केले वनी रोविले लींग सजा पुण्य पवित्र
हिंचगिरीस्थान करीते ग ध्यान पुण्य पवित्र
हिंचगेरी स्थानात ते आरास

२७. ।।श्री राम।।

राम स्मरावा राम सदोदित ।
राम स्मरावा राम ।।पल्ल।।

राम नसता मी क्षणभरी न राहे ।
राम माझी मायाळु माता ।।१।।

राम गर्जे मज प्रेम आनंद ।
मन होऊनि उध्दर राम स्मरता ।।राम२।। (राम गहन)

म्हणुनि राम करीतो काम ।
लागले मला रामध्यान । सदोदित राम ।।३।।

तुजविण रामा नको कामा
चरणी मस्तक ठेवीन प्रेमा ।।राम।।४।।

राम आहे कसा मज हृदयी बसे ।।
गुज कशी बहुमौज सदोदित ।।राम।।५।।

उमदीवासा चरण मी दासा ।
कृपा करी बा राम ।।
अखिल प्रभुराम स्मरावा राम ।।६।।

-0-0-

नरजन्म कडी ईदु हीडी गोत
गुरुविन ध्यास ध दोळगे मुक्ती पडी पडी
अवर ध्यान्ध्वळग मुक्ती पडी पडी

## ।।श्री गुरुसमर्थ।।

## (श्री समर्थ प्रसाद चमत्कार)

एका बाईचे १० वर्षाचा मुलगा होता. त्याला साप चावला होते. त्या बाईने रात्री १० वाजता घेऊन आले, ते मुलगास विस चढून मान टाकले होते. डोळे झाकले होते. त्या बाईने मुलगा माझा मरतो म्हणून फार घाबरून रडू लागली. त्याला समजाऊन समर्थाचा अंगार लाऊन पाठवुन दिले. नंतर त्या बाईला सांगितले होते की रात्रंदिवस दिवस उगडु पर्यंत मुलगाला घेऊन जागृतीने समर्थ ईश्वराचे ध्यान करीत बैस म्हणून सांगितले होते. तर त्याप्रमाणे त्यानी केले. दिवस उघडताना मुलागा हुशार होऊन आई मी शाळेला जातो म्हणून शाळेला गेला. पर आईचे मनांत मुलगा केव्हा येतील की वाटेत पडेल असे म्हणून शाळेला व घराला येरझारा करीत होते. १० वाजता घरी मुलगा येऊन आपुल करुन कापूर व नारळ घेऊन मुलगा मठास आले मग कापूर लावुन  समर्थास नमस्कार करुन गेला असे लीला ऐक ऐक होते. की ते लीला सांगता येत नाही. किती म्हणून काय वर्णन शक्य नाही......

## ಶ್ರೀ ಅಂಬುರಾವ ಮಹಾರಾಜರು ಶ್ರೀಶಿವಲಿಂಗವ್ವನವರಿಗೆ ಬರೆದ ಕಾಗದ

श्रीसद्गुरु समर्थ

कृतानेक दंडवत विज्ञापना                                   हिंचगेरी
ता. २२-९-१९१६

आपलेकडून कार्ड आज रोजी येऊन पोचले. लिहिलेला मजकूर समजला. आनंद जहाले. इकडील सर्व मंडळी श्रीसमर्थ कृपेने आनंदरूप असो विशेष. आपले पत्राप्रमाणे सर्वास नमस्कार श्रुत केले आहे. पंधरा दिवसाखाली आपलेकडे पत्र घालावे असे आठवण जहाले. तर तुमचे पत्र आलेवर उत्तर लिहावे अशी हि आठवण जहाले. आजरोजी आपले कार्ड आलेले पाहून फारच आनंद जहाले. सर्व ठिकाणी आत्मा एकच आहे. असा मनात आनंद जहाले. निरंतर आपली आठवण होतच आहे. कृपा असावी. हल्ली अश्विन श्रु।। १५ पौर्णिमे दिवशी रा. गिरमल्लप्पा जमखंडी यांनी येथील समर्थाचे सभामंडप बांधणें विषयी सांगून गेले आहे. समर्थांची भक्ति वाढत चालली आहे. कळावे. ती मुरगेव्वा अक्कास दंडवत नमस्कार श्रुत व्हावे. इकडील मंडळी वेंकप्पामस्त्री व बायका मंडळी यांचे दंडवत नमस्कार सांगितले आहे. ते श्रुत व्हावे हे विनंति.

अंबाजी कुलकर्णी
इंचगेरी

ಸ್ವರ್ಗಭುವನ

## ಕೃಷ್ಣಾಜಿಪಂತರಿಗೆ ಬರೆದ ಪತ್ರದಲ್ಲಿಯ ಮುಖ್ಯ ಅಂಶಗಳು

-श्रीसमर्थ-

श्रीसमर्थ महाराज स्मरण केलेली स्वर्गभुवन पावयास (पहावयास) आम्ही चौगाने निगाले. तर, वडेंचे (ओढ्याचे) पल्लाड गेलेवर नंद्यप्पा आण्णाने मजला सांगितले की आणाचे बाव (भाव) कशी आहे ते समजून ग्याहा (घ्या) आणि त्यास संतोष करून जावा

असे म्हणताना, मी समर्थाचे स्मरण केलेली स्वर्गबुवन पावयास निघाले तर तेथे तुम्ही मायाची गोष्ट सांगता, ते एकुन मला त्रासहुन (होऊन) मागारी येत हुते (होते) तेव्हा सूर (शूर) नागप्पा बालक यानी सांगितले की समर्थाचें स्वर्गबुवन पावयास निगाले आहे तर तेथे मायाचे हुक्के (दुःखे) पुष्कळ येत आहे, तर तेचेकडे लक्ष न देता समर्थाचे स्वर्गबुवन पाहुचला असे सांगुन मला ते जागेस येऊन गेला. गेलेवर समर्थाचे स्मरण केलेली स्वर्गबुवन पाहून मला असे आराम व आनंद जाले की ते सांगता येत नाही. ते जागेत समर्थांचे स्मरण करीत एक आर्दा तास बसलें होते. इतक्यांत जालेली महत्व चमत्कार सांगतो ऐक-चोहीकडे गदरणी गडगडा आवाज होत अस्ता व पावसाचे ठेंब एक एक पडत होते. त्यात सुर्यांचे उजेड प्रबाकार ते जागी पडले होते की ते सांगता येत नाही. डोळे कुकुदीपु लागले समर्थांचे स्वर्ग बुवन हलु लागले प्रमाणे की ते सांगता येत नाही. तेव्हा समर्थास प्रार्थना करते की हे सद्गुरू समर्था, परमेश्वरा, दीनदयाला, कृपावंता भक्तवत्सला हा स्वर्गभुवनातून उठऊ नको चढलेली स्मरण उतरू नको. असे समर्थास प्रार्थना करीत होते. अर्धा तास की तासांत इतके ऐश्वर्य व आनंद डुलु लागले. समर्थाने पंचवीस वर्ष आरैण (अरण्य)वास स्मरण करून स्वर्गबुवन पाहुन देवलोकांत जाऊन बेट होऊन पुनाह नरलोक रक्षाया कारणे येत हुते....''

ಶಿವಲಿಂಗವ್ವನವರ ಮುಕ್ತಿ ಸುಮನಾವಲಿ

ನಾಗಪ್ಪಣ್ಣಾ ನಿಂಬರ್ಗಿ ಇವರಿಗೆ ಬರೆದ ಪತ್ರದಲ್ಲಿಯ ಮುಖ್ಯ ಅಂಶಗಳು

''समर्थाचे वाक्य असे आहे कीं गंभीर नाम व सूक्ष्मरूप हा तीनी वक्त दृष्टीने जपून तुम्ही हत्ती (वर) बसा काही हरकत नाही असे समर्थाचे वाक्य आहे - हीच गुरु आज्ञा पालन करतो (तो) देवाचा अंश -

भाव ठेविले की ''भाग्यवंत''
लक्ष ठेविले की ''लक्ष्मीवंत''

## बलात्काराने भक्ति केली की "बलवंत"

## ಕೃಷ್ಣಾಜಿಪಂತರಿಗೆ ಬರೆದ ಪತ್ರದಲ್ಲಿಯ ಮುಖ್ಯ ಅಂಶಗಳು

"समर्थाचे नाम नेम स्मरण तोच एक वडील आहे, म्हणून सर्व कार्यसिद्ध होतच आहे. सर्व त्या समर्थाचीच आहे. मान झाली तरी चिंता नाही. अपमान केली झाली तरी चिंता नाही. समर्थ नामाचा महिमा असेच आहेत म्हणून हा असा संतोष होत आहे..... सगुण व निर्गुण समसमान पालन करील त्याला भूतदया असेल. सगुण म्हणजे काय निर्गुण म्हणजें काय हे आपले अनुभव करण्याचे कर्तव्य आहे. सगुण म्हणजें समर्थाचे सेवा व सर्व प्रकारचे पूजार्ती महोत्साव भजन भक्तिभाव इत्यादि समर्थाचे आज्ञे पालन करील तोच एक सगुण मूर्ति देव तो देवावर लक्ष ठेऊन दृष्टीपुढे देवरूप सहित उभारिला. त्यालाचः निर्गुण निराकार वस्तु म्हणणे हल्ली म्हणतच आहे.

## ನಂದೆಪ್ಪಣ್ಣಾ ನ್ಯಾಮಗೌಡಾ ಅವರಿಗೆ ಶಿವಲಿಂಗವ್ವನವರು ಬರೆದ ಪತ್ರದಲ್ಲಿಯ ಮಹತ್ವದ ಭಾಗವು

"नेम निष्ठेने भक्ति करीत जावे. बाळगोपाळावर दया असावे. फलाहार दान करीत जावे. भूतदया असावे. परमेश्वराचे चरणी अनन्य भावे रक्षावे आपले कार्य सिद्धीस होण्याकरता अतिनम्रपणाने सद्गुरूचरणी लीनता असावे. अंचेद भक्ति करीत जावे. सर्व कार्य आपले आपण सिद्ध होते. लेक बाळावर कृपा असावे. त्यास वस्त्र टोपडी काहीतरी देत जावे. हे गोष्ट फार फोडून सांगू नये. आपले अंतःकरणांत उमटून केलेली सिद्ध होते नेम पाळावे."

## ಗುರುದೇವ ರಾನಡೆಯವರಿಗೆ ಶಿವಲಿಂಗವ್ವನವರು ಬರೆದ ಪತ್ರಗಳಲ್ಲಿಯ ಮಹತ್ವದ ವಾಕ್ಯಗಳು.

"अनुभवाची गोष्ट अशी आहे की, वैराग्याची पूजन सेवा व्हावी मग आत्मभावास सुकाळी पडावी. सुविक्तपणे तो महायोगी जाण. देवस्तव अहर्निशी दैवयोग. शिवशिवा अंतरंगांतील जप तीच गुप्त अनिर्वाच्य वस्तु. सांगता लिहिता येत नाहीं"

ಶ್ರೀ.ಕೃಷ್ಣಾ ಅಣ್ಣಾ ಇವರಿಗೆ ಶಿವಲಿಂಗವ್ವನವರು ಬರೆದ ಪತ್ರದಲ್ಲಿ

''समर्थ सर्वांघरी व्यापून आहे. कोणास काय पाहिजे ते हल्लीच होत आहे. रामराव आण्णाने आपले काम वगैरे सर्व त्यागकरून समर्थाचे क्षेत्रामध्ये येऊन एक महिना वास करून नामस्मरण केल्याचे फल रोकडेच मिळाले. तसेच बारा महिने चोबीस तास निरंतर स्मरण केले असता किती फळ मिळेल हे सांगता येत नाही. निष्काम निराकार भजन करील तोच भक्तीमध्ये तरेल वस्तूकडे लक्ष देऊन काम करील तोच श्रेष्ठ, त्यास आकार भाव लागणार नाही. लावता येत नाही असे समर्थांचे वाक्यार्थ''

೫

# ಸಂಕೀರ್ಣ

## ಶ್ರೀಗುರು ಸಮರ್ಥ

### ಪತಿವ್ರತಾ ಮಾರ್ಗವು


ಶ್ರೀಮತ್ ಹೆಣ್ಣುಮಕ್ಕಳೆ, ಸ್ತ್ರೀಯರ ನೀತಿಯೇನಂದರೆ, ಸ್ತ್ರೀಯರು ಹ್ಯಾಗೆ ಇರಬೇಕು ಹಾಗೆ ಇದ್ದರೆ ಅವರೇ ಸ್ತ್ರೀಯರು. ಇಲ್ಲದಿದ್ದರೆ ಮನಸ್ಸಿಗೆ ಬಂದ ಹಾಗೆ ಮಾಡಿದರೆ ಅವರು ಪಶುವಿನ ಸಮಾನರು. ಯಾಕೆಂದರೆ ಸ್ವಧರ್ಮ ಬಿಟ್ಟು ಅಧರ್ಮ ಅವಿಚಾರದಿಂದ ನಡೆದರೆ, ನರಕ ಕೊಂಡದಲ್ಲಿ ಜನ್ಮ ಆಗುವರು. ತಪ್ಪುವುದಿಲ್ಲ. ಇದು ಸತ್ಯವು. ಆದ್ದರಿಂದ ಈ ಮಾತಿನ ಅಂಜಿಕೆ ಹಿಡಿದು ಸ್ವಧರ್ಮದಿಂದ ನಡೆಯಬೇಕು. ಅಂದರೆ ನಿಮಗೆ ಕಲ್ಯಾಣವಾಗುವುದು. ಯಾಕಂದರೆ ಹೆಣ್ಣುಮಕ್ಕಳ ಆಚಾರ ಕಡಿಮೆ ಆದರೆ ಹೇಳಬೇಕಾಗುತ್ತದೆ. ದ್ವಾರ ಬಾಗಿಲದಲ್ಲಿ ಕುಳಿತು ಪರರ ಮಾತುಗಳ ಮಾತಾಡುತ್ತಾರೆ. ಹಲವು ತರದ ಕೊಳಕ ಗೋಷ್ಟಗಳ ಮಾತಾಡಿ ಚಪ್ಪಳಗಿ ಹೊಡೆದು ನಗುತ್ತಾರೆ. ಈ ಸ್ತ್ರೀಯರಿಗೆ ದೊರೆಯ ಅಂಜಿಕೆಯೇ ಇಲ್ಲ. ಈ ಸ್ತ್ರೀಯರಿಗೆ ಪರರ ಅಂಜಿಕೆಯೇ ಇಲ್ಲ. ಈ ಸ್ತ್ರೀಯರಿಗೆ ಪುರುಷರ ಅಂಜಿಕೆಯೇ ಇಲ್ಲ. ಈ ಸ್ತ್ರೀಯರಿಗೆ ಗುರು ಹಿರಿಯರ ಅಂಜಿಕೆಯೇ ಇಲ್ಲ. ಅನೇಕ ತರದ ದ್ವಾರ ಬಾಗಿಲದಲ್ಲಿ ಕಟ್ಟೆಗಳು ಹಾಕಿ ಕಟ್ಟೆಯ ಮೇಲೆ ಘಟ್ಯಾಗಿ ಕೂತು ಕೆಟ್ಟ ಮಾತುಗಳ ಆಡುತ್ತಾರೆ. ಈ ನಷ್ಟ ಸ್ತ್ರೀಯರಿಗೆ ಶಿವನ ಅಂಜಿಕೆ ಇಲ್ಲ. ತನ್ನ ಪತಿಯ ಆಜ್ಞೆಯಿಂದ ಇದ್ದರೆ ಸತಿಯರು. ಗುರುಹಿರಿಯರ ಆಜ್ಞೆಯಿಂದ ಇದ್ದರೆ ಮಕ್ಕಳು. ಇಲ್ಲದಿದ್ದರೆ ವೈರಿಗಳೆಂದು ತಿಳಿಯಬೇಕು. ತನ್ನ ಪತಿವ್ರತಾ ಧರ್ಮ ಕಾಯಲಿಕ್ಕೆ ಪತಿಯೆನುತ ಮತ್ತು ಕೆಟ್ಟ ಬಾಧೆಗಳ ಬಿಡಸಿ ಎಷ್ಟು ಯೋನಿಗಳಲ್ಲಿ ಹುಟ್ಟಿ ಹುಟ್ಟಿ ಬರುವಂತ ಪಾತಕ ಖಾಣೆಗಳ ಕೊಡಿಸಿ ಮೋಕ್ಷ ಪದವಿ ಕೊಡುವಂಥ ಶ್ರೀಶ್ರೇಷ್ಠ ವಾದಂಥ ಸದ್ಗುರುನಾಥನು. ಅವರ ಹೊರತು ಈ ನರದೇಹಕ್ಕೆ ಗತಿಯೇ ಇಲ್ಲ. ಆದ್ದರಿಂದ ನೀವು ನಿಮ್ಮ ಮನಿಯಲ್ಲಿ ಕೆಲಸ ಧಂದೆಗಳ ಮಾಡುತ್ತ ಶಿವಶಿವಾ ಎನ್ನುತ್ತ ಇರಬೇಕು. ನಿಂತರೂ, ಕೂತರೂ ಶಿವಶಿವಾ. ಮಲಗಿದರೂ ಶಿವಶಿವಾ. ಹೆಜ್ಜೆ ಹೆಜ್ಜೆಗೆ ಶಿವಶಿವಾ. ಸರ್ವಕಾಲದಲ್ಲಿ ಶಿವಶಿವಾ ಎನ್ನುತ್ತಿರಬೇಕು. ಅಂದರೆ ಈ ಸ್ತ್ರೀಯರಿಗೆ ಬಂದದ್ದು ನರಜನ್ಮ ಸ್ವಾರ್ಥಕವಾಯಿತು. ಮತ್ತು ಪತಿ ಇಲ್ಲದ ಸ್ತ್ರೀಯರಾದರೂ ಪರಮಾತ್ಮನ ಸ್ಮರಣೆ ಮಾಡುತ್ತಿದ್ದರೆ ಅವರೂ ಪತಿವ್ರತೆಯರು ಮತ್ತು ಪರಮಾತ್ಮನ ಸ್ಮರಣೆ ಮಾಡದಿದ್ದರೆ

ಅವರು ನಷ್ಟ ಸ್ತ್ರೀಯರು. ಯಾಕೆಂದರೆ ಈ ಶ್ರೇಷ್ಠವಾದಂಥಾ ಶಿವಸೂತ್ರಗಳ ಬಿಟ್ಟು ಕೆಟ್ಟ ಮಾತಾಡಿ ಕೆಟ್ಟು ಹೋಗುವ ನಷ್ಟಸ್ತ್ರೀಯರ ಸಂಗ ಬ್ಯಾಡಯ್ಯಾ ದೇವಾ. ಯಾಕೆಂದರೆ ಅನುಭವ ಮನಿ ಒಳಗ ಇರುವಂತಾ ಆತ್ಮನ ಧ್ಯಾನ ಮಾಡುತ್ತಿದ್ದರೆ ಅಬಲೆಯರು ಸೂರ್ಯ ಚಂದ್ರರು ಇರುವವರೆಗೆ ಅವರು ಮುತ್ತೈದೆಯರು ಮತ್ತು ಶಿವಶಿವಾ ಎನ್ನುವ ಮೂಗುತಿ ಮೂಗಿನಲ್ಲಿ ಇಟ್ಟು ಯೋಗ ಮಾಡುಹಂಥಾ ಭಾಗ್ಯರ ಸಂಗತಿ ಸದಾ ಇರಲಿ ದೇವಾ. ಮತ್ತು ಶಿವನ ಧ್ಯಾನದಲ್ಲಿ ಇದ್ದರೆ ಭವದ ಅಂಜಿಕೆ ನಮಗಿಲ್ಲ. ಅದರಿಂದ ಆತ್ಮನ ಸ್ಮರಣೆ ಮರಿಯಬ್ಯಾಡರಿ. ಮತ್ತು ಪರರ ಮಾತುಗಳ ಆಡಬ್ಯಾಡರಿ. ಮತ್ತು ಮಾತಾಡಿದರ ಮಾತಾಡಿರಿ. ಯಾಕೆಂದರೆ ಅವರಿಗೆ ಕಲ್ಯಾಣ ಆಗಲಿ ಎಂದು ಜಪಿಸುತ್ತಿರಬೇಕು. ಹೊರತು ಕೆಟ್ಟ ಮಾತಾಡ ಬ್ಯಾಡರಿ. ಸತ್ಯ ಮಾತಿಗೆ ಸಾವಿಲ್ಲ, ಸುಳ್ಳು ಮಾತಿಗೆ ಫಲವಿಲ್ಲ. ಆದ್ದರಿಂದ ಸತ್ಯ ಮಾತಾಡಿ ಸತ್ತು ಹೋಗುವುದು ಲೇಸು. ಹೊರತು ಸುಳ್ಳು ಮಾತಾಡಿ ಒಳ್ಳೆಯವರು ಎನಿಸಿಕೊಂಡರೆ ಮಹಾದೋಷವು. ಇದನ್ನು ತಿಳಕೊಂಡು ಹೆಣ್ಣುಮಕ್ಕಳು ಹುಶಾರಿಯಿಂದ ಬಾಳೇವು ಮಾಡುತ್ತಿರಬೇಕು. ಮತ್ತು ತಾಯಿ ತಂದೆ ತನ್ನ ತನ್ನ ಮಾಡಿಕೊಟ್ಟಂಥ ಪುರುಷನ ಹೊರತು ಮತ್ತೊಬ್ಬ ಪುರುಷನ ಕಂಡರೆ ತನ್ನ ತಂದಿ ಸಮವೆಂದು ತಿಳಿಯಬೇಕು. ಇದು ಸತ್ಯವು. ಆದರೆ ಗುರುವಿನ ಆಜ್ಞೆಶ್ರೇಷ್ಠವಾದಂಥ ಪರಮೇಶ್ವರನ ನಾಮಸೂತ್ರಗಳು ಮಾಡುತ್ತಿದ್ದರೆ ಇದು ಸತ್ಯವು ಮತ್ತು ಕೈಯ ಕಚ್ಚಿ ಖರೆ ಕಾಯಕೊಂಡು ಮನದೊಳಗೆ ಮಹಾದೇವನ ಸ್ಮರಣೆ ಮರಿಯದೇ ಮಾಡುತ್ತಿರಬೇಕು. ಇದು ಒಂದು ಸತ್ಯವು. ಮತ್ತು ತನಗೆ ತಿಳಿಯದಿದ್ದರೆ ಭಕ್ತಿ ಮಾಡುಹಂತಾ ಶಿವಧ್ಯಾನ ಶಿವನ ಸುಖ, ಭಾಗ್ಯವಂತರ ಬದಿಯಲ್ಲಿ ಹೋಗಿ ಯೋಗದ ಮಾರ್ಗವನ್ನು ತಿಳಿದುಕೊಳ್ಳಬೇಕು. ಮತ್ತು ತನ್ನ ಲಿಂಗಪೂಜೆಗೆ ನಿಜವಾಗಿರಬೇಕು. ಹೊರತು ವ್ಯರ್ಥ ಮಾತಾಡಬಾರದು. ಇದು ಸತ್ಯವು ಮತ್ತು ಆದಷ್ಟು ಮಟ್ಟಿಗೆ ಪರ ಉಪಕಾರ ಮಾಡುತ್ತಿರಬೇಕು. ಮತ್ತು ತಮ್ಮ ಸ್ವಧರ್ಮದಿಂದ ದಾನಧರ್ಮಗಳ ಮಾಡುತ್ತಿರಬೇಕು. ಮತ್ತು ದಾನವಿಲ್ಲದ ಕೈಯ ದಗ್ಧವೆಂದು ತಿಳಿಯಬೇಕು. ಆದ್ದರಿಂದ ದೇವರು ಕೊಟ್ಟದರೊಳಗಿಂದ ದಾನಧರ್ಮಗಳು ಮಾಡುತ್ತಿರಬೇಕು. ಇದು ಒಂದು ಸತ್ಯವು, ಸತ್ಯ, ಸತ್ಯ. ಗುರು ಪ್ರಸಾದ ಸತ್ಯ. ಅದರಿಂದ ಬೇಕಾದ ಫಲಗಳು ಆಗುತ್ತವೆ. ಆದ್ದರಿಂದ ಶಿವಸೂತ್ರಗಳು ಎಂದೆಂದಿಗೂ ಮರೆಯಬಾರದು. ಗುರು ಕೊಟ್ಟ ಶಿವಮಂತ್ರಗಳಿಂದ ಸರ್ವ ಕಾರ್ಯಗಳು ಸಿದ್ಧಿಯಾಗುತ್ತವೆ. ಆ ಶಿವನಸೂತ್ರಗಳಿಂದ ಸಕಲ ಸಂತತಿ ಸಂಪತ್ತಿ ನಿಜವಾಗಿರುತ್ತವೆ. ಆದ್ದರಿಂದ ನೀವು ನಿಮ್ಮ ಪ್ರಪಂಚದಲ್ಲಿದ್ದು ಪರಮಾತ್ಮನ ಸ್ಮರಣೆ ಮಾಡುತ್ತಿದ್ದರೆ ಆ ಪ್ರಪಂಚಕ್ಕೆ ಧಕ್ಕಿ ಇಲ್ಲಾ. ಪದವಿಯಿಲ್ಲಾ. ಆದ್ದರಿಂದ ನಿಮ್ಮ ನಡಿ ನುಡಿ ಜಪ್ಪಿಸುತ್ತಿರಬೇಕು. ಅಂದರೆ ಈ ನರಜನ್ಮ ಕಡೆಗೆ ಪಾರಾಗುವುದು. ಈ ಶಿವಸೂತ್ರಗಳಿಂದ ಮಹಾಪ್ರಾಣವಲ್ಲಭೆ, ಪಾರ್ವತಿ, ಆದಿಶಕ್ತಿ, ಶಿವಶಂಖರಿ, ಮಹಾದೇವಿ ಮತ್ತು ಅಕ್ಕನಾಗಮ್ಮ,

ತಾಯಿ ನೀಲಮ್ಮಾ, ಮಂದಾರಗಿರಿಯ ಪರ್ವತ ಶ್ರೀ ಮಲ್ಲಿಕಾರ್ಜುನ ಪಾದದಲ್ಲಿ ಇರುಹಂತಾ ಬವರಮ್ಮನು ಗುರು ಪ್ರಸಾದ ಕೈಕೊಂಡು ತ್ರಿಕಾಲದಲ್ಲಿ ಲಿಂಗಪೂಜೆಯಲ್ಲಿ ನಿಜವಾಗಿ ಇರುವಂಥಾ ಶಿವಶರಣೆ ದಾನಮ್ಮನು ಇವರೆಲ್ಲಾ ಶಿವಸೂತ್ರಗಳದಿಂದೆ ದೇವರಾಗಿ ಕೂತರು. ಆದ್ದರಿಂದ ನಿಮಗ ಕರ ಮುಗಿದು ಶಿರಬಾಗಿ ಪ್ರಾರ್ಥನಾ ಮಾಡಿಹೇಳುತ್ತೇನೆ. ಕೋಪಿಸಬ್ಯಾಡರಿ. ಕ್ಷಮಾ ಇರಲಿ. ಇದರ ಪೈಕಿ ಐದಕ್ಷರ ತಕ್ಕೊಂಡು ಸ್ವೀಕಾರ ಮಾಡಬೇಕು. ಸ್ವೀಕರಿಸಬೇಕು. ಅದರಿಂದ ನಿಮಗೆ ಕಲ್ಯಾಣವಾದೀತು ಮತ್ತು ಜಯಜಕಾರವಾದೀತು. ಶಿವನ ಭಕ್ತಿಯ ಹೊರತು ಮುಕ್ತಿಯು ಇಲ್ಲಾ. ಆದ್ದರಿಂದ ಗುರುಭಕ್ತಿ ಮಾಡಿ ಮುಕ್ತರಾಗಿ ಹೋಗಬೇಕು. ಇದು ಸರ್ವಕ್ಕೆ ಸತ್ಯವು. ಯಾಕೆಂದರೆ ಹೆಣ್ಣುಮಕ್ಕಳು ಚೆನ್ನಾಗಿ ಇರಬೇಕೆಂಬುದಾಗಿ ಪ್ರಾರ್ಥನಾ ಮಾಡಿ ಹೇಳತೀನಿ. ಇತಿ ಮತ್ ಶಿವಲಿಂಗ ಚರಿತ್ರೆ ಆನಂದ ಭರಿತ ರಸ ಬಳ್ಳಿವಾಯಿನೀ ಫಲಯೋಗ ಪತಿವ್ರತಾ ಮಾರ್ಗವು ಗುರುಮಾರ್ಗವು ಇತಿಮತ್ ಜತ್ ಸಂಸ್ಥಾನದಲ್ಲಿ ಇರುವಂಥಾ ಭಾವಿಕರಿಗೆ ನೇಮಕರಿಗೆ ಸಾಷ್ಟಾಂಗ ನಮಸ್ಕಾರ ನಮಸ್ಕಾರ.

ಶ್ರೀಸಮರ್ಥ ಸದ್ಗುರು

ಶ್ರೀ ಭಾವುಸಾಹೇಬ ಮಹಾರಾಜಕೀ ಜಯ



# ಎ.ಸಿ.ಪಿ.ಆರ್. ಸಂಸ್ಥೆ ಮತ್ತು ಸಂಸ್ಥಾಪಕರ ಕುರಿತು

ಶ್ರೀ ಗುರುದೇವ ಡಾ॥ ರಾಮಚಂದ್ರ ದತ್ತಾತ್ರೇಯ ರಾನಡೆಯವರು ಆಧುನಿಕ ಭಾರತದ ಶ್ರೇಷ್ಠ ಅನುಭಾವಿ ಸಂತರಲ್ಲೊಬ್ಬರು. ಜಗ ಒಂದೇ ದೇವನೊಬ್ಬನೇ ಮಾನವಿಯತೆಯ ಧರ್ಮ ಒಂದೇ ಎಂದು ಉದ್ಘೋಷಿಸಿ ಇಂದಿನ ಅಸಂಘಟಿತ ಸಮಾಜಕ್ಕೆ ತರ್ಕಬದ್ಧ ಅನುಭವದ ಹೊಸ ಸೂತ್ರವನ್ನು ನೀಡಿ ಶಾಂತಿಯುತ ನೆಮ್ಮದಿಯ ಸಹಬಾಳ್ವೆಗೆ ಪಥದರ್ಶನ ಮಾಡಿದರು. (A Constructive Survey of Upanishadic Philosophy) "ಉಪನಿಷತ್ ತತ್ವಗಳ ಪರಾಮರ್ಷಿತ ನೋಟ" (The Bhagawadgeeta As a Philosophy of God Realisation) "ಭಗವದ್ ಗೀತೆ ದೈವಸಾಕ್ಷಾತಕಾರದ ತತ್ವ" ಎಂಬ ಉದ್ಗ್ರಂಥಗಳ ಮೂಲಕ ತತ್ವಶಾಸ್ತ್ರದ ಇತಿಹಾಸದಲ್ಲಿ ತಮ್ಮ ಸ್ವರ್ಣಮಯ ಹೆಜ್ಜೆಯ ಗುರುತನ್ನು ನೀಡಿದ್ದಾರೆ. ಅವರು ಉತ್ತರ ಪ್ರದೇಶದ ಅಲಹಾಬಾದ ವಿಶ್ವ ವಿದ್ಯಾಲಯದಲ್ಲಿ ತತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿದ್ದು, ಆ ವಿಶ್ವ ವಿಧ್ಯಾಲಯದ ಉಪಕುಲಪತಿ ಸ್ಥಾನವನ್ನು ಅಲಂಕರಿಸಿ ನಿವೃತ್ತರಾದರು.

ಶ್ರೀ ಗುರುದೇವ ರಾನಡೆಯವರು ಪುಣೆಯಲ್ಲಿ "ಅಕಾಡೆಮಿ ಆಫ್ ಕಂಪೇರಿಟಿವ್ ಫಿಲಾಸಾಫಿ ಅ್ಯಂಡ್ ರಿಲಿಜನ್" (ಎ.ಸಿ.ಪಿ.ಆರ್) ಒಂದು ಅಂತರರಾಷ್ಟ್ರೀಯ ಸಂಸ್ಥೆಯನ್ನಾಗಿ 1924 ರಲ್ಲಿ ಸ್ಥಾಪಿಸಿದರು. ಎ.ಸಿ.ಪಿ.ಆರ್. ಜಾಗತಿಕ ಏಕತೆಯ ಪ್ರಜ್ಞೆಯನ್ನು ಸಾರುವ ಸಂಸ್ಥೆಯಾಗಿದೆ. 1952 ರಲ್ಲಿ ಎ.ಸಿ.ಪಿ.ಆರ್. ಸಂಸ್ಥೆಯನ್ನು ಬೆಳಗಾವಿಗೆ ಸ್ಥಳಾಂತರಿಸಿದರು. ಇದು ಅವರು ಜಗತ್ತಿಗೆ ನೀಡಿದ ಬಹುಮೂಲ್ಯ ಭೌತಿಕ ಕೊಡುಗೆಯಾಗಿದೆ. ಬೆಳಗಾವಿಯ ಹಿಂದವಾಡಿಯಲ್ಲಿ ಕೇಂದ್ರ ಕಛೇರಿಯನ್ನು ಹೊಂದಿದ ಎ.ಸಿ.ಪಿ.ಆರ್. ಜಗತ್ತಿನಾದ್ಯಂತ ಶ್ರೀ ಗುರುದೇವ ರಾನಡೆಯವರು ಪ್ರತಿಪಾದಿಸಿದ ತತ್ವವನ್ನು ಪ್ರಚುರಪಡಿಸುವ ಕಾರ್ಯವನ್ನು ಮಾಡುತ್ತಲಿದೆ. ತತ್ವಶಾಸ್ತ್ರದ ಭಾರತೀಯ ಪ್ರವಕ್ತರೂ, ಸರ್ವಶ್ರೇಷ್ಠ ತತ್ವಶಾಸ್ತ್ರಜ್ಞರೂ, ಭಾರತದ ಅಂದಿನ ರಾಷ್ಟ್ರಪತಿಗಳೂ ಆಗಿದ್ದ ಡಾ॥ ಸರ್ವಪಳ್ಳೀ ರಾಧಾಕೃಷ್ಣನ್‌ರವರು, ಶ್ರೀ ಗುರುದೇವ ರಾನಡೆಯವರ ಮಹತ್ಕಾರ್ಯಕ್ಕೆ ಅಭಿನಂದನೆಯ ರೂಪದಲ್ಲಿ 1965 ರಲ್ಲಿ ಎ.ಸಿ.ಪಿ.ಆರ್. ದ ಈಗಿನ ಕೇಂದ್ರ ಕಛೇರಿಯನ್ನು ಸ್ವಯಂಪ್ರೇರಿತರಾಗಿ ಬಂದು ಉದ್ಘಾಟಿಸಿದರು. ಎ.ಸಿ.ಪಿ.ಆರ್. ಎಂಬುದು ಸಾರ್ವಕಾಲಿಕ ಸತ್ಯವನ್ನು ತಿಳಿಸುವ ಜಾಗತಿಕ ವೇದಿಕೆಯಾಗಿದೆ.

ಎ.ಸಿ.ಪಿ.ಆರ್. ಇದು ಐತಿಹಾಸಿಕ, ಆಧ್ಯಾತ್ಮಿಕ, ತತ್ವಶಾಸ್ತ್ರೀಯ ಪವಿತ್ರ ಸ್ಥಳ. ಈ ಸ್ಥಳದಿಂದ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ತತ್ವವೇತ್ತರು, ರಾಜಕೀಯ ನಾಯಕರು, ವಿವಿಧ ರಂಗಗಳ ಚಿಂತಕರು ಅನುಭೂತಿಯನ್ನು ಪಡೆದಿದ್ದಾರೆ. ಈ ಸಂಸ್ಥೆಯಿಂದ ಆಂಗ್ಲ ಭಾಷೆಯಲ್ಲಿ ಪ್ರಕಾಶಗೊಳ್ಳುತ್ತಿರುವ **"Pathway To God"** (ದೈವತ್ವದೆಡೆಗೆ ದಾರಿ) ತ್ರೈಮಾಸಿಕ ಪತ್ರಿಕೆ ಜಗತ್ತಿನ ಎಲ್ಲಾ ಮೂಲೆಗಳಿಗೂ ತಲುಪುತ್ತಲಿದೆ ಮತ್ತು ಶಾಂತಿ ಸೌಹಾರ್ದತೆಯ ಸಂದೇಶವನ್ನು ಸಾರುತ್ತಿದೆ.